ಆಘಾತ

ಎ. ಪಿ. ಮಾಲತಿ



ಆಘಾತ

ಎ. ಪಿ. ಮಾಲತಿ

ಓಂಶಕ್ತಿ ಪ್ರಕಾಶನ
748/12, 58ನೇ ಕ್ರಾಸ್, 4ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 10
(ದೂರವಾಣಿ: 23507170)

AAGHATA— A novel by Smt. A.P. Malathi, Published by Om Shakthi Prakashana, No. 748/12, 58th Cross, IV Block, Rajajinagar, Bangalore - 560 010. Phone : 23354619

ಪ್ರಥಮ ಮುದ್ರಣ : *1976*
ದ್ವಿತೀಯ ಮುದ್ರಣ : *2010*

ಬಳಸಿದ ಕಾಗದ : *70* ಜಿ.ಎಸ್.ಎಂ. ಮ್ಯಾಪ್‌ಲಿಥೊ ಡೆಮಿ *1/8*

ಪುಟಗಳು : 144

ಬೆಲೆ : ರೂ. 75/-

ಡಿ.ಟಿ.ಪಿ.:
ಲೇಸರ್ ಲೈನ್ ಗ್ರಾಫಿಕ್ಸ್
ಬೆಂಗಳೂರು - 560 027, ದೂರವಾಣಿ : 22278231

ಮುದ್ರಕರು:

ಓಂ ಶಕ್ತಿ ಗ್ರಾಫಿಕ್ಸ್
ಬೆಂಗಳೂರು
ದೂ : 9880578084

ಮೊದಲ ಮಾತು

'ಆಘಾತ' ಕನ್ನಡದ ಪ್ರಸಿದ್ಧ ದಿನಪತ್ರಿಕೆಯಾದ ಸಂಯುಕ್ತ ಕರ್ನಾಟಕದಲ್ಲಿ ವಾರದ ಧಾರಾವಾಹಿಯಾಗಿ ಪ್ರಕಟವಾದ ಕಾದಂಬರಿ. ಅದನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕರಿಗೆ ನನ್ನ ವಂದನೆಗಳು. ಕಾದಂಬರಿಯನ್ನು ಓದಿ ಮೆಚ್ಚಿದ ಹಲವಾರು ಓದುಗರಿಗೂ ನನ್ನ ವಂದನೆಗಳು. ಈಗ ಕಾದಂಬರಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವ ಸಮಾಜ ಪುಸ್ತಕಾಲಯದ ಪ್ರಕಾಶಕರಿಗೆ ನನ್ನ ಅನಂತ ಕೃತಜ್ಞತೆಗಳು.

ಪುತ್ತೂರು (ದ.ಕ.) ಇತಿ,
ಜನವರಿ ೨೬, ೧೯೭೬ ಎ.ಪಿ. ಮಾಲತಿ

ದ್ವಿತೀಯ ಮುದ್ರಣದ ಮಾತುಗಳು

'ಆಘಾತ' ಕಾದಂಬರಿ ದ್ವಿತೀಯ ಮುದ್ರಣವಾಗಿ ಅಭಿಮಾನಿ ಓದುಗರ ಕೈಯ್ಯಲ್ಲಿದೆ. ಕಾದಂಬರಿ ಬರೆದ ಕಾಲ, ಸನ್ನಿವೇಶ ಹಲವಾರು ವರ್ಷಗಳಷ್ಟು ಹಿಂದಿನದು. ಇಲ್ಲಿ ಕಾಣುವ ನದಿ, ತೋಟ, ಹಾಡಿ-ಗುಡ್ಡಗಳು ಈಗಿಲ್ಲ. ಚಕ್ರ ಹೊಳೆಯ ತೀರದಲ್ಲಿ ದೊಡ್ಡ ದೊಡ್ಡ ಪೇಟೆಗಳು ತಲೆ ಎತ್ತಿವೆ. ಕೃಷಿಭೂಮಿ ಕಣ್ಮರೆಯಾಗಿದೆ. ಜನಜೀವನವೂ ಬದಲಾಗಿದೆ. ಆದರೆ ಮನುಷ್ಯನ ಸ್ವಭಾವ, ಮಾನಸಿಕ ತುಮುಲ, ಕೌಟುಂಬಿಕ ಸಂಘರ್ಷ ಹಿಂದಿನಂತೆ ಈಗಲೂ ಇವೆ! ಕಾಲ ಬದಲಾದರೂ ಕಾದಂಬರಿಯ ಕಥಾವಸ್ತು ಎಂದಿಗೂ ಹೊಸತೇ!

ಓದುಗರು ಹಿಂದಿನಂತೆ ಈ ಕಾದಂಬರಿಯನ್ನೂ ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಮರುಮುದ್ರಣ ಕಷ್ಟವಾಗಿರುವ ಈ ದಿನಗಳಲ್ಲಿ ಓದುಗರ ಬೇಡಿಕೆ ಗಮನಿಸಿ ಕಾದಂಬರಿಯ ಮರುಮುದ್ರಣ ಮಾಡುತ್ತಿರುವ ಹೇಮಂತ ಸಾಹಿತ್ಯದ ಪ್ರಕಾಸಟಾದ ಶ್ರೀ ವೆಂಕಟೇಶ್ ಅವರಿಗೆ ಅನಂತ ಕೃತಜ್ಞತೆಗಳು.

ಎ.ಪಿ. ಮಾಲತಿ

ಆರ್ಯಾಪು ಗ್ರಾಮ - ಅಂಚೆ
ಪುತ್ತೂರು (ದ.ಕ.) ೫೭೪ ೨೧೦

ಎ.ಪಿ. ಮಾಲತಿಯವರ ಕೃತಿಗಳು

ಕಾದಂಬರಿಗಳು

೧) ಅರ್ಧಾಂಗಿ
೨) ಆಘಾತ
೩) ಅನಿಶ್ಚಯ
೪) ಅತೃಪ್ತೆ
೫) ಅಲೋಕ
೬) ಹೊಸ ಹೆಜ್ಜೆ
೭) ಮಿನುಗದ ಚುಕ್ಕಿ
೮) ಸರಿದ ತೆರೆ
೯) ಬದಲಾಗದವರು
೧೦) ದೇವ
೧೧) ಅಂಜನಾ
೧೨) ತಿರುಗಿದ ಚಕ್ರ
೧೩) ಪುನರ್ಮಿಲನ
೧೪) ನೂಪುರಗಾನ
೧೫) ಕಾಡುಕರೆಯಿತು
೧೬) ವಕ್ರರೇಖೆ
೧೭) ಮಂದಾರ
೧೮) ಖಾಲಿಮನೆ
೧೯) ಪುಣ್ಯದ ಎಣ್ಣೆ
೨೦) ಹಸಿರು ಚಿಗುರು

ಇತರ ಕೃತಿಗಳು

೧) ಗ್ರಾಮೀಣ ಮಹಿಳೆಯರು ೨) ಹಳ್ಳಿಗ ಬಂದ ಎಳೆಯರು ೩) ಸುಖದ ಹಾದಿ ೪) ಮಕ್ಕಳ ಪಾಲನೆ ೫) ಸಮಯದ ಸದುಪಯೋಗ ೬) ದಿವ್ಯ ಪಥ ೭) ಮಹಿಳೆ- ಸಮಾಜ ಕಲ್ಯಾಣ

ಸಣ್ಣಕಥಾ ಸಂಕಲನ

೧) ವಸಂತದ ಹೂವುಗಳು ೨) ಸಂಜೆ ಬಿಸಿಲು

ಆಘಾತ

೧

ಜುಳು ಜುಳು ನಾದದೊಂದಿಗೆ ಹರಿಯುತ್ತಿದೆ ಚಕ್ರ ಹೊಳೆ. ಅದರ ಸುತ್ತಲೂ ದೊಡ್ಡ ದೊಡ್ಡ ಗಿಡಮರಗಳಿಂದ ಕೂಡಿದ ಕಾಡು, ಗುಡ್ಡಗಳು. ಎದುರು ಭಾಗದಲ್ಲಿ ಕಾಣಿಸುವುದೇ ಹರೀನ್ ಗುಡ್ಡ. ಹೊಳೆಯ ಈ ಬದಿಯಲ್ಲಿ ಕುಂದದ ಗುಡ್ಡ, ಚಿಲ್ಲರೆ ಗುಡ್ಡ, ಅದರಾಚೆ ತುಸು ಎತ್ತರಕ್ಕೆ ಕಾಣಿಸುವುದು ಅಬ್ಬೀ ಗುಡ್ಡ. ಎಲ್ಲವೂ ಒಂದರ ಹಿಂದೊಂದು ತಲೆ ಎತ್ತಿ ನಿಂತಿವೆ.

ಇಲ್ಲೇ ಹತ್ತಿರದಲ್ಲಿ ಕೆಲವೇ ಸಮಯಗಳ ಹಿಂದೆ ಒಂದು ಫಾರೆಸ್ಟ್ ರೇಂಜರರ ಆಫೀಸು ಆಗಿದೆ. ಸುತ್ತಲಿರುವ ಸಮೃದ್ಧವಾದ ಕಾಡುಗಳನ್ನೆಲ್ಲ ಕಡಿದು ಬೋಳಿಸಿ ಇನ್ನು ಗೇರು ಬೀಜದ ಕೃಷಿ ಮಾಡುತ್ತಾರಂತೆ. ಈಗಾಗಲೇ ಗೇರು ಕೃಷಿ ಪ್ರಾರಂಭವಾಗಿದೆ.

ಹೊಳೆಯ ಹತ್ತಿರ ಅದರಾಚೆ ನಾಲ್ಕಾರು ತೀರಾ ಬಡ ಒಕ್ಕಲುಗಳ ಗುಡಿಸಲು. ಮೀನು ಹಿಡಿಯಲೆಂದೋ, ಬಟ್ಟೆ ಒಗೆಯಲೆಂದೋ, ದನಕರುಗಳ ಮೈ ತೊಳೆಯಲೆಂದೋ ಜನರು ಆಗಾಗ ಇಲ್ಲಿಗೆ ಬರುವುದುಂಟು. ಇಲ್ಲವಾದರೆ ಇಲ್ಲಿ ಜನಸಂಚಾರ ಕಡಿಮೆ. ಹಕ್ಕಿಗಳ ಕಲರವ, ಹೊಳೆಯ ಮಂಜುಳನಾದ, ಬೀಸುವ ಗಾಳಿಯಲ್ಲಿ ಮರಗಿಡಗಳ ಮರ್ ಮರ್ ಸದ್ದು... ಇವಿಲ್ಲವಾದರೆ ಪೂರ್ಣವಾಗಿ ನಿಸ್ಶಬ್ದ ವಾತಾವರಣ....!

ಇಳಿಹೊತ್ತಿನ ಸಮಯ. ಮುಳುಗುತ್ತಿರುವ ಸೂರ್ಯನ ಕಡೆಗೆ ಬೆನ್ನು ಹಾಕಿ ಕುಳಿತಿದ್ದ ಆಶಾ ತನ್ನ ಸುಂದರ ಪಾದಗಳನ್ನು ನೀರಿನಲ್ಲಿಳಿಸಿಕೊಂಡು ಮೀನುಗಳ ಚಲನವಲನಗಳನ್ನು ದಿಟ್ಟಿಸುತ್ತಿದ್ದಳು. ಮನಸ್ಸು ಇನ್ನೆಲ್ಲೋ. 'ಇಲ್ಲ, ಇನ್ನು ಮುಂದೆಂದೂ ಹೀಗೆ ಮಾಡಲು ಬಿಡಲಾರೆ. ಇವತ್ತು ಎದುರುಬಿದ್ದು ಮಾತನಾಡಲೇಬೇಕು. ಗಲಾಟೆಯೋ ಜಗಳವೋ ಇನ್ನೇನೋ ಆಗಿಹೋಗಲಿ... ಈ ಒಂಟಿತನ ಸಾಕಿನ್ನು.'

ಆಕೆ ಯೋಚಿಸುತ್ತಿದ್ದಂತೆ ಕಾಡಿನ ಒಳಭಾಗದಲ್ಲಿ ಎಲ್ಲೋ ಯಾರೋ ದೊಡ್ಡದಾಗಿ ಬೊಬ್ಬೆ ಹಾಕಿದ ಸದ್ದು ಕೇಳಿಸಿತು. ಬೆಚ್ಚಿಬಿದ್ದ ಆಕೆ ತತ್‌ಕ್ಷಣ ಅಲ್ಲಿಂದೆದ್ದು ಸುತ್ತಲೂ ನೋಡಿದಳು ಭೀತಿಯಿಂದ. ಪಾಪ, ಮೊದಲೇ ಹೆದರಿಕೆ ಹೆಚ್ಚು. ಈಗ ಈ ಸ್ಥಳದಲ್ಲಿ ಯಾರದೀ ಬೊಬ್ಬೆ?.... 'ಅಯ್ಯಯ್ಯಮ್ಮೋ....ಯಾರಾದರೂ ನನ್ನನ್ನು ರಕ್ಷಿಸಿರಪ್ಪೋ.... ರಕ್ಷಿಸೀ...' ಎಂದು ದೊಡ್ಡದಾಗಿ ಆರ್ತನಾದವೂ ಕೇಳಿಸಿತು.

ಆಶಾಳ ಮೈ ಕಂಪಿಸಿದರೂ ಧೈರ್ಯ ತಂದುಕೊಂಡು ಸ್ವರ ಬಂದ ದಿಕ್ಕಿನತ್ತ ಓಡಿದಳು. ಕಾಡುಮರಗಳ ಮಧ್ಯೆ ಚಿಕ್ಕದಾದ ಕಾಲುದಾರಿ. ಅಲ್ಲಿಂದ ತುಸು ದೂರದಲ್ಲಿ ಪೊದೆಗಳಿಂದ ಕೂಡಿದ ಸಮತಟ್ಟಾದ ಸ್ಥಳ. ಅಲ್ಲೊಂದು ಬಹಳ ದೊಡ್ಡದಾದ ಕಾಡು ಮರ. ಅದರ ಕೆಳಗೆ ಒಬ್ಬಾತ ಯುವಕ ಒದ್ದಾಡುತ್ತಾ ಇದ್ದಾನೆ. ಏನಾಯಿತವನಿಗೆ? ಹುಚ್ಚು ಹಿಡಿದದೆಯೇ, ಯಾರಾದರೂ ಹೆದರಿಸುತ್ತಿದ್ದಾರೆಯೆ? ದೂರದಿಂದಲೇ ನೋಡಿದ ಆಶಾಗೆ ಮುಂದಕ್ಕೆ ಬರುವ ಧೈರ್ಯವಾಗಲಿಲ್ಲ. ತನ್ನ ಎರಡೂ ಕೈಗಳನ್ನು ಆಚೆ ಈಚೆ ತಿರುಗಿಸುತ್ತ, ಕುಣಿಯುತ್ತ ಬೊಬ್ಬೆ ಹಾಕುತ್ತಾ ಇದ್ದಾನೆ. ಅವನ ಸುತ್ತಲೂ ಹೆಜ್ಜೇನುಗಳು! ಝೇಂಕಾರ ಮಾಡುತ್ತ ತಲೆ, ಮುಖ, ಮೈ ಯಾವುದನ್ನೂ ನೋಡದೆ ಕಚ್ಚಿ ಹಿಂಸಿಸುತ್ತಿವೆ. ಮರದ ಮೇಲಿನಿಂದ ಗುಂಪು ಗುಂಪಾಗಿ ಇಳಿದು ಬರುತ್ತಿವೆ ಹೆಜ್ಜೇನುಗಳು.

ಈ ಅಪಾಯಕಾರಿ ಹೆಜ್ಜೇನುಗಳ ಬಳಿಗೆ ಹೋಗುವುದಾದರೂ ಹೇಗೆ? ಒಮ್ಮೆ ಕಚ್ಚಲು ಪ್ರಾರಂಭಿಸಿದರೆ ಕೊಂದೇಬಿಡುತ್ತವೆ. ಅದರಿಂದ ತಪ್ಪಿಸಿಕೊಂಡಲ್ಲಿ ಇನ್ನೊಮ್ಮೆ ಬದುಕುವ ಯೋಗವಿದೆಯೆಂದೇ ತಿಳಿಯಬೇಕು. ಯಾರಾದರೂ ಬಿಡಿಸಲು ಹೋದರೆಂದರೆ ಅವುಗಳ ಹೊಡೆತದ ಬಲೆಯಲ್ಲಿ ಇವರೂ ಸಿಕ್ಕಿ ಬೀಳುತ್ತಾರೆ. ಈ ಸಾಹಸ ಯಾರಿಗಿದೆ?

ಆಶಾ ಒಂದೆರಡು ಕ್ಷಣ ಸುಮ್ಮನೆ ನೋಡುತ್ತಿದ್ದು, ಆಮೇಲೆ ತಡಮಾಡದೆ ಓಡಿದಳು ಮನೆಯತ್ತ. ಕಾಲುದಾರಿಯಲ್ಲಿ ಎರಡೇ ಫರ್ಲಾಂಗ್ ದೂರದಲ್ಲಿರುವ ಮನೆಗೆ ಓಡೋಡಿಕೊಂಡು ಬರುವಾಗ ದಾರಿಯಲ್ಲಿ ಎದುರಾದ ಆಳು ಜಬ್ಬಣ್ಣ. "ಎಂತಾ ಅಮ್ಮ ಹುಲಿಗಿಲಿ ಬಂತಾ, ಎಲ್ಲಿತ್ತು?" ದಿಗಿಲುಗೊಂಡು ಕೇಳಿದ ಆ ಮುದುಕ.

"ಬೆಂಕಿ-ಪೆಟ್ಟಿಗೆಯಿದ್ದರೆ ಕೊಡು ಇಲ್ಲಿ." ಎದುಸಿರು ಬಿಡುತ್ತಿದ್ದ ಆಶಾ ಅಲ್ಲೇ ನಿಂತು ಹೊರಳಿದಳು. "ಅಲ್ಲೊಬ್ಬ ಹೆಜ್ಜೇನುಗಳ ಸಂಗಡ ಒದ್ದಾಡ್ತಾ ಇದ್ದಾನೆ. ಅವನನ್ನು ರಕ್ಷಿಸಬೇಕು. ಅರೆರೆ ನೀಲಿ, ನೀನಿಲ್ಲೇ ಇದ್ದೀಯಾ? ಬೇಗ ಮನೆಗ್ಹೋಗಿ ದೊಡ್ಡ ಅಯ್ಯನನ್ನು, ಚಿಕ್ಕ ಅಯ್ಯನನ್ನು ಈಗಲೇ ಕರ್ಕೊಂಡು ಬಾ... ನಡಿ ಜಬ್ಬಣ್ಣ... ಬೇಗ..." ಎನ್ನುತ್ತ ಆಶಾ ಹಿಂದಕ್ಕೆ ಓಡತೊಡಗಿದಳು. ವಿಧೇಯನಾದ ಜಬ್ಬಣ್ಣ ತನ್ನ ಡೊಂಕು ಕಾಲನ್ನು ಹಾರಿಸುತ್ತ ಓಡತೊಡಗಿದ – ಅವಳ ಹಿಂದೆ ಹಿಂದೆ.

ಕಾಡಿನಲ್ಲಿ ಅವನು ಇನ್ನೂ ಅದೇ ಅವಸ್ಥೆಯಲ್ಲಿದ್ದ. ಈಗ ಕುಣಿಯುವುದನ್ನು ನಿಲ್ಲಿಸಿ ಕುಳಿತುಕೊಂಡು ತನ್ನೆರಡೂ ಕೈಗಳಿಂದ ಮುಖ ಮುಚ್ಚಿಕೊಂಡಿದ್ದ. ಹೆಜ್ಜೇನುಗಳು ಗುಂಪುಗಟ್ಟಿದ್ದವು ಸುತ್ತಲೂ. ಜಬ್ಬಣ್ಣ ಮತ್ತು ಆಶಾ ಅವಸರದಲ್ಲಿ ಒಂದಿಷ್ಟು ತರಗೆಲೆ, ಸವುದೆ ಚೂರು, ಕಸಕಡ್ಡಿಗಳನ್ನು ಆರಿಸಿ ಬೆಂಕಿ ಮಾಡಿದರು. ಬೆಂಕಿ ದೊಡ್ಡದಾಗಿ ಉರಿಯುತ್ತಿದ್ದಂತೆ ಜಬ್ಬಣ್ಣ ತನ್ನ ಕತ್ತಿಯಿಂದ ಮರಗಳ ನಾಲ್ಕು ಕೊಂಬೆಗಳನ್ನು, ಒಣಗಿದ ಇನ್ನಷ್ಟು ತುಂಡುಗಳನ್ನು ಕಡಿದು ಹಾಕಿದ ಉರಿಯುತ್ತಿರುವ ಬೆಂಕಿಗೆ.

"ಹೇಯ್... ಹೇಯೋಯ್..." ತನ್ನ ಸ್ವರ ಏರಿಸಿ ದೊಡ್ಡದಾಗಿ ಇಡೀ ಕಾಡು

ಕೇಳುವಂತೆ ಅಪರಿಚಿತನಿಗೆ ಬೊಬ್ಬೆ ಹಾಕುತ್ತ "ಇಲ್ಲಿ ಬಾರಾ.... ಕೂಕೋ (ಕೂತ್ಕೋ) ಬೆಂಕಿ ಹತ್ರ... ಬಾ..." ಎಂದ.

ಅವನಿಗೆ ಮೊದಲು ಏನೂ ಕೇಳಿಸಲಿಲ್ಲ. ಮತ್ತೂ ಒಂದೆರಡು ಬಾರಿ ಹೇಳಿದ ಮೇಲೆ ತಲೆ ಎತ್ತಿ ನೋಡಿದ ಬೆಂಕಿಯತ್ತ. ಆ ಪ್ರಾಣಾಂತಿಕ ಸಮಯದಲ್ಲಿಯೂ ಆ ಬೆಂಕಿ, ಅದರ ಹತ್ತಿರ ಇರುವ ಇಬ್ಬರನ್ನು ಕಂಡು ತುಸು ಅರ್ಥವಾಯಿತೇನೋ.... ಮುಂದೆ ಹೋಗಲಿಚ್ಛಿಸಿದ. ಆಗಲಿಲ್ಲ. ಎದ್ದು ನಿಲ್ಲಲು ಹವಣಿಸಿದ. ಅದೂ ಸಾಧ್ಯವಾಗಲಿಲ್ಲ. ಆಮೇಲೆ ತೆವಳತೊಡಗಿದ ಬಹಳ ಕಷ್ಟದಲ್ಲಿ. ಹೆಜ್ಜೇನುಗಳ ಝೇಂಕಾರ ಹೆಚ್ಚಿತು.

"ಎಷ್ಟು ಹೊತ್ತಾ ಇವಂಗೆ ಇತ್ಯಾಗೆ ಬಪ್ಪಕೆ (ಬರಲು) ಬಾರಾ ಬೇಗ..." ಜಬ್ಬಣ್ಣನಿಗೆ ಅವಸರವೇ ಅವಸರ.

ಅವನು ಬೆಂಕಿಗೆ ಸಮೀಪನಾಗತೊಡಗಿದ. ನಿಧಾನವಾಗಿ ಬೆಂಕಿಯ ಶಾಖ ತಾಗತೊಡಗಿತು ಅವನಿಗೆ. ಬೆಂಕಿಯೊಂದಕ್ಕೇ ಹೆದರುವ ಹೆಜ್ಜೇನುಗಳು ಝೇಂಕಾರ ಮಾಡುತ್ತ ಮೇಲೆ ಹಾರತೊಡಗಿದವು. ಮತ್ತೆ ಮತ್ತೆ ಮುಂದಕ್ಕೆ ಸರಿದಂತೆಲ್ಲ ಹೆದರಿದ ಹುಳುಗಳು ಅವನನ್ನು ಬಿಟ್ಟು ತಮ್ಮ ಪ್ರಾಣರಕ್ಷಣೆಗಾಗಿ ಹಾರತೊಡಗಿದವು–ಮೇಲೆ ಮೇಲೆ. ಅವನು ಬೆಂಕಿಗೆ ತೀರಾ ಸಮೀಪನಾದಾಗ ಹೆಜ್ಜೇನುಗಳೆಲ್ಲ ಅವನನ್ನು ಬಿಟ್ಟು ಹಾರಿ ಹಾರಿ ಹಿಂದಕ್ಕೆ ಹೋಗಿ ಒಂದು ಗುಂಪಾಗಿ ಹೋದವು...

"ಇತ್ಲಾಗೆ ಬನ್ನಿ ಅಮ್ಮಾ.... ನೀವೂ ಬೆಂಕಿ ಹತ್ರ ಬನ್ನಿ. ರಾಕ್ಷಸ ಹುಳುಗಳು. ಅಲ್ಲಿಂದ ಹಾರಿ ನಮ್ಮನ್ನು ಕಚ್ಚಿದರೂ ಕಚ್ಚಿದ್ವೆ..." ಜಬ್ಬಣ್ಣ ಬೆಂಕಿಯ ಉರಿಯನ್ನು ಇನ್ನಷ್ಟು ಹೆಚ್ಚಿಸಿದ. ಅಷ್ಟರಲ್ಲಿ ಓಡಿಕೊಂಡು ಬಂದರು ತಮ್ಮಯ್ಯನವರು ಹಾಗೂ ಶಿವಮೂರ್ತಿ. ಅವರ ಹಿಂದೆ ಕೆಲಸದಾಳು ನೀಲಿ.

ಉರಿಯುತ್ತಿರುವ ಬೆಂಕಿ, ಅದರೆದುರು ಹೆಜ್ಜೇನುಗಳಿಂದ ಕಚ್ಚಿಸಿಕೊಂಡು ಯಾತನೆಪಡುತ್ತಿದ್ದ ಅಪರಿಚಿತನನ್ನು ನೋಡುತ್ತ ಆಶಾಳಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡು ಇನ್ನು, ಇಲ್ಲಿರುವುದು ಸರಿಯಲ್ಲ ಎಂದರಿತು ತಮ್ಮಯ್ಯನವರು ಅವನತ್ತ ಬಾಗಿದರು. ಶಿವಮೂರ್ತಿ ಅವನ ಬಲಗೈಯ್ಯನ್ನು, ಜಬ್ಬಣ್ಣ ಎಡಗೈಯ್ಯನ್ನು ಹಿಡಿದು ಎಬ್ಬಿಸಿಕೊಂಡು ಬಹಳ ನಿಧಾನವಾಗಿ ಕರೆದುಕೊಂಡು ಹೊರಟರು ಮನೆಯತ್ತ.

ಆಶಾ ತಾನು ಕೇಳಿದ ಸ್ವರ, ನೋಡಿದ್ದು ಎಲ್ಲಾ ವಿವರಿಸುತ್ತಿದ್ದಂತೆ ಜಬ್ಬಣ್ಣ ತಾನು ಬೆಂಕಿ ಉರಿಸಿ ಹೇಗೆ ಅವನನ್ನು ಕಾಪಾಡಿದೆ ಎಂದು ಬಣ್ಣಿಸಿ ಹೇಳಿದ. 'ಅಂತೂ ನಿಮಗೆ ಇಷ್ಟಾದರೂ ಬುದ್ಧಿಗೆ ಹೊಳೆಯಿತಲ್ಲ' ಎಂದು ಮೆಚ್ಚಿಗೆ ಕೊಟ್ಟ ಶಿವಮೂರ್ತಿ.

* * * *

ಕಲ್ಲಿನಿಂದ ಕಟ್ಟಿದ ತುಂಬಾ ವರುಷಗಳ ಹಿಂದಿನ ಹಳೆಯದಾದ ದೊಡ್ಡ ಮಹಡಿ ಮನೆಯೆದುರು ಕಬ್ಬಿಣದ ಗೇಟು. ಅದರ ಬದಿಯಲ್ಲಿ "ಕಾಂತಿ ನಿವಾಸ" ಎಂಬ ತೂಗು ಫಲಕ. ಬಣ್ಣ ಬಣ್ಣದ ಹೂ-ಗಿಡಗಳು, ತಂಪಾದ ನೆರಳಿಗೋಸ್ಕರ ನೆಟ್ಟ ಮಾವು,

ಹಲಸಿನ ಮರಗಳು, ವೀಳ್ಯದೆಲೆಯ ಬಳ್ಳಿ. ಮಲ್ಲಿಗೆ ಜಾಜಿಯ ಚಪ್ಪರಗಳು ಮನೆಗೊಂದು ಶೋಭೆ, ಮನಕ್ಕೊಂದು ಹಿತ.

ಅಪರಿಚಿತನೊಡಗೂಡಿ ಅವರೆಲ್ಲರೂ ಅಲ್ಲಿಗೆ ಬಂದಾಗ ಚೆನ್ನಾಗಿ ಕತ್ತಲಾಗಿದ್ದು ದೀಪ ಬೆಳಗಿತ್ತು ಮನೆಯೊಳಗೆ. ಬಂದವನು ಯಾರು, ಎಂತವನು ಎಂದು ತಿಳಿಯುವ ಕುತೂಹಲಕ್ಕಿಂತ ಮೊದಲು ಅವನಿಗೆ ಬೇಕಾದದ್ದು ಅಗತ್ಯದ ಉಪಚಾರಗಳು. ಶಿವಮೂರ್ತಿ ಅಂಗಳದ ಬದಿಯಲ್ಲಿರಿಸಿದ್ದ ತನ್ನ ಮೋಟರ್ ಬೈಕನ್ನು ಈಚೆಗೆ ಎಳೆದುಕೊಂಡು ಈ ಕ್ಷಣದಲ್ಲಿ ಡಾಕ್ಟರರನ್ನು ಕರೆತರುತ್ತೇನೆಂದು ಹೊರಟುಹೋದ. ಮಾತನಾಡಲು ಚೈತನ್ಯವೂ ಇಲ್ಲದ ಅವನನ್ನು ಒಳಗೆ ಕರೆತಂದು ಮೆತ್ತಗಿನ ಹಾಸಿಗೆ ಹಾಕಿ ಮಲಗಿಸಿದ್ದಾಯಿತು. ಮೈಮುಖ ಎಲ್ಲಾ ಬಾತುಹೋಗಿದ್ದು ನರಳುತ್ತಿದ್ದ ನೋವಿನಿಂದ.

ನಾಲ್ಕು ವರ್ಷದ ಪೃಥ್ವಿ ಅಡಿಗೆಯವಳ ಹಿಂದೆ ನಿಂತು ಭಯಮಿಶ್ರಿತ ಕಣ್ಣುಗಳಿಂದ ನೋಡುತ್ತಿದ್ದ ಅವನನ್ನು. ಅರ್ಧಗಂಟೆಯಲ್ಲಿ ಬಂದ ಡಾಕ್ಟರರು ಅವನನ್ನು ಪರೀಕ್ಷಿಸಿ ಎರಡು ಇಂಜಕ್ಷನ್ ಕೊಟ್ಟು, "ಈ ಮಾತ್ರೆಯನ್ನು ನೀರಿನಲ್ಲಿ ಬೆರೆಸಿಕೊಡಿ, ಊದಿದ್ದು ಇಳಿಯುತ್ತೆ ನಾಳೆಗೆ" ಎಂದಂದು ಹೊರಟು ಹೋದರು.

ಅವನ ಕಣ್ಣುಗಳಲ್ಲಿ ಕೃತಜ್ಞತೆಯ ಭಾವ ಅಡಗಿದ್ದು ತನಗೆ ಊಟ ಬೇಡವೆಂದು ಕೈಯಿಂದಲೇ ತಿಳಿಸಿ ಹಾಸಿಗೆಯನ್ನೊರಗಿಕೊಂಡ. ಆಶಾ ಮನಸ್ಸು ಹೂವಿಗಿಂತ ಹಗುರವಾಗಿ ತಾನಿವತ್ತು ಒಂದು ಜೀವವನ್ನು ಕಾಪಾಡಿದೆನಲ್ಲ ಎಂಬ ಆತ್ಮಗೌರವದಿಂದ ತುಂಬಿಹೋಯಿತು.

ರಾತ್ರಿ ಊಟ ಮುಗಿಸಿ ಮಹಡಿಗೆ ಹೋಗುತ್ತಿದ್ದಂತೆ ಈಶ್ವರಿ ಆಶಾಳನ್ನು ಕರೆಯುತ್ತ "ಹಾಲು ಮರೆವು ನನಗೆ ಅತ್ತಿಗೇ, ಇಕೋ ನಿನಗೊಂದು ಕಾಗದ ಬಂದಿದೆ" ಎಂದಳು ತಂದುಕೊಡುತ್ತ.

ಬಂದಾತನಿಗೆ ಬೇಕಾದ ಉಪಚಾರಗಳನ್ನು ಮಾಡಿ ಜಬ್ಬಣ್ಣನನ್ನು ಆ ರಾತ್ರಿ ಇಲ್ಲಿಯೇ ನಿಲ್ಲುವಂತೆ ತಿಳಿಸಿ ರಾತ್ರಿ ಜೋರಾದರೆ ತನ್ನನ್ನು ಎಬ್ಬಿಸಬೇಕೆಂದೂ ಹೇಳಿ ಶಿವಮೂರ್ತಿ ಮಹಡಿಗೆ ಬಂದಾಗ ರಾತ್ರಿಯ ಹತ್ತು ಗಂಟೆ. ಕೋಣೆಯ ಬಾಗಿಲನ್ನು ಮುಚ್ಚಿ ಒಳಗೆ ಬಂದಾಗ ಆಶಾ ಹಾಸಿಗೆಯಲ್ಲಿ ಅರ್ಧ ಒರಗಿ ಓದುತ್ತಾ ಇದ್ದಳು, ತನಗೆ ಬಂದ ಕಾಗದವನ್ನು.

"ಯಾರ ಕಾಗದ ಆಶಾ... ಬಹಳ ಖುಷಿಯಲ್ಲಿದ್ದೀಯಲ್ಲ" ಮಡದಿಯ ಪಕ್ಕದಲ್ಲಿ ಕುಳಿತು ಕೇಳಿದ ಆತ ನಲ್ಮೆಯ ಧ್ವನಿಯಲ್ಲಿ.

"ಬೆಂಗಳೂರಿನಿಂದ ಜಗನ್ನಾಥ ಕಾಗದ ಬರೆದಿದ್ದಾನೆ. ವಿಶೇಷ ಏನೂ ಇಲ್ಲವಂತೆ. ಈಗ ಹವೆ ಚೆನ್ನಾಗಿದೆ. ನೀನೂ ನಿನ್ನ ಯಜಮಾನರು ಬೆಂಗಳೂರನ್ನು ನೋಡೋದಕ್ಕೆ ಬನ್ನಿ ಎಂದಿದ್ದಾನೆ.... ಯಾವಾಗ ಬರ್‍ತೀರಿ ಅಂತ ಬರೆದು ತಿಳಿಸಿ ಎಂದಿದ್ದಾನೆ."

"ಓಹೋ" ನಗೆ ಮಿಂಚಿತು ಮೂರ್ತಿಯ ಮುಖದಲ್ಲಿ. "ನಮ್ಮ ಯಜಮಾನಿಗೆ ಬೆಂಗಳೂರಿಗೆ ಹೋಗೋ ಆಸೆ ಅಲ್ಲವೇ?" ಅಬ್ಬಬ್ಬ, ನನಗೆ ನೋಡು, ಟೂರು ಮಾಡೋದಂದ್ರೆ ಬಹಳ ಬೇಸರ... ಹಾಳು ರಗಳೆ..."

ನಗುವ ಕಣ್ಣಿಂದ ನೋಡಿದಳು ಅವನತ್ತ. "ಬೇರೆ ಬೇರೆ ಊರುಗಳನ್ನು ನೋಡುವುದರಲ್ಲಿಯೇ ಇರೋದು ಮಜಾ! ಈ ಹಳ್ಳಿಯಲ್ಲಿ ಏನಿದೆ ಮಣ್ಣು.... ಒಂದ್ನಾಕು ದಿನ ಹಾಯಾಗಿ ಬೆಂಗಳೂರನ್ನೆಲ್ಲ ತಿರುಗಾಡಿಕೊಂಡು ಬರೋಣ. ಮನಸ್ಸಿಗೂ ಖುಷಿಯಾಗುತ್ತೆ."

"ಹಾಂ...." ಅವಳ ಪಕ್ಕದಲ್ಲೇ ಮಲಗುತ್ತ ಹೇಳಿದ ಮೂರ್ತಿ, "ಕಾಂತಿಗೂ ಬೇರೆ ಬೇರೆ ಊರು ಪಟ್ಟಣಗಳನ್ನು ನೋಡುವದು, ತಿರುಗಾಡುವುದು ಎಂದರೆ ಬಹಳ ಇಷ್ಟ. ಪೃಥ್ವಿಗೂ ಅಷ್ಟೆ. ವರ್ಷದಲ್ಲಿ ನಾಲ್ಕು ಬಾರಿಯಾದರೂ ನಾವು ಟೂರ್ ಹೋಗ್ತಾ ಇದ್ದೆವು. ಈಗೇನಾಗಿದೆ ಅಂತೀಯ, ಅವಳು ಹೋದ್ಮೇಲಿಂದ ಅವಳ ಸಂಗಡ ನನ್ನ ಎಲ್ಲ ಉತ್ಸಾಹವೂ ಬತ್ತಿಹೋಗಿದೆ..."

"ಈಗ ನಾನಿಲ್ಲವೇ ನಿಮ್ಮ ಉತ್ಸಾಹವನ್ನು ತುಂಬಿಸಲು? ನನ್ನ ಜೊತೆ ಮೈಸೂರು, ಬೆಂಗಳೂರು ನೋಡ್ತಾಯಿದ್ದರೆ ಬತ್ತಿಹೋದ ಉತ್ಸಾಹ, ಚೇತನ ಹಿಂದಕ್ಕೆ ಬರುತ್ತೆ..."

ಅವನಿಂದ ಉತ್ತರ ಬಾರದಿದ್ದಾಗ ಆಕೆ ಉನ್ಮಾದದಿಂದ ಅವನ ಕೆನ್ನೆಯನ್ನು ಚುಂಬಿಸುತ್ತ ಅಳು ನಗು ಬೆರೆತ ಸ್ವರದಲ್ಲಿ ಅಂದಳು, "ನಿಮಗಾಗಿ ಏನು ಮಾಡುವುದಕ್ಕೂ ಸಿದ್ಧಳಾಗಿದ್ದೇನೆ ನಾನು. ಕಾಂತಿಯಿಲ್ಲದ ಸ್ಥಾನವನ್ನು ತುಂಬಿ ಬಂದವಳು. ನಿಮ್ಮ ಕಾಂತಿಯ ಮಗುವಿಗೆ ತಾಯಿಯಾಗಿ ಬಂದವಳು. ನಿಮ್ಮ ತಂದೆ ತಾಯಿಯ ಎರಡನೇ ಸೊಸೆಯಾಗಿ ಮಗಳ ರೂಪದಲ್ಲಿ ಬಂದವಳು ನಾನು... ನಿಮ್ಮ ಮನೆಯನ್ನು, ನಿಮ್ಮ ಹೃದಯವನ್ನು ತುಂಬಿದವಳು... ಕೇಳಿ ಇಲ್ಲಿ."

"ಹೂಂ...."

"ಆದರೂ ನಿಮಗೆ ನನ್ನ ವಿಚಾರದಲ್ಲಿ ಯಾವ ಆಸಕ್ತಿಯೂ ಇದ್ದಂತಿಲ್ಲ.... ನಾನಂತೂ ಈಗ ಒಂದು ವಿಷಯ ನಿಶ್ಚಯ ಮಾಡಿದ್ದೇನೆ. ಏನು ಗೊತ್ತೇ, ನೀವಂತೂ ಇನ್ಮೇಲೆ ಈ ಮನೆ ಬಿಟ್ಟು ಎಲ್ಲಿಗೂ ಹೋಗೋದಕ್ಕೆ ಬಿಡುವವಳಲ್ಲ ನಾನು. ಇಲ್ಲೇ ಕಟ್ಟಿಹಾಕ್ತೇನೆ ನೋಡ್ತಿರಿ."

"ಅದೆಂದಿಗೂ ಸಾಧ್ಯವಿಲ್ಲ."

"ಕುಳಿತು ಉಣ್ಣುವಷ್ಟು ಆಸ್ತಿಯಿರುವಾಗಲೂ ನಿಮಗೆ ಆ ಹಾಳು ನೌಕರಿ ಯಾತಕ್ಕೋ. ನೀವಿಲ್ಲದೆ ಅಪ್ಪ ಅಮ್ಮ ಬಹಳ ದುಃಖಪಡ್ತಾರೆ. ಇನ್ಮೇಲೆ ಇಲ್ಲೇ ಉಳಿದುಬಿಡಿ."

"ಈ ಮನೇಲಿ ಏನಿದೆಯೆಂದು ಉಳಿಯಬೇಕು ಆಶಾ. ಮನಸ್ಸಿಗೆ ಯಾಕೋ ಒಂದು ತರಹ ಬೇಜಾರು."

"ನೀವು ಹುಟ್ಟಿದ ಮನೆಯೇ ನಿಮಗೆ ಬೇಸರ ತರುವಂತಿದ್ದರೆ ಮೊನ್ನೆ ಮೊನ್ನೆ ಆರು ತಿಂಗಳ ಹಿಂದೆ ಈ ಹಳ್ಳಿ ಮನೆಗೆ ಬಂದ ನನಗೆ ಬೇಸರ ಆಗುವುದಿಲ್ಲವೇ? ಸರಿ, ಮನೆಯಲ್ಲಿರಲು ಇಷ್ಟವಿಲ್ಲದಿದ್ದರೆ ಬೇಡ, ಕುಮಟೆಯಲ್ಲಿಯೇ ಒಂದು ಮನೆ ಮಾಡಿ ಬಿಡಿ."

"ಅಪ್ಪಯ್ಯನೂ ಅಮ್ಮನೂ ದೊಣ್ಣೆ ತರಬಹುದು. ಆ ಮುದುಕರಿಬ್ಬರನ್ನು ಇಲ್ಲಿರಿಸಿ ನಾವು ಪೇಟೆಯಲ್ಲಿ ಹಾಯಾಗಿರಬೇಕೇ?"

"ಮತ್ತೆ ಗಂಡನನ್ನು ಬಿಟ್ಟು ನಾನು ಮಾದೇವಿಯ ಹಾಗೆ ಹಳ್ಳಿಯಲ್ಲಿರಬೇಕೇ?" ತೀಕ್ಷ್ಣವಾಗಿತ್ತು ಸ್ವರ. ಕ್ಷಣ ಹೊತ್ತು ತಡೆದು ಆಶಾ ತುಸು ನಕ್ಕು ಅಂದಳು, "ಅಲ್ಲಾ, ನಿಮ್ಮನ್ನು ನೋಡುವಾಗ ನನಗೆ ಏನನ್ನಿಸುತ್ತೆ ಗೊತ್ತೇ..."

"ತೀರಾ ಮುದುಕನಂತೆ ಆಗಿಹೋಗಿದ್ದಾನೆ ನನ್ನ ಈ ಗಂಡ ಎಂದು ಅನ್ನಿಸ್ತಾ ಇದೆ ಅಲ್ಲವೇ? ನಿಜ ನಿಜ, ಕಾಂತಿ ಹೋದ ಮೇಲಿಂದ ನಾನಂತೂ ಪೂರ್ಣ ಮುದುಕನಾಗಿದ್ದೇನೆ. ಅದು ನನಗೇ ಅರ್ಥವಾಗುತ್ತದೆ...."

ಆಶಾಳ ಕಣ್ಣಗಳಲ್ಲಿಯ ನಗು ಮಾಯವಾಗಿ ವೇದನೆ ತುಂಬಿಕೊಂಡಿತು. ಗೋಡೆಯ ಮೇಲೆ ತೂಗು ಹಾಕಿದ್ದ ದೊಡ್ಡದಾದ ಕಾಂತಿಯ ಭಾವಚಿತ್ರದತ್ತ ನೋಡಿದಳು... ಅದೇಕೋ ಮಾತನಾಡುವ ಉತ್ಸಾಹ ಅಲ್ಲಿಗೇ ನಿಂತಿತು. ಶಿವಮೂರ್ತಿಯೂ ಮುಂದಕ್ಕೆ ಮಾತು ಬೆಳೆಸಲಿಚ್ಛಿಸಲಿಲ್ಲ.... ಮತ್ತೊಂದು ನಿಮಿಷದಲ್ಲಿ ಇಡೀ ಕೋಣೆ ಕತ್ತಲೆಯಾಗಿ ಮೌನ ಆವರಿಸಿತು ಕೋಣೆಯನ್ನು. ಕೆಳಗೆ ಎಲ್ಲೋ ಬೆಕ್ಕುಗಳ ಕಚ್ಚಾಟ. ಆಮೇಲೆ ಇಡೀ ಮನೆ ನಿಶ್ಶಬ್ದ....

* * * *

ಜಗನ್ನಾಥ ಆಶಾಳ ಸೋದರಮಾವನ ಮಗ. ತಂದೆ ತೀರಿ ಹೋದ ಮೇಲೆ ಆಶಾಗೆ ಸೋದರಮಾವನ ಮನೆ ಆಶ್ರಯ. ಹೆತ್ತವರಿಲ್ಲ ಎಂದು ತೋರಿಸಿಕೊಡದೆ ತಮ್ಮ ಪ್ರೀತಿಯ ಅಮೃತದಲ್ಲಿ ಬೆಳೆಸಿದ್ದಾರೆ. ಅವಳ ಸೋದರಮಾವ. ಅವಳ ಮನಸ್ಸಿಗೆ ಕಿಂಚಿತ್ ನೋವೂ ಕೊಡದೆ ಯಾವ ಆಸೆಗೂ ತಣ್ಣೀರನ್ನೆರಚದೆ ಅತ್ಯಂತ ಪ್ರೀತಿಯಲ್ಲಿ ನೋಡಿಕೊಂಡಿದ್ದಾರೆ ಮಗಳಂತೆ.

ಆಕೆ ಬಿ.ಎ. ಕಡೆಯ ವರ್ಷದಲ್ಲಿ ಓದುತ್ತಿದ್ದಾಗ ಜಗನ್ನಾಥ ಬೆಂಗಳೂರಿನ ಆಕಾಶವಾಣಿ ಕೇಂದ್ರದಲ್ಲಿ ಕೆಲಸ ದೊರಕಿಸಿಕೊಂಡ. ಶಾಸ್ತ್ರೀಯ ಸಂಗೀತ, ನಾಟಕ, ಭಾವಗೀತೆ ಇವೆಲ್ಲ ಅವನಿಗೆ ಇಷ್ಟದ ಸಂಗತಿ. ಆಶಾಗೆ ಮದುವೆಯೆಂಬ ಸುದ್ದಿ ತಿಳಿದು ರಜೆ ಬರೆದು ಓಡಿಬಂದಿದ್ದ ಮಂಗಳೂರಿಗೆ. ಆಗ ಅವನನ್ನು ಸ್ವಾಗತಿಸಿದ್ದು ಮದುವೆಯ ಹಸಿರು ಚಪ್ಪರ. ತಾಯಿಯಿಂದ ಎಲ್ಲವನ್ನೂ ತಿಳಿದುಕೊಂಡಮೇಲೆ ಆಕೆಯನ್ನು ಏಕಾಂತದಲ್ಲಿ ಕೇಳಿದ್ದ "ನಿನಗೆ ಈ ಸಂಬಂಧ ಒಪ್ಪಿಗೆಯೇ?"

ನಾಚಿಕೆಯಿಂದ ಬಂದಿತ್ತು ಉತ್ತರ, "ಹೂಂ"

"ಹುಡುಗ ನೋಡಲು ಲಕ್ಷಣವಾಗಿದ್ದಾನಂತೆ. ಕೆಂಪು ಬಿಳಿ ಮಿಶ್ರಿತ ಬಣ್ಣವಾಗಿ ದೊರೆ ಮಗನ್ನಾಗೆ ಅಂದಳು ಅಮ್ಮ. ಕುಂದಾಪುರದ ಹತ್ತಿರವಿರುವ ವಂಡ್ಸೆಯ ಭಾರೀ ದೊಡ್ಡ ಶ್ರೀಮಂತರಂತೆ. ಆದರೂ ಆಶಾ ನೀನೇಕೆ ಈ ಸಂಬಂಧ ಒಪ್ಪಿಕೊಂಡೆ? ಇದು ಅವನಿಗೆ ಎರಡನೇ ಮದುವೆ, ಒಂದು ಮಗುವೂ ಇದೆಯಂತೆ... ಛೇ... ಛೇ... ಅನ್ಯಾಯ..."

ಆದರೆ ಮದುವೆಯ ದಿನದಂದು ಆಶಾ ಪತಿಯ ಸಂಗಡ ಧಾರೆ ಮಂಟಪದಲ್ಲಿ ಕುಳಿತಿದ್ದಾಗ ಜಗನ್ನಾಥ ಕಣ್ಣರಳಿಸಿ ಅವಳ ಕಿವಿಯಲ್ಲಿ ಪಿಸುಗುಟ್ಟಿದ್ದ, "ಆಹಾ... ಈಗ ಗೊತ್ತಾಯ್ತು ಆಶಾ, ನೀನೇಕೆ ಈ ರೂಪಕ್ಕೆ ಮರುಳಾದೆ ಎಂದು. ಯೂ ಆರ್ ಎ ಲಕ್ಕೀ ಗರ್ಲ್! ನಿನ್ನ ಅಮ್ಮ ಇದ್ದಿದ್ದರೆ ಎಷ್ಟು ಸಂತೋಷ ಪಡ್ತಿದ್ದಳೋ..."

ಅಮ್ಮ...! ತನ್ನನ್ನು ಈ ಧರೆಗೆ ತಂದಿಳಿಸಿದ ಹಡೆದಮ್ಮ! ಅವಳನ್ನು ಹುಟ್ಟಿದಾರಭ್ಯ ತಾನು ನೋಡಿಯೇ ಇಲ್ಲ. ತನಗೂ ಎಲ್ಲರಂತೆ ತಂದೆ ತಾಯಿ ಏಕಿಲ್ಲವೆಂದು ಆಗಾಗ ಅತ್ತೆ ಮಾವರಲ್ಲಿ ಕೇಳಿದಾಗ ತಂದೆ ತೀರಿ ಹೋಗಿದ್ದಾರೆ ಎನ್ನುತ್ತಿದ್ದರು. ಆದರೆ ತಾಯಿಯ ವಿಷಯವಾಗಿ ಯಾರೂ ಏನನ್ನೂ ಹೇಳಿರಲಿಲ್ಲ. ತಾಯಿ ಸತ್ತಿಲ್ಲ, ಎಲ್ಲೋ ಜೀವಂತವಾಗಿದ್ದಾಳೆ ಎನ್ನುವದೂ ಕ್ರಮೇಣ ತಿಳಿದಿತ್ತು. ತನ್ನ ಮದುವೆಯ ದಿನದಂದು ಯಾರದೋ ಮುಖಾಂತರ ಬೆಲೆ ಬಾಳುವ ಸೀರೆಯೊಂದು ತನಗೆ ಉಡುಗೊರೆಯಾಗಿ ಬಂದಾಗ,

"ಮಗೂನ್ನ ತೆಗೆದುಕೊಂಡು ಹೋಗಿ ಸಾಕದೇ ಇದ್ದ ಆ ಬಜಾರಿ ಈಗ ಸೀರೆ ಕಳಿಸಿದ್ದಾಳೆ ತನ್ನ ಪ್ರೀತಿ ತೋರಿಸಲು...!"

"ಒಂದು ದಿನವಾದರೂ ಮಗೂನ್ನ ನೋಡಲು ಬಂದಿತ್ತೇ ಆ ಪ್ರಾಣಿ? ಕಟುಕಳು ಕಟುಕಳು. ಮಗಳನ್ನು ಬೀದಿ ಪಾಲು ಮಾಡಿ ಅದ್ಯಾವನನ್ನೋ ಕಟ್ಟಿಕೊಂಡು ಓಡಿ ಹೋಗಿದೆಯಲ್ಲ ಆ ಗಂಡ ಸತ್ತ ಮುಂಡೆ! ಈಗ ಅದಕ್ಕೆ ಮಗಳ ನೆನಪು ಬಂದಿತೇ?"

ಹೀಗೆ ಪ್ರಾರಂಭವಾಗಿದ್ದವು ನೂರೆಂಟು ಟೀಕೆಗಳು. ತಾಯಿ ರುಕ್ಮಿಣಿ (ಕರೆಯುತ್ತಿದ್ದ ಹೆಸರು ರುಕ್ಕಾ) ಎಲ್ಲೋ ಜೀವಂತವಾಗಿ ಇದ್ದಾಳೆನ್ನುವುದು ಈ ಉಡುಗೊರೆ ಬಂದಾಗ ತಿಳಿಯಿತು! ಆ ಗಳಿಗೆಯಲ್ಲಿ ಅವಳನ್ನು ಒಂದು ಬಾರಿ ನೋಡಬೇಕೆಂದು ಮನಸ್ಸಾಗಿತ್ತು ನಿಜ. ಆದರೆ ಮನೆಯವರು ಹಾಗೂ ನೆರೆಹೊರೆಯವರ ಮಾತುಗಳಿಂದ ಮಗಳೆಂಬ ಪ್ರೀತಿಯ ಪಾಶವನ್ನು ಕಿತ್ತೆಸೆದು ಇನ್ನೊಬ್ಬ ಗಂಡಸಿನೊಡನೆ ಜೀವನ ನಡೆಸಲು ಹೋದ ತನ್ನ ತಾಯಿಯ ವಿಷಯದಲ್ಲಿ ಇನ್ನಷ್ಟು ಹೇಯ ಭಾವನೆಗಳನ್ನಿರಿಸಿಕೊಂಡು ಒಂದು ವಿಧದಲ್ಲಿ ತಿರಸ್ಕರಿಸಿದ್ದಳು. 'ಅಮ್ಮಾ' ಎಂದು ಕರೆಯಿಸಿಕೊಳ್ಳಬೇಕಿದ್ದ ಅವಳಲ್ಲಿ ಯಾವ ಆದರದ ಭಾವನೆಯಿರದಿದ್ದರೂ ಒಂದು ಸಲ ನೋಡಬೇಕೆಂಬ ಆಸೆ ಮನಕ್ಕೆ.

ಬೆಳೆಯುತ್ತಿದ್ದ ಯೋಚನೆಯ ಮಾಲೆಯೊಂದಿಗೆ ಅದಾವಾಗಲೋ ಆವರಿಸಿಕೊಂಡಿತು ನಿದ್ರೆಯ ತೆರೆ.

೨

ಮರುದಿನ ಬೆಳಿಗ್ಗೆ ಎದ್ದಾಗ ಪಕ್ಕದಲ್ಲಿ ಮಲಗಿದ್ದ ಶಿವಮೂರ್ತಿ ಯಾವಾಗಲೋ ಎದ್ದು ಕೆಳಗಿಳಿದು ಹೋಗಿದ್ದ. ಕೆಳಗೆ ದೊಡ್ಡ ಸ್ವರದಲ್ಲಿ ಯಾರೋ ಮಾತನಾಡುತ್ತಿರುವ ಸದ್ದು. ನಿನ್ನೆ ಬಂದ ಅಪರಿಚಿತನ ಸ್ವರ ಇರಬೇಕು ಅದು. ಆಶಾ ಕೆಳಗಿಳಿದು ಬಂದಾಗ ಶಿವಮೂರ್ತಿ ಹೊಸಬನೊಂದಿಗೆ ಮಾತನಾಡುತ್ತಿದ್ದವನು ಇವಳನ್ನು ನೋಡಿ ತಮ್ಮತ್ತ ಕರೆದು ಆತನಿಗೆ ಪರಿಚಯ ಮಾಡಿಸಿದ, "ನಿನ್ನೆ ದಿನ ಇವಳು ಕಾಡಿಗೆ ಬರದೇ ಹೋಗಿದ್ರೆ ನಿಮ್ಮ ಅವಸ್ಥೆ ಏನಾಗ್ತಿತ್ತೋ."

"ನಿಮ್ಮೆಲ್ಲರ ದಯದಲ್ಲಿ ನಾನು ಉಳಿದುಕೊಂಡೆ. ಈಗಲೂ ಹುಣ್ಣಾಗಿದೆ ನೋವು" ಎಂದ ಕ್ಷೀಣ ಸ್ವರದಲ್ಲಿ.

ಆಗಲೇ ದೊಡ್ಡ ಮನೆಯ ಕೆಲಸಗಳು ಪ್ರಾರಂಭವಾಗಿ ಹೋಗಿತ್ತು. ಆಶಾ ಮುಖ ತೊಳೆದು ಒಳಗೆ ಬರುತ್ತಿದ್ದಂತೆ ಬಿಸಿ ಬಿಸಿ ದೋಸೆ, ಹೊಗೆಯಾಡುವ ಕಾಫಿ ತಂದಿರಿಸಿದಳು ಚೆನ್ನಕ್ಕ. ಉಳಿದವರಿಗೆಲ್ಲಾ ಆಗಲೇ ಬೆಳಗಿನ ಉಪಹಾರ ಆಗಿಹೋಗಿದೆಯೆಂದು ತಿಳಿದು ಅಚ್ಚರಿಯಾಯಿತು. ವಾರದಲ್ಲಿ ಎರಡೇ ದಿನ ಮೂರ್ತಿ ಮನೆಯಲ್ಲಿರುವುದು. ಆಗಲಾದರೂ ತನ್ನೊಂದಿಗೆ ಕಾಫಿ ತಿಂಡಿ ತಿನ್ನಬಾರದೇ? ಆ ಕ್ಷಣದಲ್ಲಿ ಅದೇಕೋ ಮ್ಲಾನವಾಯಿತು ಮುಖ.

"ಏನು ಅತ್ತಿಗೆಮ್ಮ. ತಿಂಡಿ ಸೇರುವುದಿಲ್ಲವೇ?" ಎನ್ನುತ್ತ ಕೈಯಲ್ಲಿ ಹಿಡಿದುಕೊಂಡಿದ್ದ ಹಿಡಿಸೂಡಿಯನ್ನು ಅತ್ತ ಬಿಸಾಡಿದಳು ಈಶ್ವರಿ. "ಈಗ್ಬಂದೆ ಕೈ ತೊಳೆದುಕೊಂಡು. ಏನೂ ಬೇಸರ ಮಾಡ್ಬೇಡ ಮರೀ" ಎಂದಂದು ಕ್ಷಣದಲ್ಲಿ ಕೈ ತೊಳೆದುಕೊಂಡು ಹಾರಿಕೊಂಡು ಬಂದಳು. "ನಿನಗೆ ಕಂಪನಿ ಕೊಡೋದಕ್ಕೆ ನಾನಿದ್ದೇನೆ ನೋಡು. ಚೆನ್ನಕ್ಕ ಬಿಸಿ ಬಿಸಿ ಕಾಫಿ... ಹಾಲು ಹೆಚ್ಚಿಗೆ ಇರಲಿ. ತಗೋ ಅತ್ತಿಗೇ."

"ನನಗಂತೂ ಹೀಗೆ ಒಬ್ಬಳೇ ತಿನ್ನುವುದೆಂದರೆ ಬೇಸರವಪ್ಪ."

"ನನಗೆ ಇದೆಲ್ಲ ಅಭ್ಯಾಸವಾಗಿ ಹೋಗಿದೆ" ತಿಂಡಿ ತಿನ್ನುತ್ತ ಹೇಳತೊಡಗಿದಳು ಈಶ್ವರಿ, "ಅತ್ತೆ, ಮಾವ, ಮೈದುನ ನಾದಿನಿಯರಿಗೆ ಮಾಡಿಬಡಿಸಿ ಆದ್ಮೇಲೆ ನಾನೊಬ್ಬಳೇ ಉಣ್ಣಬೇಕು ತಿನ್ನಬೇಕು. ಬೇಸರವಿಲ್ಲ ಬಿಡು. ಬಂಡಿ ಬಕಾಸುರನಂತೆ ತಿನ್ತೇನೆ. ಅದ್ಕೇ ನೋಡು ಹೀಗೆ ಆನೆಯಂತೆ ದಪ್ಪವಾಗಿದ್ದೇನೆ.... ಹ್ಹ ಹ್ಹ...."

ತಿಂಡಿ ಮುಗಿಸಿ ಹೊರಗೆ ಬಂದಾಗ ಶಿವಮೂರ್ತಿ ಇನ್ನೂ ಆತನೊಂದಿಗೆ ಮಾತನಾಡುತ್ತಲೇ ಇದ್ದ. ಆಶಾ ಮತ್ತು ಈಶ್ವರಿಯರನ್ನು ನೋಡಿ ಆತ ಸಂಕೋಚದಿಂದ ಮುದುಡುತ್ತ ಅಂದ, "ಮನೆಗೆ ಹೊರಟಿದ್ದೆ, ಇವರು ಸಾಯಂಕಾಲ ಹೋಗಿ ಎಂದರು."

"ಸಂತೋಷದ ವಿಚಾರ. ಹೇಗಿದ್ದರೂ ನೀವೊಬ್ಬರೇ ಮನೆಯಲ್ಲಿ. ಹೇಗೆ ಆಶಾ, ನಾನ್ಹೇಳಿದ್ದು ಸರಿಯಾಗಿಲ್ಲವೇ? ತಂದೆ ತಾಯಿ ಯಾರೂ ಇಲ್ಲಿ ಇಲ್ಲವಂತೆ. ಹೇಳಿ ಕೇಳಿ ಬ್ರಹ್ಮಚಾರಿ. ಮತ್ತಿನ್ನೇನಾಗಬೇಕು..." ಶಿವಮೂರ್ತಿಯ ಮಾತು ನಗುವಿನಲೆ ಎಬ್ಬಿಸಿತು ಅಲ್ಲಿ.

ಮಧ್ಯಾಹ್ನದ ನಂತರವೇ ಮನೆಯವರಿಗೆಲ್ಲಾ ಅವನ ವಿಚಾರ ತಿಳಿದದ್ದು. ಅವನ ಊರು ಸಿದ್ದಾಪುರದ ಹತ್ತಿರ ಯಾವುದೋ ಸಣ್ಣ ಹಳ್ಳಿ. ತಂದೆ ತಾಯಿಗೆ ಐದನೇ ಮಗನಾಗಿದ್ದವನು ಪ್ರಾಯ ಬಂದ ಮೇಲೆ ಯಾವುದೋ ಕಾರಣಕ್ಕಾಗಿ ಜಗಳವಾಡಿ ಮನೆ ಬಿಟ್ಟವನು ಇನ್ನೂ ಆ ಬದಿಗೆ ಹೋಗಿಲ್ಲ. ಎಲ್ಲಿಯ ನೀರಿನ ಋಣಾನುಬಂಧವೋ ಆತ ವಂಡ್ಸೆಗೆ ಬಂದು ಸೇರಿಕೊಂಡಿದ್ದಾನೆ. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಏನೋ ಸಣ್ಣ ಕೆಲಸವಂತೆ. ಹೆಸರು ವಿಚಿತ್ರವಾದದ್ದು... ಲೋಹಿತಾಕ್ಷ!

"ನೋಡಲು ರೂಪವಂತನಲ್ಲವಿದ್ದರೂ ಬಹಳ ಒಳ್ಳೆಯವನಿರಬೇಕು ಅವನು" ಆಶಾ ಒಬ್ಬಳೇ ಇದ್ದಾಗ ಹೇಳಿದ ಮೂರ್ತಿ, "ಹೇಗೆ ಬೇಕೋ ಹಾಗೆ ಮಾತನಾಡಬಲ್ಲ ರಸಿಕ. ಕೃಷಿ, ಸಾಹಿತ್ಯ, ರಾಜಕೀಯ ಎಲ್ಲವೂ ಅವನಿಗೆ ಅಷ್ಟು ಇಷ್ಟ. ತಿಳಿಯದ ವಿಷಯ ಅವನಿಗಿಲ್ಲ. ಇಂಥವರ ಸಹವಾಸ ಸಂತೋಷವನ್ನೂ ಕೊಡುತ್ತೆ."

"ಯಾರನ್ನೂ ನಂಬಬೇಡಿ" ಎಚ್ಚರಿಕೆ ಕೊಟ್ಟಳು ಆಶಾ, "ಯಾರು ಹೇಗಿರುತ್ತಾರೋ ತಿಳಿಯುವುದು ಬಹಳ ಕಷ್ಟ."

ಅಂದು ಸಾಯಂಕಾಲ ಲೋಹಿತಾಕ್ಷನ ಕೈಕುಲುಕುತ್ತ ಶಿವಮೂರ್ತಿ ಹೇಳಿದ, "ನಿಮ್ಮ ಪರಿಚಯವಾದದ್ದು ಸಂತೋಷ. ಪ್ರತಿ ಶನಿವಾರ, ಆದಿತ್ಯವಾರ ಇಲ್ಲಿಗೆ ಬರ್ತಾ ಇರಿ. ನಮ್ಮನೆಗೆ ಬರಲು ಸಂಕೋಚ ಬೇಡ. ನೆನಪಿರಲಿ ನನ್ನ ಮಾತು!"

* * * *

ತನ್ನ ಮೊದಲ ಹೆಂಡತಿ ತೀರಿ ಹೋದ ಆರು ತಿಂಗಳ ಕಾಲ ಶಿವಮೂರ್ತಿ ತನ್ನ ಮಹಡಿ ಕೋಣೆಯಿಂದ ಕೆಳಗಿಳಿಯದೆ ದಿನವೆಲ್ಲ ಅವಳನ್ನೇ ನೆನೆಸಿಕೊಳ್ಳುತ್ತ ಅವಳ ಭಾವಚಿತ್ರದೆದುರು ಕಣ್ಣೀರು ಹಾಕುತ್ತ ಮಗುವಿನಂತೆ ರೋದಿಸುತ್ತಿದ್ದಾಗ ತಂದೆ ತಾಯಿ ಹಲವು ವಿಧದಲ್ಲಿ ಸಮಾಧಾನ ಹೇಳಿ ಅವನ ದುಃಖ ಶಮನ ಮಾಡಲು ಪ್ರಯತ್ನಿಸಿದ್ದರು. ದುಃಖದಿಂದ ಕಂಗಾಲಾದ ಅವನಿಗೆ ಇನ್ನೊಂದು ಮದುವೆ ಮಾಡಿದರೆ ಸರಿಹೋದಾನು ಎಂದುಕೊಂಡು ಅವನ ಮನವೊಲಿಸಲು ಪ್ರಯತ್ನಿಸಿದಾಗ ಸ್ಪಷ್ಟವಾಗಿ ನಿರಾಕರಿಸಿಬಿಟ್ಟಿದ್ದ. ಇಡೀ ದಿನವೆಲ್ಲ ಕಾಂತಿಯದೇ ಜಪ. ನಿಂತಲ್ಲಿ ಕುಳಿತಲ್ಲಿ ಅವಳ ನೆನಪಿನಿಂದ ಹುಚ್ಚನಂತಾದ. ಇನ್ನು ಹೀಗೇ ಇದ್ದರೆ ತನಗೆ ಪೂರ್ತಿಯಾಗಿ ಹುಚ್ಚು ಹಿಡಿಯುತ್ತದೆಯೇನೋ ಎಂಬ ಹೆದರಿಕೆ ಅವನಿಗೇ ಆಯಿತು. ತತ್ಕಾಲ ತನ್ನ ಮನಸ್ಸು ಬೇರೆಡೆಗೆ ತಿರುಗಿಸಬೇಕೆಂದುಕೊಂಡು ಎಂ.ಎ. ಓದಿದ. ಎಂಟು ವರ್ಷಗಳ ನಂತರ ಕೆಲಸವನ್ನರಸತೊಡಗಿದ, ಮನದಲ್ಲಿ ಒತ್ತಾಯದ ಉತ್ಸಾಹ ತುಂಬಿಕೊಂಡು. ಎರಡು ತಿಂಗಳ ಪ್ರಯತ್ನದ ನಂತರ ಕುಮಟೆಯಲ್ಲಿ ಕಾಲೇಜಿನಲ್ಲಿ ಸಿಕ್ಕಿತು ಕೆಲಸ.

"ಅಷ್ಟು ದೂರಕ್ಕೆ ಹೋಗ್ಬೇಕಾ ಶಿವೂ. ನೀನಿಲ್ಲದೆ ನಾವಾದರೂ ಹೇಗಿರಬೇಕು ಇಲ್ಲಿ" ಎಂದರು ರಂಗಮ್ಮ ಮಗನನ್ನು ಅಗಲಲಾರದೆ.

"ಕಾಂತಿಯನ್ನು ಮರೆಯುವ ತನಕ ಕೆಲಸಕ್ಕೆ ಸೇರ್ತೇನಮ್ಮ. ಆ ಮೇಲೆ ಖಂಡಿತಾ ಇಲ್ಲೇ ಬಂದುಳಿಯುತ್ತೇನೆ."

ಕ್ರಮೇಣ ಕುಮಟೆಯ ಜೀವನ ಅವನಿಗೆ ಅಭ್ಯಾಸವಾಯಿತು. ಕಾಲೇಜಿನ ಲೆಕ್ಚರರ್ ಕೆಲಸ, ಆಟ, ವಿನೋದ, ಸ್ನೇಹಿತರು ಇತ್ಯಾದಿಗಳಿಂದಾಗಿ ಕಾಂತಿಯನ್ನು ಮರೆಯತೊಡಗಿದ. ಮಗ ಮೊದಲಿನಂತಾಗುತ್ತಿದ್ದಾನಲ್ಲ ಎಂಬ ಸಂತಸದೊಂದಿಗೆ ಎರಡನೇ ಮದುವೆ ತಯಾರಿ ಮನೆಯಲ್ಲಿ. ಆಶಾಳ ರೂಪ, ಮುಗ್ಧ ಮುಖಕ್ಕೆ ಮನಸೋತ ಶಿವಮೂರ್ತಿ. ಒಪ್ಪಿಗೆಯನ್ನೂ ಕೊಟ್ಟ. ಅನಂತರ ಅವನಲ್ಲೇ ಅದೆಷ್ಟೋ ಬಾರಿ 'ಇನ್ನು ಬರಲಿರುವ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಯೇ' ಎಂಬ ಅನುಮಾನ ಕಾಡಿತು ಅವನನ್ನು.

ಮದುವೆಯಾಗಿ ಮನೆ ತುಂಬಿದಳು ನೂತನ ವಧು. ಮತ್ತೆ ಮನೆಯಲ್ಲಿ ಹರಿಯಿತು ಸಂತಸದ ಹೊನಲು. ಮಗ ಇನ್ನು ಸದಾ ತಮ್ಮೊಡನೆಯೇ ಇರುತ್ತಾನೆಂಬ ಸಂಭ್ರಮ ಮುದಿ ದಂಪತಿಗಳಿಗೆ. ಆದರೆ ಯಥಾ ಪ್ರಕಾರ ಮೂರ್ತಿ ಹೊರಟ

ಕುಮಟೆಗೆ. ತಂದೆ ಹೇಳಿ ನೋಡಿದರೂ ಕೇಳಲಿಲ್ಲ ಅವನು. 'ಈ ಮನೆಯಲ್ಲಿದ್ದರೆ ಎಲ್ಲಿ ನೋಡಿದರೂ ನನ್ನ ಎದುರು ಕಾಂತಿ ಕಾಣಿಸುತ್ತಾಳೆ...' ಎಂದ.

"ಅವಳ ಬದಲಿಗೆ ಬಂದಿದ್ದಾಳಲ್ಲ ಆಶಾ..."

"ಇಲ್ಲ ಅಪ್ಪ. ಶನಿವಾರ, ಆದಿತ್ಯವಾರ ಇಲ್ಲೇ ಇರ್ತೇನೆ. ಮತ್ಯಾಕೆ ಚಿಂತೆ.... ನನ್ನ ಮನಸ್ಸು ಇನ್ನೂ ಸರಿಹೋಗಿಲ್ಲ."

"ನಿನ್ನಿಷ್ಟ. ಈ ಮನೆ ಬೇಡವಾಗಿದ್ದರೆ ಹೊಸದನ್ನು ಬೇರೆಡೆಗೆ ಕಟ್ಟಿಸೋಣ. ಮುಖ್ಯವಾಗಿ ಅವಳಿಗೆ ನಿನ್ನಿಂದ ದುಃಖವಾಗಬಾರದು."

ಆಮೇಲಿನ ದಿನಗಳಲ್ಲಿ ಮನೆಯವರು, ಆಶಾ ಎಷ್ಟು ಒತ್ತಾಯಿಸಿರೂ ಅವನು ಒಪ್ಪಲಿಲ್ಲ, ಇಲ್ಲಿರಲು. ಈ ದಿನವೂ ಶಿವಮೂರ್ತಿ ವಂಡ್ಸೆಯಿಂದ ಕುಮಟೆಗೆ ಹೊರಟಾಗ ಇವೇ ಮಾತನ್ನು ಎತ್ತಿ ತೆಗೆದು ಇಲ್ಲುಳಿದುಕೊಳ್ಳುವಂತೆ ಹೇಳಿದಾಗ ಮೂರ್ತಿ ರೇಗಿಹೋದ.

"ಪ್ರತಿಸಲ ನಿನ್ನದೊಂದು ಹಾಳು ರಗಳೆ. ಏನು ಹಠ ನಿನಗೆ. ಕಾಂತಿಯಿರುವಾಗ ಒಂದು ದಿನವೂ ನನ್ನ ಮನಸ್ಸಿನ ವಿರುದ್ಧ ನಡೆದಿಲ್ಲ..."

ತೆಪ್ಪಗಾದಳು ಆಶಾ ಈ ಮಾತನ್ನು ಕೇಳಿ. ಆತ ಹೊರಟುಹೋದ ಕುಮಟೆಗೆ. ಅನ್ಯಮನಸ್ಕಳಾದ ಆಶಾ ಜಗನ್ನಾಥನ ಕಾಗದಕ್ಕೆ ಉತ್ತರ ಬರೆದು ಲಕೋಟೆಯಲ್ಲಿರಿಸಿ ಪೋಸ್ಟಿಗೆ ಕಳುಹಿಸುವುದಕ್ಕಾಗಿ ಕೆಳಗಿಳಿದು ಬಂದಳು.

"ಈ ಮನೆಯಲ್ಲಿ ಏನಿದೆ ಸ್ವಾರಸ್ಯ ನೀಲಿ?" ಅಡಿಗೆ ಚೆನ್ನಕ್ಕನ ಕೈ ತರಕಾರಿ ಹೆಚ್ಚುತ್ತಿತ್ತು, ಬಾಯಿ ಹರಟುತ್ತಿತ್ತು. "ಕಾಂತಿಯಮ್ಮ ಇದ್ದಾಗ ಏನು ಖುಷಿಯಿತ್ತು. ಅಂತಹ ಸೊಸೆ ಸಿಗಲು ಪುಣ್ಯ ಬೇಕು."

"ಈಗ ಬಂದ ಅಮ್ಮ ಕಾಂಬಕೆ ಲಾಯ್ಕ ಇಪ್ರಲ್ದ? ಮಾತು ಮಾತ್ರ ಕಮ್ಮಿ... ಗುಣ ಚೆನ್ನದ್ದಂಗೆ ಇಪ್ಪಕ್ಕೂ ಸಾಕು." ತಂಗಳನ್ನ ಊಟ ಮಾಡುತ್ತಿದ್ದ ನೀಲಿಯ ಸ್ವರ ಕೇಳಿಸಿತು ಹೊರ ಜಗುಲಿಯಿಂದ.

"ಮಾತೆಲ್ಲ ಉಂಟು ನೀಲಿ" ಬಾಯಿ ಓರೆ ಮಾಡುತ್ತ ಹುಬ್ಬು ಹಾರಿಸಿ ಅಂದಳು. ಚೆನ್ನಕ್ಕ, "ನಮ್ಮನ್ನು ಕಂಡರೆ ಅಷ್ಟಕ್ಕಷ್ಟೆ.'

ಅವಳ ಮಾತು ಪೂರ್ಣವಾಗುವ ಮೊದಲೇ ಆಶಾ ಬಂದುದರಿಂದ ಮಾತನ್ನು ಅಲ್ಲಿಗೇ ನಿಲ್ಲಿಸಿ ಅವಳಿಗೆ ಮಣೆಯಿಡುತ್ತ ನಗುವಿನೊಂದಿಗೆ ಕಾಫಿ ಬೇಕೇ ಎಂದು ವಿಚಾರಿಸಿದಳು! ಆಶಾ ಅಷ್ಟೇ ತೀಕ್ಷ್ಣವಾಗಿ ನೋಡುತ್ತ ನೀಲಿಯತ್ತ ತಿರುಗಿ "ಜಬ್ಬಣ್ಣ ಎಲ್ಲಿದ್ದಾನೆ ನೀಲಿ, ಈ ಕಾಗದವನ್ನು ಪೋಸ್ಟ್ ಮಾಡಿ ಬರಲು ಹೇಳು" ಎಂದಳು.

"ಅರೆರೆ ಅತ್ತಿಗೆಮ್ಮ, ನಿನ್ನನ್ನು ಹುಡುಕಿ ಹುಡುಕಿ ಸಾಕಾಯ್ತು. ಇಕೋ ಮಲ್ಲಿಗೆ ಮಾಲೆ. ರಾಣಿಯವರ ತಲೆಯಲ್ಲಿ ಅಲಂಕರಿಸಲಿ ಅಂತ ತಂದಿದ್ದೇನೆ" ಎನ್ನುತ್ತ ಅಲ್ಲಿಗೆ ಬಂದಳು ಈಶ್ವರಿ.

"ಯಾರಿಗೆ ಬೇಕಾಗಿದೆಯೇ ಅಲಂಕಾರ.... ಬೇಡ ಬಿಡು."

"ಅದ್ಯಾಕೆ ಹಾಗೆ ಹೇಳ್ತಿಯೇ? ನೀನೀಗ ಮುದುಕಿ ಆಗಿಲ್ಲವಲ್ಲ. ಹೂವು

ಮುಡೀಲಾರೆ ಅನ್ನಬಾರದು.... ಈಗ ನಾನು ನೋಡು." ಅವಳ ಧ್ವನಿ ಭಾರವಾಯಿತು, "ಮುಡಿದುಕೋಬೇಕು ಅಂತ ಅನ್ನಿಸಿದರೂ ಆ ಭಾಗ್ಯ ನನಗಿಲ್ಲ..."

ದೀನಳಾಗಿ ನೋಡಿದಳು ಈಶ್ವರಿಯತ್ತ. ಮದುವೆಯಾಗಿ ಕೇವಲ ಮೂರು ವರ್ಷ ಗಂಡನ ಸಂಗಡ ಸಂಸಾರ ನಡೆಸಿದವಳು ಈಶ್ವರಿ. ಆಮೇಲೆ ವಿಧಿ ಬೀಸಿದ ಕ್ರೂರ ಬಲೆಯಲ್ಲಿ ಅವಳದು ಕತ್ತಲು ತುಂಬಿದ ಜೀವನ. ಮಂಗಳದ ಕುರುಹನ್ನೆಲ್ಲ ಕಿತ್ತೆಸೆದು ಮನದ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕಿಕೊಂಡು ಸದಾ ನಗುನಗುತ್ತಿರುವ ಹಸನ್ಮುಖಿ!

ಈಗಲೂ ಅದೇ ನಗೆ ತುಂಬಿದ ಮುಖದಲ್ಲಿ ಅತ್ತಿಗೆಗೆ ಮಲ್ಲಿಗೆಯ ಮಾಲೆ ಮುಡಿಸಿದಳು. ಅನಂತರ ಅವರಿಬ್ಬರು ಒಟ್ಟಾಗಿಯೇ ಅಲ್ಲಿಂದ ಹೊರ ಅಂಗಳಕ್ಕೆ ಬಂದು ಗದ್ದೆಯತ್ತ ಹೊರಟರು.

ಮನೆಯ ಹಿಂಬದಿಯ ಕಾಡಿಗೆ 'ಪೃಥ್ವಿಹಿತ' ಎಂದು ಹೆಸರಿಟ್ಟಿದ್ದಾರೆ ತಮ್ಮಯ್ಯ. ಅದನ್ನು ಹತ್ತಿ ಇಳಿದರೆ ಕಾಣುವ ವಿಶಾಲವಾದ ಗದ್ದೆ ಮತ್ತು ತೆಂಗಿನ ತೋಟ ತಮ್ಮಯ್ಯನವರದು. ಹತ್ತು ಸಾವಿರಕ್ಕೆ ಹತ್ತಿರವಾದ ತೆಂಗಿನ ಹುಟ್ಟುವಳಿ. ಎಲ್ಲವೂ ಪಿತ್ರಾರ್ಜಿತ ಸೊತ್ತು. ಚಕ್ರ ಹೊಳೆಯ ನೀರಿನ ಸದುಪಯೋಗದಿಂದ ಚಿನ್ನದ ಬೆಳೆ!

"ಅಲ್ಲ ಈಶ್ವರಿ" ಗದ್ದೆ ತೋಟ ಸುತ್ತುತ್ತಿದ್ದಂತೆ ಆಶಾ ಅಂದಳು, "ಇಷ್ಟು ಆಸ್ತಿಯಿರುವಾಗಲೂ ನಿನ್ನ ಅಣ್ಣ ಯಾಕೆ ಆ ಕುಮಟೆಗೆ ಹೋಗ್ತಾರೋ ನಾನರಿಯೆ. ಕೇಳಿದರೆ 'ನೋಡೋಣ' ಎನ್ತಾರೆ."

"ಪಾಪ, ಅವನದು ಬಹಳ ಸೂಕ್ಷ್ಮ ಮನಸ್ಸು ಅತ್ತಿಗೇ, ಅವನ ಮನಸ್ಸಿಗಾದ ಆಘಾತದಿಂದ ಅವನಿನ್ನೂ ಚೇತರಿಸಿಲ್ಲ..."

"ಮನೆ ಕೆಲಸದ ನೀಲಿ, ಚೆನ್ನಕ್ಕ ಇವರೆಲ್ಲ ವಿಚಿತ್ರ ಸ್ವಭಾವದವು.... ಯಾಕೋ ಹಿತವೆನಿಸದು ಅವರ ಮಾತು."

"ಚೆನ್ನಕ್ಕನಿಗೆ ಅಧಿಕ ಪ್ರಸಂಗತನ ಜಾಸ್ತಿ. ತಾನು ಬುದ್ಧಿವಂತೆ ಎಂಬ ಅಹಂಕಾರ ಬೇರೆ ಇದೆ.... ನಿಂಗೇನಾದರೂ ಅಂದಳಾ?"

"ಏನಿಲ್ಲ, ಇಡೀ ದಿನ ಕಾಂತಿಯದೇ ಗುಣಗಾನ... ಹ್ಹಾ..."

"ಅಷ್ಟೆಯೋ! ಬಿಡು ಅತ್ತಿಗೆ, ಸತ್ತ ಆನೆಗೆ ಬೆಲೆ ಹೆಚ್ಚು ಅನ್ತಾರಲ್ಲ ಆ ಗಾದೆ ಇಲ್ಲಿಯೂ ಇದೆ... ಅದಕ್ಕೆಲ್ಲ ತಲೆ ಬಿಸಿ ಮಾಡ್ಬಾರ್ದಮ್ಮಾ" ಎಂದಳು ಈಶ್ವರಿ ಸಮಾಧಾನದಲ್ಲಿ.

ಅಂದು ಮಧ್ಯಾಹ್ನದ ನಂತರ ತಮ್ಮಯ್ಯನವರು ಮಗಳನ್ನು ಕರೆದುಕೊಂಡು ಹೊರಟುಹೋದರು ಸುರತ್ಕಲ್‌ಗೆ. ಅವರು ಹೋದ ಮೇಲೆ ರಂಗಮ್ಮನಿಗೆ ಅವಳದೇ ಗುಣಗಾನ. ಆಶಾಳೊಂದಿಗೆ ಹೇಳುತ್ತ ಹೇಳುತ್ತ ಕಣ್ಣೀರಿಟ್ಟರು. ಎಷ್ಟು ಬಾರಿ ಆ ಕತೆ ಹೇಳಿದ್ದಾರೋ ಈಗಲೂ ಆ ಅಪಘಾತದ ಸುದ್ದಿ ಹೇಳುತ್ತ "ಅಂದಿನ ಅಪಘಾತದಲ್ಲಿ ನಾನು ಕಣ್ಣುಗಳನ್ನು ಕಳೆದುಕೊಂಡೆ. ಆಶಾ, ನನ್ನ ಅಳಿಯ ಬದುಕಿ ನಾನು ಸಾಯಬಾರದಿತ್ತೇ? ಕಾರು ಅಪಘಾತದಲ್ಲಿ ಅಳಿಯ ಸತ್ತುಹೋದ. ಅಯ್ಯೋ, ನಾನು ಕಣ್ಣು ಕಳೆದುಕೊಂಡೆ ಹೇಗೆ ಅಂತೀಯೇ, ನನ್ನ ಕಣ್ಣುಗಳಿಗೆ ಗಾಜು ಬಡಿದಿತ್ತು... ಈಗ

ಹಲುಬಿ ಏನು ಪ್ರಯೋಜನ ಆಶಾ, ಆಗ ನಮಗೆ ಕಾರು ಇತ್ತು. ಮೂರ್ತಿಯೇ ಕಾರು ನಡೆಸುತ್ತಾ ಇದ್ದ. ಸುದೈವದಿಂದ ಅವನಿಗೂ, ಮೊಮ್ಮಗನಿಗೂ ಏನೂ ಆಗಲಿಲ್ಲ. ಕಾಂತಿ ಮಾತ್ರ ಅಪಘಾತದಲ್ಲಿ ಸತ್ತೇ ಹೋದಳು.... ಆಮೇಲೆ ಮೂರ್ತಿ ಕಾರನ್ನು ಮಾರಿ ಮೋಟರ್ ಬೈಕ್ ತೆಗೆದ..."

ಅವರ ಮಾತು ಅಲ್ಲಿಗೇ ನಿಂತಿತು, "ನನ್ನ ಮಾತಿನಿಂದ ನಿನಗೆ ಬೇಸರವಾಯ್ತೇ ಆಶಾ, ಯಾರ ಹತ್ರ ನನ್ನ ಈ ದುಃಖ ಹೇಳಿಕೊಳ್ಳಲಿ? ನಂದನವನದಂತೆ ಇದ್ದ ಮನೆ ಈಗ ಸ್ಮಶಾನ! ನಿಂತರೆ ಮಲಗಿದರೆ ವ್ಯಥೆ, ಕಣ್ಣೀರು. ಈ ಕಣ್ಣುಗಳು ಬೇರೆ ಕಾಣುವುದಿಲ್ಲ. ಒಟ್ಟಿನಲ್ಲಿ ನನ್ನ ಗ್ರಹಚಾರ. ನಿನಗೇಕಮ್ಮ ನಮ್ಮ ತಾಪತ್ರಯ... ಹೋಗು ನೀನು..." ರಂಗಮ್ಮ ಕುರುಡು ಕಣ್ಣುಗಳನ್ನು ಒರೆಸಿಕೊಳ್ಳುತ್ತ ಸೊಸೆಯ ಮೈದಡವಿದರು....

ಸಾಯಂಕಾಲ ಚಕ್ರ ಹೊಳೆಯ ದಡದಲ್ಲಿ ಬಂದು ಕುಳಿತುಕೊಳ್ಳುತ್ತಿದ್ದಂತೆ "ನಮಸ್ಕಾರ" ಎಂಬ ಸ್ವರ ಕೇಳಿ ಹೊರಳಿ ನೋಡಿದಳು. ಲೋಹಿತಾಕ್ಷ ಕಾಡುದಾರಿಯ ಮಧ್ಯೆ ಬರುತ್ತಾ ಇದ್ದ. ಅವನಿಗೆ ಪ್ರತಿನಮಸ್ಕಾರ ಹೇಳುತ್ತ "ಮನೆಯ ಕಡೆಗೆ ಹೊರಟಿದ್ದೀರಾ" ಎಂದು ಕೇಳಿದಳು. "ಹೂಂ" ಎಂದ ಆತ.

"ಹೋಗಿ ಬನ್ನಿ. ಮಾವ ಮನೇಲಿಲ್ಲ. ನನ್ನ ನಾದಿನಿಯನ್ನು ಕರ್ಕೊಂಡು ಸುರತ್ಕಲ್‌ಗೆ ಹೋಗಿದ್ದಾರೆ... ಮೂರ್ತಿಯೂ ಮನೇಲಿಲ್ಲ."

"ಓ.... ನಿನ್ನೆ ನಿಮ್ಮಿಂದ ಒಂದು ಶಾಲು ತಗೊಂಡಿದ್ದೆ. ಸರಿ, ಈಗ ನೀವೇ ಸಿಕ್ಕಿದ್ದೀರಿ. ಮನೆತನಕ ಯಾಕೆ ಹೋಗಲಿ?" ಎನ್ನುತ್ತ ಪೇಪರಿನಲ್ಲಿ ಸುತ್ತಿದ್ದ ಶಾಲನ್ನು ಅವಳ ಕೈಗಿತ್ತ.

"ಬಾತದ್ದು ಇಳಿಯಿತಲ್ಲ. ನಿಮ್ಮ ಪುಣ್ಯ."

"ಹೂಂ, ನಾನು ಉಳಿದದ್ದೇ ನಿಮ್ಮ ಪುಣ್ಯದಿಂದ!"

"ಹಾಗೋ" ಕಿರುನಗೆಯಲ್ಲಿ ಅಂದಳು ಆಶಾ, "ಪ್ರತಿದಿನ ಸಾಯಂಕಾಲ ಈ ದಡದ ಹತ್ತಿರ ಬರ್ತೇನೆ. ಈ ದಿನವೂ ಹೆಜ್ಜೇನುಗಳ ಸಂಗಡ ಕುಸ್ತಿಯಾಡ್ತಾ ಇದ್ದೀರೋ ಎಂದ್ಕೊಂಡೆ ನಿಮ್ಮ ಸ್ವರ ಕೇಳಿದಾಗ."

"ಎಲ್ಲೋ ಹುಚ್ಚು ನಿಮಗೆ. ಪ್ರತಿದಿನ ಹೆಜ್ಜೇನುಗಳ ಸಂಗಡ ಕುಸ್ತಿಯಾಡ್ತಾ ಇದ್ದರೆ ನಾನು ಸೀದಾ ಸ್ವರ್ಗಕ್ಕೆ ಟಿಕೆಟ್ ಮಾಡಿಸಬೇಕಾಗಬಹುದು. ಮೊನ್ನೆ ಸುಮ್ಮನೆ ಕಲ್ಲು ಬಿಸಾಕ್ತಾ ಇದ್ದೆ. ತಾಗಿಯೇ ಬಿಡ್ತು. ಆಮೇಲೆ ಆಯ್ತಲ್ಲ ಇಷ್ಟೆಲ್ಲ ಗಲಾಟೆ. ಬ್ಯಾಂಕಿಗೆ ರಜೆ ಮಾಡಿದೆ ಇವತ್ತು. ಇನ್ನೂ ಮೈ-ಕೈ ನೋವು ಹೋಗಿಲ್ಲ."

ಮತ್ತೆ ಅರ್ಧಗಂಟೆ ಹೊತ್ತು ಲೋಹಿತಾಕ್ಷ ಆಕೆಯಿಂದ ತುಸು ದೂರ ಕುಳಿತು ಮಾತನಾಡುತ್ತಿದ್ದ. ಪ್ರಕೃತಿ ಸೌಂದರ್ಯ ಸವಿಯುವುದೆಂದರೆ ತನಗೆ ಇಷ್ಟ ಎಂದವನು ಹೇಳಿದಾಗ ಆಶಾ ತನಗೂ ಅದು ಪ್ರಿಯವಾದ ಸಂಗತಿ ಎಂದಳು. ನಿನ್ನೆ ಮೊನ್ನೆಯಷ್ಟೇ ಪರಿಚಿತನಾಗಿದ್ದರೂ ಅದೇಕೋ ಅವನೊಂದಿಗೆ ಮಾತನಾಡುವಾಗ ಯಾವ ವಿಧದ ಅಳುಕು, ಸಂಕೋಚವೂ ಅವಳಿಗಾಗಲಿಲ್ಲ.

"ವಂಡ್ಸೆಯ ಹವೆ, ವಾತಾವರಣ, ಈ ಮಳೆ ಇನ್ನೆಲ್ಲಿಯೂ ಸಿಗಲಾರದು"

ಆತನೆಂದ, "ಬಹಳ ಖುಷಿಯೇ ಖುಷಿ ಇಲ್ಲಿ. ನಾನಂತೂ ಈ ಊರನ್ನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ."

"ಈ ಹಳ್ಳಿ ನಿಮಗೆ ಅಷ್ಟು ಇಷ್ಟವೇ? ಛೇ ಛೇ, ಆರು ತಿಂಗಳುಗಳಿಂದಲೂ ಈ ಹಳ್ಳಿಯನ್ನು ಒಗ್ಗಿಸಿಕೊಳ್ಳಲು ಒದ್ದಾಡುತ್ತಿದ್ದೇನೆ ನಾನು. ಹಾಳು ಕೊಂಪೆ, ಯಾವ ಸ್ವಾರಸ್ಯವೂ ಇಲ್ಲ."

"ನನಗಂತೂ ಈ ಹಳ್ಳಿಯೇ ಇಷ್ಟ. ಪ್ರತಿದಿನವೂ ಸಂತೋಷ ವಾಗಿರಬೇಕೆನ್ನುವುದೇ ನನ್ನ ಗುರಿ. ನಾನೂ ಹುಟ್ಟಿದ್ದು ಎಲ್ಲಿಯೋ.... ಆಮೇಲೆ ಎಷ್ಟೊಂದು ಊರುಗಳನ್ನು ನೋಡಿದ್ದೇನೆ, ಜನರನ್ನೂ ಕಂಡಿದ್ದೇನೆ. ಈಗ ಇಲ್ಲಿಯ ನೀರಿನ ಋಣ. ಇನ್ನೆಷ್ಟು ದಿನ ಇಲ್ಲಿರುತ್ತೇನೆಯೋ.... ಯಾವಾಗ ಹೊರಡುತ್ತೇನೆಯೋ.... ಊಹೂಂ, ತಿಳಿಯದು ನನಗೆ. ಆರಾಮದ ಜೀವನ ನನ್ನದು..." ಮಾದಕ ನಗೆ ತುಂಬಿತು ಮುಖದಲ್ಲಿ.

ಆ ನಗೆ.... ಆ ಕಣ್ಣುಗಳಲ್ಲಿಯ ಆಕರ್ಷಣೆಯಲ್ಲಿ ಆಶಾ ಒಂದು ಗಳಿಗೆ ತನ್ನನ್ನೇ ಮರೆತಳು. ಕ್ಷೀಣ ದೇಹ, ಕೋಲು ಮುಖದ ಉದ್ದ ಮೂಗಿನ ಆತ ರೂಪವಂತನಲ್ಲ. ಆದರೂ ಆತ ತನಗೆ ಅದೆಷ್ಟೋ ಸಮಯಗಳಿಂದ ಹೀಗೆ ಪರಿಚಿತನಾಗಿದ್ದಾನೆ ಎಂದೆನಿಸಿತು ಅವಳಿಗೆ. ಈ ಭಾವನೆ ತನಗೇಕೆ ಬಂದಿತೆಂದು ತಿಳಿಯಲಿಲ್ಲ.... ಅವನೊಡನೆ ಮಾತನಾಡುತ್ತಿದ್ದವಳಿಗೆ ಹೊತ್ತಿನ ಪರಿವೆಯೇ ಇದ್ದಿರಲಿಲ್ಲ. ವಂಡ್ಸೆಗೆ ಬಂದ ಮೇಲೆ ಹೊಸಬರಾಗಿ ಹೀಗೆ ಮಾತನಾಡಲು ಸಿಕ್ಕಿದ್ದು ಇವನೊಬ್ಬನೇ.... ಈ ಕಾರಣವೋ ಇನ್ನೇನೋ, ಆಶಾಳ ಮಾತಿನ ಸರಪಳಿ ನಿಲ್ಲಲಿಲ್ಲ. ಕೊನೆಗೆ ಅವನಾಗಿಯೇ ಹೊತ್ತಿನ ನೆನಪು ಮಾಡಿದಾಗ ದಡಬಡಿಸಿಕೊಂಡು ಎದ್ದು ನಿಂತಳು.

"ನಾಳೆಯೂ ಇಲ್ಲಿಗೆ ಬರ್‍ತೀರಾ?"

"ಹೂಂ." ಸೀರೆಯ ನಿರಿಗೆಗಳನ್ನು ಸರಿಪಡಿಸಿಕೊಂಡು ಮನೆಯತ್ತ ಹೆಜ್ಜೆ ಹಾಕಿದವಳು, ಹಿಂದಕ್ಕೆ ಹೊರಳಿ ನೋಡಿದಳು. ಅವನು ಅಲ್ಲಿಯೇ ಕುಳಿತಿದ್ದ, ನೀರಿನೊಳಗೆ ಕಲ್ಲು ಬೀಸಾಡುತ್ತ. ಆಕೆಗೆ ಏನನ್ನಿಸಿತೋ ಪುನಃ ಹಿಂದಕ್ಕೆ ಬಂದಳು. "ಎಲ್ಲಿ ನಿಮ್ಮ ಮನೆ?"

"ಇಲ್ಲೇ ಕಾಲು ದಾರಿಯಲ್ಲಿ ಅರ್ಧ ಫರ್ಲಾಂಗ್ ದೂರ."

"ಹಾಗೋ, ನಾನಿನ್ನು ಬರ್‍ತೇನೆ. ಮನೆ ಕಡೆಗೆ ಆಗಾಗ ಬರ್‍ತಾ ಇರಿ..." ಮುಂದಕ್ಕೆ ಹೋಗುತ್ತಾ ದೊಡ್ಡದಾಗಿ ಕೂಗಿ ಹೇಳಿದಳು. ಆತನೂ 'ಹೋ' ಎಂದು ಕೈ ಬೀಸಿದ, ದಡದ ಬದಿಯಲ್ಲಿ ನಿಂತು.

೩

ಸಿನಿಮಾಗೆ ಹೋಗುವ ತಯಾರಿ ನಡೆದಿತ್ತು ಬೆಳಗಿನಿಂದಲೇ. ಶಿವಮೂರ್ತಿಗೆ ಹೋಗುವ ಮನಸ್ಸಿಲ್ಲದಿದ್ದರೂ ಮಗ ಮತ್ತು ಹೆಂಡತಿಯ ಮನ ನೋಯಿಸಲು ಇಚ್ಛಿಸದೆ ಕರೆದೊಯ್ಯಲು ಒಪ್ಪಿಕೊಂಡಿದ್ದ. ಅದೇ ಗುಂಗಿನಲ್ಲಿದ್ದ ಆಶಾ ಕೆಂಪು ಗುಲಾಬಿ ಹೂವುಗಳನ್ನು ಹೂದಾನಿಯಲ್ಲಿ ಅಂದವಾಗಿ ಜೋಡಿಸಿಟ್ಟು ತನ್ನೊಳಗೇ ಹಾಡಿಕೊಳ್ಳುತ್ತ ಮಹಡಿ ಕೋಣೆಯಿಂದ ಕೆಳಗಿಳಿದು ಬಂದಳು.

ಎಂದಿಗಿಂತಲೂ ಗೆಲುವಾಗಿದ್ದ ಶಿವಮೂರ್ತಿ ತನ್ನ ಕಾಲೇಜಿನ ರಸನಿಮಿಷಗಳನ್ನೂ ಹೇಳುತ್ತ ಮಗನನ್ನೂ ಹೆಂಡತಿಯನ್ನು ಬಾಯ್ತುಂಬ ನಗಿಸಿದ. ಹೊಸ ಹೊಸ ವಿಚಾರಗಳನ್ನು ಎತ್ತಿ ಮಾತನಾಡಿದ. ಅವನ ಉತ್ಸಾಹೀ ಮುಖ ಕಂಡು ಆಶಾ ಚಪ್ಪಾಳೆ ತಟ್ಟಿದಳು, "ಆಹ್, ನೀವು ಇದೇ ರೀತಿ ಯಾವಾಗಲೂ ಮನೇಲಿದ್ದರೆ ನಾನೆಷ್ಟು ಸುಖಿ ಗೊತ್ತೇ?"

"ಈಗ ನಿನ್ನ ಸುಖಕ್ಕೆ ಏನು ಕಡಿಮೆಯಾಗಿದೆ?"

"ಆದರೂ ನೀವಿಲ್ಲದೆ ಬೇಜಾರೇ ಬೇಜಾರು. ಇನ್ನು ಮೇಲೆ ಕುಂದಾಪುರದ ಹೊಲಿಗೆ ಕ್ಲಾಸ್‌ಗೆ ಹೋಗ್ತೇನೆ. ನೇರವಾದ ಬಸ್ಸುಗಳಿವೆ. ಇನ್ನೇನು, ವಾರದಲ್ಲಿ ಎರಡು ದಿನ ಹೋದರೂ ಸಾಕು."

"ನಿನ್ನಿಷ್ಟ ಚೆನ್ನಾಗಿರುವ ಬಟ್ಟೆಯನ್ನೇ ಆರಿಸಿ ತೆಗೆದುಕೋ, ನಮ್ಮ ಈ ಪೃಥ್ವೀರಾಜರಿಗೆ ಎಷ್ಟು ಉಡುಪು ಇದ್ದರೂ ಸಾಲದು. ಯಾವುದಕ್ಕೂ ಈ ಮನೆಯಲ್ಲಿ ಸಂಕೋಚ ಪಡಬಾರದು ನೀನು. ಹಾಗೆ ಹೀಗೆ ಅಂತ ಅಪ್ಪ-ಅಮ್ಮ ನಿನ್ನನ್ನೇನೂ ಅಂದುಕೊಳ್ಳಲಾರರು." ಅವಳ ಕೆನ್ನೆಯನ್ನು ಮೃದುವಾಗಿ ತಟ್ಟುತ್ತ ಅವನೆಂದ, "ಒಂದು ಹೊಲಿಗೆ ಯಂತ್ರ ತೆಗೆದುಬಿಡೋಣ."

"ಅದೇನು ಅವಸರದ್ದಲ್ಲ."

"ಕಾಂತಿಗೂ ನಿನ್ನ ಹಾಗೆ ಹೊಲಿಯುವ ಆಸೆ ಎಷ್ಟಿತ್ತು... ಅಬ್ಬ. ಪೃಥ್ವಿಯ ಬಸುರಿಯಿರುವಾಗಲೇ ಹೊಲಿಗೆ ಕ್ಲಾಸಿಗೆ ಹೋಗ್ಬೇಕು ಅಂತಿದ್ಲು. ಆಗಲೇ ಇಲ್ಲ.... ಅವಳ ಇಚ್ಛೆ ಒಂದೂ ನಡೆಯಲೇ ಇಲ್ಲ."

ಅವನ ಭಾರವಾದ ಸ್ವರ ಗುಂಡಿನಂತೆ ಬಂದು ಅಪ್ಪಳಿಸಿತು ಕಿವಿಯ ಮೇಲೆ. ಎರಡೂ ಕಿವಿಗಳನ್ನು ಮುಚ್ಚಿಕೊಳ್ಳುತ್ತ ಬೇರೆಲ್ಲೋ ದೃಷ್ಟಿ ತಿರುಗಿಸಿದಳು ಈ ಮಾತನ್ನು ಕೇಳಲಿಚ್ಛಿಸದೆ.

ಮಧ್ಯಾಹ್ನ ಎಳೆ ಮಗುವಿನಂತೆ ಕುಣಿಯುತ್ತ ಮಹಡಿ ಕೋಣೆಗೆ ಬಂದ ಶಿವಮೂರ್ತಿಯ ಕಣ್ಣುಗಳಿಗೆ ಮೊದಲು ಕಾಣಿಸಿದ್ದು ಹೂದಾನಿಯಲ್ಲಿರುವ ಕೆಂಪು

ಹೂವುಗಳು! ಮುಖ ಬಿಗಿಯಿತು, ಹುಬ್ಬುಗಳು ಮೇಲೇರಿದವು. ಆ ಕ್ರೂರ ಮುಖ ಕಂಡು ಅಲ್ಲಿಯೇ ನಿಂತಿದ್ದ ಆಶಾ ನಡುಗಿಹೋದಳು.

"ಕೆಂಪು ಹೂವುಗಳನ್ನು ಯಾರಿಟ್ಟಿದ್ದು?" ಅಬ್ಬರಿಸಿದ ಆತ.

"ನಾ..... ನು...."

"ಹೇಂಯ್‌ಕ್..." ಎಂದವನೇ ಹೂದಾನಿಗೆ ಕೈ ಹಾಕಿದ. "ಕೆಂಪು... ಕೆಂಪು ರಕ್ತ. ನಿನಗೆ ಗೊತ್ತಿಲ್ಲವೇ ಆಶಾ ನಾನು ಕೆಂಪನ್ನು ದ್ವೇಷಿಸುತ್ತೇನೆಂದು. ಓಹ್, ಇಲ್ಲೇಕೆ ಇಳಿಸಿದಿ ಇದನ್ನು. ಇವು ಹೂಗಳಲ್ಲ. ರಕ್ತ... ಕೆಂಪು ರಕ್ತ....!" ಹಾಗೆನ್ನುತ್ತ ಸಿಟ್ಟಿನಿಂದ ಹೂವುಗಳನ್ನು ಎಳೆದು ಎಸಳುಗಳನ್ನು ಹರಿದು ಕೈಯ್ಯಿಂದ ತಿಕ್ಕಿ ತಿಕ್ಕಿ ಮುದ್ದೆ ಮಾಡಿ ಬಿಸಾಡಿಬಿಟ್ಟ ಕಿಟಕಿಯಿಂದಾಚೆ. ಅವನ ಮೈಯ್ಯಲ್ಲಿ ನಡುಕ!

"ಇದೇನು ಮಾಡಿಬಿಟ್ಟಿರಿ...?"

"ಏನು ಮಾಡಿದೆನೇ? ಆ ಕೆಂಪನ್ನು ಹಿಸುಕಿ ಬಿಸಾಡಿಬಿಟ್ಟೆ." ತನ್ನ ಹಣೆಗೆ ಕೈಯನ್ನಿರಿಸಿಕೊಳ್ಳುತ್ತ ಖುರ್ಚಿಯಲ್ಲಿ ಕುಸಿದ, "ಇನ್ಮೇಲೆ ಕೆಂಪು ಹೂವುಗಳು ಇಲ್ಲಿಗೆ ಬಂದರೆ ನೋಡಿಕೋ.... ಏನ್ಮಾಡ್ತೇನೆ ಅಂತ. ಅಬ್ಬಬ್ಬ.... ರಕ್ತ... ಕೆಂಪು ರಕ್ತವನ್ನು ನೋಡಲಾರೆನಪ್ಪ..." ಅವನು ತನ್ನೆರಡು ಕಣ್ಣುಗಳನ್ನೂ ಮುಚ್ಚಿಕೊಂಡ, ಏನನ್ನೋ ಕಂಡು ಹೆದರಿದವನಂತೆ.

ಕಿಟಕಿಯಿಂದಾಚೆ ಮುದ್ದೆಯಾಗಿ ಬಿದ್ದ ಗುಲಾಬಿ ಹೂವುಗಳನ್ನು ನೋಡುತ್ತಿದ್ದ ಆಶಾಗೆ ನಿಜಕ್ಕೂ ಭೀತಿಯಾಯಿತು ಈಗ. ಯಾಕೆ ಈ ಕೂಗಾಟ? ಅವನ ಹಣೆಯ ಮೇಲೆ ಬೆವರ ಹನಿಗಳು, ಮೈಯಲ್ಲಿ ನಡುಕ... ಹಲ್ಲುಗಳನ್ನು ಕಚ್ಚಿದ್ದಾನೆ. ಏನಾಯಿತೆಂದು ವಿವರಿಸಬಾರದೇ? ಏನನ್ನೋ ನೆನಪು ಮಾಡಿಕೊಂಡವನಂತೆ ಆತ ಸುತ್ತಲೂ ನೋಡಿದ. ಮುಷ್ಟಿ ಬಿಗಿಯಿತು. ಎದ್ದು ನಿಂತು ತನ್ನ ಕಾಲ ಕೆಳಗಿದ್ದ ಇನ್ನೊಂದು ತುಂಡು ಹೂವಿನ ಎಸಳನ್ನೂ ಒತ್ತಿ ಹಿಸುಕಿ ಕಾಲಪ್ಪಳಿಸುತ್ತ ಅಲ್ಲಿಂದ ಕೆಳಗಿಳಿದು ಹೋದ.

ಅದೆಷ್ಟು ಆಶೆಯಿಂದ ತಂದ ಕೆಂಪು ಹೂವುಗಳು! ಈಗ ಏನಾಗಿ ಹೋದವು? ಬಲಿಷ್ಠ ಮುಷ್ಟಿಯಲ್ಲಿ ಸಿಕ್ಕು ನಜ್ಜುಗುಜ್ಜಾಗಿಹೋಗಿವೆ. ಆದರೆ ಹೂವಿನಷ್ಟೇ ಕೋಮಲವಾದ ಮೃದು ಮನಸ್ಸಿಗೆ ಅದೆಷ್ಟು ನೋವಾಯಿತೆಂದು ಶಿವಮೂರ್ತಿ ಯೋಚಿಸಿದ್ದನೇ? ಅವಳ ಮನಸ್ಸು ನೊಂದಿತು. ಈ ಘಟನೆಯನ್ನು ಲಘುವಾಗಿ ತಳ್ಳಲು ಸಾಧ್ಯವಾಗಲಿಲ್ಲ. ಸಾಯಂಕಾಲ ಸಿನಿಮಾಗೆ ಹೋಗುವ ಉತ್ಸಾಹವೆಲ್ಲ ಝರ್ರನೆ ಇಳಿದುಹೋಗಿ ಮಹಡಿಯಿಂದ ಕೆಳಗಿಳಿದು ಬರಲಿಲ್ಲ ಅವಳು.

ಶಿವಮೂರ್ತಿ ತಾನೇ ಬಂದು ಒತ್ತಾಯಿಸಿದ. ಅತ್ತು ಅತ್ತು ಕೆಂಪಾದ ಕಣ್ಣುಗಳನ್ನು ಕಂಡು ಸಮಾಧಾನಪಡಿಸುವ ಹೊತ್ತು ಅದಾಗಿದ್ದರೂ ಅದೇಕೋ ಮಧ್ಯಾಹ್ನದಿಂದಲೂ ವಿಚಲಿತಗೊಂಡಿತ್ತು ಅವನ ಮನಸ್ಸು. ಹಳೆಯ ನೆನಪಿನೊಂದಿಗೆ ರೋದಿಸುತ್ತಿತ್ತು ಹೃದಯ.

"ಎಷ್ಟು ಹಠ ನಿನಗೆ, ಈ ಹಠ ಎಂದಿಗೂ ಒಳ್ಳೆಯದಲ್ಲ. ಕಾಂತಿ ಒಂದು ದಿನವೂ ಹೀಗೆ ಸಿಟ್ಟು ಮಾಡಿರಲಿಲ್ಲ. ನಡಿ ಬೇಗ." ಎಂದ ರೇಗಿ.

ಆಶಾ ನೆಲದತ್ತ ನೋಡಿದಳು. ಮತ್ತೊಂದು ನಿಮಿಷದಲ್ಲಿ ಮೋಟರ್ ಬೈಕ್ ಗುಡು ಗುಡು ಸದ್ದು ಮಾಡುತ್ತ ಹೊರಟೇಹೋಯಿತು, ಅಂಗಳವನ್ನು ದಾಟಿ. ತಲೆ ಎತ್ತಿ ತೀಕ್ಷ್ಣವಾಗಿ ನೋಡಿದಳು ಕಾಂತಿಯ ಭಾವಚಿತ್ರವನ್ನು. ಹಾಗೇ ಎದ್ದು ಕೆಳಗಿಳಿದು ಬಂದಳು. ತಮ್ಮಯ್ಯನವರು ಗದ್ದೆಯ ಬದಿಗೆಲ್ಲೋ ಹೋಗಿರಬೇಕು. ಚೆನ್ನಕ್ಕ, ರಂಗಮ್ಮ ಯಾರೂ ಕಾಣಿಸಲಿಲ್ಲ. ಆಕೆ ಸೀದಾ ಚಕ್ರ ಹೊಳೆಯುತ್ತ ನಡೆದುಬಿಟ್ಟಳು ಯಾರಿಗೂ ಒಂದು ಮಾತನ್ನೂ ತಿಳಿಸದೆ.

* * * *

"ಹೀಗೇಕಾಯಿತು?" ದಿನ ನಿತ್ಯದಂತೆ ತನ್ನ ಪಾದವನ್ನು ನೀರಿಗಿಳಿಸಿಕೊಂಡು ಕುಳಿತಿದ್ದ ಆಶಾಳ ಮನಸ್ಸು ಅಲ್ಲೋಲ ಕಲ್ಲೋಲ. 'ಮೂರ್ತಿ ನನ್ನೊಡನೆ ಯಾಕೆ ಹೊಂದಿಕೊಳ್ಳುವುದಿಲ್ಲ. ಪ್ರತಿಸಲವೂ ಏನಾದರೊಂದು ಕೂಗಾಟ ಬೊಬ್ಬೆ ಇದ್ದದ್ದೇ. ಇದಕ್ಕೆ ಕಾರಣವೇನು? ನನ್ನ ಮನಸ್ಸು ದಿನ ದಿನವೂ ಯಾವುದೋ ಅಸಮಾಧಾನ, ಅಶಾಂತಿಯ ಆಗರ...'

"ನಮಸ್ಕಾರ" ಸಿಟ್ಟಿನ ಧ್ವನಿಯೊಂದಿಗೆ ಕೇಳಿ ಬಂದಿತು ಪರಿಚಿತ ಸ್ವರ. ಆಕೆ ಹೊರಳಿ ನೋಡುವ ಮೊದಲೇ ಆತ ಹತ್ತಿರಕ್ಕೆ ಬಂದುಬಿಟ್ಟಿದ್ದ. ಅವಳ ಸಮೀಪದಲ್ಲಿಯೇ ಇದ್ದ ಕಲ್ಲಿನ ಮೇಲೆ ಕುಳಿತುಕೊಳ್ಳುತ್ತ ಆಶ್ಚರ್ಯಚಕಿತನಾದವನಂತೆ ನೋಡಿದ.

"ಇದೇನು, ಹೊಳೆದಡದಲ್ಲಿ ಗಂಗಾವತರಣವಾಗ್ತಿದೆ?"

ಅವನ ಸ್ವರ ಕೇಳಿದೊಡನೆ ಅವಳ ದುಃಖದ ಕಟ್ಟೆ ಒಡೆಯಿತು. ಕೈಗಳಿಂದ ಮುಖ ಮುಚ್ಚಿಕೊಂಡು ಬಿಕ್ಕಲಾರಂಭಿಸಿದಳು. ಲೋಹಿತಾಕ್ಷ ಕಳಕಳಿಯಿಂದ ವಿಚಾರಿಸಿದ, "ನಿಮ್ಮ ಮನಸ್ಸಿಗೆ ಏನೋ ನೋವಾಗಿರಬಹುದು, ಅದೇನೇ ಇರಲಿ, ಬನ್ನಿ ಮನೆಗೆ ಹೋಗೋಣ."

ಆಶಾ ನೋಡಿದಳು ಅವನತ್ತ ಅಚ್ಚರಿಯಿಂದ.

"ಸಂಕೋಚ ಯಾಕೆ? ಇಲ್ಲೇ ಹತ್ರವಿದೆ ಮನೆ. ಬನ್ನಿ. ನಿಮ್ಮ ಮನಸ್ಸು ಹಗುರವಾಗುತ್ತೆ." ಎಂದ ತಾನು ಏಳುತ್ತ.

ಮನದ ದುಃಖಕ್ಕೆ ಈ ಆತ್ಮಿಯ ಕರೆ ತಣ್ಣೀರನ್ನೆರೆಯಿತು. ಅನುಮಾನವಿಲ್ಲದೆ ತಾನೂ ಎದ್ದು ಹಿಂಬಾಲಿಸಿದಳು ಅವನನ್ನು.

ವಂಡ್ಸೆಯಿಂದ ಒಂದೂವರೆ ಮೈಲು ಅಂತರದಲ್ಲಿ ಚಕ್ರ ನದಿಯ ಎದುರು ಭಾಗದಲ್ಲಿ ಕಾಣಿಸುವುದೇ ಹರೀಸ್ ಗುಡ್ಡ. ತಮ್ಮಯ್ಯನವರ ಮನೆಯಿಂದ ಅರ್ಧ ಮೈಲು ದೂರದ ಅಂತರ. ಎತ್ತರವಾಗಿ ಬೆಳೆದ ಹೆಮ್ಮರಗಳ ಮಧ್ಯೆ ನಡೆದು ನಡೆದು ಸವೆದು ಹೋಗಿ ಉಂಟಾಗಿದ್ದ ಕಾಲುದಾರಿ ಆ ಸಣ್ಣ ಹಂಚಿನ ಮನೆಯವರೆಗೂ ಕೊಂಡೊಯ್ಯುತ್ತದೆ. ಪುಟ್ಟದಾದ ಹಂಚಿನ ಮನೆ ಜೀರ್ಣಾವಸ್ಥೆಯಲ್ಲಿದೆ ಈಗ. ಮನೆ ಅಂಗಳದಲ್ಲಿ ಕಾಡುಹುಲ್ಲು, ಪೊದೆ, ಕಸ ಕಡ್ಡಿಗಳು. ಸಣ್ಣದಾದ, ಬಗ್ಗಿ ನೀರೆಳೆಯುವ ಒಂದು ಬಾವಿಯೂ ಇದೆ ಹತ್ತಿರದಲ್ಲಿ.

ಹಿಂದೆ ಯಾರಿದ್ದರೋ ಇಲ್ಲಿ, ಈಗಂತೂ ಮರಗಳ ಹೊರತಾಗಿ ಇನ್ನೇನೂ ಇಲ್ಲ. ಅಲ್ಲೊಂದು ಮನೆಯಿದೆ ಎಂದೂ ತಿಳಿಯಲಾರದಷ್ಟು ದಟ್ಟವಾಗಿ ಒತ್ತಾಗಿ ಬೆಳೆದುಕೊಂಡಿದ್ದ ಕಾಡು ಹೆಮ್ಮರಗಳು. ನೀಲಿ ಮತ್ತು ಜಬ್ಬಣ್ಣ ಸೊಪ್ಪು ತರಲೆಂದು ಬರುವುದುಂಟು ಆಗಾಗ ಇಲ್ಲಿಗೆ.

ಈ ಹರೀನ್ ಗುಡ್ಡದ ಪಾಳು ಬಿದ್ದ ಮನೆಯಲ್ಲಿಯೇ ಲೋಹಿತಾಕ್ಷನ ವಾಸ. ಅವನು ಹೇಗಿರುತ್ತಾನೋ ಈ ಮನೆಯಲ್ಲಿ ದೇವರಿಗೇ ಗೊತ್ತು. ಆಶಾ ಅಚ್ಚರಿಯಿಂದ ಸುತ್ತಲೆಲ್ಲ ನೋಡುತ್ತ ಅವನ ಮನೆಯನ್ನೂ ಪರೀಕ್ಷಿಸಿದಳು. ಕಿಟಕಿ ಬಾಗಿಲುಗಳು ಈಗಲೋ ಆಗಲೋ ಮುರಿದು ಬೀಳಲಾಗಿವೆ. ಅಲ್ಲಲ್ಲಿ ಮಣ್ಣು ಉದುರಿಹೋಗಿದೆ. ಅಂತೂ ಆಶಾ ಯಾವದೋ ಹಾಳು ಕೊಂಪೆಗೆ ಬಂದವಳಂತೆ ಚಡಪಡಿಸುತ್ತ ಅವನು ತೋರಿಸಿದ ಮುರುಕು ಖುರ್ಚಿಯಲ್ಲಿ ಕುಳಿತಳು.

ಲೋಹಿತಾಕ್ಷ ಮಾತಿನ ಮಲ್ಲ. ಹೇಗೆ ಬೇಕೋ ಹಾಗೆ ಮಾತನಾಡಬಲ್ಲ ಚತುರ. ಅವಳೊಡನೆ ಮಾತನಾಡುತ್ತ ಅವಳ ದುಃಖದ ಕಾರಣವನ್ನು ತಿಳಿದುಕೊಂಡು ಅಂದ ಸಮಾಧಾನದ ಸ್ವರದಲ್ಲಿ, "ಸಂಸಾರ ಎಂದಾಕ್ಷಣ ಇದೆಲ್ಲ ಇದ್ದದ್ದೇ. ಅದಕ್ಕೇ ನನಗೆ ಸಂಸಾರವೆಂದರೆ ವಿಪರೀತ ಸಿಟ್ಟು. ನನ್ನದು ಜಾಲಿ ಲೈಫು. ಇಂತಹ ಮುರಿದು ಬೀಳುವ ಮನೆಯೂ ನನ್ನ ಪಾಲಿಗೆ ಅರಮನೆ!"

"ಅದೃಷ್ಟಶಾಲಿಗಳು ನೀವು."

"ಮನೆ ಹೇಗೆ ಬೇಕಾದರೂ ಇರಲಿ." ಆತನ ಕಣ್ಣಳಲ್ಲಿ ತುಂಟತನ ಇಣುಕಿ ನೋಡಿತು, "ಹಾಸಿಗೆ ಮಾತ್ರ ಬೆಚ್ಚಗಾಗಿರಬೇಕು. ಇಷ್ಟರವರೆಗೆ ಅದೃಷ್ಟಶಾಲಿಯೇ ನಾನು. ಉಡುಪಿಯಲ್ಲಿದ್ದೆ. ಬ್ರಹ್ಮಾವರದಲ್ಲಿದ್ದೆ. ಕುಂದಾಪುರ, ಮೈಸೂರು, ಬೆಂಗಳೂರು ಎಲ್ಲಾ ಕಡೆಯಲ್ಲೂ ತಿರುಗಿದವನು. ಎಲ್ಲಿದ್ದರೂ ಸುಖಪಡುವುದೊಂದೇ ನನ್ನ ಗುರಿ. ದುಃಖ ದೂರವಿರಲಿ."

"ಅಂತೂ ಕಾಲಿಗೆ ಚಕ್ರ ಕಟ್ಟಿಕೊಂಡು ಊರು ತಿರುಗಿದ್ದೀರಿ."

ಆತ ಒಳಗೆ ಹೋಗಿ ತಟ್ಟೆ ತುಂಬಾ ಒಣಗಿದ ದ್ರಾಕ್ಷಿಗಳನ್ನು, ಸುಟ್ಟ ಗೇರು ಬೀಜಗಳನ್ನು ತಂದು ಇಟ್ಟ ಅವಳ ಮುಂದೆ. "ಇದು ಬಡವನ ಉಪಹಾರ. ತಿನ್ನಿ. ಬ್ಯಾಂಕ್‌ನಲ್ಲಿ ಕೆಲಸದಲ್ಲೇನೋ ಇದ್ದೇನೆ. ಆದರೆ ಅವರು ಕೊಡುವ ಸಂಬಳ ಮಾತ್ರ ಏನೇನೂ ಸಾಲದು. ಬೇರೆ ನೌಕರಿ ಸಿಗುತ್ತೋ ಎಂದು ಹುಡುಕ್ತಾ ಇದ್ದೇನೆ.... ನಾನಾಗ ಏನು ಹೇಳ್ತಾ ಇದ್ದೆ.... ಅದೇ ನನಗೆ ತಿರುಗಾಟದ ಹುಚ್ಚು ಎಂದಿರಲ್ಲ ನೀವು. ಇಲ್ಲಿಲ್ಲ, ಈ ಮನೆಯಲ್ಲಿಯೂ ಒಬ್ಬಂಟಿಗನಾಗಿ ಇದ್ದುಬಿಡಬಲ್ಲೆ. ಪುಸ್ತಕದ ರಾಶಿ, ಸ್ಟ್ರಾಂಗ್ ಕಾಫಿ ಇದ್ದರೆ ಅದೇ ಸುಖ."

ಸೆರಗಿನಿಂದ ಬಾಯಿ ಮುಚ್ಚಿಕೊಂಡು ಖಿಲ್ ಖಿಲ್ ಎಂದು ನಕ್ಕಳು ಆಶಾ, "ಎಲ್ಲಾ ನಾಲ್ಕು ದಿನ ಅಷ್ಟೇ. ಆಮೇಲೆ ಬೇಸರ ಬಂದು ಪುನಃ ಕಾಲಿಗೆ ಚಕ್ರ ಕಟ್ತೀರಿ... ಹ್ಹೆ ಹ್ಹೆ...."

"ನನ್ನ ಮನಸ್ಸು ನಿಮಗೆ ಗೊತ್ತಿಲ್ಲ. ಯಾರ ತಂಟೆಗೂ ಹೋಗುವ ಸ್ವಭಾವ

ನನ್ನದಲ್ಲ. ಹಕ್ಕಿ ಹೊಡೆಯುವ ಹುಚ್ಚು ಮಾತ್ರ ನನಗಿದೆ. ನಾನು ಹೊಡೆದ ಪ್ರತಿಕಲ್ಲಿಗೂ ಒಂದಾದರೂ ಹಕ್ಕಿ ನನ್ನ ಬಲೆಗೆ ಉರುಳಲೇ ಬೇಕು..." ಕಣ್ಣಿನ ತುದಿಯಿಂದ ತನ್ನೆದುರು ಕುಳಿತವಳನ್ನು ದಿಟ್ಟಿಸಿದ.

"ಒಂಟಿತನ ಇಷ್ಟ ಎಂದಿರಲ್ಲ. ನಿಮ್ಮಂತಹ ಮಾತಿನ ಮಲ್ಲರು ಹೇಳುವುದೆಲ್ಲ ಪೂರ್ತಿ ಸುಳ್ಳು. ಕಲ್ಲನ್ನೂ ಕರೆದು ಮಾತನಾಡಿಸಬಲ್ಲಿರಿ ನೀವು." ಹೇಳುತ್ತ ಆಶಾಳ ಕೆನ್ನೆಗಳು ರಂಗೇರಿದವು. "ನಾನೂ ಮಾತಿನ ಮಲ್ಲಿ. ಆದರೆ ನನ್ನ ಮನೆಯಲ್ಲಿ ನನ್ನ ಜೊತೆ ಸರಿಯಾಗಿ ಮಾತನಾಡುವವರು ಒಬ್ಬರೂ ಇಲ್ಲ. ಕೆಲಸದವಳು, ಅಡಿಗೆಯವಳು, ಅತ್ತೆ, ಮಾವ, ಮಗು ಇಷ್ಟು ಜನರಿದ್ದರೂ ಅದೇಕೋ ನನ್ನ ಸ್ವಭಾವ ಅವರೊಡನೆ ಹೊಂದಿಕೊಳ್ಳುವುದೇ ಇಲ್ಲ. ಬುದ್ಧಿಹೀನರು ಎಲ್ಲರೂ...." ಆಶಾ ಮುಖ ಬಿಗಿದುಕೊಂಡಿತು.

"ಎಷ್ಟೋ ಸಮಯದ ನಂತರ ನಾನಿವತ್ತೇ ಇಷ್ಟು ಮಾತನಾಡಿದ್ದು. ಸರಿ, ಕತ್ತಲೆಯಾಯ್ತು. ನಾನಿನ್ನು ಹೋಗಿ ಬರ್ಲಾ."

"ಇದೇನು ತಟ್ಟೆ ಖಾಲಿಯಾಗಿಯೇ ಇದೆಯಲ್ಲ."

"ನಿಮ್ಮ ಮಾತು ಕೇಳಿಯೇ ಹೊಟ್ಟೆ ತುಂಬಿತು."

"ಹಾಗೋ! ಹಾಗಾದರೆ ಹಸಿವೆಯಾದಾಕ್ಷಣ ಇಲ್ಲಿಗೇ ಬಂದುಬಿಡಿ, ಹೊಟ್ಟೆ ತುಂಬಿಬಿಡುತ್ತೆ ನಿಮಗೆ. ನಿಲ್ಲಿ, ನಾನೂ ಚಕ್ರ ನದಿಯ ತನಕ ನಿಮ್ಮ ಸಂಗಡ ಬರ್ತೇನೆ. ಹಾಗೇ ನನಗೂ ಸಣ್ಣ ವಾಕಿಂಗ್ ಆಯ್ತು." ಎನ್ನುತ್ತ ಅಂಗಿ ಧರಿಸಿಕೊಂಡು ಅವಳ ಜೊತೆಯಲ್ಲೇ ಹೊರಟ.

ನದಿಯ ತಿರುವಿನಲ್ಲಿ ಅವಳನ್ನು ಬೀಳ್ಕೊಡುತ್ತ ಅವನೆಂದ, "ಯಾವಾಗಲೂ ದುಃಖಪಡುವುದನ್ನು ನಾನೆಂದಿಗೂ ಸಹಿಸಲಾರೆ.... ನಗುತ್ತಿರುವುದೇ ನಮ್ಮ ಬಾಳು. ಶಿವಮೂರ್ತಿ ಎಷ್ಟೇ ಕೋಪಿಸಿಕೊಂಡರೂ ಲಘು ಮನಸ್ಸಿನಿಂದ ತಳ್ಳಿ ಹಾಕಿ. ಕ್ಷಮಿಸಿ, ಮೂರನೆಯವನಾಗಿ ನಾನೀ ಮಾತು ಹೇಳಬಾರದಿತ್ತು.... ಆಗಾಗ ಬರ್ತಾ ಇರ್ತೀರಾ ಮನೆಗೆ?"

"ಇಲ್ಲೇ ದಡದಲ್ಲಿ ಭೇಟಿಯಾಗ್ತಾ ಇರ್ತೇವಲ್ಲ..."

"ಸರಿ, ನಿಮಗಿಷ್ಟ ಬಂದಾಗ ಬನ್ನಿ. ಸಾಯಂಕಾಲ ಮೂರು ಗಂಟೆಯ ನಂತರ ಯಾವಾಗಲೂ ಮನೇಲಿರ್ತೇನೆ ನಾನು... ಇಬ್ಬರ ಬೇಸರವೂ ನೀಗುತ್ತೆ." ಎಂದೆಂದು ಅವಳ ಎರಡೂ ಕೈಗಳನ್ನು ತನ್ನ ಕೈಯ್ಯಲ್ಲಿ ಹಿಡಿದುಕೊಂಡು ಮೆಲ್ಲನೆ ಅಮುಕಿದ.

ಬೆಚ್ಚಿಬಿದ್ದವಳಂತೆ ನಡುಗಿದ ಆಶಾ ಸರಕ್ಕನೆ ಎಳೆದುಕೊಂಡಳು, ತನ್ನ ಕೈಯನ್ನು. ಅವನ ಮುಖದಲ್ಲಿ ಅದೇ ಮೊದಲಿನ ತುಂಟತನ ಕಾಣಿಸಿಕೊಂಡು ಲಘುವಾಗಿ ನಕ್ಕು "ಹೋಗಿ ಬನ್ನಿ" ಎಂದ, ತನ್ನ ಬಲಗೈ ಬೀಸುತ್ತ.

ಮೋಡ ಕವಿದ ಮನಸ್ಸು ತಿಳಿಯಾಗಿತ್ತು, ಆ ಒಂದು ಅರ್ಧ ಗಂಟೆಯಲ್ಲಿ. ಅಪರಿಚಿತನಾದ ಈ ವ್ಯಕ್ತಿ ತನಗೆ ಅದೆಷ್ಟೋ ಹತ್ತಿರವಾಗಿದ್ದಾನೆಂದೂ, ಇನ್ನಷ್ಟು ಪರಿಚಿತನಾಗಿದ್ದಾನೆಂದೂ ಅನ್ನಿಸಿತು. ಅದೇನೋ ಹೊಸತನದ ಬೆಳಗು ಮಿನುಗಿತು ಮನದಲ್ಲಿ.

ಮನೆಗೆ ಬರುವ ದಾರಿಯಲ್ಲಿ, ಮನೆಯಿಂದ ನಾಲ್ಕು ಮಾರು ಈಚೆಗೆ ಜಬ್ಬಣ್ಣನಿಗೂ ಅವನ ಹೆಂಡತಿ ನೀಲಿಗೂ ತಾರಾಮಾರ ಜಗಳವಾಗುತ್ತಲಿದ್ದು ಒಬ್ಬರಿಗೊಬ್ಬರು ಅಶ್ಲೀಲವಾಗಿ ಬೈದುಕೊಳ್ಳುತ್ತ ಹೊಡೆದಾಡಿಕೊಳ್ಳುತ್ತಿದ್ದರು. ಆಶಾ ಬಂದುದನ್ನು ಕಂಡು ನೀಲಿ ಸ್ವರ ಏರಿತು,

"ಇಲ್ಲಿ ಕಾಣಿ ಅಮ್ಮ. ಇವನೆಂತಹ ಗಂಡ. ಈ ಹೆಂಡತೀನ್ನ ಸಾಕೂಕಾಗದ ಶಂಡ ಇವನು. ಶನಿ ಜನ್ಮ ನನ್ನದು. ನಿನ್ನ ಕಟ್ಕಂಡು ನಾ ಪಡ್ಚ ಆದೆ... ಅಯ್ಯಮ್ಮಾ..."

"ಹೋಗು ಕಾಂಬ... ಹೋಗು... ನಾನೂ ನೋಡ್ತೇ ನಿನ್ನ ಅವತಾರಾನಾ" ಜಬ್ಬಣ್ಣ ತಲೆಗೆ ಕಟ್ಟಿದ್ದ ಮುಂಡಾಸನ್ನು ಸರಿಪಡಿಸಿಕೊಂಡು ಎಡಗಾಲನ್ನು ಎತ್ತಿ ಅಪ್ಪಳಿಸಿ ಕೂಗಿದ, "ಮಾನ ಮರ್ಯಾದೆ ನೆತ್ತಿ ಮೇಲೆ ಇಟ್ಕೊಂಡೀದ್ಯಾ ನೀನು. ಎಲ್ಲಿತ್ತೇ ನಿಂಗೆ ಮರ್ಯಾದೆ? ನನ್ನ ತಮ್ಮಂಗೆ ಎದರುತ್ತರ ಕೊಡ್ತೆ ನೀನು.... ಬೆನ್ನು ಸಿಗ್ದು ಹಾಕ್ತೆ ನೋಡು."

"ಅಮ್ಮಾ.... ಎಂತಾದರೂ ಮಾಡಿ ರಕ್ಷಿಸಿ ನನ್ನ" ಅಳು ಜೋರಾಗುತ್ತ ನೀಲಿ ಆಶಾಳಿಗೆ ಅಡ್ಡ ಬಿದ್ದಳು, "ಮನೇಲಿ ಮೈದುನನ ಕಾರುಭಾರ ಅಮ್ಮಾ, ಅವನೇ ಯಜಮಾನ. ಇವತ್ತು ಅವಂಗೆ ಎಂತಾ ಸಿಟ್ಟು ಬಂದಿತ್ತೋ ಸವುದೆ ಕುಂಟೆ ತಗಂಡು ಬಾರಿಸಿದ ಬೆನ್ನಿಗೆ... ಎಂತಾ ಮಾರಿ, ನಾ ಹೇಳ್ದಂಗೆ ಕೇಳ್ತಿಲ್ಲ ಅಂತ ಇನ್ನೂ ಇನ್ನೂ ಹೊಡೀವಾಗ ಈ ಗಂಡ ಸುಮ್ಮನೆ ನಿತ್ತಕಂಡ ನೋಡ್ತಿದ್ದ ಅಮ್ಮಾ...."

"ಮತ್ತೆ ನೀ ಎಂತಕ್ಕೆ ಅವನಿಗೆ ಎದುರುತ್ತರ ಕೊಟ್ಟೆ? ಹಂಗೇ ಆಗಕ್ಕು ನಿಂಗೆ..." ಸಿಡುಕಿದ ಜಬ್ಬಣ್ಣ.

"ನಾಚ್ಕೆ ಆತಿಲ್ಯ ನಿಂಗೆ?" ಆಕ್ರೋಶದಿಂದ ಕೂಗಿದಳು ನೀಲಿ, "ಕೈ ಹಿಡಿದ ಹೆಂಣ್ತೀನ ಕೊಂದು ಹಾಕಿದ್ರೂ ನಿಂಗೆ ಸಂತೋಷ. ನಿನ ತಮ್ಮ ಯಾರು...? ಅವಂಗೆ ಎಷ್ಟು ಧೈರ್ಯ ನನ್ನ ಮೈ ಮುಟ್ಟೂಕೆ? ಸೋತೆ ಅಮ್ಮಾ ನಾ ಸೋತೆ. ದಿನಾ ಕಣ್ಣೀರಲ್ಲಿ ಕೈ ತೊಳೀತಿದ್ರೂ ಈ ಬೆಪ್ಪನಿಗೆ ಕಾಂತಿಲ್ಲೆ ಅಮ್ಮಾ. ಈ ಹೆಡ್ಡನ್ನ ಕಟ್ಕಂಡು ನಾ ಪಡ್ಚ."

"ಎಂತಾ ಅಂದೆ?" ಜಬ್ಬಣ್ಣ ಅವಳ ಸೀರೆಯ ಸೆರಗನ್ನು ಹಿಡಿದು ರಟ್ಟೆ ಹಿಡಿದ, "ಹಲ್ಲು ಮುರಿದು ಕೈಗ ಕೊಡಬಾ?"

"ಕೊಡು ಕೊಡು... ಹಾಕೋ ಬೆನ್ನಿಗೆರಡು, ಹಲ್ಲು ಬೇಕಾರೂ ಮುರಿದುಬಿಡು. ನಿಂಗಂತೂ ನಾ ಬೇಡ ಅಲ್ದ? ಹೊಡೀ ಹೊಡೀ" ಸರ್ರನೆ ಅವನತ್ತ ತಿರುಗಿ ಭುಸುಗುಟ್ಟಿದಳು ನೀಲಿ.

ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋದೀತೆಂದು ಆಶಾ ಹೇಗೋ ಅವರಿಬ್ಬರನ್ನೂ ಸಮಾಧಾನಪಡಿಸಿ ನೀಲಿಯನ್ನು ಕಳಿಸಿದಳು ಅಲ್ಲಿಂದ. ಜಬ್ಬಣ್ಣ ಸಿಟ್ಟಿನಲ್ಲಿ ಹಾರಾಡುತ್ತಿದ್ದ. ಆಶಾಳ ಎದುರಿನಲ್ಲಿ ಧೈರ್ಯ ಬಾರದೆ, ವಟಗುಡುತ್ತ ಹಿಂಬಾಲಿಸಿದ ಆಶಾಳನ್ನು.

ಐವತ್ತು ವರ್ಷ ಪ್ರಾಯದ ತೀರಾ ಕುಬ್ಜನಂತೆ ತೋರುವ, ತಲೆ ಕೂದಲು ಬಿಳಿ ವರ್ಣಕ್ಕೆ ತಿರುಗಿದ, ಮೊಂಡು ಮೂಗು, ಸಣ್ಣ ಕಣ್ಣುಗಳ ಜಬ್ಬಣ್ಣ. ಮಾಸಿದ ತುಂಡು

ಪಂಚೆಯ ಮೇಲೆ ಒಂದು ಮಾಸಿದ ಕೈ ವಸ್ತ್ರ. ಅವನ ನಿಜವಾದ ಹೆಸರು ಗೋವಿಂದನೋ ಗೋಪಾಲನೋ ಇನ್ನೇನೋ ಇರಬೇಕು. ಆದರೆ ಚಿಕ್ಕಂದಿನಿಂದಲೂ ಜಬ್ಬಣ್ಣ ಎಂಬ ಹೆಸರು ಅದ್ಹೋಗೋ ಅಭ್ಯಾಸವಾಗಿದ್ದು ಅದೇ ಈಗ ಅವನ ನಿತ್ಯದ ಹೆಸರು. ವಿಧೇಯನಂತೆ ದೇಹವನ್ನು ಆಗಾಗ ಡೊಂಕಿಸಿ ಬಗ್ಗಿಸಿ ವಿನಯ ತೋರುವವನಂತೆ ನಡೆಯುವುದು ಅವನ ಅಭ್ಯಾಸ. ಯಾವಾಗಲೂ ನೀಲಿಗೂ ಇವನಿಗೂ ಎಣ್ಣೆ ಸೀಗೆಕಾಯಿ. ಆರು ಮಕ್ಕಳ ತಂದೆ ಅವನಾಗಿದ್ದರೂ ಬುದ್ಧಿ ಮಾತ್ರ ಸೊನ್ನೆ. ತಂದೆ, ತಾಯಿ, ತಮ್ಮ ತಾನು ಹೀಗೆ ಒಟ್ಟುಗೂಡಿ ಇದ್ದ ಸಂಸಾರ ಅವನದು. ಇವನು ಹಿರಿಯವನಾಗಿದ್ದರೂ ಮನೆಗೆಲ್ಲಾ ಇವನ ತಮ್ಮನೇ ಯಜಮಾನ.

"ಬೇರೆ ಮನೆ ಮಾಡಿಬಿಡು ಜಬ್ಬಣ್ಣ" ಮನೆಯತ್ತ ನಡೆಯುತ್ತ ಅಂದಳು ಆಶಾ, "ಪಾಪ ನೀಲಿ ಸುಖವಾಗಿದ್ದಾಳು." '

"ಇಲ್ಲ ಅಮ್ಮಾ. ಆತಿಲ್ಲೆ."

"ಯಾಕೆ ತಮ್ಮನ ಹೆದರಿಕೆಯೇ ನಿನಗೆ. ಬೆಪ್ಪ, ನಿನ್ನದಾದ ಸಂಸಾರ ಬೇಡವೇ ನಿನಗೆ? ಇಬ್ಬರೂ ದುಡೀತೀರಿ...."

ಜಬ್ಬಣ್ಣ ಇನ್ನಷ್ಟು ತಗ್ಗಿ ಬಗ್ಗಿ ತನ್ನ ದೇಹವನ್ನು ಒಂದು ಹಿಡಿ ಮಾಡಿಕೊಳ್ಳುತ್ತ, ನೀಲಿಯನ್ನು ದೂರುತ್ತ, ತಾನು ಒಳ್ಳೆಯವನೆಂದು ಹೇಳಿಕೊಳ್ಳುತ್ತ ಬಂದ, ಅವಳ ಹಿಂದೆ ಹಿಂದೆ.

ಮನೆಗೆ ಬಂದಾಗ ಚೆನ್ನಾಗಿ ಕತ್ತಲೆಯಾಗಿದ್ದು ರಂಗಮ್ಮ ಗೇಟಿನ ಹತ್ತಿರವೇ ನಿಂತು ಕಾಯುತ್ತಿದ್ದರು ಸೊಸೆಯನ್ನು. ಅವಳು ಸಿನಿಮಾಗೆ ಹೋಗದಿದ್ದುದಕ್ಕೆ ಆಕ್ಷೇಪಿಸುತ್ತ ಅಂದರು, "ಹೊಳೆದಡದ ತನಕ ಹೋಗಿದ್ದಿ ಎಂದಿ. ಕತ್ತಲೆಯಾಗುವ ಮೊದಲೇ ಮನೆಗೆ ಬರಬೇಕು, ಆಶಾ. ಕಾಡುದಾರಿ, ಹಾವೋ ಹರಣೆಯೋ ಇದ್ದೀತು."

ಆಶಾಳಿಂದ ಉತ್ತರ ಬಾರದಿದ್ದಾಗ ಗೇಟಿನ ಬಾಗಿಲನ್ನು ಮುಚ್ಚಿ ಅವಳೊಡನೆ ಒಳಗೆ ಬಂದರು. "ಕಾಂತಿಯಿದ್ದಾಗ ಮೂರ್ತಿ ಕುಂದಾಪುರದ ಒಂದು ಸಿನಿಮಾ ತಪ್ಪಿಸಿದ್ದಿಲ್ಲ. ಅದ್ಯಾಕೆ ನೀನು ಹೋಗಲಿಲ್ಲ? ಹೋಗಬೇಕಿತ್ತು ಆಶಾ. ನೀನಾದರೂ ಒಬ್ಬಳೇ ಏನ್ಮಾಡ್ತೀಯಾ?" ಅವರು ಮೆಲ್ಲನೆ ಅವಳ ಬೆನ್ನು ಸವರಿದರು, "ಜಡೆ ಹಾಕಿದ್ದೀಯಾ ಆಶಾ? ಅಂದವಾಗಿ ಮುಡಿಕಟ್ಟಿದರೆ ಚನ್ನಾಗಿ ಕಾಣುತ್ತಿ ಎಂದು ನೀಲಿ ಹೇಳ್ತಾ ಇದ್ದಳು. ನನ್ನ ಈ ಪಾಪಿ ಕಣ್ಣುಗಳಿಗೆ ಏನೂ ಕಾಣ್ತೆಲ್ಲ. ಅಪಘಾತದಲ್ಲಿ ಕಣ್ಣುಗಳನ್ನು ಕಳೆದುಕೊಂಡೆ, ನನ್ನ ಅಳಿಯ ಸತ್ತು ನಾನು ಬದುಕಿದೆ. ಎಲ್ಲಾ ನನ್ನ ಗ್ರಹಚಾರ. ಹಾಂ, ಮೂರ್ತಿ ಯಾಕೆ ನಿನ್ನನ್ನು ಕರ್‍ಕೊಂಡು ಹೋಗ್ಲಿಲ್ಲ? ಕಾಂತಿಯಿದ್ದಾಗ ಎಷ್ಟು ಗೆಲುವಾಗಿದ್ದ ಅವನು ನೋಡು ಆಶಾ" ಅವರು ಅವಳ ಮುಖದ ಮೇಲೆ ಕೈಯ್ಯಾಡಿಸುತ್ತ ಮೃದುವಾಗಿ ಅಂದರು, "ತಪ್ಪು ನಿನ್ನದೇ, ಈ ಮನೇಲಿ ಮೂರ್ತಿ ಇದ್ದಷ್ಟು ಹೊತ್ತು ಚನ್ನಾಗಿ ಅಲಂಕರಿಸಿಕೊಂಡು ಅವನ ಹಿಂದೆ ಮುಂದೆ ತಿರುಗಬೇಕು ನೀನು. ನನ್ನ ಸಿನಿಮಾಗೆ ಕರ್‍ಕೊಂಡು ಹೋಗಿ, ಅಲ್ಲಿಗೆ ಹೋಗಿ, ಇಲ್ಲಿಗೆ ಹೋಗಿ ಅಂತ ಗೋಗರೆಯಬೇಕು. ನಿನಗೋ ಯಾವುದೂ ಬುದ್ಧಿಯಿಲ್ಲ."

ತುಟಿಯಂಚಿನಲ್ಲಿಯೇ ನಕ್ಕಳು ಆಶಾ, "ನಿಜ ಅತ್ತೆ...."

ಆ ರಾತ್ರಿ ಶಿವಮೂರ್ತಿ ಆಕೆಯ ಪಕ್ಕದಲ್ಲಿ ಮಲಗಿಕೊಳ್ಳುತ್ತ ಸಂತೈಸುವ ಸ್ವರದಲ್ಲಿ ಕೇಳಿದ, "ನನ್ನ ಮೇಲೆ ಇವತ್ತು ಕೋಪ ಬಂದಿತೇ ನಿನಗೆ? ಆ ಕೋಪದಲ್ಲಿ ಸಿನಿಮಾಗೂ ಬರಲಿಲ್ಲ. ಹ್ಯಾಗೆ ಎಷ್ಟು ಚನ್ನಾಗಿತ್ತು ಗೊತ್ತಾ ಆ ಸಿನಿಮಾ? ಯಾಕೆ ಮಾತನ್ನಾಡ್ತಿಲ್ಲ ಆಶಾ, ಇನ್ನೂ ನನ್ನ ಮೇಲಿನ ಕೋಪ ಹೋಗಿಲ್ಲವೇ?"

ಆಶಾ ದಿಂಬಿನಲ್ಲಿ ಮುಖ ಮುಚ್ಚಿಕೊಂಡವಳು ಇತ್ತ ಹೊರಳಲಿಲ್ಲ. "ಪ್ಲೀಸ್ ಆಶಾ..." ಗದ್ಗದಿತನಾಗಿ ಶಿವಮೂರ್ತಿ ಹೇಳಿದ, "ನನ್ನ ಸ್ವಭಾವ ವಿಚಿತ್ರವಾದದ್ದು. ಕೆಂಪು ಕಂಡಾಕ್ಷಣ ನನ್ನ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಅದನ್ನು ಕಂಡಾಕ್ಷಣ ವಿಚಿತ್ರ ಸುಳಿಯಲ್ಲಿ ತಿರುಗುತ್ತದೆ ಮನಸ್ಸು. ಆಗ ಹುಚ್ಚನಂತಾಗುತ್ತೇನೆ ನಾನು. ಬೇಡ ಆಶಾ, ಇನ್ಮೇಲೆ ಕೆಂಪು ಹೂವುಗಳನ್ನು ಈ ಮನೇಲಿ ಇರಿಸಬೇಡ. ಬೇರೆ ಯಾವ ಹೂವನ್ನೂ ಇರಿಸು, ನಾನೇನೂ ಹೇಳಲಾರೆ. ನನ್ನ ಮಾತು ಕೇಳಿತೇ ನಿನಗೆ?"

೪

ಕೊಲ್ಲೂರು, ಕುಳುತ್ತು, ಕುಂದಾಪುರಗಳ ಮಧ್ಯೆ ಇರುವ ವಂಡ್ಸೆ ತೀರಾ ಹಳ್ಳಿಯಂತಿದ್ದು ವಿರಳ ಜನಸಂಖ್ಯೆಯನ್ನು ಹೊಂದಿದ ಊರು. ಪೇಟೆಯ ಥಳಕನ್ನು ಕಾಣದ ಹಳ್ಳಿಗಾಡು. ಇತ್ತೀಚೆಗೆ ಕೊಲ್ಲೂರಿನಿಂದ ಕುಂದಾಪುರದವರೆಗೂ ವಿದ್ಯುದ್ದೀಪ ಬಂದುದರಿಂದ ವಂಡ್ಸೆಯ ಕೆಲವು ಅನುಕೂಲವಂತರು ತಮ್ಮ ಮನೆಗಳಿಗೆ ದೀಪ ಹಾಕಿಸಿಕೊಂಡಿದ್ದಾರೆ. ತಮ್ಮಯ್ಯನವರೂ ಎರಡು ಸಾವಿರ ಖರ್ಚು ಮಾಡಿ ದೀಪ ಹಾಕಿಸಿದ್ದಾರೆ ತಮ್ಮ ದೊಡ್ಡ ಮನೆಗೆ. 'ಮಲೆನಾಡ ಹಾಯ್‌ಸ್ಕೂಲ್' ಎಂಬ ಶಾಲೆಯೊಂದು ಇದೆ. ಹತ್ತಾರು ಮಕ್ಕಳು ಕಲಿಯುವ ಶಾಲೆ ಅದು. ಕಾಲೇಜು, ಲೈಬ್ರರಿ, ಒಂದು ಉದ್ಯಾನವನ ಯಾವುದೂ ಇಲ್ಲಿಲ್ಲ. ತೆಂಗು, ಬತ್ತ, ಕಬ್ಬು ಅಧಿಕವಾಗಿ ಬೆಳೆಯುತ್ತಿದ್ದ ಇಲ್ಲಿನ ಜನರಲ್ಲಿ ಹೆಚ್ಚಿನವರು ಕೃಷಿಕರು. ಅವರಿಗೆ ಅವರವೇ ಆದ ಕೆಲಸ, ತಾಪತ್ರಯಗಳು ಇದ್ದದ್ದೇ.

ಇಂತಹ ಹಳ್ಳಿಗೆ ಬಹಳ ದೊಡ್ಡ ಶ್ರೀಮಂತರ ಮನೆಗೆ ಸೊಸೆಯಾಗಿ ಬಂದವಳು ಆಶಾ. ತಮ್ಮಯ್ಯನವರ ಮನೆ ಹಳ್ಳಿಗೆಲ್ಲಾ ಚಿರಪರಿಚಿತ. ಮಂಗಳೂರಿನ ಪೇಟೆಯ ನೀರನ್ನು ಕುಡಿದಿದ್ದ ಅತ್ಯಂತ ರಸಿಕಳೂ, ವಿನೋದಪ್ರಿಯಳೂ, ವಿಲಾಸಿನಿಯೂ ಆದ ಅವಳಿಗೆ ಇಲ್ಲಿ ಹೊತ್ತು ಹೋಗುವದು ಕಷ್ಟಕರ. ಮಳೆಗಾಲದ ನಾಲ್ಕು ತಿಂಗಳು ಎಡೆಬಿಡದೆ ಮಳೆ ಇಲ್ಲಿ. ಹೊರಗೆ ಕಾಲಿಡುವಂತಿಲ್ಲ. ಒಂದು ಬಿಸಿಲಿನ ಕಿರಣವೂ ಒಳಗೆ ಬರುವಂತಿಲ್ಲ. ಇಂತಹ ನಾಲ್ಕು ತಿಂಗಳನ್ನು ಆಶಾ ಒಬ್ಬಳೇ ಹೇಗೆ ಕಳೆದಳೋ....! ಮಾಡಲು ಕೈತುಂಬ ಕೆಲಸಗಳೂ ಇಲ್ಲಿಲ್ಲ. ಎಲ್ಲದಕ್ಕೂ ಜನರಿದ್ದಾರೆ. ಅಡಿಗೆಯವಳನ್ನು ಬಿಡಿಸಿಬಿಡಿ ಎಂದು ತಮ್ಮಯ್ಯನವರನ್ನು ಕೇಳಿಕೊಂಡಾಗ,

"ಚಿಕ್ಕಂದಿನಿಂದಲೂ ಈ ಮನೆಯಲ್ಲೇ ಇದ್ದ ಅವಳನ್ನು ಈ ಮುದಿ ಪ್ರಾಯದಲ್ಲಿ ಹೊರಟುಹೋಗು ಎಂದು ಹೇಗೆ ಹೇಳಲಿ?" ಎಂದರವರು.

"ಹಾಗಾದರೆ ಕೆಲ್ಸದವಳನ್ನು ಬಿಡಿಸಿ. ನಾನೇ ಮಾಡಬಲ್ಲೆ."

"ಸಾಧ್ಯವಿಲ್ಲಮ್ಮಾ. ಹೇಗಿದ್ದರೂ ದಿನಗೂಲಿ ಕೆಲಸ ಅವಳಿಗೆ. ಅಲ್ಲದೆ ಇಷ್ಟು ದೊಡ್ಡ ಮನೆಯನ್ನು ನೀನೊಬ್ಬಳೇ ಹೇಗೆ ಸ್ವಚ್ಛ ಮಾಡುತ್ತಿ, ನಿನಗೇಕೆ ಬಿಡು ತಾಪತ್ರಯ" ಎಂದರು ಆತ್ಮೀಯವಾಗಿ.

ಅಂತೂ ಆಶಾ ಪಾಲಿಗೆ ಊಟ, ಓದು, ಮಲಗುವುದು ಇವಿಷ್ಟರ ಹೊರತಾಗಿ ಇನ್ನೇನೂ ಉಳಿಯಲಿಲ್ಲ. ತನ್ನ ಪಾಲಿಗೆ ಏನೂ ಕೆಲಸವಿಲ್ಲದ್ದು ಮೊದಲು ಆಕೆಗೆ ಸಂತಸವನ್ನೇ ಇತ್ತಿತ್ತು. ದಿನಕ್ಕೊಂದು ಬಗೆಯ ತಿಂಡಿ, ಭಕ್ಷ್ಯ, ಸೊಗಸಾದ ಊಟ, ಮಹಡಿಯಲ್ಲಿ ಆರಾಮದಿಂದ ಕಾಲು ನೀಡಿ ಕುಳಿತು ತನಗಿಷ್ಟ ಬಂದುದನ್ನು ಓದುವುದು... ಆಹಾ, ಅದೆಂತಹ ಸುಖಜೀವನ! ಇದಕ್ಕೋಸ್ಕರ ಅಂತರಿಕವಾಗಿ ಹೆಮ್ಮೆಯಿಂದ ಬೀಗಿಹೋಗಿದ್ದಳು ಆಶಾ. ಒಂದಿನಿತೂ ಕೆಲಸ ಮಾಡದ ಕೈ ಬೆರಳುಗಳು, ಪಾದಗಳು ಇನ್ನಷ್ಟು ಕೋಮಲತೆಯನ್ನು ಪಡೆದು ರಕ್ತದಿಂದ ತುಂಬಿ ಕೆಂಪಾಗಿ ಆಕೆಯನ್ನೇ ಮೋಹಿಸಿದವು! ತನ್ನ ಅಲಂಕಾರಗಳಿಂದ ತನ್ನನ್ನು ತಾನೇ ಪ್ರೀತಿಸಿದಳು. ಕೋಣೆಯ ಅಲಂಕಾರ ಮನಸ್ಸಿಗೆ ನೆಮ್ಮದಿ ತಂದಿತು. ಮೂರ್ತಿ ಕುಮಟೆಯಿಂದ ಬರುವಾಗ ಏನಾದರೂ ಪುಸ್ತಕ ತರುತ್ತಾನೆ. ಹೊತ್ತು ಸರಿಯುತ್ತದೆ ಓದುವುದರಲ್ಲಿ.

ಬಿಳಿ ಬಟ್ಟೆಯ ಮೇಲೆ ಬಣ್ಣದ ನೂಲುಗಳಿಂದ ಡಿಸೈನ್ ಬಿಡಿಸುವುದೂ ಒಂದು ಕಲೆ. ಕುಶಲ ಕೈಗಾರಿಕೆ ಆಕೆಗೆ ಬಹಳ ಪ್ರಿಯ. ನೋಡ ನೋಡುತ್ತಿದ್ದಂತೆ ಹೂ, ಎಲೆಗಳಿಂದ ತುಂಬಿದ ಮೇಜಿನ ಕವರು ಸಿದ್ಧವಾದಾಗ, ಕೆಲಸದ ನೀಲಿ ಕಣ್ಣರಳಿಸಿ ಆ ಬಟ್ಟೆಯನ್ನು ಹೊತ್ತುಕೊಂಡು "ಎಷ್ಟು ಲಾಯ್ಕ ಹಾಕಿದ್ದೀರಿ ಅಮ್ಮಾ, ಎರಡು ಕಣ್ಣು ಸಾಕಾತಿಲ್ಲೆ ಕಾಂಬಕ" ಎಂದಂದು ಕಣ್ಣು ಕಾಣದ ರಂಗಮ್ಮನಿಗೂ ತೋರಿಸಿ, ಬಣ್ಣಿಸಿ, ಅದರ ವರ್ಣನೆ ಮಾಡಿ, ಅವರೂ ನೋಡಿದಂತೆ ಮಾಡಿಬಿಟ್ಟಳು.

"ಇಷ್ಟೆಯೋ?" ಓರೆಯಾಯಿತು ಚೆನ್ನಕ್ಕನ ಮುಖ, "ಕಾಂತಿಯಮ್ಮ ಇನ್ನೂ ಚೆನ್ನಾಗಿ ಹಾಕ್ತಿದ್ರು ಅಲ್ವಾ...?"

ಬಿಳಿ ಬಟ್ಟೆಯ ಮೇಲೆ ಬಿಡಿಸುತ್ತಿರುವ ಡಿಸೈನ್ ಪೂರ್ಣ ಆಗುವ ಮೊದಲೇ ತಲೆದೋರಿತು ಬೇಸರ. ಬಟ್ಟೆ, ನೂಲು ಎಲ್ಲಾ ಮೂಲೆ ಪಾಲು. ಶಿವಮೂರ್ತಿಯೊಂದಿಗೆ ಓಡಿದಳು ಕುಂದಾಪುರಕ್ಕೆ. ಅಂಗಡಿ ಅಂಗಡಿ ತಿರುಗಿ ಬಣ್ಣ ಬಣ್ಣದ ಮೇಜು ಹಾಸು, ದಿಂಬಿನ ಕವರು. ಕಿಟಕಿಗೆ ಪರದೆ, ಮೇಜಿನ ಮೇಲಿಡಲು ಗಾಜಿನ ಹೂದಾನಿ ಎಲ್ಲವನ್ನೂ ಹೊತ್ತು ತಂದು ಸಂಭ್ರಮದಲ್ಲಿ ಅಲಂಕರಿಸಿದಳು ಕೋಣೆಯನ್ನು. ನಿಜವಾದ ಹೂವುಗಳಿಗಿಂತ ಕಾಗದದ ಹೂವು ಚೆನ್ನೆಂದು ಬಗೆ ಬಗೆಯ ಕಾಗದದ ಹೂವುಗಳೂ ಅಲಂಕರಿಸಿದವು ಹೂದಾನಿಯನ್ನು. ಆದರೆ ನೋಡಿದ ಹೂವುಗಳನ್ನು ಪದೇ ಪದೇ ನೋಡುತ್ತಿದ್ದಾಗ ರೋಸಿ ಹೋದ ಮನಸ್ಸು ಅದನ್ನೂ

ಮೂಲೆಗೆ ಒತ್ತಿತು. ಆಮೇಲೆ ಯಥಾಪ್ರಕಾರ ಅಂಗಳದ ಅರೆಬಿರಿದ ಹೂವು, ಪೂರ್ಣ ಅರಳಿದ ಹೂವುಗಳೇ ಹೂದಾನಿಯನ್ನಲಂಕರಿಸಿ ಕೋಣೆಗೊಂದು ಶೋಭೆ ತಂದವು.

ಪೃಥ್ವಿಗೋಸ್ಕರ ಬಗೆ ಬಗೆಯ ಆಟಿಗೆಗಳ ತಯಾರಿ. ಬೆಂಕಿಪೆಟ್ಟಿಗೆಯ ಮೇಜು ಖುರ್ಚಿ, ಸಿಗರೇಟು ಪ್ಯಾಕ್‌ಗಳ ಆನೆ ಕುದುರೆ ಎಲ್ಲವೂ ತಯಾರಾದವು. ಪೃಥ್ವಿಯ ಕಣ್ಣಳಲ್ಲಿ ಅಚ್ಚರಿ ಮೂಡಿತು. ಬಗೆ ಬಗೆಯ ಗೊಂಬೆಗಳನ್ನು ಸಿದ್ಧಮಾಡಿ ಅವನನ್ನು ಹರ್ಷದಲ್ಲಿ ತೇಲಿಸಿದಳು. ಜೇಡಿಮಣ್ಣಿನ ಹಣ್ಣುಹಂಪಲ ಮಾಡಿ, ಬಣ್ಣ ಸವರಿ ಅವನ ಕೈಗಿತ್ತಾಗ ಪೃಥ್ವಿ ಮನೆತುಂಬಾ ಕುಣಿದುಬಿಟ್ಟಿದ್ದ. 'ಅಮ್ಮಾ' ಎಂದು ಹಗಲಿರುಳೂ ಅವಳ ಹಿಂದೆಯೆ. ಅವನೊಡನೆ ಮಗುವಿಗಿಂತ ಮಗುವಾಗಿ ನಲಿದು ಸವತಿಯ ಮಗನೆಂಬುದನ್ನು ಮರೆತುಹೋದಳು!

ಆದರೂ ದಿನ ಸರಿದಂತೆ ಅತೃಪ್ತಿ, ಅಶಾಂತಿ ತುಂಬಿಕೊಂಡಿತು ಮನದಲ್ಲಿ. ಒಂಟಿತನ ಅಸಹ್ಯವೆನಿಸಿತು.... ಮಾತನಾಡುವ ಚಪಲ ಹೆಚ್ಚಿತು.

ಈ ಊರಿನಲ್ಲಿ ಏನಿದೆ? ಒಂದು ಆರೇಳು ತಿಂಗಳು ಕಳೆದಿದ್ದರೂ ಯಾವ ಹೊಸ ಸ್ನೇಹಿತೆಯರೂ ಸಿಗಲಿಲ್ಲ. 'ಪೃಥ್ವಿ ಹಿಲ್'ನ ಸುತ್ತಲೂ ಅವಳಿಗಾವ ಸ್ನೇಹಿತರೂ ಇಲ್ಲ. ಪರಿಚಯ ಮಾಡಿಕೊಳ್ಳಬೇಕೆಂದರೆ ಸರಿಯಾದ ಮನೆಗಳೂ ಅಲ್ಲಿಲ್ಲ. ಕೆಲಸಕ್ಕೆ ಬರುವ ಆಳುಗಳ, ತೀರಾ ಬಡವರ್ಗಗಳ ಮನೆಗಳು ಅಲ್ಲಿರುವುದು. ಅಂಥವರ ಸಂಗಡ ಇವಳ ಒಡನಾಟವೇ? ಸಲ್ಲದು. ಅವರೂ ಈ ಶ್ರೀಮಂತ ಸೊಸೆಯೊಡನೆ ಬೆರೆಯುವವರಲ್ಲ. ಒಂದು ಮಹಿಳಾ ಸಂಘವಿದ್ದಿದ್ದರೆ ಮನಕ್ಕೆ ಅದೆಷ್ಟೋ ಹರ್ಷ. ಇಲ್ಲಿಯ ಹೆಂಗಸರಿಗೆ ಅವರವರ ತಾಪತ್ರಯ. ಸಂಘ ಬೇಕೆಂದೂ ಅವರಿಗಿಲ್ಲ. ಒಂದು ಸಿನಿಮಾ ಥಿಯೇಟರೂ ಇಲ್ಲಿಲ್ಲ. ಕ್ಲಬ್ಬು, ಸಾರ್ವಜನಿಕ ಸಂಘ ಯಾವುದೂ ಇಲ್ಲ. ಪ್ರತಿಯೊಂದಕ್ಕೂ ಹತ್ತು ಮೈಲಿ ದೂರದಲ್ಲಿರುವ ಕುಂದಾಪುರಕ್ಕೆ ದಾಳಿ ಇಡಬೇಕು.

ಮನೆಯಿಂದ ತುಸು ದೂರದಲ್ಲೇ ದೊಡ್ಡ ರಸ್ತೆ, ಪ್ರತಿದಿನವೂ ಕಾರು, ಬಸ್ಸು, ಲಾರಿ, ಕೊಲ್ಲೂರಿನತ್ತ, ಕುಂದಾಪುರದತ್ತ ಓಡಾಡುತ್ತವೆ. ಧೂಳೆಬ್ಬಿಸುತ್ತ ಓಡುವ ವಾಹನಗಳನ್ನು ನೋಡುವ ನೆವದಲ್ಲಿ ಆಶಾ ಪ್ರತಿದಿನ ರಸ್ತೆಯ ಬದಿಗೆ ಹೋಗುತ್ತಿದ್ದರೂ ಕ್ರಮೇಣ ಅದೂ ಬೇಸರವೆನಿಸತೊಡಗಿತು.

ಪ್ರತಿಕ್ಷಣವೂ ಹೊಸದಾಗಿರಬೇಕು, ಚೇತನ, ಉತ್ಸಾಹದಿಂದ ಕೂಡಿರಬೇಕು ಎಂದು ಯೋಚಿಸುತ್ತಿದ್ದ ಅವಳು ಕಟ್ಟಿದ ಕನಸುಗಳು ಅದೆಷ್ಟೋ. ಹತ್ತು ಜನಗಳ ಮಧ್ಯೆ ವಾಸಿಸಿ, ಹತ್ತು ಜನರೊಡನೆ ಬೆರೆತು ಸ್ವಚ್ಛಂದವಾಗಿ ತಿರುಗುವ ಬಯಕೆ ಅವಳದು.

ಆದರೆ ಈಗಲೋ.... ಎಲ್ಲಾ ನೀರಸ. ಈ ಹಳ್ಳಿ ಮನೆ ಬೇಸರ. ಪ್ರತಿ ಶನಿವಾರ ಮೂರ್ತಿಯ ಆಗಮನದ ಕಾತರ. ಅವನು ಹೊರಟುಹೋದ ದಿನ ಮನ ಮುದುಡಿದ ಹೂವು. ಮೌನವಾಗಿ ರೋದಿಸುತ್ತಾಳೆ ತನ್ನಲ್ಲೇ. ವಾರದ ಐದು ರಾತ್ರಿಗಳನ್ನೂ ಮಹಡಿ ಕೋಣೆಯಲ್ಲಿ ಅವಳೊಬ್ಬಳೇ ಮಲಗಬೇಕು. ಮದುವೆಯಾದ ಪ್ರಾರಂಭದಲ್ಲಿ ಅತ್ತೆ ಅಂದಿದ್ದರು. 'ನಿನಗೆ ಬೇಸರವಾಗ್ತಿದ್ದರೆ ನನ್ನ ಕೋಣೆಯಲ್ಲಿ ಮಲಗು' ಎಂದು. ಆದರೂ ಒಂಟಿತನ ಅಭ್ಯಾಸ ಮಾಡಿಕೊಂಡಳು ಒತ್ತಾಯದಿಂದ. ನಿಶ್ಶಬ್ದ ಕೋಣೆಯಲ್ಲಿ ಪುಕ್ಕಲು

ಮನಸ್ಸು ಹೊಯ್ದಾಡುತ್ತದೆ ಭೀತಿಯಲ್ಲಿ. ಸಣ್ಣ ಸದ್ದಾದರೂ ಬೆಚ್ಚಿಬೀಳುತ್ತಾಳೆ. ಕೆಟ್ಟ ಸ್ವಪ್ನಗಳ ಹೆದರಿಕೆ, ಅವ್ಯಕ್ತ ಸಂಶಯಗಳು.

ಶಿವಮೂರ್ತಿ ಹತ್ತಿರವೇ ಇದ್ದಿದ್ದರೆ ಅವನ ಸವಿನುಡಿ, ಬಿಸಿಯಪ್ಪುಗೆಯಲ್ಲಿ, ಹರ್ಷದ ಹೊನಲಿನಲ್ಲಿ ಅವಳ ಪ್ರತಿಕ್ಷಣವೂ ಉಲ್ಲಾಸದಿಂದ ಕೂಡಿರುತ್ತಿತ್ತು. ಮೂರ್ತಿ ಹತ್ತಿರವಿದ್ದಿದ್ದರೆ ವಂಡ್ಸೆಯ ಹಳ್ಳಿ ಜೀವನವೂ ಬೇಸರ ತರುತ್ತಿರಲಿಲ್ಲ ಅವಳಿಗೆ. ಆತ ಈ ಮನೆಯಲ್ಲಿದ್ದು ದಿನಕ್ಕೆ ಸಾವಿರಬಾರಿ ಕಾಂತಿಯ ಜಪ ಮಾಡಿದ್ದರೂ ಅವಳಿಗೆ ಒಂದಿನಿತೂ ನೋವಾಗುತ್ತಿರಲಿಲ್ಲ. ಆದರೇನು... ಅವನಿಲ್ಲ ಇಲ್ಲಿ.

ಮದುವೆಯಾದ ಹೊಸತರಲ್ಲಿ ಪೆಟ್ಟಿಗೆಯ ತುಂಬಾ ಇದ್ದ ಕಾಂತಿಯ ಸೀರೆ, ಆಭರಣಗಳನ್ನೆಲ್ಲ ಮೆಚ್ಚಿಗೆಯಿಂದ ಧರಿಸಿಕೊಂಡು ಶಿವಮೂರ್ತಿಯೊಂದಿಗೆ ಹೊರಗೆಲ್ಲಾ ಹೋಗುತ್ತಿದ್ದಳು ಆಶಾ. ಆಗೆಲ್ಲಾ 'ಆಹ್, ಥೇಟ್ ಕಾಂತಿಯ ಹಾಗೆ ಕಾಣ್ತೇಯಲ್ಲೇ' ಎಂದು ಅವಳನ್ನು ಮುದ್ದಿಡುವಾಗ ಚೇಳು ಕಟುಕಿದಂತಹ ಯಾತನೆ. ಆಮೇಲಿನ ದಿನಗಳಲ್ಲಿ ಶಿವಮೂರ್ತಿ ಒತ್ತಾಯಿಸಿದರೂ ಕಾಂತಿಯ ಯಾವ ವಸ್ತ್ರವನ್ನೂ ಮುಟ್ಟುವ ಸಾಹಸ ಮಾಡಲಿಲ್ಲ ಆಕೆ. ಆತ ಮನೆಗೆ ಬಂದಾಗ ಆತನೊಡನೆ ಪ್ರೇಮದಿಂದ ನಡೆದುಕೊಂಡು ತನ್ನ ಪ್ರೀತಿಯ ಸುಧೆಯಲ್ಲಿ ಆತನ ಮನವನ್ನು ಗೆಲ್ಲಬಹುದು ಎಂದುಕೊಳ್ಳುತ್ತಾಳೆ. ಆದರೆ ಇಲ್ಲಿಗೆ ಅವನು ಬಂದಾಗ ಏನಾದರೂ ಒಂದು ಕಾರಣದಿಂದ ಅವಳ ಸೂಕ್ಷ್ಮ ಮನಸ್ಸು ನೊಂದುಕೊಳ್ಳುತ್ತದೆ ಮತ್ತು ಒಂದು ಕ್ಷಣಕ್ಕಾದರೂ ದೂರ ಸರಿಯುತ್ತದೆ.

'ನನ್ನ ಬಗ್ಗೆ ಮೂರ್ತಿ ಏನೂ ಯೋಚಿಸಿಲ್ಲವೇ? ಕಾಂತಿ ಸತ್ತ ಆಘಾತದ ನೆಪದಲ್ಲಿ ನನ್ನನ್ನೇಕೆ ಈ ಹಳ್ಳಿಯಲ್ಲಿರಿಸಿದ್ದು?' ಎಂದು ಯೋಚಿಸುತ್ತಾಳೆ ಅವಳು. ಶಿವಮೂರ್ತಿ ಪ್ರೀತಿ, ಸುಖ, ಸಂತೋಷ ಎಲ್ಲವನ್ನೂ ನೀಡಿದ್ದ. ಆದರೂ ಅವನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ಹೊಂದುವಂತಹ ಒಂದೇ ಒಂದು ಅವಕಾಶ ಸಿಗಲಿಲ್ಲ. ಹೊಲಿಗೆ ಕ್ಲಾಸ್‌ಗೆ ಹೋಗಲು ಪ್ರಾರಂಭಿಸುತ್ತಿದ್ದಂತೆ, ಒಂದು ದಿನ 'ಇಕೋ ನಿನಗೇನೋ ಬಹುಮಾನ ತಂದಿದ್ದೇನೆ' ಎಂದು ಹೊಲಿಗೆ ಯಂತ್ರವನ್ನು ತೋರಿಸಿದಾಗ ಅಚ್ಚರಿಯೋ ಅಚ್ಚರಿ. ಆದರೆ ಹಿಂದಿನಿಂದಲೇ ಬಂದಿತು ಕಾಂತಿಯ ಹೆಸರು. ಅವಳು ಹೇಳದೇ ಇದ್ದರೂ ಬೇಡದೇ ಇದ್ದರೂ ಬೆಲೆಬಾಳುವ ಸೀರೆ ತಂದು ಅವಳ ಮುಖದಲ್ಲಿ ಗೆಲುವು ತರಿಸುತ್ತಿದ್ದ. ಬೇಡವೆಂದರೂ ಪ್ರತಿ ಶನಿವಾರ ಭಟ್ಕಳದ ಸುಗಂಧ ಭರಿತ ಮಲ್ಲಿಗೆಯ ಇಡೀ ದೊಡ್ಡ ಚೆಂಡು ಅವಳಿಗೋಸ್ಕರ ತಂದುಕೊಡುತ್ತಿದ್ದ. ಅವಳ ಬಾಯಿಯಿಂದ ಸಣ್ಣ ವಿಷಯ ಹೊರಗೆ ಬಂದರೂ ಕ್ಷಣದಲ್ಲಿ ಮಾಡಿ ಮುಗಿಸುವ! 'ಈ ಮನೆಯಲ್ಲಿ ಸುಖಿಯಾಗಿರು, ತೃಪ್ತಿಯಾಗಿರು, ರಾಣಿಯಾಗಿರು' ಎನ್ನುತ್ತಿದ್ದ. ಆದರೇನು? ಅದರ ಹಿಂದಿನಿಂದಲೇ ಕಾಂತಿಯ ಹೆಸರು ನಗಾರಿಯ ಶಬ್ದ ಮಾಡುತ್ತದೆ ಅವಳ ಕಿವಿಗಳಲ್ಲಿ.

ಕಾಂತಿಯನ್ನು ಶಿವಮೂರ್ತಿ ಪೂರ್ಣವಾಗಿ ಮರೆಯುವಂತೆ ತಾನೇನಾದರೂ ಮಾಡಬೇಕು ಎಂದು ಯೋಚಿಸಿಕೊಂಡರೂ ಒಂದೂ ಅವಳ ಕೈಲಾಗುವುದಿಲ್ಲ. ಮನೆಯವರೂ ವಿಚಿತ್ರ ಜನರು. ಮನೆಗೊಬ್ಬ ಸೊಸೆ ಬಂದಿದ್ದಾಳೆ ಎನ್ನುವುದೂ ಅವರಿಗೆ ತಿಳಿದಂತಿಲ್ಲ. ಹೀಗೆ ಮನೆಯವರಿಂದಾಗಿ ಅಳಿದು ಹೋದ ಕಾಂತಿಯ ಮೇಲೆ

ದ್ವೇಷ ಇಮ್ಮಡಿಯಾಯಿತು. ಅವಳ ನಡೆನುಡಿ, ಇಷ್ಟಾರ್ಥಗಳನ್ನು ತಿಳಿದುಕೊಂಡು ತಾನು ಅದನ್ನೆಲ್ಲ ದ್ವೇಷಿಸಿದಳು. ದ್ವೇಷ ಬೆಳೆಯಿತು ಹೆಮ್ಮರದಂತೆ. ಮನೆಯಲ್ಲಿ ಯಾರೇ ಅವಳ ವಿಷಯ ಮಾತನಾಡಲಿ, ತತ್‌ಕ್ಷಣ ಮುಖ ಸಿಂಡರಿಸಿಕೊಂಡು ಎದ್ದು ಹೋಗಲಾರಂಭಿಸಿದಳು. ಆದರೂ ಮಾತಿನ ಅಲೆಗಳು ಕಿವಿಯ ಮೇಲೆ ಅಪ್ಪಳಿಸುತ್ತ ಯಾವುದೋ ವೇದನೆಯನ್ನು ಕೊಡಲಾರಂಭಿಸಿತು ಅವಳಿಗೆ. 'ನಿಜವಾಗಿಯೂ ಕಾಂತಿ ಅಷ್ಟು ಒಳ್ಳೆಯವಳಾಗಿದ್ದಳೇ?' ಮೌನವಾಗಿ ರೋದಿಸುತ್ತ ತನ್ನನ್ನೇ ಪ್ರಶ್ನಿಸಿಕೊಂಡಳು.

ಈ ನಡುವೆ ಕಾಂತಿಯ ತಂಗಿ, ತಮ್ಮ, ತಾಯಿ ಎಲ್ಲರೂ ಬಂದು ಹೋದರು. ಬಂದವರಿಗೆಲ್ಲ ಕಾಂತಿಯದೇ ಗುಣಗಾನ. ನೂರು ಸಲ ಧ್ಯಾನಿಸಿಕೊಂಡರು ಮನೆಯವರು.

'ನಾನೇಕೆ ಇವರುಗಳ ಕಣ್ಣಿಗೆ ಒಳ್ಳೆಯವಳಾಗಿ ಕಾಣುತ್ತಾ ಇಲ್ಲ. ಯಾಕೆ ನನಗಿಲ್ಲ ಆದರ? ಕೊರತೆ ಏನು? ಯಾಕೆ ಈ ಶಿಕ್ಷೆ? ಕಾಂತಿಯ ಸ್ಥಾನವನ್ನು ನಾನು ತುಂಬಿದ್ದರೂ ಈ ಮನೆಯವರ ಮನಸ್ಸಿನಲ್ಲಿ ಸ್ಥಾನ ಪಡೆಯಲಿಲ್ಲ. ಇನ್ನು ಪಡೆಯಲಾರೆನೇ?'

ಹೀಗೆ ಮನೆಗೆ ರಾಣಿಯಾಗಿ ಸಕಲೈಶ್ವರ್ಯಗಳನ್ನು ಪಡೆದಿದ್ದರೂ ಮನಕ್ಕೆ ನೆಮ್ಮದಿಯಿಲ್ಲದೆ ಯಾವುದೋ ಯಾತನೆ. ದುಃಖ ದ್ವೇಷದಲ್ಲಿ ನರಳತೊಡಗಿದಳು. ಯಾರಿಗೂ ತಿಳಿಯಲಿಲ್ಲ ಇದು.

ಈ ನಡುವೆ ಲೋಹಿತಾಕ್ಷ ಮನೆಯವರಿಗೆಲ್ಲಾ ಚಿರಪರಿಚಿತನಾಗಿ ಹೋದ. ಅವನಿಗೆ ಆದರದ ಸ್ವಾಗತ, ಅದ್ದೂರಿಯ ಉಪಚಾರ. ವಿಶೇಷ ಅಡುಗೆಯಿದ್ದಲ್ಲಿ ಸಂಭ್ರಮದ ಕರೆಯೋಲೆ! ಇನ್ನು ಆಶಾ ಮತ್ತು ಅವನ ಭೇಟಿಯಾಗುವುದು ಪ್ರತಿ ಸಾಯಂಕಾಲ ಚಕ್ರನದಿಯ ದಡದಲ್ಲಿ. ಮುಳುಗುವ ಸೂರ್ಯನ ಕೆಂಪು ಛಾಯೆಯೊಂದಿಗೆ ಮಾತಿನ ಮುಕ್ತಾಯ. ಅವನ ಸ್ನೇಹ ದಿನ ಸರಿದಂತೆ ನಿಕಟವಾಗುತ್ತ ಬಂದಂತೆ ಅವನಿಂದ ದೂರವಿರಲು ಪ್ರಯತ್ನಿಸಿದಷ್ಟು ಸಾಧ್ಯವಾಗಲಿಲ್ಲ. ಮನೆಯಲ್ಲಿನ ಬೇಸರ ಅವನ ಮಾತಿನಲ್ಲಿ ಪರಿಹಾರ! ನೊಂದ ಮನಕ್ಕೆ ಅವನ ಗೆಳೆತನ ಇನ್ನಷ್ಟು ಪ್ರಿಯವಾಯಿತು, ಅದನ್ನವಳು ಹೆಚ್ಚು ಹೆಚ್ಚಾಗಿ ಅಪೇಕ್ಷಿಸಿದಳು.

ಹೀಗೆ ಆಂತರಿಕವಾಗಿ ಅವನ ಸ್ನೇಹ ಅವಳ ಜೀವನದಲ್ಲಿ ಹೊಸ ಉತ್ಸಾಹದ ತಿರುವನ್ನು ಕಲ್ಪಿಸಿಕೊಟ್ಟಿತು ಅವಳಿಗರಿಯದಂತೆ!

೫

ಮಾರ್ಣಕಟ್ಟೆಯ ಯಕ್ಷಬ್ರಹ್ಮಲಿಂಗೇಶ್ವರ ದೇವಸ್ಥಾನ-ವಂಡ್ಸೆಯಿಂದ ಒಳದಾರಿಯಲ್ಲಿ ಮೂರು ಮೈಲು ಅಂತರದಲ್ಲಿರುವ ಬಹಳ ಹೆಸರುವಾಸಿಯಾದ ಸ್ಥಳ. ಪ್ರತಿವರ್ಷ ಮಕರ ಸಂಕ್ರಮಣದಂದು ಇಲ್ಲಿ ಜಾತ್ರೆ. ಸಾವಿರಾರು ಭಕ್ತರು ಸೇರುವ ಪುಣ್ಯಸ್ಥಳ. ಯಾವುದೇ ಕಾರ್ಯ ಮಾಡುವಾಗ ಈ ದೇವರಲ್ಲಿ ನಂಬಿಕೆಯಿರುವಾತ

ಹರಕೆ ಹೇಳಿಕೊಂಡು 'ಹೂವು' ಒಪ್ಪಿಸುತ್ತಾನೆ. ಈ ದೇವರ ಮೇಲೆ ಶ್ರದ್ಧೆ, ಭಯಭಕ್ತಿ ಹೆಚ್ಚು. ಹೆಚ್ಚಾಗಿ ಇಲ್ಲಿಗೆ ಬರುವುದು ಜಗಳ, ಹೊಡೆದಾಟದ ದೂರುಗಳು. ದೇವರ ಹೆಸರಿನಲ್ಲಿ ಆಣೆಯಿರಿಸಿ ಸುಳ್ಳು ಹೇಳಿದವನಿಗೆ ಇಲ್ಲಿಯ ಉಪದ್ರ ತಪ್ಪಿದ್ದಲ್ಲ. ಕಾಡಿಸಿ ಪೀಡಿಸಿ ಕೊನೆಗೆ ಈ ದೇವಸ್ಥಾನಕ್ಕೆ ಓಡಿಬರುವಂತೆ ಮಾಡುತ್ತದೆ... ಮಕರ ಸಂಕ್ರಾಂತಿಯ ದಿನದಂದು 'ತಪ್ಪುಗಾಣಿಕೆ' ಹಾಕಬೇಕು, ಸುಳ್ಳು ಪ್ರಮಾಣ ಮಾಡಿದವನು. ಹೆಚ್ಚಿನ ಶ್ರದ್ಧೆ ನಂಬಿಕೆಯಿರುವುದು ಹಿಂದುಳಿದವರಿಗೆ.

ಇಲ್ಲಿನ ದೈವಕ್ಕೆ ಮಕರ ಸಂಕ್ರಾಂತಿಯಂದು ಹೂವು ಒಪ್ಪಿಸುವುದು ಒಂದು ವಿಶೇಷ ಸಂಪ್ರದಾಯ. ಕೆಲವರು ತಲೆ ತಲಾಂತರಗಳಿಂದ ಹೂ ಒಪ್ಪಿಸುತ್ತಿದ್ದಾರೆ. ಇನ್ನು ಕೆಲವರು ಹರಕೆ ಹೇಳಿಕೊಂಡು ಬರುತ್ತಾರೆ. ದೈವಕ್ಕೆ ಹೂವು ಒಪ್ಪಿಸಲು ತಲ್ಲೂರು, ಕುಂದಾಪುರ, ಹೆಮ್ಮಾಡಿ, ಬೈಂದೂರು, ಕೋಟೇಶ್ವರ, ಬ್ರಹ್ಮಾವರ ಇನ್ನೂ ಅನೇಕ ಹಳ್ಳಿಗಳಿಂದ ಹೆಡಿಗೆಗಟ್ಟಲೆ ಸೇವಂತಿಗೆ ಹೂವುಗಳನ್ನು ಹೊತ್ತು ತರುತ್ತಾರೆ. ಜಾತ್ರೆಯ ಅಂಗವಾಗಿ ಅನೇಕ ಕಾರ್ಯಕ್ರಮಗಳಿದ್ದರೂ ದೈವಕ್ಕೆ ಹೂವು ಒಪ್ಪಿಸುವುದನ್ನು ನೋಡುವದೂ ಕಣ್ಣಿಗೆ ಒಂದು ಹಬ್ಬ. ವಂಡ್ಸೆಯ ಜನರಿಗೆ ಈ ಜಾತ್ರೆಯಲ್ಲಿ ಹೆಚ್ಚಿನ ಉತ್ಸಾಹ.

ಶಿವಮೂರ್ತಿಗೆ ಕಾಲೇಜಿಗೆ ಎರಡುದಿನ ರಜೆ ಸಿಕ್ಕಿದ್ದರಿಂದ ಮನೆಗೆ ಬಂದಿದ್ದ. ನಾಲ್ಕು ದಿನಗಳ ಮೊದಲೇ ಪೃಥ್ವಿ ತನಗೆ ಬೇಕಾದ ಸಾಮಾನು, ಆಟಿಗೆಗಳ ದೊಡ್ಡ ಪಟ್ಟಿ ತಯಾರಿಸಿ ಇಟ್ಟಿದ್ದ ಬಹಳ ಉತ್ಸಾಹದಲ್ಲಿ. ಆ ದಿನ ಮನೆಯಲ್ಲಿಯೂ ವಿಶೇಷ ಅಡಿಗೆ. ಎಂದಿನಂತೆ ಲೋಹಿತಾಕ್ಷನಿಗೂ ಆಮಂತ್ರಣ ಹೋಗಿತ್ತು. ಅದೇನಾಯಿತೋ ಅವನು ಬರಲಿಲ್ಲ ಊಟಕ್ಕೆ.

ಜಾತ್ರೆಗೆ ಹೋಗುವ ಉತ್ಸಾಹ ಆಶಾಗೆ ಪೃಥ್ವಿಗಿಂತಲೂ ಹೆಚ್ಚು. ವಂಡ್ಸೆಗೆ ಬಂದ ಮೇಲೆ ಇದೇ ಮೊದಲು ಈ ಊರಿನಲ್ಲಿ ನಡೆಯುವ ಸಂಭ್ರಮಕ್ಕೆ ಹೋಗುತ್ತಿರುವದು! ಕತ್ತಲೆಯಾಗುವ ಮುಂಚೆಯೇ ದೇವರ ದರ್ಶನ ಮಾಡಿಕೊಂಡು ಬರೋಣವೆಂದು ಮೂರ್ತಿ ತಿಳಿಸಿದ್ದರಿಂದ ಆಶಾ ಐದು ಗಂಟೆಗೆಲ್ಲಾ ಹೊರಟು ಸಿದ್ಧಳಾಗಿಬಿಟ್ಟಳು. ಮದುವೆಯ ದಿನದಂದು ಅವಳ ತಾಯಿ ಕಳುಹಿಸಿದ ನಸು ನೇರಳೆ ಬಣ್ಣದ ಸೀರೆಯನ್ನುಟ್ಟುಕೊಳ್ಳುತ್ತಿದ್ದಂತೆ, 'ಓಹ್.... ನಾನೊಮ್ಮೆ ಅಮ್ಮನನ್ನು ನೋಡಲಾರೆನೇ?' ಎಂದು ಅನ್ನಿಸಿತು ಒಂದು ಕ್ಷಣ.

ಮಹಡಿಯಿಂದ ಕೆಳಗಿಳಿದು ಬಂದಾಗ ಇವಳಿಗಾಗಿ ಕಾಯುತ್ತಾ ಇದ್ದರು ರಂಗಮ್ಮ. ಬಂದಾಕ್ಷಣ ಮೈಕೈ ಎಲ್ಲಾ ಮುಟ್ಟಿ ಮುಟ್ಟಿ ನೋಡುತ್ತ ತಮ್ಮ ಕೈಯ್ಯಲ್ಲಿದ್ದ ಪೆಟ್ಟಿಗೆಯನ್ನು ತೆರೆದು ತಡವರಿಸುತ್ತ ಒಂದೊಂದೇ ಸರವನ್ನು ತೊಡಿಸಿದರು ಅವಳಿಗೆ. ಮೋಹನಮಾಲೆ, ಅವಲಕ್ಕಿ ಸರ, ಗುಂಡು ಸರ... ಆಶಾ ಬೇಡವೆಂದರೂ ಕೇಳಲಿಲ್ಲ. ಬಳೆಗಳನ್ನು ಅವಳ ಕೈಗೆ ಹಾಕಿದರು. ಮುಡಿ ಬಿಲ್ಲೆ ಮುಡಿಸಿದರು.

"ಯಾಕೆ ಸಂಕೋಚ ನಿನಗೆ. ಇವೆಲ್ಲ ನಾನೇ ಮಾಡಿಸಿದ್ದು. ನಿನ್ನ ಮಾವ ನನ್ನನ್ನು ಎಲ್ಲಿಗೇ ಕರ್‍ಕೊಂಡು ಹೋಗುತ್ತಿದ್ದರೂ ಇವನ್ನೆಲ್ಲ ಹಾಕಿಕೋ ಎನ್ತಾ ಇದ್ದರು. ಹರಯದ ಉತ್ಸಾಹ ಅವರಿಗೆ. ನನ್ನ ಕಣ್ಣುಗಳು ಸರಿಯಾಗಿ ಇದ್ದಿದ್ದರೆ ಇವನ್ನೆಲ್ಲ ಧರಿಸಿಕೊಂಡು

ನಾನೇ ಬರ್‍ತಾ ಇದ್ದೆ ನಿಮ್ಮ ಜೊತೆಗೆ, ಏನ್ಮಾಡ್ಲಿ. ಅವತ್ತು ಕಾರು ಅಪಘಾತದಲ್ಲಿ ನನ್ನ ಕಣ್ಣುಗಳನ್ನು ಕಳೆದುಕೊಂಡೆ. ಹಿಂಬದಿಯ ಸೀಟಿನಲ್ಲಿ ಕುಳಿತಿದ್ದ ಅಳಿಯ ಸತ್ತುಹೋದ. ನೋಡು, ಈಶ್ವರಿ ಈಗ ಜೀತದಾಳಿನ್ಹಾಗೆ ದುಡೀತಾ ಇದ್ದಾಳೆ ಗಂಡನ ಮನೆಯಲ್ಲಿ. ಅಳಿಯನ ಬದಲಿಗೆ ನಾನು ಸಾಯಬಾರದಿತ್ತೇ?"

ಸೊಸೆ ಏನು ಸಮಾಧಾನ ಹೇಳುತ್ತಾಳೆ? ರಂಗಮ್ಮ ಕಣ್ಣು ಒರೆಸಿಕೊಂಡರು. "ಕಾಂತಿ ಪುಣ್ಯವತಿ. ತಾನು ಸತ್ತು ಗಂಡನ ಜೀವನವನ್ನು ಸುಗಮವಾಗಿ ಮಾಡಿಕೊಟ್ಟಳು. ಇಲ್ಲದಿದ್ದರೆ ಅವಳೂ ತನ್ನ ಜೀವನವನ್ನೆಲ್ಲ ಕಣ್ಣೀರಿನಲ್ಲಿ ಕೈ ತೊಳೀಬೇಕಿತ್ತು. ಅಪಘಾತದಲ್ಲಿ ಮೂರ್ತಿ ಬದುಕಿಕೊಂಡ..... ಎಲ್ಲಾ ಪ್ರಾರಬ್ಧ ಕರ್ಮ ಅನ್ನು. ಅರೆರೆ.... ನಿನ್ನ ಬೆರಳಲ್ಲಿ ಉಂಗುರ ಇಲ್ಲವೇನೇ?" ಎನ್ನುತ್ತ ಅವಳ ಕೈ ತಡವಿ ತಮ್ಮ ಕೈ ಬೆರಳಲ್ಲಿದ್ದ ವಜ್ರದುಂಗುರವನ್ನು ಅವಳಿಗೇ ಹಾಕಿದರು.

"ಹೊರಟಾಯಿತೇ?" ಎನ್ನುತ್ತ ಆಶಾಳನ್ನು ಕರೆಯುತ್ತ ಶಿವಮೂರ್ತಿ ಒಳಗೆ ಬಂದವನು ಅವಾಕ್ಕಾಗಿ ನಿಂತು ಬಿಟ್ಟ ಒಂದು ಕ್ಷಣ. ಸಕಲ ಆಭರಣಗಳನ್ನು ಧರಿಸಿ, ಹೊಸ ರೇಶ್ಮೆ ಸೀರೆಯನ್ನುಟ್ಟು, ಮಲ್ಲಿಗೆ ಮಾಲೆ ಮುಡಿದು ಲಕಲಕನೆ ಹೊಳೆಯುವ ವಜ್ರದ ಕಿವಿಯೋಲೆಯನ್ನು ಧರಿಸಿ ನಿಂತಿದ್ದ ಆ ರೂಪರಾಶಿಯನ್ನು ಕಂಡು ಮುಗ್ಧನಾಗಿ ಹೋದ. ತನ್ನ ಪತ್ನಿ ಇಷ್ಟು ಚೆನ್ನಾಗಿದ್ದಾಳೆಂದು ಈವರೆಗೂ ಅವನಿಗೆ ತಿಳಿದಿರಲಿಲ್ಲವೇನೋ. ಪ್ರೇಮದ ಮಧುರಭಾವನೆಯಿಂದ ಮುದಗೊಂಡಿತು ಮನಸ್ಸು. ತೀರ ಹತ್ತಿರಕ್ಕೆ ಬಂದು ಅವಳ ಕೈಹಿಡಿದು ಕಣ್ಣಲ್ಲಿ ನಗು ತಂದುಕೊಂಡು ಹೇಳಿದ, ಅದೇನನ್ನೋ.

"ಬೇಡವೆಂದರೂ ಅತ್ತೆ ಇವೆಲ್ಲವನ್ನೂ ತೊಡಿಸಿದರು. ತೆಗೆದುಬಿಡಲಾ?" ತೊದಲಿದಳು ಅವಳು.

"ಇರಲಿ, ನನಗಿವತ್ತು ತೃಪ್ತಿಯಾಯಿತು. ಕಾಂತಿಯಿರುವಾಗ ಇವನ್ನೆಲ್ಲ ಹಾಕಿಕೊಳ್ತಾ ಇದ್ದಳು. ಆಹ್.... ಕಾಂತಿಯಂತೆ ನಿನಗೂ ಅಲಂಕರಿಸಿಕೊಳ್ಳಲು ಬರುತ್ತೆ ಅನ್ನು!"

ತಲೆ ತಗ್ಗಿಸಿದ ಆಶಾಳ ಕಣ್ಣುರೆಪ್ಪೆಗಳು ತೇವವಾದವು. ಅದನ್ನು ಗಮನಿಸದೆ, ಮೂರ್ತಿ ಪೃಥ್ವಿಯ ಕೈ ಹಿಡಿದುಕೊಳ್ಳುತ್ತ, ಹೋಗಿ ಬರುತ್ತೇವೆಂದು ತಾಯಿಗೆ ತಿಳಿಸಿ ಹೊರಟುಬಿಟ್ಟ.

"ಜಾಗ್ರತೆಯಾಗಿ ಹೋಗಿ ಬನ್ನಿ. ಟಾರ್ಚ್ ತೆಗೆದುಕೊಳ್ಳಿ, ಆಶಾ, ಪೃಥ್ವಿಯ ಕೈಬಿಡಬೇಡ. ಗಲಾಟೆ ವಿಪರೀತ ಅಲ್ಲಿ. ಪೃಥ್ವಿ, ಮಂಗನ್ಹಾಗೆ ಮಾಡಬೇಡ. ಕಳೆದುಹೋದರೆ ಸಿಗಲಾರೆ ನೋಡಿಕೋ" ಎಂದು ಎಚ್ಚರಿಕೆ ನೀಡಿದರು ರಂಗಮ್ಮ.

* * * *

ಬೇಗ ಬೇಗ ಹೆಜ್ಜೆ ಹಾಕಿದರೂ ಮಾರ್ಣಕಟ್ಟೆಯನ್ನು ಸೇರುವಾಗ ಕತ್ತಲೆಯಾಗಿತ್ತು. ಆದರೂ ಅಲ್ಲಿ ಸೇರಿದ ಜನರಿಂದಾಗಿ, ಅಲಂಕೃತ ಅಂಗಡಿಗಳ ಸಾಲು ದೀಪಗಳಿಂದಾಗಿ, ಸಿಡಿಯುವ ಸಿಡಿಮದ್ದುಗಳಿಂದ ಹಗಲಿನ ನೆನಪು ತರುತ್ತಿತ್ತು. ಕಂಚು,

ಹಿತ್ತಾಳೆ, ಬಳೆ, ರಿಬ್ಬನ್‌ಗಳ ಸಾಲು ಅಂಗಡಿ, ಮಿಠಾಯಿ ಅಂಗಡಿಗಳು ದೀಪದ ಬೆಳಕಿನಲ್ಲಿ ಶೋಭಿಸುತ್ತಿದ್ದವು. 'ಏಕ್ ರೂಪಾಯಿ ಮಾಲ್... ಒಂದೇ ಒಂದು ರೂಪಾಯಿಗೆ ಸಾಮಾನು ತೆಗೆದುಕೊಳ್ಳಿ' ಎಂದು ಕೂಗುವ ಹುಡುಗರ ಬೊಬ್ಬೆ. "ದಿಲ್ಲಿ ದೇಖೋ ಮುಂಬಯಿ ದೇಖೋ, ಮುಂಬಯಿಸೆ ಮದ್ರಾಸ್ ದೇಖೋ... ದೇಖೋ ಕಲ್ಕತ್ತ ದೇಖೋ. ದಸ್ ಪೈಸಾ ತಮಾಷಾ ದೇಖೋ' ಎಂದು ಕರೆಯುವ ವಿಚಿತ್ರ ವೇಷದವನ ಕೂಗು. ಢಂ, ಢಂ, ಎಂಬ ಸದ್ದಿನೊಂದಿಗೆ ಮಂಗನೊಡನೆ ನರ್ತನ ಮಾಡುವವ, ಎರಡು ವರ್ಷದ ಹುಡುಗಿಯನ್ನು ಡೊಂಬರಾಟದವನು ಕಸರತ್ತು ಮಾಡಿಸುವ ಕ್ರಮ ಇವುಗಳಿಂದ ತುಂಬಿಹೋಗಿತ್ತು ಜಾತ್ರೆ. ಬೀಡಿ-ಸಿಗರೇಟುಗಳ ಜೊತೆಯಲ್ಲಿ ಹೆಂಡದ ವಾಸನೆ. ಅದರೊಡನೆ ಮಲ್ಲಿಗೆಯ ಪರಿಮಳ. ಮಕ್ಕಳ ಅಳು, ದೊಡ್ಡವರ ಗಲಾಟೆ, ವ್ಯಾಪಾರಿಗಳ ಕೂಗು. ಅಲ್ಲಲ್ಲೇ ಹೊಡೆದಾಟ, ಬಡಿದಾಟ.

ಪೃಥ್ವಿಯ ಕೈಹಿಡಿದುಕೊಂಡು ದೇವಸ್ಥಾನದವರೆಗೂ ಹೆಂಡತಿಯೊಡನೆ ಹೋದ ಶಿವಮೂರ್ತಿ. ದೈವಕ್ಕೆ ಹೂ ಒಪ್ಪಿಸುವುದು ಇನ್ನೂ ಮುಗಿದಿರಲಿಲ್ಲ... ಗಲಾಟೆಯಾಗುತ್ತಲೇ ಇತ್ತು. ತಲೆಯ ಮೇಲೆ ಕಲಶವನ್ನಿರಿಸಿಕೊಂಡು ಕುಣಿಯುತ್ತಿದ್ದಾನೆ ಒಬ್ಬಾತ. ಹರಕೆ ತೀರಿಸಲು ಬಂದ ಭಕ್ತಾದಿಗಳು ಇನ್ನೂ ಇದ್ದಾರೆ ಅಲ್ಲಿಯೇ. ಅಂತೂ ಹೇಗೋ ಬ್ರಹ್ಮಲಿಂಗೇಶ್ವರನ ದರ್ಶನ ಮಾಡಿಕೊಂಡು ಪ್ರಸಾದ ಸ್ವೀಕರಿಸಿಕೊಂಡು ಹಿಂದಿರುಗಿದರು ಮೂವರೂ.

ಪೃಥ್ವಿ ತನಗೆ ಬೇಕಾದುದನ್ನೆಲ್ಲ ಕೇಳಿ ಕೇಳಿ ತೆಗೆಯಿಸಿಕೊಂಡ. ಆಶಾ ಅಂದವಾಗಿ ಕಾಣಿಸಿದ ಜೋಡುಗಿಳಿಗಳನ್ನು ತೆಗೆದುಕೊಂಡಳು ಮೇಜಿನ ಮೇಲಿರಿಸಲು.

ಓ... ಅಲ್ಲೇನು ಅದು? ದೊಡ್ಡದಾಗಿ ಡೇರೆ ಹಾಕಿದ್ದಾರೆ. ಹೊರಗೆ ಎತ್ತರವಾದ ಸ್ಟೇಜು. ಅದರ ಮೇಲೆ ಪ್ರಾಯದ ಯುವಕನೊಬ್ಬ ಅರೆಬತ್ತಲೆಯ ಮಿನಿಸ್ಕರ್ಟ್ ತೊಟ್ಟ ಹದಿನೆಂಟರ ಯುವತಿಯೊಡನೆ ಕುಣಿಯುತ್ತಿದ್ದಾನೆ. "ಕೇವಲ ಎರಡು ರೂಪಾಯಿ.... ಬನ್ನಿ, ನಿಮ್ಮ ಮನ ತಣಿಸುವ ಅಪೂರ್ವ ನೋಟ. ತನುವ ನವಿರೇಳಿಸುವ ದೃಶ್ಯ. ಕಣ್ಣಿಗೊಂದು ಹಬ್ಬ. ಬನ್ನಿ, ದಂಪತಿ ಸಮೇತರಾಗಿ ಬಂದು ನೋಡಿ ಆನಂದಿಸಿ" ಕೂಗಿಕೊಳ್ಳುತ್ತಿತ್ತು ಮೈಕ್.

"ದೇವಸ್ಥಾನದ ಎದುರು ಈ ಕೀಳು ಕ್ಯಾಬರೆ!" ಶಿವಮೂರ್ತಿ ಅಸಹ್ಯದಿಂದ ಮುಖ ತಿರುಗಿಸಿದ. "ಪೊಲೀಸರನ್ನು ಕರೆಯಿಸಿ ಒದ್ದು ಓಡಿಸಬೇಕು ಇವರನ್ನು."

ಅಷ್ಟರಲ್ಲಿ ಎದುರಾದಳು ನೀಲಿ, ತನ್ನ ಗಂಡ ಹಾಗೂ ಆರು ಮಕ್ಕಳ ಸಂಗಡ. ಹೊಸ ಬುಟ್ಟಿ ಹೂವಿನ ಸೀರೆಯನ್ನುಟ್ಟು ದೊಡ್ಡದಾಗಿ ಮುಡಿಕಟ್ಟಿ ಮಲ್ಲಿಗೆ ಸೇವಂತಿಗೆ ಮಾಲೆಗಳನ್ನು ಮುಡಿದಿದ್ದಳು. ಜಬ್ಬಣ್ಣನೂ ಎಂದಿಗಿಂತ ನೀಟಾಗಿ ಉಡುಪು ಹಾಕಿದ್ದು ಬಿಳಿಯ ಮುಂಡಾಸು ಸುತ್ತಿದ್ದ. ಮೂರ್ತಿಯನ್ನು ಕಂಡು ಹಲ್ಲು ಕಿರಿದು ನೆಲ ಮುಟ್ಟಿ ನಮಸ್ಕರಿಸಿ ತನ್ನ ಎರಡೂ ಕೈಗಳನ್ನು ಮುದ್ದೆ ಮಾಡಿ ವಿನಯ ತೋರಿಸಿದ.

"ಅಮ್ಮಾ, ತೂಗು ರಾಟೆಯಲ್ಲಿ ಕೂಕಂಡರಾ? ಎಂತ ಮಜಾ ಅಂತೀರಾ. ತಲೆ ಗಿರ್ರs ಅಂದ್ಕಂಡು ಸ್ವರ್ಗಕ್ಕೆ ಹೋದ್ಹಾಂಗೆ ಅತ್ತು."

ನೀಲಿ ಆನಂದದಲ್ಲಿ ಹೇಳುತ್ತಿದ್ದಂತೆ ಜಬ್ಬಣ್ಣನೂ ತಲೆಯಲ್ಲಾಡಿಸುತ್ತ ಅಂದ, "ನಿಮ್ಮ ಚಿಕ್ಕ ಅಯ್ಯಂಗೆ ಇಷ್ಟ ಅಲ್ವ ಅದರಲ್ಲಿ ಕೂಕಂಬಕೆ? ಪ್ರತಿ ವರ್ಷ ಜಾತ್ರೆಯಲ್ಲೂ ಕೂಕತ್ತಿದ್ದರಲ್ವಾ? ಏಯ್ ನೀಲಿ ಹೋಪನಾ? ಅಲ್ಲೊಂದು ಢೇರೆ ಹಾಕಿದ್ದೋ. ಎಂತ ಇತ್ತು ಹೋಗಿ ಕಾಂತೆ... ಬತ್ತೆ ಅಮ್ಮಾ ನಾನಿನ್ನು."

ನೀಲಿಯೂ ಹಲ್ಲು ಕಿರಿದು ಮಕ್ಕಳ ಸಂಗಡ ಆ ಡೇರೆಯತ್ತ ಹೊರಟುಹೋದಳು. ಬಣ್ಣಗಳ ದೀಪದ ಅಡಿಯಲ್ಲಿ ತೂಗುರಾಟೆ! ಆಶಾ ಮನಸ್ಸು ಹಕ್ಕಿಯಂತೆ ಹಾರಿ ಅದರಲ್ಲಿ ಕುಳಿತುಕೊಳ್ಳಲು ಬಯಸಿ ಮೂರ್ತಿಯೊಂದಿಗೆ ಹೇಳಿದಳು ತನ್ನ ಆಸೆಯನ್ನು.

"ಬೇಡ ಆಶಾ.... ಆಗಲೇ ರಾತ್ರಿಯಾಯ್ತು. ಹೋಗೋಣ. ಪೃಥ್ವಿಗೊಂದು ವಾಚು ತೆಗೀಬೇಕು" ಎಂದ.

ಆಶಾ ಮಾತನಾಡಲಿಲ್ಲ. ತುಸು ಮುಂದೆ ನಡೆದು ಜನರ ನೂಕುನುಗ್ಗಲಿನಲ್ಲಿ ಪೃಥ್ವಿ ಬಯಸಿದ ವಾಚನ್ನು ಬಳೆ ಮಾರುವಾತನಿಂದ ಪಡೆದುಕೊಂಡು ಅವನಿಗೆ ಕೊಡಿಸಿ ತಾನೂ ಹತ್ತಿರದ ಅಂಗಡಿಯಿಂದ ಸಿಗರೇಟು ತೆಗೆದುಕೊಂಡು ಬಂದ. ಆಶಾ ಅಷ್ಟು ಹೊತ್ತು ವಿದ್ಯುದ್ದೀಪಗಳ ಮಧ್ಯೆ ತಿರುಗುತ್ತಿರುವ ತೂಗುರಾಟೆಯನ್ನು ನೋಡುತ್ತಾ ಇದ್ದಳು. ಮೂರ್ತಿ ಅವಳ ಹತ್ತಿರ ಬಂದವನು ಅವಳ ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಆಸೆಯನ್ನು ಗಮನಿಸಿ ಮೆಲ್ಲನೆ ಅವಳ ಭುಜದ ಮೇಲೆ ಕೈಯ್ಯಿರಿಸುತ್ತಾ "ಅದರಲ್ಲಿ ನಿನಗೆ ಕುಳಿತುಕೊಳ್ಳುವ ಆಸೆಯೇ? ನಡಿ ಹೋಗೋಣ. ಹೆದರಬೇಡ" ಎಂದ ನಲ್ಮೆಯಲ್ಲಿ.

"ಹೆದರಿದರೆ ನೀವಿದ್ದೀರಲ್ಲ."

"ಅಯ್ಯೋ ಮಹರಾಯ್ತೀ. ನೀನು ಹೆದರಿ ಎಲ್ಲಿ ನನ್ನನ್ನೂ ತೂಗುರಾಟೆಯಿಂದ ಕೆಳಕ್ಕೆ ಬೀಳಿಸಿಬಿಡ್ತಿಯೋ ಏನೋ...."

"ಹಾಗೇನಿಲ್ಲ. ಮೂವರೂ ಒತ್ತಿಕೊಂಡು ಕುಳಿತುಕೊಳ್ಳೋಣ. ಬನ್ನಿ ಹೋಗೋಣ.... ಅರೆ, ಪೃಥ್ವಿ ಎಲ್ಲಿ?"

"ನಿನ್ನ ಹತ್ರವೇ ಇದ್ದನಲ್ಲ. ಎಲ್ಲಿ ಪೃಥ್ವಿ?" ಶಿವಮೂರ್ತಿ ಸುತ್ತಲೂ ತಿರುಗಿ ನೋಡಿದ... ಅವನೆಲ್ಲಿಯೂ ಕಾಣಲಿಲ್ಲ. "ಸರಿಯಾಗಿ ಕೈಹಿಡಿದುಕೊಳ್ಳಬಾರದಿತ್ತೇ ನೀನು? ಎಲ್ಲಿದ್ದಾನೆ ಅವನು?"

"ನಿಮ್ಮ ಸಂಗಡ ಸಿಗರೇಟಿನ ಅಂಗಡಿಗೆ ಹೋದದ್ದು ನೋಡಿದ್ದೆ. ಈಗೆಲ್ಲಿಗೆ ಹೋದ? ಈ ಜನರ ಗಲಾಟೆಯಲ್ಲಿ ಹುಡುಕೋದು ಹ್ಯಾಗೆ?"

ಶಿವಮೂರ್ತಿ ಗಾಬರಿಯಿಂದ ಆಚೆ ಈಚೆ ತಿರುಗಿದ. ಹೆಸರೆತ್ತಿ ಕರೆದ.... ಅವನೆಲ್ಲಿಯೂ ಇಲ್ಲ. "ನೀನು ಈ ಅಂಗಡಿ ಹತ್ರ ಇರು ಆಶಾ, ಈ ಗಂಟು ನಿನ್ನ ಹತ್ರ ಇರಲಿ. ಅವನೆಲ್ಲಿದ್ದಾನೆ ಅಂತ ಹುಡುಕಿಕೊಂಡು ಬರ್ತೇನೆ. ಒಂದ್ನಿಮಿಷ ನೋಡಿಕೊಳ್ಳಬಾರದಿತ್ತೇ. ಏಯ್, ಇರು ಇಲ್ಲಿಯೇ ಆಚೆ ಈಚೆ ಹೋಗಿ ನೀನೂ ಕಾಣೆಯಾಗಿ ಹೋದೀಯಾ..." ಎಂದು ಎಚ್ಚರಿಕೆಯನ್ನು ಹೇಳಿ ಜನಗಳ ಮಧ್ಯೆ ಮರೆಯಾಗಿ ಹೋದ, ಮಗನನ್ನು ಹುಡುಕುತ್ತ.

ಆಶಾ ಪೂರ್ಣ ಹೆದರಿ ಅತ್ತಿತ್ತ ನೋಡಿದಳು. ಅವನು ಹಾಕಿದ ಬಟ್ಟೆಯನ್ನು

ನೆನಪಿಗೆ ತಂದುಕೊಂಡು ಅವನಿಗಾಗಿ ತಾನೂ ಹುಡುಕಿದಳು. ಎಲ್ಲಿದ್ದಾನೆ ಅವನು? ಈ ಜನಗಳ ಮಧ್ಯೆ ಎಲ್ಲಿ ಅಡಗಿಹೋದನೋ ಆ ಪುಟ್ಟ ಕಿಲಾಡಿ...

* * * *

"ನಮಸ್ಕಾರ..." ಪರಿಚಿತ ಸ್ವರ ಕೇಳಿ ಸಹಜವಾಗಿ ತಲೆ ಎತ್ತಿ ನೋಡಿದಳು, ಕಣ್ಣುಗಳು ಮಿನುಗಿದವು ಒಂದು ಬಾರಿ.

"ಒಬ್ಬರೇ, ಇಲ್ಲೇನ್ಮಾಡ್ತಾ ಇದ್ದೀರಿ? ಶಿವಮೂರ್ತಿ ಎಲ್ಲಿ?" ಅವಳನ್ನು ದಿಟ್ಟಿಸುತ್ತ ಕೇಳಿದ ಲೋಹಿತಾಕ್ಷ.

ಆಶಾ ನಡೆದುದನ್ನೆಲ್ಲ ವಿವರಿಸುತ್ತಿದ್ದಂತೆ "ಹಾಗೋ, ಬನ್ನಿ ನಾವಿಬ್ಬರೂ ಹುಡುಕೋಣ" ಎಂದ.

ಆದರೆ ಅಂಗಡಿ ಅಂಗಡಿ ತಿರುಗಿದರೂ ನಾಲ್ಕು ವರ್ಷದ ಪೃಥ್ವಿ ಕಾಣಸಿಗಲಿಲ್ಲ. ಮನೆಯವರ ಮುದ್ದಿನ ಮಗ, ರಾಜಕುವರನಂತೆ ಬೆಳೆಸಿದ್ದಾರೆ ಅವನನ್ನು. ಈಗ ಕಾಣದೇ ಹೋದಲ್ಲಿ ಅತ್ತೆಮಾವನ ಸ್ಥಿತಿ ಏನಾದೀತು? ಈ ಸಮಾಚಾರ ಹೇಗೆ ತಲುಪಿಸಬೇಕು? "ಪೊಲೀಸರಿಗೆ ದೂರು ಕೊಡೋಣ" ಎಂದ ಲೋಹಿತಾಕ್ಷ.

"ಬೇಡ, ಹಿಂದಿರುಗಿ ನಾನು ನಿಂತಲ್ಲಿಗೇ ಹೋಗುತ್ತೇನೆ. ಅವರು ಇನ್ನು ನನ್ನನ್ನು ಹುಡುಕುವುದು ಬೇಡ." ಎಂದಳು ಹೆದರಿಕೆಯಿಂದ.

ಒಂದು ಗಂಟೆ ಕಳೆದರೂ ಶಿವಮೂರ್ತಿಯಾಗಲೀ, ಪೃಥ್ವಿಯಾಗಲೀ ಬರಲಿಲ್ಲ ಅಲ್ಲಿಗೆ. ಲೋಹಿತಾಕ್ಷ ಹರಟುತ್ತಲೇ ಇದ್ದ. ಯಾರಿಗೆ ಬೇಕಾಗಿದೆ ಅವನ ಹರಟೆ? ಗಂಟೆ ಹನ್ನೊಂದಕ್ಕೆ ಹತ್ತಿರವಾದರೂ ಮೂರ್ತಿ ಬರಲಿಲ್ಲ ಅಲ್ಲಿಗೆ. ಈ ಜನರ ಮಧ್ಯೆ ಅವನೆಲ್ಲಿಯೋ. ಮನೆಗೆ ಹೋಗೋಣವೆಂದರೆ ಮೂರು ಮೈಲು ದೂರದ ಕತ್ತಲೆಯ ದಾರಿಯಲ್ಲಿ ಹೋಗುವುದು ಹೇಗೆ? ದಾರಿಯೂ ಸರಿಯಾಗಿ ತಿಳಿದಿಲ್ಲ.

"ನಡೆಯಿರಿ, ನಿಮ್ಮನ್ನು ಮನೆಗೆ ಬಿಟ್ಟು ನಾನು ಮನೆಗೆ ಹೋಗ್ತೇನೆ." ಎಂದ ಲೋಹಿತಾಕ್ಷ.

ಮರುಮಾತಿಲ್ಲದೆ ಜಾತ್ರೆಯ ಬೆಳಕಿನಿಂದ ಸರಿದು ಕತ್ತಲೆಯ ದಾರಿಯಲ್ಲಿ ಲೋಹಿತಾಕ್ಷನ ಸಂಗಡ ಹೊರಟಳು ಮನೆಗೆ. ಹಾಗೆ ಹೊರಟಿದ್ದರೂ ಮನದಲ್ಲಿ ಮೂರ್ತಿ ಈ ಹೊತ್ತಿಗೆ ಮನೆಯಲ್ಲಿರಬಹುದೇ? ಮಗುವನ್ನು ಕರೆದುಕೊಂಡು ಬಂದರೇ? ಇನ್ನೂ ಜಾತ್ರೆಯಲ್ಲಿ ಮಗುವನ್ನು ಹುಡುಕುತ್ತಿದ್ದಾರೆಯೇ ಎಂಬ ಚಿಂತೆ. ಲೋಹಿತಾಕ್ಷನ ಕೈಯಲ್ಲಿದ್ದ ಬ್ಯಾಟರಿಯ ಪ್ರಕಾಶದಲ್ಲಿ ಕತ್ತಲೆಯ ಹಾದಿಯಲ್ಲಿ ಮುನ್ನಡೆದರು ಇಬ್ಬರೂ, ರಸ್ತೆ ದಾಟಿ ಹೆಮ್ಮರಗಳ ನಡುವೆ ಕಾಡಿನಲ್ಲಿ ಕಾಲುದಾರಿಯಲ್ಲಿ. ಕಲ್ಲು ಮುಳ್ಳುಗಳನ್ನು ತುಳಿಯುತ್ತ ನಡೆದರು ಮುಂದೆ ಮುಂದೆ.

ಲೋಹಿತಾಕ್ಷ ಹರಟುತ್ತ ಹೇಳಿದ, "ಇವತ್ತು ಊಟಕ್ಕೆ ಕರೆದಿದ್ದರು ಮೂರ್ತಿ. ಬರಲಾಗಲೇ ಇಲ್ಲ ನನಗೆ. ನನ್ನನ್ನು ಕಾಯ್ತಾ ಇರಲಿಲ್ಲವೇ? ನೀವ್ಯಾರೂ."

"ಅರ್ಧಗಂಟೆ ಕಾದರು. ಅಷ್ಟೇ." ಮಾತನಾಡುವ ಉತ್ಸಾಹದಲ್ಲಿಲ್ಲದೆ ಆಶಾ ಗೊಣಗಿದಳು. ಅದೇ ಸಮಯದಲ್ಲಿ ಕಲ್ಲನ್ನು ಎಡವಿ ಕತ್ತಲೆಯಲ್ಲಿ ಮುಗ್ಗರಿಸಿದಾಗ

ತಾನೇ ಕೈಹಿಡಿದು ಅವಳನ್ನು ಎಬ್ಬಿಸಿ "ಬೆಳಕಿನಲ್ಲಿ ಸರಿಯಾಗಿ ಬನ್ನಿ" ಎಂದ ಲೋಹಿತಾಕ್ಷ.

"ಆಮೇಲೆ ನಿಮ್ಮಿಬ್ಬರಲ್ಲಿ ಜಗಳವೇನಾದರೂ ಆಯಿತೇ?" ಕಳಕಳಿಯಿಂದ ಕೇಳಿದ ಲೋಹಿತಾಕ್ಷ.

ಆಶಾ ಮಾತನಾಡದೆ ಮುಂದುವರಿದಳು. "ಅಲ್ಲ ಆಶಾ.... ಇಷ್ಟೊಂದು ಚಿನ್ನಾಭರಣಗಳನ್ನು ಧರಿಸಿಕೊಂಡು ಜಾತ್ರೆಗೆ ಬಂದು ಒಂಟಿಯಾಗಿ ನಿಂತಿದ್ದೀರಲ್ಲ.... ನಾನು ಒಂದು ವೇಳೆ ಸಿಗದೇ ಹೋಗಿದ್ದರೆ ನೀವೇನು ಮಾಡ್ತಾ ಇದ್ದಿರಿ? ಹೇಗೆ ಹೋಗ್ತಿದ್ದೀರಿ ಮನೆಗೆ?"

ನಡೆಯುತ್ತ ಆತ ಅವಳ ಸಮೀಪಕ್ಕೆ ಬಂದ, "ನಮ್ಮಿಬ್ಬರ ಗೆಳೆತನದ ಸಂಕೋಲೆ ತುಂಬ ಬಿಗಿಯಾಗಿದ್ದಿರಬೇಕು. ಆದುದರಿಂದಲೇ ಈ ಜಾತ್ರೆಯಲ್ಲಿ ಒಂಟಿಯಾಗಿ ಸಿಕ್ಕಿದ್ದೀರಿ. ಆಹ್, ಅದೂ ಈ ಕಣ್ಣು ಕೋರೈಸುವ ಸುಂದರ ಉಡುಪಿನಲ್ಲಿ! ಈ ಆಭರಣಗಳ ಪ್ರಕಾಶಗಳ ಬೆಳಕಿನಲ್ಲಿ!!"

ಅವನ ಸ್ವರದಲ್ಲಿ ಆತ್ಮೀಯತೆಯ ಸಂಗಡ ಉನ್ಮಾದವೂ ಅಡಗಿದೆ ಎಂದೆನಿಸಿತು ಆಶಾಗೆ.

"ನಿಜಕ್ಕೂ ನಿಮ್ಮ ಗೆಳೆತನಕ್ಕೆ ನಾನು ಯೋಗ್ಯನಲ್ಲ ಎಂದೆನಿಸುತ್ತೆ." ಅವನ ಧ್ವನಿ ಭಾರವಾಯಿತು, "ನೀವೋ ದೊಡ್ಡ ಶ್ರೀಮಂತರ ಪತ್ನಿ. ನಾನೋ ಹುಟ್ಟು ದರಿದ್ರ."

"ಗೆಳೆತನಕ್ಕೆ ಅಂತಸ್ತನ್ನು ಹೋಲಿಸಬೇಡಿ.... ಪರಸ್ಪರ ಪ್ರೀತಿ, ಆತ್ಮೀಯತೆ ಇರಬೇಕು."

"ನಿಜ ನಿಮ್ಮ ಮಾತು. ನನಗೆ ಸಿಕ್ಕಿದ ಆತ್ಮೀಯರೆಂದರೆ ನೀವು ಒಬ್ಬರೇ. ನನ್ನ ಒರಟು ಸ್ವಭಾವವೋ, ಕುರೂಪ ಮುಖ್ಯ ಕಾರಣವೋ ತಿಳಿಯದು, ಯಾರೂ ನನ್ನ ಸಂಗ ಬಯಸಲಿಲ್ಲ. ಪ್ರತಿದಿನವೂ ಆತ್ಮೀಯರಿಗಾಗಿ ಹುಡುಕುತ್ತಿದ್ದೆ..... ಇದೋ ಈಗ ಸಿಕ್ಕಿದ್ದೀರಿ ನೀವು. ನಿಮ್ಮ ವ್ಯಕ್ತಿತ್ವ ದಿನೇ ದಿನೇ ನನ್ನನ್ನು ನಿಮ್ಮ ಹತ್ತಿರಕ್ಕೆ ಎಳೆದುಕೊಳ್ಳುತ್ತಾ ಇದೆ" ಮಾತನಾಡುತ್ತಾ ಅವನ ಎಡಗೈ ಅವಳ ಬಲಹಸ್ತವನ್ನು ಮೃದುವಾಗಿ ಒತ್ತಿತು. ನಡೆಯುತ್ತಿದ್ದ ಅವಳು ಏನೂ ಹೇಳಲಿಲ್ಲ.

ನಿಧಾನವಾಗಿ ಅವನ ಕೈ ಸೊಂಟವನ್ನು ಮೃದುವಾಗಿ ಬಳಸಿಕೊಂಡಿತು. ಈಗ ಆ ಎರಡೂ ದೇಹಿಗಳು ಹತ್ತಿರ, ತೀರಾ ಹತ್ತಿರ. ಒಬ್ಬರನ್ನೊಬ್ಬರು ಒತ್ತಿಕೊಂಡು! ನಾಲ್ಕು ಹೆಜ್ಜೆಗಳಷ್ಟು ಮುಂದೆ ಬಂದಿದ್ದ ಆಶಾಳಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ ಅವನ ಬಲಗೈ ಅವಳ ಬಲತೋಳನ್ನು ತಬ್ಬಿ ಹಿಡಿಯಿತು.

ಪರಪುರುಷನ ಸಾಮೀಪ್ಯ, ಹೊಸ ಅನುಭವದ ರೋಮಾಂಚನ, ಗಾಬರಿಗೊಂಡಿದ್ದರೂ ಕತ್ತಲೆಯಲ್ಲಿ. ಕೆಂಪಾದ ಕೆನ್ನೆಯ ಮೇಲೆ 'ಆಹ್' ಎಂಬ ಉದ್ಗಾರದೊಡನೆ ಬಿಸಿ ಸ್ಪರ್ಶ.

ಹಾವು ಮೆಟ್ಟಿದವಳಂತೆ ಸರ್ರನೆ ಸಿಡಿದು ದೂರ ಸರಿದಳು ಆಶಾ.... "ಛೀ ಏನಿದು? ನೀಚ ನೀಚ..." ಕೂಗಿದಳು ಅವಳು. ಅದರ ಸಂಗಡ ಹೆಜ್ಜೆಯಿಡುವಾಗ

ಹೆಚ್ಚು ಕಡಿಮೆಯಾಗಿ ಜೋರಾಗಿ ಮುಗ್ಗುರಿಸಿದಳು ಮುಂದಕ್ಕೆ. ಲೋಹಿತಾಕ್ಷ ಮತ್ತೊಮ್ಮೆ ಅವಳತ್ತ ಬಗ್ಗಿ ಬಲತೋಳನ್ನು ಹಿಡಿದು ಎಬ್ಬಿಸುತ್ತ,

"ನಾನು ನೀಚನಾದರೂ ನನ್ನ ಸಹಾಯ ನಿಮಗೆ ಈ ದಿನ ಬೇಕಿತ್ತು ಅಲ್ಲವೇ?" ಎಂದು ಕೇಳಿದ ತೀಕ್ಷ್ಣವಾಗಿ.

ಅವನ ಹಿಡಿತದಿಂದ ಬಿಡಿಸಿಕೊಳ್ಳಲೆತ್ನಿಸುತ್ತ ಅವಳು ಚೀರಿದಳು, "ಬಿಡು ನನ್ನನ್ನು. ನನ್ನ ಸಹವಾಸದ, ನನ್ನ ಗೆಳೆತನದ ದುರುಪಯೋಗವನ್ನು ಮಾಡಿಕೊಳ್ಳಬೇಡ... ಬಿಟ್ಟುಬಿಡು."

ವಿಲಕ್ಷಣವಾದ ನಗೆ ಮಾರ್ದನಿಗೊಂಡಿತು ಕಾಡಿನಲ್ಲಿ. ಎಂದಿನಂತಿರಲಿಲ್ಲ ಆ ನಗೆ. ದಟ್ಟವಾದ ಕತ್ತಲೆಯಲ್ಲಿ ಅವನು ಕಾಣಿಸದೇ ಇದ್ದರೂ ತನ್ನ ಹತ್ತಿರವೇ ನಿಂತಿದ್ದಾನೆ. ಅಯ್ಯೋ ಪ್ರಾರಬ್ಧವೇ. ಈ ಮೃಗದ ಜೊತೆ ತಾನೇಕೆ ಬಂದೆ? ಸುರಕ್ಷಿತವಾಗಿ ಮನೆಯನ್ನು ತಲುಪುತ್ತೇನೆಯೋ ಇಲ್ಲವೋ.... ಅಷ್ಟರಲ್ಲಿ ಬ್ಯಾಟರಿಯ ತೀಕ್ಷ್ಣ ಪ್ರಕಾಶ ಅವಳ ಅಂಗಾಂಗಳ ಮೇಲೆ, ಮುಖದ ಮೇಲೆ ಚೆಲ್ಲಿತು.

"ಬೇಡ ಲೋಹಿತ್..." ಯಾಚನೆಯ ಸ್ವರದಲ್ಲಿ ನಡುಗುತ್ತ ಅಂದಳು, "ಈ ಕಗ್ಗಾಡಿನಲ್ಲಿ ನಾನೊಬ್ಬಳೇ ಸಿಕ್ಕಿದ್ದೇನೆಂದು ನನ್ನನ್ನೇನೂ ಮಾಡಬೇಡ. ನಿನ್ನ ಕಾಲಿಗೆ ಬೀಳ್ತೇನೆ. ನಿನ್ನ ದಮ್ಮಯ್ಯ.... ಬೇಕಿದ್ದರೆ ಇಕೋ ನನ್ನ ಮೈಮೇಲಿರುವ ಆಭರಣಗಳನ್ನೆಲ್ಲ ತೆಗೆದುಕೋ...!"

ಮತ್ತೊಮ್ಮೆ ವಿಲಕ್ಷಣವಾಗಿ ನಕ್ಕ ಅವನು. ಅವಳ ಕೆನ್ನೆಯನ್ನು ಮೃದುವಾಗಿ ತಟ್ಟಿದ, "ನನ್ನನ್ನು ಹುಚ್ಚನೆಂದು ತಿಳಿದಿದ್ದೀಯಾ ಆಶಾ. ನನಗೂ ಬುದ್ಧಿಯಿದೆ. ನನಗೆ ನಿನ್ನ ಚಿನ್ನಾಭರಣಗಳ ಮೇಲಿನ ಆಸೆಯೇ? ಅದಕ್ಕೋಸ್ಕರ ನಮ್ಮಿಬ್ಬರಲ್ಲಿ ಸ್ನೇಹ ವೃದ್ಧಿಯಾಯಿತೇ? ಆಭರಣಗಳಿಗಿಂತಲೂ ಹೆಚ್ಚು ಬೆಲೆಬಾಳುವ ನೀನೇ ಈಗ ನನ್ನ ಕೈಯ್ಯಲ್ಲಿ ಸಿಕ್ಕಿರುವಾಗ ನನಗೆ ನಿನ್ನ ಚಿನ್ನಾಭರಣಗಳ ಮೇಲೆ ಆಸೆಯೇಕೆ...."

"ಲೋಹಿತ್" ಇಬ್ಬರ ಮಾತೂ ಏಕವಚನಕ್ಕೆ ತಿರುಗಿತು.

"ಹೂಂ ಆಶಾ, ನನಗಾಗಿ ನೀನು ಹೆದರಬೇಕಿಲ್ಲ. ನಾನಾಗಿಯೇ ನಿನ್ನ ಕೂದಲನ್ನೂ ಸೋಂಕಲಾರೆ. ನಡೆ ಮನೆಗೆ ಹೋಗೋಣ." ಎಂದವನು ಬ್ಯಾಟರಿಯ ಬೆಳಕನ್ನು ಕಾಲುದಾರಿಯತ್ತ ಹಾಯಿಸಿದ.

ಉಪಾಯವಿಲ್ಲದೆ ಅವನನ್ನು ಹಿಂಬಾಲಿಸಿದಳು ಆಶಾ. ಮನಸ್ಸು ಈಗಲೂ ಅವನು ತನಗೇನಾದರೂ ಮಾಡಿಬಿಡುತ್ತಾನೋ ಎಂದು ಹೆದರುತ್ತಲಿತ್ತು. ನಡೆಯುತ್ತ ಆತನೆಂದ. "ನಿನ್ನಂತಹ ರೂಪರಾಶಿ ಸಿಕ್ಕಿದ್ದರೂ ಮೂರ್ತಿಗೆ ಕಾಲಕಸವಾಗಿ ಹೋಗಿದೆ. ನಾನಾಗಿದ್ದರೆ ಎಣೆಯಿಲ್ಲದಷ್ಟು ಸಂತೋಷದಿಂದ ತಲೆ ಮೇಲಿಟ್ಟು ಪೂಜಿಸ್ತಾ ಇದ್ದೆ. ಆದರೇನು... ಹೋಗಲಿ ಬಿಡು, ದಕ್ಕದ ವಸ್ತುವಿಗೆ ಆಸೆ ಪಡಬಾರದು."

ಮನೆ ಹತ್ತಿರವಾದಂತೆ ಆಶಾಗೆ ಅದೇನೋ ಧೈರ್ಯ. ಮನೆಯ ಗೇಟು ಬಂದಾಕ್ಷಣ ಲೋಹಿತಾಕ್ಷ ಸರ್ರನೆ ಅವಳತ್ತ ತಿರುಗಿ ಎರಡೂ ಭುಜಗಳನ್ನು ಒತ್ತಿಹಿಡಿದು "ಪ್ಲೀಸ್ ಆಶಾ, ನನ್ನನ್ನು ಕೆಟ್ಟವನೆಂದು ಈಗಲೂ ತಿಳಿಯುತ್ತೀಯಾ?" ಎಂದು ಕೇಳಿದ.

"ಇಲ್ಲ."

"ಮೊದಲಿನ ಸ್ನೇಹದಂತೆ ಬರ್‍ತಾ ಇರಬೇಕು ಮನೆಗೆ. ಆಹಾ ಎಷ್ಟು ಒಳ್ಳೆಯವಳು" ಎಂದೆಂದು ಅವಳತ್ತ ಬಾಗಿ ಹಣೆಯನ್ನು ಚುಂಬಿಸಿದ, "ನಡಿ ಮನೆಗೆ.... ದೀಪ ಉರೀತಾ ಇದೆ ಮನೆಯಲ್ಲಿ."

ಸಣ್ಣಗೆ ನಡುಗಿಹೋದಳು ಆಶಾ. ಮನೆಗೆ ಬಂದಾಗ ಪೃಥ್ವಿಯಾಗಲೀ, ಮೂರ್ತಿಯಾಗಲೀ ಬಂದಿಲ್ಲವೆಂದು ತಿಳಿಯಿತು. ಒಬ್ಬಂಟಿಗಳಾಗಿ ಲೋಹಿತಾಕ್ಷನ ಸಂಗಡ ಸೊಸೆಯನ್ನು ಕಂಡು, ಅವಳಿಂದ ಎಲ್ಲಾ ವಿಚಾರ ತಿಳಿದು, ಹೌಹಾರಿ ಹೋ ಎಂದು ಅತ್ತುಬಿಟ್ಟರು ವೃದ್ಧ ದಂಪತಿಗಳು.

"ಹೆದರಬೇಡಿ, ಇವರೊಬ್ಬರೇ ಇದ್ದರು, ಬಿಟ್ಟು ಬರೋಣ ಎಂದು ಬಂದೆ... ಈಗಲೇ ಹೋಗಿ ನಿಮ್ಮ ಮೊಮ್ಮಗನನ್ನು ಹುಡುಕಿ ತರ್‍ತೇನೆ" ಎಂದೆಂದು ಲೋಹಿತಾಕ್ಷ ಆಶಾಳನ್ನು ಬಿಟ್ಟು ಹೊರಟುಹೋದ.

ಅರ್ಧ ಗಂಟೆಯ ನಂತರ ಬಂದ ಶಿವಮೂರ್ತಿ, ಪೃಥ್ವಿಯನ್ನು ಕಾಣದೆ, ನಿಂತ ಸ್ಥಳದಲ್ಲಿ ಹೆಂಡತಿಯೂ ಸಿಗದೆ ಅತ್ಯಂತ ವ್ಯಾಕುಲಚಿತ್ತನಾಗಿ ಬಂದಿದ್ದ. ಇಲ್ಲಿ ಹೆಂಡತಿಯೊಬ್ಬಳನ್ನೇ ಕಂಡು ರೇಗಿ ಬಾಯಿಗೆ ಬಂದಂತೆ ಕೂಗಾಡಿ "ನಿನ್ನಿಂದಲೇ ಇಷ್ಟೆಲ್ಲ ಆಯ್ತು" ಎಂದ.

"ಸದ್ಯ ಒಬ್ಬಳಾದರೂ ಮನೆಗೆ ಬಂದಿದ್ದಾಳಲ್ಲ" ಎಂದು ತಮ್ಮಯ್ಯನವರೇ ಸಮಾಧಾನಪಡಿಸಿದರು. ಇನ್ನು ಮಗನನ್ನು ಎಲ್ಲಿ ಹುಡುಕುವುದು? ಇನ್ನೊಮ್ಮೆ ನೋಡಿ ಬರೋಣವೆಂದು ಮೂರ್ತಿ ಹಾಗೂ ತಮ್ಮಯ್ಯ ಒಟ್ಟಾಗಿಯೇ ನಡೆದರು ಜಾತ್ರೆಯತ್ತ.

ಮನೆಯಲ್ಲಿ ಯಾರಿಗೂ ನಿದ್ರೆಯಿಲ್ಲ. ತಪ್ಪೆಲ್ಲವೂ ಆಶಾಳದ್ದೇ? ಅವಳಿಂದಾಗಿಯೇ ಪೃಥ್ವಿ ಕಳೆದುಹೋದನೇ? ರಂಗಮ್ಮ ಹಣೆಯನ್ನು ಗೋಡೆಗೆ ಕುಟ್ಟಿಕೊಳ್ಳುತ್ತ ದೇವರಿಗೆ ಹರಕೆ ಹೇಳುತ್ತ ರೋದಿಸಿದರು.

ಎರಡು ತಾಸುಗಳ ನಂತರ ಹಿಂದಿರುಗಿ ಬಂದ ತಂದೆ-ಮಗನ ಮುಖದಲ್ಲಿ ನಿರ್ಜೀವ ಕಳೆ. ಸೋತು ಸುಸ್ತಾಗಿ ಗೋಡೆಯನ್ನೊರಗಿ ಕುಳಿತಾಗ ಇಬ್ಬರ ಕಣ್ಣಗಳಲ್ಲಿಯೂ ನೀರು. ಆಶಾ ಕಲ್ಲುಗೊಂಬೆಯಂತೆ ಕುಳಿತಿದ್ದಳು. ಗೋಡೆಯನ್ನೊರಗಿಕೊಂಡು ನಿಜವಾಗಿಯೂ ತನ್ನ ಮಗನಂತೆ ಆಕೆ ಪೃಥ್ವಿಯನ್ನು ಜಾಗ್ರತೆಯಾಗಿ ಕರೆದೊಯ್ದು ಜಾತ್ರೆಯಲ್ಲಿ ತಿರುಗಿದ್ದರೂ, ಈಗ ಎಲ್ಲ ದೂರೂ ಅವಳ ಮೇಲೆ...!

ಎಲ್ಲರಿಗೂ ಏನು ಮಾಡುವುದೆಂದೇ ತಿಳಿಯದು. ದುಃಖದಿಂದ ಒಬ್ಬರಿಗೊಬ್ಬರು ಏನೂ ಸಮಾಧಾನ ಹೇಳಲಾರರು. ರಾತ್ರಿ ಎರಡೂವರೆ ನಂತರ ಬಾಗಿಲು ತಟ್ಟಿದ ಸದ್ದು. ಇನ್ನೂ ಎಚ್ಚರವಾಗಿದ್ದ ತಮ್ಮಯ್ಯ ಓಡಿದರು ಬಾಗಿಲತ್ತ. ಬಾಗಿಲನ್ನು ತೆರೆದಾಗ-ಅಲ್ಲಿ ನಿಂತಿದ್ದಾನೆ ಲೋಹಿತಾಕ್ಷ; ಅವನ ಹೆಗಲ ಮೇಲೆ ಪೃಥ್ವಿ!

ಆ ಕ್ಷಣದಲ್ಲಿ ಸಂತೋಷದ ಮಹಾಪೂರ ಉಕ್ಕಿ ಹರಿದು ಅಲ್ಲಿಯ ದುಃಖವನ್ನು ಕೊಚ್ಚಿಕೊಂಡುಹೋಯಿತು. ಜಾತ್ರೆಯಲ್ಲೆಲ್ಲ ತಿರುಗಿ ಬಹಳ ಕಷ್ಟಪಟ್ಟು ಪೃಥ್ವಿಯನ್ನು ಹುಡುಕಿ ತಂದ ಈತನಿಗೆ ಯಾವ ರೀತಿಯ ಕೃತಜ್ಞತೆಯನ್ನು ಸಲ್ಲಿಸಬೇಕೋ ಯಾರಿಗೂ ತಿಳಿಯದಾಯಿತು. ಮೂರ್ತಿ ಅವನ ಕೈ ಕುಲುಕುತ್ತ "ನಿಮ್ಮ ಉಪಕಾರ

ಮರೆಯುವಂತಿಲ್ಲ. ಹೆಂಡತಿಯನ್ನೂ, ಮಗನನ್ನೂ ಸುರಕ್ಷಿತವಾಗಿ ಮನೆಗೆ ತಂದು ತಲುಪಿಸಿದ್ದಕ್ಕೆ ಧನ್ಯವಾದಗಳು.”

ತಮ್ಮಯ್ಯನವರಿಗೆ ಸಂತೋಷದಲ್ಲಿ ಕಟ್ಟಿಹೋಗಿತ್ತು ಬಾಯಿ. ಆದರೂ ಬಹಳ ಕಷ್ಟದಲ್ಲಿ ಅಂದರು, “ನೀನು ಮಾಡಿದ ಉಪಕಾರ ಎಂದೆಂದಿಗೂ ಮರೆಯುವಂತಿಲ್ಲ...”

೬

ಜಾತ್ರೆ ಕಳೆದು ಹಲವು ದಿನಗಳು ಸಂದುಹೋದರೂ ಆಶಾ ಅಂದಿನ ಆ ರಾತ್ರಿಯ ಹೊತ್ತು ತಾನು ಲೋಹಿತಾಕ್ಷನ ಸಂಗಡ ಕಾಡುದಾರಿಯಲ್ಲಿ ಒಬ್ಬಳೇ ಬಂದುದನ್ನು ಮರೆಯಲಿಲ್ಲ. ಅವನ ಸ್ನೇಹದ ಪರಿಣಾಮ ಹೀಗೆ ತಿರುಗಿತೇ? ವಂಡ್ಸೆಯ ಹಳ್ಳಿಯ ಜೀವನದಲ್ಲಿ ಸ್ನೇಹಿತನಾಗಿ ಸಿಕ್ಕಿದ್ದು ಅವನೊಬ್ಬನೇ. ಆದರೆ ಅದರ ದುರುಪಯೋಗವನ್ನು ಮಾಡಿಕೊಳ್ಳುವುದರಲ್ಲಿದ್ದ ಅವನು. ನೀಚ...! ತಾನೇನು ಅವನನ್ನು ತೀರಾ ಹತ್ತಿರಕ್ಕೆ ಬರಮಾಡಿಕೊಂಡಿರಲಿಲ್ಲ. ಹದ ಮೀರಿ ಎಲ್ಲಿಯೂ ಮಾತನಾಡಿರಲಿಲ್ಲ. ಆದರೂ ಯಾಕೆ ಹೀಗಾಯಿತು?

ಅನಂತರದ ದಿನಗಳಲ್ಲಿ ಅವನು ಮನೆಗೆ ಬಂದಾಗ, ಹೊಳೆದಡದಲ್ಲಿ ಕಾಣಿಸಿದಾಗ ಒಂದು ಮಾತನ್ನೂ ಆಡದೆ ಎದ್ದು ಹೋಗಲಾರಂಭಿಸಿದಳು. ಅವನ ಸಿಳ್ಳಿನ ಧ್ವನಿ ಕಾಡಿನಲ್ಲಿ ಮಾರ್ದನಿಗೊಂಡಾಗ ಇವಳ ಹೃದಯ ಬಡಿತವೂ ಹೆಚ್ಚುತ್ತಿತ್ತು. ಅದೇಕೋ ಕದಡಿಹೋಯಿತು, ಮನದ ಶಾಂತಿ.

ಹೊಲಿಗೆ ಕ್ಲಾಸ್‌ಗೆಂದು ಕುಂದಾಪುರಕ್ಕೆ ಹೋದಾಗ ಎರಡೂ ಬಾರಿ ಪೇಟೆಯ ಮಧ್ಯದಲ್ಲೇ ಅವನ ಭೇಟಿ. “ಯಾಕೆ ಆಶಾ, ನನ್ನನ್ನು ಕಂಡು ಹೆದರಿ ಓಡಿ ಹೋಗ್ತಾ ಇದ್ದೀ? ನನ್ನಿಂದೇನಾದರೂ ಪ್ರಮಾದವಾಯಿತೇ?” ಎಂದು ಕೇಳಿದ ಆತ್ಮೀಯವಾಗಿ. “ಬಾ, ಎಲ್ಲಿಯಾದರೂ ದೂರ ಹೋಗೋಣ, ಬೀಚ್‌ನಲ್ಲಿ ಕುಳಿತುಕೊಳ್ಳೋಣ” ಎಂದು ಕರೆದ.

“ಇಲ್ಲ ಲೋಹಿತ್.... ಇನ್ನು ನಾವಿಬ್ಬರೂ ಭೇಟಿಯಾಗುವುದನ್ನು ನಿಲ್ಲಿಸಿಬಿಡೋಣ. ಇದರಿಂದ ಬರುವ ಆತಂಕಗಳೇ ಹೆಚ್ಚು...” ಎಂದಳಾಕೆ.

ಆದರೂ ಅವನೊಡನೆ ತಾನು ಅವನು ಕರೆದಲ್ಲಿಗೆ ಹೋದಂತೆಯೂ, ಮರದಂತೆ ಬೀಚ್‌ನಲ್ಲಿ ಕಾಲುಚಾಚಿ ಕುಳಿತಂತೆಯೂ, ಸಿನಿಮಾ ಥಿಯೇಟರಿನಲ್ಲಿ ಜೊತೆಯಾಗಿ ಹೋದಂತೆಯೂ ಮನಸ್ಸಿಗೆ ಅನ್ನಿಸಿದಾಗ ಅಸಹ್ಯದಿಂದ ತಾನೇ ಮುಖ ತಿರುಗಿಸಿಕೊಂಡಳು, ಛೇ, ಎಂತಹ ಹುಚ್ಚು ಕಲ್ಪನೆ!

ಈ ಸಲದ ಬೇಸಿಗೆಯ ರಜೆಯಲ್ಲಿ ಶಿವಮೂರ್ತಿ ಅವಳನ್ನು ಎಲ್ಲಿಗೂ ಕರೆದೊಯ್ಯಲಿಲ್ಲ. ಆಶಾ ತಾನೇ ಬೇಸರ ನೀಗಲು ಜಗನ್ನಾಥ ಬಂದ ಸಮಯವನ್ನು

ನೋಡಿಕೊಂಡು ಮಂಗಳೂರಿಗೆ ಹೊರಟು ಬಂದಳು. ಬಂಧಿಸಲ್ಪಟ್ಟ ಹಕ್ಕಿಯನ್ನು ಹಾರಲು ಬಿಟ್ಟಂತೆ ಸ್ವಚ್ಛಂದವಾಗಿ ಹಾರಿ ಹಾರಿ ಪೇಟೆ ತಿರುಗಿದಳು. ಸೀರೆಯ ಮೇಲೆ ಸೀರೆ ಬದಲಾಯಿಸಿ, ಅಂದವಾಗಿ ಅಲಂಕರಿಸಿಕೊಂಡು ಮೆರೆದಳು ಊರಲ್ಲೆಲ್ಲ. ಮನ ಬಂದುದನ್ನು ಕೊಂಡಳು, ಅನುಭವಿಸಿದಳು..... ಉಂಡು ಹಾಯಾಗಿ ನಲಿದಳು.

ಹಾಗಿದ್ದರೂ ಅದೇನೋ ವ್ಯಥೆ ಮುಖದ ಮೇಲೆ. ತನ್ನಲ್ಲೇ ಯೋಚನೆ.... ಕಿವಿಗಳಿಗೆ ಸುಮ್ಮನೆ ಹತ್ತಿ ತುಂಬಿಸಿಕೊಳ್ಳುತ್ತ ಗಂಭೀರಳಾಗಿ ಕುಳಿತುಬಿಡುತ್ತಾಳೆ ಎಲ್ಲಿಯೋ ನೋಡುತ್ತ.

ಅದೊಂದು ದಿನ ಜಗನ್ನಾಥ Ghost Stories ಎಂಬ ಇಂಗ್ಲೀಷ್ ಪುಸ್ತಕವನ್ನು ಓದಲು ಕೊಟ್ಟಿದ್ದ ಆಶಾಗೆ. ಅದನ್ನು ಓದಿ ಮುಗಿಸುತ್ತ ಅವಳು ಸಂಶಯದಿಂದ ಪ್ರಶ್ನಿಸಿದಳು ಜಗನ್ನಾಥನನ್ನು.

"ಇವುಗಳಲ್ಲಿ ಬರುವ ಕಥೆಗಳು ನಿಜವಾಗಿಯೂ ನಡೆದ ಕಥೆಗಳೇ?"

"ಹಾಗೆ ನಡೆದ ಕಥೆಯೆಂದು ಲೇಖಕರು ಹೇಳಿದ್ದಾರಲ್ಲ..."

"ಹಾಗಾದರೆ ಭೂತಗಳೂ ಇದ್ದಾವೆ ಅನ್ನು. ನೀನು ನಂಬ್ತೀಯಾ ಭೂತಗಳನ್ನು?"

"ನನಗೇನೋ ಅದರಲ್ಲೆಲ್ಲ ನಂಬಿಕೆಯಿಲ್ಲ. ಅರ್ಧ ಆಯುಷ್ಯದಲ್ಲಿಯೋ, ಅಪಘಾತದಲ್ಲಿಯೋ ತೀರಿಹೋದವರು ಭೂತಪ್ರೇತಗಳಾಗ್ತಾರೆ ಎನ್ನುವುದು ಮನುಷ್ಯ ಕಲ್ಪನೆ."

"ನಮ್ಮ ಮನೆಯಲ್ಲಿಯೂ ಇದೇ ಭಾವನೆ ಇದೆ ಎಲ್ಲರಿಗೂ. ಅರ್ಧ ಆಯುಷ್ಯದಲ್ಲಿ ಸತ್ತ ಕಾಂತಿಗೆ ಆಸೆ ವಿಪರೀತ ಇತ್ತಂತೆ. ಅವಳೀಗ ಛಾಯಾ ರೂಪದಲ್ಲಿ ಮನೆ ಸುತ್ತಲೂ ತಿರುಗ್ತಾ ಇದ್ದಾಳಂತೆ..."

"ಹೀಕ್ ಸುಳ್ಳು ಎಲ್ಲಾ...." ಗೊಳ್ಳನೆ ನಕ್ಕ ಜಗನ್ನಾಥ.

"ಮೂರ್ತಿ ರಾತ್ರಿ ಯಾವಾಗಲೂ, ಇದೇ ವಿಚಾರ ಹೇಳ್ತಿದ್ದಾರೆ ಜಗ್ಗೂ..... 'ನೋಡಿದ್ಯಾ, ಕಾಂತಿ ಇಲ್ಲೇ ನನ್ನ ಹತ್ರ ಇದ್ದು ನನ್ನನ್ನೇ ನೋಡ್ತಾ ಇದ್ದಾಳೆ. ಇದೇ ಕೋಣೆಯಲ್ಲಿ ಮಂಚದಹತ್ರ ನಿಂತು ನಮ್ಮಿಬ್ಬರನ್ನು ನೋಡ್ತಿದ್ದಾಳೆ...' ಎನ್ನುತ್ತಾರೆ..."

"ಅವನ ಭ್ರಮೆ ಆಶಾ" ಜಗನ್ನಾಥ ಹೇಳಿದ, "ಎಲ್ಲೋ ತಮಾಷೆಗಾಗಿ ಹೇಳ್ತಿರಬೇಕು."

"ತಮಾಷೆಯ ಮಾತಲ್ಲ ಇದು. ನನಗೂ ಎಷ್ಟೋ ಬಾರಿ ಮಹಡಿ ಕೋಣೆಯಲ್ಲಿ ಒಬ್ಬಳೇ ಇದ್ದಾಗ ಯಾರೋ ನನ್ನ ಹತ್ರ ಇದ್ದಾಗೆ ಭಾಸವಾಗುತ್ತೆ. ನಾನಂತೂ ದಿನೇ ದಿನೇ ಹೆದರಿ ಅರ್ಧವಾಗ್ತಾ ಇದ್ದೇನೆ."

"ಇಂತಹುದನ್ನು ಮನಸ್ಸಿನಲ್ಲಿ ಯಾಕೆ ತುಂಬಿಸಿಕೊಂಡೆ? ಅಲ್ಲ, ಸತ್ತವರೆಲ್ಲ ಭೂತಗಳಾಗ್ತಾ ಇದ್ದರೆ ಈ ಪ್ರಪಂಚದಲ್ಲಿ ಮನುಷ್ಯರಿಗಿಂತ ಭೂತಗಳೇ ಹೆಚ್ಚು ತುಂಬ್ತಾ ಇದ್ದವು..."

ಆಶಾ ಗಲಿಬಿಲಿಯಿಂದ ನೋಡಿದಳು ಅವನತ್ತ. "ಇಲ್ಲ... ಕಾಂತಿ ವಿಷಯದಲ್ಲಿ ನಂಗಿನ್ನೂ ಅನುಮಾನ.... ಎಷ್ಟೋ ಬಾರಿ ಮೂರ್ತಿ ಹತ್ರ ಹೇಳಿದಾಗ ಸುಮ್ಮನೆ

ನಕ್ಕುಬಿಟ್ಟರು.... ನನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲ. ಅವರಿನ್ನೂ... ಕಾಂತಿಯನ್ನು ಮರೆಯುವುದೂ ಇಲ್ಲ."

"ಅದಕ್ಕಿರುವ ಉಪಾಯ ಹೇಳಿಕೊಡಲಾ? ಹೀಗೆ ಹೇಳಿದೆನೆಂದು ಬೇಸರಿಸಬೇಡ. ಅವನನ್ನು ಅರ್ಥಮಾಡಿಕೋ. ನಿನ್ನ ಕರ್ತವ್ಯಗಳನ್ನು ನೀನು ಮಾಡು. ಕಾಂತಿಯನ್ನು ಹೊಗಳಿದ ಮಾತಿಗೆ ಬೆಲೆ ಕೊಡಬೇಡ ಆಶಾ.... ನಿನ್ನ ಮನಸ್ಸು ಗಟ್ಟಿಯಾಗಿರಲಿ...."

"ನನ್ನ ಮನಸ್ಸು ಕಲ್ಲು ಬಂಡೆಯ ಹಾಗಿದೆ" ಖಲ್ ಖಲ್ ಎಂದು ಸೆರಗಿನಲ್ಲಿ ಮುಖ ಮುಚ್ಚಿ ಜೋರಾಗಿ ನಗುತ್ತ ಅಂದಳು ಆಶಾ, "ಮನೆಯವರ ಮನಸ್ಸು ಗಟ್ಟಿಯಿಲ್ಲ. ಅವರಿಗೆಲ್ಲರಿಗೂ ಕಾಂತಿಯ ಹುಚ್ಚು...! ಆ ಹುಚ್ಚು ಇಳಿದಾಗಲೇ ನಾನು ಸುಖಿ....!

* * * *

ಇನ್ನೂ ಹತ್ತುದಿನ ಹಾಯಾಗಿರಬೇಕೆಂದು ಯೋಚಿಸಿದ ಆಶಾಗೆ ಇದ್ದಕ್ಕಿದ್ದಂತೆ ಒಂದು ದಿನ ವಂಡ್ಸೆಯಿಂದ ಟೆಲಿಗ್ರಾಂ ಬಂದಿತು, "ಶಿವಮೂರ್ತಿಗೆ ಜ್ವರ, ತಕ್ಷಣ ಹೊರಟುಬಾ" ಎಂದು.

ನಿಂತ ಕಾಲಿನಲ್ಲಿಯೇ ತನ್ನ ಮಾವ ಪರಮೇಶ್ವರಯ್ಯನವರ ಸಂಗಡ ವಂಡ್ಸೆಗೆ ಹೊರಟುಬಿಟ್ಟಳು ಆಶಾ. ಎಂತ ಜ್ವರವೋ ಹೇಗಿದ್ದಾರೋ ಎಂಬ ಆತಂಕ ಬೇರೆ.

ಎಡೆಬಿಡದೇ ಬಂದ ಆರು ದಿನಗಳ ಜ್ವರದಲ್ಲಿ ತೀರಾ ಸೋತುಹೋಗಿದ್ದ ಶಿವಮೂರ್ತಿ. ಆಶಾ ಇಲ್ಲದೆ ಅವನಿಗೆ ಜ್ವರದಲ್ಲಿ ಒಂದು ಗಳಿಗೆಯನ್ನು ಕಳೆಯುವುದೂ ಅಸಾಧ್ಯವಾದುದರಿಂದ ತಾನೇ ಟೆಲಿಗ್ರಾಂ ಕೊಡಿಸಿದ್ದ. ಅಬ್ಬಬ್ಬ ಎಂದು ಸಮಾಧಾನದ ನಿಟ್ಟುಸಿರು ತೆಗೆದು ಪರಮೇಶ್ವರಯ್ಯ ಹಿಂದಿರುಗಿ ಹೋದರು ಮಂಗಳೂರಿಗೆ. ಜ್ವರ ಬಂದಾಗ ಡಾಕ್ಟರರನ್ನು ಕರೆತಂದದ್ದು, ಔಷಧಿ ತಂದುಕೊಟ್ಟಿದ್ದು ಎಲ್ಲಾ ಲೋಹಿತಾಕ್ಷನೆಂದು ಹಿಂದಿನಿಂದ ತಿಳಿಯಿತು ಆಶಾಗೆ. ಪ್ರತಿದಿನ ಸಾಯಂಕಾಲ ಬಂದು ವಿಚಾರಿಸಿಕೊಳ್ಳುತ್ತಿದ್ದ ಮೂರ್ತಿಯನ್ನು. ಆಶಾ ಬಂದ ದಿನ "ಇನ್ನು ನನಗೆ ನಿಶ್ಚಿಂತೆ" ಎಂದ ಜೋರಾಗಿ ನಕ್ಕು.

ಶಿವಮೂರ್ತಿಯ ಜ್ವರ ಮತ್ತೆಯೂ ಆರುದಿನಗಳ ಕಾಲ ಬಂದು ಡಾಕ್ಟರರು, ಅದು ವಿಷಮಜ್ವರವೆಂದೂ ಜಾಗ್ರತೆಯಾಗಿ ಪಥ್ಯ ಇತ್ಯಾದಿ ಮಾಡಬೇಕೆಂದೂ ತಿಳಿಸಿದರು. ಅದರೊಡನೆ ಪೃಥ್ವಿಯೂ ಅದೇ ಜ್ವರದಲ್ಲಿ ಹಾಸಿಗೆ ಹಿಡಿದ. ಎರಡೆರಡು ಬಾರಿ ಡಾಕ್ಟರರು ಬಂದು ಇಂಜಕ್ಷನ್ ಕೊಡಬೇಕಾಯಿತು ಅವನಿಗೆ. ಎಲ್ಲದಕ್ಕೂ ಲೋಹಿತಾಕ್ಷನೇ ಓಡಾಡಿದ ಸದ್ದು ಗದ್ದಲವಿಲ್ಲದೆ.

ಇಬ್ಬರಿಗೂ ಪಥ್ಯ, ಶಾಖ, ಆರೈಕೆ ಎಲ್ಲವೂ ಆಶಾ ಹೆಗಲಮೇಲೆ ಬಿತ್ತು. ಹೌದು, ಆಶಾಗೆ ಒಂದು ರೀತಿಯಲ್ಲಿ ಸಂತೋಷ! ಶಿವಮೂರ್ತಿಯ ಸೇವೆಯ ನೆಪದಲ್ಲಿ ಹತ್ತಿರಕ್ಕೆ ಬರಲು ಒಳ್ಳೆಯ ಸಂದರ್ಭ! ಇಬ್ಬರನ್ನು ಉಪಚರಿಸುವುದೂ ತನ್ನ ಪಾಲಿಗೊಂದು ಭಾಗ್ಯ!! ಈಗಲಾದರೂ ಆತ ಮನೆಯಲ್ಲಿರುತ್ತಾನೆ.... ತನ್ನ ಜೊತೆಗೇ ಇರುತ್ತಾನೆಂಬ

ಸಂತಸ. ಜ್ವರದ ನಿತ್ರಾಣದಲ್ಲಿ ಕಾಂತಿಯ ಹೆಸರನ್ನು ನೂರು ಬಾರಿ ಜ್ಞಾಪಿಸಿಕೊಂಡರೂ ಅವಳಿಗಿಲ್ಲ ಕೋಪ. ಅವನ ಕಾಲೊತ್ತುತ್ತ, ತಲೆ ತಿಕ್ಕುತ್ತ ಕುಳಿತುಕೊಳ್ಳುತ್ತಾಳೆ ಬೇಸರವಿಲ್ಲದೆ. ಹಾಲು ಕಹಿ ಔಷಧಿ ಎಂದು ಆತ ಮುಖ ಸಿಂಡರಿಸಿದಾಗ ನಲ್ಮೆಯಲ್ಲಿ ಅವನಿಗೆ ಕುಡಿಸುತ್ತಾಳೆ ಮಗುವಿನಂತೆ. "ನೀನು ನನ್ನನ್ನು ಎಷ್ಟು ಹಚ್ಚಿಕೊಂಡಿದ್ದೀ ಆಶಾ... ಆಹ್... ಎಲ್ಲಾ ಕಾಂತಿಯ ಹಾಗೇ ನಿನ್ನ ಸ್ವಭಾವ" ಎನ್ನುತ್ತಿದ್ದ ಅವನು ಅವಳ ಕೈಯ್ಯನ್ನು ಹಿಡಿದು. ಓ... ಈ ಮಾತನ್ನು ಅವನ ಬಾಯಿಯಿಂದ ಕೇಳಬೇಕೆಂದು ಹಾರೈಸಿರಲಿಲ್ಲವೇ ಅವಳು? "ಇಲ್ಲೇ ಇದ್ದುಬಿಡಿ ಇನ್ಮೇಲೆ.... ನಿಮ್ಮನ್ನು ನನ್ನ ಪ್ರೇಮ ಸುಧೆಯಲ್ಲಿ ತೇಲಿಸಿಬಿಡ್ತೇನೆ" ಎನ್ನುತ್ತಾಳೆ, ಅವನ ಕೂದಲಲ್ಲಿ ಕೈಯ್ಯಾಡಿಸುತ್ತ.

ಪೃಥ್ವಿಯಂತೂ ಅಂಬೆಗಾಲಿಕ್ಕುವ ಮಗು ಅವಳ ಪಾಲಿಗೆ. ಬಿಸಿ ಬಿಸಿ ಹಾಲು, ಹಣ್ಣಿನ ರಸ, ಬಾರ್ಲಿ ನೀರು ಎಲ್ಲಾ ತಂದು ಕಥೆ ಹಾಡುಗಳ ಸಂಗಡ ಕುಡಿಸಬೇಕು. ಹಿಂದೆಂದೂ ಅವನ ಬಗ್ಗೆ ಇಷ್ಟೊಂದು ಕನಿಕರ ಮೂಡಿರಲಿಲ್ಲ ಅವಳಿಗೆ. ಅವನಿಗೋಸ್ಕರ ಒಂದೂವರೆ ದಿನದಲ್ಲಿ ತಯಾರಾಯಿತು ಅಂದದ ಸ್ವೆಟರ್. ಪೃಥ್ವಿಯ ಆನಂದವೋ ಹೇಳತೀರದು. ಅವಳ ಕುತ್ತಿಗೆಗೆ ಜೋತು ಬಿದ್ದು "ನೀನೆಷ್ಟು ಒಳ್ಳೆಯವಳಮ್ಮಾ.... ನಂಗೆ ಇನ್ನೊಂದು ಹಸಿರು ಅಂಗಿ ಬೇಕಮ್ಮಾ ಚೆಂದದ ಸೂಟು ಹೊಲಿಯಮ್ಮಾ" ಎಂದು ಗೋಗರೆದ.

"ಹೊಲೀತೇನೇ ಮರೀ, ನಮ್ಮ ಪೃಥ್ವಿರಾಜರು ಟಿಪ್ಪೂ ಸುಲ್ತಾನರ ಹಾಗೆ ಕಾಣಬೇಡವೇ?"

"ಹಾಗಾದರೆ ನಂಗೊಂದು ಹಾರುವ ಕುದುರೆ ಬೇಕು. ಭುರ್ ಅಂತ್ ಹಾರಬೇಕು ಆಕಾಶದಲ್ಲಿ. ರಾಜಕುಮಾರನಂತೆ ಅದು ಸ್ವರ್ಗಕ್ಕೆ ಕರ್ಕೊಂಡು ಹೋಗ್ಬೇಕು ನನ್ನನ್ನು....."

ಅವನ ಮಾತಿಗೆಲ್ಲಾ ಇಲ್ಲ ಎನ್ನುವುದಿಲ್ಲ ಅವಳು. ಸ್ವಲ್ಪ ಮೈ ನೋವು ಎಂದರೆ ಸಾಕು, ಆತಂಕ, ಗಾಬರಿ. ಅವನಿಗೋಸ್ಕರ ರಾತ್ರಿಯ ನಿದ್ರೆ ಬಿಡಲೂ ಸಿದ್ಧ ಅವಳು. ಆದರೆ ಅವನಿಗೆ ರಾತ್ರಿ ಮಾತ್ರ ಬೇಕು ಅಜ್ಜಿಯ ಮಗ್ಗಲು. "ನನ್ನ ಹತ್ರ ಮಲಗಿಸಿಕೊಳ್ತೇನೆ ಅತ್ತೆ. ನನಗೂ ಅವನನ್ನು ರಾತ್ರಿ ನೋಡಿಕೊಂಡ ಹಾಗಾಗುತ್ತೆ" ಎಂದು ಜ್ವರವಿರುವ ದಿನಗಳಲ್ಲಿ ರಂಗಮ್ಮನವರಿಗೆ ಹೇಳಿದಾಗ ಅವರೂ ಸೊಸೆಗೆ ತೊಂದರೆ ಕೊಡಲು ಇಚ್ಛಿಸದೆ ಒಪ್ಪಿಕೊಂಡಿರಲಿಲ್ಲ.

"ಕಾಂತಿಯಮ್ಮ ಇದ್ದಾಗ" ಮಧ್ಯೆ ಬಾಯಿ ಹಾಕಿ ಚೆನ್ನಕ್ಕ ಅಂದಿದ್ದಳು. "ಈ ದೊಡ್ಡಮ್ಮನ್ಹತ್ರವೇ ಮಲಗ್ತಾ ಇದ್ದ ಪೃಥ್ವಿ. ಪಾಪ, ನಿಮಗ್ಯಾಕೆ ತೊಂದರೆ?"

"ಬಾಯ್ಮುಚ್ಚು ಚೆನ್ನಕ್ಕ.... ನಿನ್ನಿಂದ ನನಗ್ಯಾವ ಉಪದೇಶ ಬೇಕಿಲ್ಲ...." ವ್ಯಗ್ರಳಾಗಿ ಅಂದಿದ್ದಳು ಆಶಾ.

ಹೀಗಿದ್ದರೂ ಹಗಲೆಲ್ಲ ಪೃಥ್ವಿ ಅವಳ ಬಳಿಯಲ್ಲಿಯೇ. ಈ ನಡುವೆ ಲೋಹಿತಾಕ್ಷ ಪ್ರತಿ ಸಾಯಂಕಾಲವೂ ಹಾಜರು ಮನೆಯಲ್ಲಿ. ಶಿವಮೂರ್ತಿಗೆ ಅವನು ಬರುವದು ಒಂದು ನಿಮಿಷ ತಡವಾದರೆ ಚಡಪಡಿಕೆ. ಇಬ್ಬರಲ್ಲಿಯೂ ಇಸ್ಪೀಟೇನಾಟ, ಕೇರಂ, ಚೆಸ್ ಆಟ ಕತ್ತಲೆಯವರೆಗೂ ನಡೆಯುತ್ತದೆ. ಮಧ್ಯೆ ಆಶಾಳೂ ಸೇರಿಕೊಂಡಾಗ

ಆಟದಲ್ಲಿ ಇನ್ನಷ್ಟು ಉತ್ಸಾಹ ಇಬ್ಬರಿಗೂ. ಕೆಲವೊಮ್ಮೆ ರಾತ್ರಿಯ ಊಟ ಮುಗಿಸಿಕೊಂಡೇ ಹೋಗುತ್ತಾನೆ ಮನೆಗೆ. ರಂಗಮ್ಮ ತಮ್ಮಯ್ಯ ಇಬ್ಬರಿಗೂ ಅವನೆಂದರೆ ಈಗ ಎಲ್ಲಿಲ್ಲದ ವ್ಯಾಮೋಹ!

ಅದೊಂದು ದಿನ ಮಧ್ಯಾಹ್ನ ಪೃಥ್ವಿಯ ಮೈಯ್ಯನ್ನು ಬಟ್ಟೆಯಿಂದ ಮೆತ್ತಗೆ ಒರಸಿ ಔಷಧಿ ಕುಡಿಸಿ ಹಾಲು ತರಲೆಂದು ಅಡಿಗೆ ಮನೆಗೆ ಹೊರಟಿದ್ದಳು ಆಶಾ.... ಊಟದ ಜಗಲಿಯ ಬಾಗಿಲಲ್ಲಿ ಅಡಿಗೆಯವಳು ನಿಂತಿದ್ದು ಏನೋ ಮಾತನಾಡುತ್ತಿದ್ದಳು ಪಿಸುಸ್ವರದಲ್ಲಿ.

"ನೋಡಿದ್ಯಾ ನೀಲಿ. ನಾಲ್ಕು ದಿನಗಳಿಂದ ಈ ಮನೆಯ ಗತಿಯೇ ಬದಲಾಗಿ ಹೋಗಿದೆ. ವ್ಹಾಹ್, ಏನು ಉಪಚಾರ, ಏನು ಪ್ರೀತಿ. ನೋಡಿ ನೀನೂ ಕಲ್ತುಕೋಬೇಕು! ಹ್ಞಂ..... ಪೃಥ್ವಿಯನ್ನು ತಲೆ ಮೇಲೆ ಹೊರುವದನ್ನು ನೋಡ್ಬೇಕು... ಎಲ್ಲಾ ಠಕ್ಕು ಪ್ರೀತಿ..."

"ಎಂತಾ ಅಮ್ಮ ಹೇಳ್ತೀರಿ?" ನೀಲಿಯ ಸ್ವರ, "ದೇವತೆ ಹಂಗೆ ಇದ್ದಾರಲ್ವ ಅಮ್ಮ. ನಾಲಿಗೇಲಿ ಹುಳ ಅಕ್ಕು ಹಂಗೆ ಹೇಳೀರೆ..."

"ಮನೆ ಹೊರಗಿನ ಆಳು ನಿನಗ್ಹೇಗೆ ಗೊತ್ತಾಗುತ್ತದೆಯೇ? ಕಾಂತಿ ಹಾಗೆ ಅಲ್ಲಪ್ಪ ಇವಳು. ಅವರಿಗೆ ಎಷ್ಟು ಹಾಸ್ಯ, ನಗೆ ಇತ್ತಲ್ಲ. ಆಗ ಮನೆ ಅಂದ್ರೆ ಎಷ್ಟು ಸಂತೋಷವಾಗಿತ್ತು. ಈಗೇನು ಬಿಡು. ಈ ರಾಣಿಗೆ ತಾನಾಯ್ತು ತನ್ನ ಮಹಡಿ ಕೋಣೆಯಾಯ್ತು..."

ಮಾತಿನಲ್ಲಿ ತಲ್ಲೀನಳಾದ ಅಡಿಗೆಯವಳಿಗೆ ತನ್ನ ಹಿಂದಿನ ಹೆಜ್ಜೆ ಸಪ್ಪಳ ಕೇಳಿಸಲಿಲ್ಲ. ಬಿಸಿ ಹಾಲನ್ನು ಲೋಟಕ್ಕೆ ಬಗ್ಗಿಸಿಕೊಂಡು ಹತ್ತಿರವಿದ್ದ ದೊಡ್ಡ ಪ್ಲೇಟನ್ನು 'ಧಡಾರ್' ಎಂದು ನೆಲಕ್ಕೆ ಬಿಸಾಡಿ ತಾನು ಬಂದಿದ್ದೇನೆಂಬ ಸೂಚನೆಯನ್ನಿತ್ತು ಹೊರಗೆ ನಡೆದಳು ಆಶಾ.

ಒಳಗಿನ ಕೋಣೆಯಲ್ಲಿ ವೃದ್ಧ ದಂಪತಿಗಳ ಪಿಸಿ ಪಿಸಿ ಧ್ವನಿ. ಕುತೂಹಲದಿಂದ ತಡೆದು ನಿಂತವು ಕಾಲ್ಗಳು.

"ಪೃಥ್ವಿ ಹುಷಾರಾಗಿದ್ದರೂ ಒಂದು ತಿಂಗಳು ಚೆನ್ನಾಗಿ ನೋಡಿಕೊಳ್ಳಬೇಕು ರಂಗೂ, ನೀನಂತೂ ಅವನ ಆರೈಕೆಯನ್ನೆಲ್ಲ ಸೊಸೆ ಮೇಲೇ ಬಿಟ್ಟು ಬಿಟ್ಟಿದ್ದೀಯಾ...."

"ಪಾಪ, ಎಲ್ಲಾ ಮಾಡ್ತಾಳೆ ಅವಳು."

"ಇಲ್ಲೇ ತಪ್ಪಿ ಬಿದ್ದೆ ನೀನು. ಜಾತ್ರೆಯಲ್ಲಿ ಮಗು ಹೇಗೆ ತಪ್ಪಿಸಿಕೊಂಡಿತ್ತು ಅಂತ ನೆನಪಿಲ್ಲವೇ ನಿನಗೆ. ಅವನಿಗೇನಾದರೂ ಹೆಚ್ಚು ಕಡಿಮೆಯಾದರೆ ಅವಳಿಗೆ ಏನೂ ಆಗದು. ಗೋಳಾಡುವವರು ನಾವು.... ಮೊಮ್ಮಗನನ್ನು ನೋಡಿಕೊಳ್ಳುವ ಜವಾಬ್ದಾರಿ ನಮಗೆ ಸೇರಿದ್ದಷ್ಟೇ."

"ನಿಜ ಹೇಳಿದಿರಿ. ನಾನು ಯೋಚಿಸಲೇ ಇಲ್ಲ."

"ವಂಶಕ್ಕೆ ಕುಡಿಯಾಗಿ ಈಗಿರುವವನು ಅವನೊಬ್ಬನೇ. ಆಶಾ ಅವನನ್ನು ಚೆನ್ನಾಗಿ ನೋಡಿಕೊಂಡರೂ ಅವಳಿಗ್ಯಾಕೆ ಬೇಕು ಅವನ ನೋವು, ಕಷ್ಟಗಳು? ಎಷ್ಟಿದ್ದರೂ ಮಲತಾಯಿ. ನಿನಗೆ ಕಣ್ಣುಗಳು ಕಾಣಿಸ್ದೇ ಇದ್ದರೂ ಚೆನ್ನಕ್ಕನ ಹತ್ರ ಹೇಳಿ ಎಲ್ಲಾ

ಮಾಡಿಸು.... ನಿಂಗೊತ್ತಿಲ್ಲ ರಂಗೂ. ಅವಳದು ಒಂದು ರೀತಿಯ ಸ್ವಭಾವ. ದಿನವೆಲ್ಲ ಮುಖದಲ್ಲಿ ಕೋಪ ಉರಿದು ಹೋಗ್ತಾ ಇರುತ್ತೆ. ಮಾತು ಬಹಳ ಕಡಿಮೆ.”

ಬಾಗಿಲ ಮರೆಯಲ್ಲಿ ನಿಂತಿದ್ದ ಆಶಾ ಕೈಯ್ಯಿಂದ ಹಾಲಿನ ಲೋಟ ಜಾರಿ ಬೀಳುವಂತಾಯಿತು ಕೆಳಗೆ. ಲೋಟವನ್ನು ಅಲ್ಲೇ ಕಿಟಕಿಯಲ್ಲಿರಿಸಿ ಸರಸರನೆ ಹೊರಟುಹೋದಳು ಮಹಡಿಗೆ. ‘ಓ.... ನೀನು ಮಲತಾಯಿ. ಎಷ್ಟು ಪ್ರೀತಿ ತೋರಿಸಿದರೂ ಬೆಲೆಯಿಲ್ಲ. ನಿನ್ನನ್ನು ಯಾರೂ ಅರ್ಥ ಮಾಡಿಕೊಂಡಿಲ್ಲ.... ಯಾರೂ ಅರ್ಥ ಮಾಡಿಕೊಂಡಿಲ್ಲ....’

‘ನನ್ನ ಸೇವೆಗೆ ಸಿಕ್ಕಿದ ಪ್ರತಿಫಲ ಇದೇಯೇನು?’ ಕೋಣೆಗೆ ಬಂದವಳೇ ಹಾಸಿಗೆಯ ಮೇಲಿನ ಹೊದಿಕೆಯನ್ನು ಕಿತ್ತು ಬಿಸಾಡಿ ದೊಪ್ಪನೆ ಹಾಸಿಗೆಯಲ್ಲುರುಳಿ ದಿಂಬಿನಲ್ಲಿ ಮುಖಮುಚ್ಚಿಕೊಂಡಳು. ಅಲ್ಲೇ ಆರಾಮ ಖುರ್ಚಿಯಲ್ಲಿ ಕುಳಿತಿದ್ದ ಶಿವಮೂರ್ತಿ ಬಿರುಗಾಳಿಯಂತೆ ಆಶಾ ಬಂದುದನ್ನು.... ಅಳುತ್ತಿರುವುದನ್ನೂ ಕಂಡು ಆಶ್ಚರ್ಯಗೊಂಡು ಕೇಳಿದ,

“ಅರೆ; ನಿಂಗೇನಾಯಿತು?”

“ನಾನೆಷ್ಟಿದ್ದರೂ ಮಲತಾಯಿ.... ನಿಮ್ಮನ್ನೂ ಮಗನನ್ನೂ ಅಷ್ಟು ಚೆನ್ನಾಗಿ ನೋಡಿಕೊಂಡಿದ್ದೆ....” ಜೋರಾಗಿ ಬಿಕ್ಕುತ್ತ ತಾನು ಕೇಳಿಸಿಕೊಂಡದ್ದನ್ನೆಲ್ಲ ಹೇಳಿಬಿಟ್ಟಳು ಅವನಿಗೆ.

“ಅಯ್ಯೋ ಹುಚ್ಚೀ...” ಹಗುರವಾಗಿ ನಕ್ಕ ಶಿವಮೂರ್ತಿ. “ಇದಕ್ಕೆಲ್ಲ ಅಳ್ತಾರೆಯೇ? ನಿನಗಿರುವ ಬೆಲೆ ಇಷ್ಟೇ. ಅವರು ಹೇಳಿದ್ದು ಲೋಕನ್ಯಾಯದ ಮಾತು! ತಪ್ಪು ಹೇಳಿಲ್ಲವಲ್ಲ...”

ಕಣ್ಣೀರಿನಿಂದ ತೋಯ್ದ ಮುಖವನ್ನು ಮೇಲೆತ್ತುತ್ತ ಮೂರ್ತಿಯತ್ತ ನೋಡಿದಳು. ಓಹ್, ಅವನ ಬಾಯಿಯಿಂದಲೂ ಇದೇ ಮಾತು...! ಅವಳ ಹೃದಯದ ಮೇಲೆ ಬಿದ್ದಿತು ಕಾದ ಸಲಾಕೆಯ ಬರೆ....

ಅಂದು ಲೋಹಿತಾಕ್ಷ ಬರುವಾಗಲೇ ಡಾಕ್ಟರರ ಔಷಧಿ ತಂದಿದ್ದು ಅದನ್ನು ಕೊಟ್ಟು ಬಹಳ ಬೇಗನೆ ಹೊರಟುಹೋದ. ಅವನೊಂದಿಗೆ ಮಾತನಾಡಬೇಕೆಂದುಕೊಂಡರೂ ಆಗಲಿಲ್ಲ ಆಶಾಗೆ. ಅವನು ಹೊರಟುಹೋದ ಮೇಲೆ ಸಣ್ಣ ಕಾಗದದಲ್ಲಿ “ಪ್ರಿಯ ಲೋಹಿತ್, ನಿನ್ನ ಹತ್ತಿರ ಮಾತನಾಡಲು ನಾಳೆ ಬೆಳಿಗ್ಗೆಯೇ ಬರುತ್ತೇನೆ. ಮನೆಯಲ್ಲಿರು” ಎಂದು ಬರೆದು ಜಬ್ಬಣ್ಣನನ್ನು ಗುಟ್ಟಾಗಿ ಕರೆದು “ಹರೀನ್ ಗುಡ್ಡದ ಅಯ್ಯನವರಿಗೆ ತಲುಪಿಸಿ ಬಾ” ಎಂದು ಹೇಳುತ್ತ ಐದರ ನೋಟನ್ನು ಕೈಯ್ಯಲ್ಲಿರಿಸಿ “ಯಾರಿಗೂ ಹೇಳಬೇಡ” ಎಂದಳು.

ವಿಧೇಯ ಸೇವಕ ಅಂಗೈಯಿಂದ ನೆಲಮುಟ್ಟಿ ನಮಸ್ಕರಿಸಿ ಕೆನ್ನೆ ಬಡಿದುಕೊಳ್ಳುತ್ತ ದೇಹ ಮುದ್ದೆ ಮಾಡಿದ, “ಈ ಮನೆಯ ಊಳಿಗವನು ನಾನು ಕಂಡ್ರಾ, ನಿಮ್ಮನೆ ಋಣದಲ್ಲಿ, ಅನ್ನದಲ್ಲಿ ಬದುಕಿ ಕಂಡಿರುವ ಎಂಜಲು ನಾಯಿ! ಈ ಮಣ್ಣಿನ ಋಣದಲ್ಲಿ, ಇಪ್ಪವ ನಾನು ಇಲ್ಲೇ ಹುಟ್ಟಿದ್ದು, ಇಲ್ಲೇ ಬೆಳೆದದ್ದು. ಇಲ್ಲೇ ಗಡ್ಡ ಹಣ್ಣಾತು. ನಿಮಗೆ ಮಣ್ಣಲ್ಲಿ ಇಪ್ಪತ್ತಿಗೆ ಈ ಜಲ, ನೆಲ, ಆಕಾಶ, ಸೂರ್ಯ ಚಂದ್ರರ ಸಾಕ್ಷಿ, ಎಂಟು

ದಿಕ್ಕುಗಳ ಸಾಕ್ಷಿ ಅಮ್ಮಾ, ನೀವು ಹೇಳಿದ್ದಕ್ಕೆ ಎದುರು ಹೇಳ್ತಿಲ್ಲೆ ನಾನು, ನೀವು ಎಂತ ಹೇಳ್ತೀರೋ ಹಂಗೆ ಮಾಡ್ತೆ..."

ಬೆಪ್ಪ ಮುದುಕ.... ವಿನಯತನದ ಪರಮಾವಧಿ ಅವನದು. ಕಿರುನಗೆಯಲ್ಲಿ ಕಳುಹಿಸಿದಳು ಅವನನ್ನು. ಅವನು ಹೋದ ಮೇಲೆ ತಾನು ಮಾಡಿದ್ದು ತಪ್ಪೇ, ಸರಿಯೇ ಎಂದು ಚಿಂತಿಸಿದಳು ತನ್ನಲ್ಲೇ. ಮನೆಯ ಜಗಳವನ್ನು ಇನ್ನೊಬ್ಬರಲ್ಲಿ ಹೇಳಿಕೊಳ್ಳುವುದು ಸರಿಯೇ? ಅವನಾರು ನನಗೆ ಸಮಾಧಾನ ಹೇಳಲು? ಪರಪುರುಷನ ಸಂಗಡ ಮನೆಯ ವಿಷಯ ಹೇಳುವುದು, ಮನ ಬಿಚ್ಚಿ ಮಾತನಾಡುವುದೂ ಮೂರ್ಖತನ. ಏನೇ ನಡೆದರೂ, ಎಷ್ಟೇ ಮನ ನೊಂದರೂ ಹಾಲಾಹಲ ನುಂಗಿದ ಶಿವನಂತೆ ಎಲ್ಲ ಕಹಿಯನ್ನು ನುಂಗಿಕೊಳ್ಳಬೇಕು ನಾನು.... ಏನಿದ್ದರೂ ಎಲ್ಲವೂ ತನ್ನೊಬ್ಬಳಲ್ಲಿಯೇ ಅಡಗಬೇಕು....

ಮನಸ್ಸು ಸ್ಥಿಮಿತಕ್ಕೆ ಬಂದರೂ ಕಲಕಿದ ನೀರಾಯ್ತು. ಆ ರಾತ್ರಿ ಶಿವಮೂರ್ತಿ ಹೇಳಿದ, "ಇನ್ನು ಹತ್ತು ದಿನಗಳಲ್ಲಿ ಕಾಲೇಜು ಬಾಗಿಲು ತೆರೆಯುತ್ತೆ. ಕಾಲೇಜು ಪ್ರಾರಂಭವಾದಾಕ್ಷಣ ಹೋಗಬೇಕು. ಯಾವಾಗ ಹೋದೇನೋ ಎನ್ನುವಷ್ಟು ಬೇಸರ ಬಂದಿದೆ ನನಗೆ."

೨

ಶಿವಮೂರ್ತಿ ಕುಮಟೆಗೆ ಹೊರಡುವ ಆ ದಿನವೂ ಬಂದಿತು. ಎರಡು ದಿನಗಳಿಂದಲೂ ಆಶಾ ಅವನ ಅಗಲಿಕೆಯನ್ನು ಯೋಚಿಸಿ, ಚಿಂತಿಸಿ ಅರ್ಧವಾಗಿದ್ದಳು. ಹೊರಡುವ ದಿನ ತಡೆಯಲಾರದೆ ಅವನ ಕುತ್ತಿಗೆಗೇ ಜೋತುಬಿದ್ದು ಪರಿ ಪರಿಯಾಗಿ, ಆರ್ತಧ್ವನಿಯಲ್ಲಿ ಬೇಡಿಕೊಂಡಳು, "ನನ್ನ ಮನಸ್ಸಿನ ದಾರಿ ಯಾವ ದಿಕ್ಕಿಗೆ ತಿರುಗುತ್ತದೆಯೋ ನಾನರಿಯೆ. ಯಾವ ಪಾಪಕ್ಕಾಗಿ ನನಗೀ ಶಿಕ್ಷೆ?" ಎಂದು ಗೋಳಾಡಿಕೊಂಡಳು.

ಆದರೆ ಶಿವಮೂರ್ತಿಯದು ಒಂದೇ ಹಠ. ಈ ಒಂದು ತಿಂಗಳ ಅಸೌಖ್ಯದಲ್ಲಿ ಆಶಾಳ ಸಾಮೀಪ್ಯ. ಅವಳ ಸೇವಾಮನೋಭಾವ, ಅವಳು ನೀಡಿದ ಆರೈಕೆ, ಅವಳಿಗೆ ತನ್ನ ಮೇಲಿರುವ ಪ್ರೀತಿ ಎಲ್ಲವನ್ನೂ ನೋಡಿದ್ದರೂ, ಅವಳ ವಿಷಯದಲ್ಲಿ ಅವನಿಗೆ ಒಂದು ವಿಧದ ಗೌರವ ಮೂಡಿದ್ದರೂ ಅದೇಕೋ ಸದಾಕಾಲ ಇದೇ ಮನೆಯಲ್ಲಿ ಉಳಿಯುವುದೆಂದರೆ ಮನಸ್ಸಿಗೇಕೋ ಹೆದರಿಕೆ! "ಪ್ರತಿವಾರ ಬರ್ತಾ ಇರ್ತೇನೆ, ಏನೇನೂ ಹೆದರಿಕೆ ಬೇಡ" ಎಂದು ಮೃದುವಾಗಿಯೇ ಸಂತೈಸಿ ಹೊರಟುಹೋದ.

ಕಣ್ಣುಗಳಲ್ಲಿ ತುಂಬಿದ್ದ ತೀವ್ರ ಯಾತನೆ, ವೇದನೆ ತಿರಸ್ಕಾರಕ್ಕೆ ತಿರುಗಿತು. ಹೃದಯದಲ್ಲಿ ಮೂಡಿದ್ದ ಅನುರಾಗ ಮಂಜಿನಂತೆ ಕರಗುತ್ತ ಅವಳಿಗರಿಯದ ರೀತಿಯಲ್ಲಿ ದ್ವೇಷ ಹೆಡೆಯೆತ್ತಿಕೊಂಡಿತು.

ಶಿವಮೂರ್ತಿ ಕುಮಟೆಗೆ ಹೋದ ಎರಡೇ ದಿನಗಳಲ್ಲಿ ಸುರತ್ಕಲ್‌ನಿಂದ ಈಶ್ವರಿ ಬಂದಳು, ಎಂಟು ದಿನ ಉಳಿಯಲೆಂದು. ಅವನ ಅಸೌಖ್ಯದ ದಿನಗಳಲ್ಲಿ ಬರಬೇಕೆಂದಿದ್ದವಳಿಗೆ ಅದೇಕೋ ಹೊರಡಲಾಗಲಿಲ್ಲವಂತೆ. ಅವಳು ಬಂದರೂ ಆಶಾ ಅವಳೊಡನೆ ಮಾತನಾಡಲಿಚ್ಛಿಸಲಿಲ್ಲ. ಈಶ್ವರಿ ತಾನಾಗಿಯೇ ಮಾತನಾಡಿಸಿದರೂ ದುಗುಡ ತುಂಬಿದ ಮುಖದಲ್ಲಿ ನಗೆಯ ಒಂದೆಳೆಯೂ ಹರಡಲಿಲ್ಲ.

ಈಶ್ವರಿಗೆ ಯಾಕೋ ಅನುಮಾನ. ನಾಲ್ಕು ದಿನ ಕಳೆದರೂ ಆಶಾ ಅವಳೊಡನೆ ಮೊದಲಿನಂತೆ ಮಾತನಾಡಲಿಲ್ಲ. ತಾಯಿಯನ್ನು ಮೆಲ್ಲನೆ ಪ್ರಶ್ನಿಸಿದಳು,

"ಯಾಕಮ್ಮ, ಅತ್ತಿಗೆ ಒಂದು ತರಹ ಇದ್ದಾಳೆ? ಸುಖವಿಲ್ಲವೇ?"

ಅಲ್ಲಿಯೇ ಇದ್ದ ಚೆನ್ನಕ್ಕ ಆ ಕ್ಷಣ ಉತ್ತರಿಸಿದಳು, "ಸುಖ ಉಂಟು ಎಲ್ಲಾ ಉಂಟು. ರಾಣಿ ಹಾಗೆ ಇಲ್ಲವೇ... ಜಂಬ ಜಾಸ್ತಿ. ಅಲ್ಲಲ್ಲ. ನನಗ್ಯಾಕೆ ಅಡಿಗೆಯವಳಿಗೆ ಅಧಿಕ ಪ್ರಸಂಗ? ಮಾತನಾಡಿದರೆ ಪಾಪ, ಬಾಯಿಂದ ಮುತ್ತು ಉದುರೀತು ಮುತ್ತು...."

"ನನಗೇನೂ ತಿಳೀದು ಈಶ್ವರಿ" ರಂಗಮ್ಮ ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ ಅಂದರು, "ಅಂದಿನ ಅಪಘಾತದಲ್ಲಿ ನಾನು ಸಾಯುವ ಬದಲು ಕಣ್ಣುಗಳನ್ನು ಕಳೆದುಕೊಂಡೆ. ನನ್ನ ಪ್ರಾರಬ್ಧ... ಸರಿಯಾಗಿದ್ದರೆ ಸೊಸೆ ಏನ್ಮಾಡ್ತಾಳೆ ಹೇಗಿದ್ದಾಳೆ ಅಂತ ನೋಡ್ತಿದ್ದೆ? ಎಲ್ಲಿ ಆಶಾನ್ನ ಕರಿ, ಏನಾಗಿದೆ ಅಂತ ಕೇಳೋಣ?"

"ನಂಗೇನಾಗಿದೆ ಈಶ್ವರಿ?" ಕಲ್ಲುಬೆಂಚಿನ ಮೇಲೆ ಕುಳಿತ ಆಶಾ ಅಂದಳು ಎತ್ತಲೋ ನೋಡುತ್ತ, "ಯಾಕೋ ನಾಲ್ಕು ದಿನಗಳಿಂದೀಚೆಗೆ ಬಹಳ ಬೇಜಾರು... ರಾತ್ರೆ ನಿದ್ರೆ ಬರ್ತಾ ಇಲ್ಲ."

ಈಶ್ವರಿ ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುತ್ತ ಅಂದಳು, "ತುಂಬ ವೀಕ್ ಆಗಿದ್ದಿ ಅತ್ತಿಗೆ, ಕೈ ನೋಡಿದರೇ ಗೊತ್ತಾಗುತ್ತೆ. ತುಂಬ ಚಿಂತೆ ಮಾಡ್ತೀಯಾ? ಡಾಕ್ಟರರ ಹತ್ತಿರ ಹೋಗಿ ತೋರಿಸಿಕೊಂಡು ಬಾ. ಏನಾದರೂ ಟಾನಿಕ್ ಕೊಡಬಹುದು."

"ದೇಹಾರೋಗ್ಯದಷ್ಟೇ ಮನಸ್ಸಿನ ಆರೋಗ್ಯವೂ ಇರಬೇಕಲ್ಲ. ಇನ್ನೆಷ್ಟು ದಿನ ನಾನಿಲ್ಲಿ ಒಬ್ಬಳೇ ಇರಲಿ? ಯಥಾಪ್ರಕಾರ ಈ ಸಲ ರಜೆ ಕಳೆದ್ವಾಗೆ ಅವರು ಹೊರಟುಹೋದರು ಕುಮಟೆಗೆ. ನನಗೂ ಎಲ್ಲಿಯಾದರೂ ದೂರ ಹೋಗಿಬಿಡೋಣ ಎಂದೆನಿಸ್ತಾ ಇದೆ..."

"ಅಣ್ಣ ಇಲ್ಲಿ ಇಲ್ಲದೇ ಇರುವದೇ ನಿನ್ನ ಚಿಂತೆಗೆ ಕಾರಣವೇ?"

"ನನ್ನನ್ನು ಬಿಟ್ಟು ಕುಮಟೆಯಲ್ಲಿಯೇ ಇರುವುದಾದ್ರೆ ಇವರಿಗೆ ಮದುವೆ ಯಾಕೆ ಬೇಕಿತ್ತು?" ಆಶಾ ಉದ್ವೇಗದಿಂದ ಈಶ್ವರಿಯತ್ತ ನೋಡಿದಳು. ಮುಂದಕ್ಕೆ ಮಾತನಾಡುತ್ತ ಮಾತಿನ ಹಿಡಿತವೂ ತಪ್ಪಿ ಸಿಕ್ಕ ಹಾಗೆ ಶಿವಮೂರ್ತಿಯನ್ನು ಟೀಕಿಸಿದಳು.... ದುಃಖದಿಂದ ಭಾರವಾಯಿತು ಸ್ವರ, "ನಿನಗೆ ನಿನ್ನ ಅಣ್ಣನ ವಿಚಾರಗಳೆಲ್ಲ ಗೊತ್ತಿರಬಹುದು. ಕಾಂತಿ ನನಗಿಂತಲೂ ಬುದ್ಧಿವಂತೆ, ರೂಪವಂತೆ, ಗುಣವಂತೆಯಾಗಿದ್ದಳೇ? ನಿನ್ನ ಅಣ್ಣನಿಗೆ ಆ ಪುಣ್ಯಾತ್ಮೆ ಯಾವ ಸುಖ ಇತ್ತಿದ್ದಳೋ ನಾನರಿಯೆ. ಅವಳು ಸತ್ತ ಮೇಲೆ ಅವಳ ಭಾವಚಿತ್ರವನ್ನ ಮದುವೆಯಾಗಬಹುದಿತ್ತು.

ನನಗೆಲ್ಲಾ ತಿಳಿದಿದೆ ಈಶ್ವರೀ, ನಿಜ ಹೇಳು.... ಅವರಿಗೆ ನನ್ನ ಹೊರತಾಗಿ ಕುಮಟೆಯಲ್ಲಿ ಬೇರೆ ಹುಡುಗಿಯರು ಇದ್ದಿರಬೇಕು ಅಲ್ಲವೇ?"

ಅವಳ ಬಿರುಸಾದ ಧ್ವನಿಗೆ ಬೆಚ್ಚಿದಳು ಈಶ್ವರಿ. ಆಶಾ ಮುಖ ಇನ್ನಿಷ್ಟು ಕಠಿಣವಾಯಿತು. "ಅದಕ್ಕೋಸ್ಕರವೇ ಅವರಿಗೆ ಈ ಹಳ್ಳಿ ಬೇಡ. ನನ್ನ ಅದೃಷ್ಟವೇ ಇಂತಹುದು. ಈ ಮನೇಲಿ ಅವರಿಲ್ಲದ ಮೇಲೆ ಏನಿದೆ ಸ್ವಾರಸ್ಯ? ಇನ್ನೆಲ್ಲಿಯಾದರೂ ಹೋದರೆ ಈ ನರಕಕ್ಕಿಂತ ಸಂತೋಷವಾಗಿದ್ದೇನು...!"

ಅಷ್ಟರಲ್ಲಿ ಈಚೆ ಬದಿಯಿಂದ ರಾಶಿ ಬಟ್ಟೆಯನ್ನು ಹೊತ್ತುಕೊಂಡು ಒಗೆಯಲೆಂದು ಬಂದಳು ನೀಲಿ. ಇತ್ತೀಚಿನ ದಿನಗಳಲ್ಲಿ ತೀರಾ ಸೊರಗಿ ಮೈಯ್ಯ ಮೂಳೆಗಳೆಲ್ಲಾ ಎದ್ದು ತೋರುತ್ತಿವೆ. ಈಶ್ವರಿ ತನ್ನ ಬದಿಯಲ್ಲಿ ಕುಳಿತಿದ್ದರೂ ಆಶಾ ಕೆಲಸದವಳ ಸುಖದುಃಖ ವಿಚಾರಿಸಿಕೊಂಡಳು. ನೀಲಿ ದುಃಖದಿಂದ ಮನೆಯ ಸ್ಥಿತಿ ವಿವರಿಸುತ್ತ, ಗಾಣದೆತ್ತು ತಾನು ಎನ್ನುತ್ತ, ಒಂದು ದಿನವೂ ತನಗೆ ಸುಖವಿಲ್ಲವೆಂದೂ, ಗಂಡನಿಗೆ ತನ್ನ ಮೇಲೆ ಪ್ರೀತಿಯಿಲ್ಲವೆಂದೂ, ಅತ್ತೆ, ಮಾವ, ಮೈದುನ ಎಲ್ಲರೂ ತನ್ನ ವಿರುದ್ಧವೆಂದೂ ಹೇಳುತ್ತ ಅತ್ತುಬಿಟ್ಟಳು.

"ಎಲ್ಲಿಯಾದರೂ ಸುಡುಗಾಡಿಗೆ ಹೋಯ್ಕಂಡು ಪ್ರಾಣ ತೆಕ್ಕಳ್ವ ಅಂತ ಅನ್ನಸತ್ತೆ. ಆದರೆ ಮಕ್ಕಳಿದ್ದಾವಲ್ಲಮ್ಮಾ, ಅವುಗಳ ಮುಖ ಕಂಡ್‌ಕಂಡು ಸುಮ್ಮನಾಗ್ತೇ ಅಷ್ಟೇ..."

"ಬೇರೆ ಮನೆ ಮಾಡಿಬಿಡು ನೀಲಿ..."

"ಲಾಯ್ಕ ಹೇಳಿದಿರಿ ಅಲ್ವ?" ಅಟ್ಟಹಾಸದ ನಗೆ ನಕ್ಕಳು ಕೆಲಸದವಳು, "ಆ ಪೆಡಂಬೂತ ತಮ್ಮನ ಅಡಿಯಾಳು. ಅಂವ ಒಪ್ತನಾ ಬೇರೆ ಮನೆ ಮಾಡೂಕೆ. ಹೆಸರಿಗೊಂದು ಗಂಡ ಅಮ್ಮಾ. ತೀಟೆ ತೀರಿಸ್ಕಂಬಕ ಬತ್ತ ಮಗ್ಗಲ್ತ್ರ. ಒಂದು ಪ್ರೀತಿ, ಇಸ್ವಾಸ ಎಂತದೂ ಇಲ್ಲೆ. ಇದ್ದಿದ್ದರೆ ಬ್ರಹ್ಮಲಿಂಗೇಶ್ವರನಿಗೆ ಒಂದು ಹಣ್ಣು ಕಾಯಿ ಮಾಡ್ಸತಾ ಇದ್ದೆ. ಕೈಹಿಡಿದ ಗಂಡನಿಗೆ ಹೆಂಡತಿ ಹತ್ರ ಪ್ರೀತಿ ಇರಕ್ಕು ಅಮ್ಮಾ.... ಈ ಜಬ್ಬಣ್ಣ ಬರಿದೆ ಉಂಬಕಕ್ಕು, ಭೂಮಿಗೊಂದು ಭಾರ!"

ಓ.... ಹಾಗಾದರೆ ಮೂರ್ತಿಗೂ ತನ್ನ ಮೇಲೆ ಪ್ರೀತಿಯಿಲ್ಲವೇ? ಅಥವಾ ನಾನವರನ್ನು ಅರ್ಥ ಮಾಡಿಕೊಳ್ಳಲಿಲ್ಲವೇ?

"ನೀಲಿ" ತುಸು ಹೊತ್ತಿನ ನಂತರ ಆಶಾ ಕೇಳಿದಳು, "ಮೂರ್ತಿರಾಯರು ಕಾಂತಿಯನ್ನು ತುಂಬಾ ಪ್ರೀತಿಸ್ತಾ ಇದ್ದರಾ?"

ಈ ಪ್ರಶ್ನೆ ಕೇಳಿ ಈಶ್ವರಿ ಎದ್ದುಬಿಟ್ಟಳು ಅಲ್ಲಿಂದ. ಅವಳು ಅತ್ತ ಹೋದೊಡನೆ ಬಟ್ಟೆಗೆ ಸಾಬೂನು ಹಚ್ಚುತ್ತಿದ್ದ ನೀಲಿ ಅವಳತ್ತ ಹೊರಳಿ ಅಂದಳು, "ಎಂತಾ ಕೇಳ್ತಿರಿ ಅಮ್ಮಾ, ದಿನವೆಲ್ಲ ಅವರಿಬ್ಬರೂ ಒಟ್ಟಿಗೇ ಇರ್ತಿದ್ದರು. ಗದ್ದೆ, ತೋಟ, ಪೇಟೆ ಎಲ್ಲ ಬದಿಗೂ ಒಟ್ಟಿಗೇ. ಒಂದ್ನಿಮಿಷ ಅಮ್ಮ ಕಾಣದೇ ಇದ್ದರೆ 'ಎಲ್ಲೇ ಕಾಂತಿ' ಅಂತ ಕೂಗ್ತಾ ಇದ್ದರು ನೂರು ಸಾರೆ. ಅಯ್ಯೋ ಪಾಪ.... ಎಲ್ಲಾ ಹಳೆ ಕಥೆ... ಅವರು ಸತ್ತ ಮೇಲೆ ಮೂರ್ತಿರಾಯರು ಹುಚ್ಚರ್ಹಂಗೆ 'ಕಾಂತಿ ಕಾಂತಿ' ಅಂತ ಬೊಬ್ಬೆ ಹಾಕ್ತಿದ್ದರು ಮಹಡಿ ಮ್ಯಾಲೆ."

"ಸತ್ತ ಮೇಲೆ ಆ ಕಾಂತಿ ನಿಮಗ್ಯಾವಾಗಾದರೂ ಕಾಣಿಸಿಕೊಂಡಿದ್ದಾಳಾ?"

"ಎಂತಾ ಅಂದ್ರಿ ಅಮ್ಮಾ..." ಸಾಬೂನನ್ನು ಅಲ್ಲೇ ಬಿಸಾಡಿ ಮೂಗಿನ ಮೇಲೆ ಬೆರಳಿಟ್ಟಳು ನೀಲಿ. "ಪುಣ್ಯವಂತೆ ಆ ಅಮ್ಮನ್ನ ತಂಪು ಹೊತ್ನಲ್ಲಿ ನೆನೀಬೇಕು. ದೇವತೆ ಹಂಗೆ ಇದ್ದರು ಅಮ್ಮ... ಅವರು ಎಂದೆಂದೂ ಭೂತ ಆಗಲಾರರು.... ಎಂತಹ ಹುಚ್ಚು ಕಲ್ಪನೆ ನಿಮ್ಮದು...." ಎನ್ನುತ್ತ ಪುನಃ ಸಾಬೂನನ್ನು ಎತ್ತಿಕೊಂಡು ಘಸ ಘಸ ಎಂದು ತಿಕ್ಕಲಾರಂಭಿಸಿದಳು ಬಟ್ಟೆಯ ಮೇಲೆ.

ಆಶಾ ಮೈಯ್ಯೆಲ್ಲಾ ನಡುಗಿತು. ಯಾರೋ ನಿಂತಿದ್ದಾರೆ ತನ್ನ ಬಳಿಯಲ್ಲಿ. ಕೇಕೆ ಹಾಕಿ ನಗುತ್ತ ತನ್ನ ಸುತ್ತಲೂ ತಿರುಗುತ್ತಿದ್ದಾರೆಯೆಂದೆನಿಸಿ ಸಿಡಿದುಹೋಗುತ್ತಿರುವ ತನ್ನ ತಲೆಯನ್ನು ಭದ್ರವಾಗಿ ಹಿಡಿದುಕೊಂಡು ಹಾಗೇ ಕಣ್ಣು ಮುಚ್ಚಿಕೊಂಡಳು. ಎಷ್ಟೋ ಹೊತ್ತಿನ ಮೇಲೆ ಬಂದ ಈಶ್ವರಿ ಹೆಗಲ ಮೇಲೆ ಕೈಯ್ಯಿಟ್ಟಿಗಾಲೇ ಅವಳಿಗೆ ಎಚ್ಚರ.

"ಅಮ್ಮ-ಅಪ್ಪನಿಗೆ ಹೇಳಿ ಅಣ್ಣ ಇಲ್ಲೇ ಬಂದು ನಿಲ್ಲುವಂತೆ ಏರ್ಪಾಟು ಮಾಡಿಸ್ತೇನೆ ಅತ್ತಿಗೆ, ಬೇಸರಿಸಬೇಡ."

* * * *

ದಿನಗಳು ಸರಿದವು. ಮಳೆಗಾಲ ಪ್ರಾರಂಭವಾಯಿತು. ಇಡೀ ದಿನವೆಲ್ಲ ಝುರೋಂ ಎಂದು ಸುರಿಯುವ ಮಳೆ. ನಾಲ್ಕು ಕಡೆಗೂ ನೀರೇ ನೀರು. ನೂರು ವಿಧದ ಹಕ್ಕಿಗಳ ಕೂಗು, ಝೀರಿಂಡೆಯ ಸದ್ದು. ಗುಡುಗು ಮಿಂಚುಗಳ ಅಬ್ಬರ. ಕಪ್ಪೆಗಳ ವಿಚಿತ್ರ ಅರಚುವಿಕೆ.

ಮನೆಯಲ್ಲಿಯೋ ಅಸಹನೀಯವಾದ ಮೌನ. ವೃದ್ಧ ದಂಪತಿಗಳಿಗೆ ಕತ್ತಲೆಯಾಗುವ ಮೊದಲೇ ನಿದ್ರೆಯ ತೂಕಡಿಕೆ. ಪೃಥ್ವಿ ರಗ್ಗು ಹೊದೆದುಕೊಂಡು, ಅನ್ನ ಹೊಟ್ಟೆಗೆ ಬಿದ್ದಾಕ್ಷಣ ನಿದ್ರೆ.... ಚೆನ್ನಕ್ಕನಿಗೆ ಹಾಸಿಗೆ ಕಂಡಾಕ್ಷಣ ಗೊರಕೆ. ನಿದ್ರೆ ಬಾರದೆ ಒದ್ದಾಡುವವಳು ಆಶಾ ಒಬ್ಬಳೇ. ಮನಸ್ಸಿನಲ್ಲಿರುವುದನ್ನು ಯಾರೊಂದಿಗಾದರೂ ಹೇಳಿಕೊಳ್ಳೋಣವೆಂದರೆ ಹತ್ತಿರ ಯಾರೂ ಇಲ್ಲ. ಮನದ ತುಂಬಾ ಅನಿಶ್ಚಯ, ನೂರೆಂಟು ಬೆದರಿಕೆಯ ಸಂಶಯಗಳು.

ಈಗ ಹೊಳೆಯ ದಡದಲ್ಲಿ ಮಾತನಾಡಲು ಸಿಗುವವನು ಲೋಹಿತಾಕ್ಷ ಒಬ್ಬನೇ. ಅವಳಿಂದ ತುಸುದೂರ ಕುಳಿತು ಬಾಯ್ತುಂಬ ಮಾತನಾಡುತ್ತ ಅವಳ ಮನದ ಬೇಗುದಿಯನ್ನು ಕಡಿಮೆ ಮಾಡುವವನು ಅವನೊಬ್ಬನೇ. ಜಾತ್ರೆ ಮುಗಿದ ಮೇಲೆ, ಅನಂತರ ಮೂರ್ತಿಯ ಅಸೌಖ್ಯದ ದಿನಗಳಲ್ಲಿ ಲೋಹಿತಾಕ್ಷ ಮೊದಲಿಗಿಂತಲೂ ಹೆಚ್ಚಾಗಿ ಮನೆಗೆ ಬರುತ್ತಿದ್ದರೂ ಅವನಿಂದ ದೂರವಿದ್ದು ಹಿತಮಿತವಾಗಿ ಮಾತನಾಡುತ್ತಿದ್ದ ಆಶಾ ತನ್ನ ಸಂಯಮವನ್ನು ಪೂರ್ಣ ಕಳೆದುಕೊಂಡು ಬಿಟ್ಟಳು ಈಗ. ಗೆಳೆತನ ವೃದ್ಧಿಯಾದಂತೆ ಅವರಿಗರಿಯದ ರೀತಿಯಲ್ಲಿ ಅದು ಬೇರೆ ದಾರಿಗೆ ತಿರುಗಿಹೋಯಿತು. ಮನದ ಕುದುರೆ ಹುಚ್ಚೆದ್ದು ಕುಣಿದು ಲಂಗುಲಗಾಮಿಲ್ಲದೆ ಓಡಿತು.

ಮನೆಯಲ್ಲೀಗ ಒಂಟಿತನ ಇನ್ನಷ್ಟು ಬೇಸರ ಕೊಡಲಾರಂಭಿಸಿತು ಅವಳಿಗೆ. ಇದಕ್ಕೆ ಕಾರಣ ಪೂರ್ತಿಯಾಗಿ ಲೋಹಿತಾಕ್ಷನಲ್ಲ. ಕಾಡು ಬೆಟ್ಟಗಳಿಂದ ಮುಚ್ಚಲ್ಪಟ್ಟ ಆ ಹಳೆಯ ದೊಡ್ಡ ಮನೆಯಲ್ಲ. ಪೂರ್ಣ ಖಾಲಿಯಾದ ಅವಳ ಹೃದಯ ಮಂದಿರದಲ್ಲಿ ತಾನು

ತಾನಾಗಿಯೇ ಬಂದು ನೆಲೆಸಲಿಲ್ಲ ಶಿವಮೂರ್ತಿ. ಆ ಹೃದಯ ಇನ್ನೂ ಶೂನ್ಯ, ಬರಿದು. ದಿನವೆಲ್ಲ ಲೋಹಿತಾಕ್ಷನ ಸಾಮೀಪ್ಯ ಬೇಕೆನಿಸತೊಡಗಿತು.

ತಾನೇನು ಬಯಸಿದ್ದೆ?.... ಆದರೆ ತನ್ನಿಂದ ಏನಾಗಿ ಹೋಯಿತು? ಅವನ ಗೆಳೆತನದ ದುರುಪಯೋಗ...! ಕಾಮನ ಬಲೆಯಲ್ಲಿ ಉರುಳಿದವಳು ತಾನಾದೆ. ಅದರಿಂದ ಹೊರಬರಲು ಸಾಧ್ಯವಿಲ್ಲ ತನಗಿನ್ನು.... ಓ... ಲೋಹಿತಾಕ್ಷ ಒಬ್ಬನೇ ಸಾಕು ತನಗೆ.... ಅವನಿದ್ದರೆ ತಾನು ಸುಖಿ.

ಮನೆಯವರ ಕಣ್ಣು ತಪ್ಪಿಸಿ ಮನೆ ಬಿಟ್ಟು ಬಂದು ಲೋಹಿತಾಕ್ಷನನ್ನು ಕೂಡಿಕೊಂಡ ಮೇಲೆ ಅವಳು ಸ್ವತಂತ್ರ ಹಕ್ಕಿ. ಕಾಡುಗುಡ್ಡಗಳ, ಹೆಮ್ಮರಗಳ ಮರೆಯಲ್ಲಿ ಇವರದೇ ಸ್ವತಂತ್ರ ರಾಜ್ಯ. ಕುಂದಾಪುರ, ಮರವಂತೆ ಬೀಚು, ಸಮುದ್ರ ದಡ, ಉಡುಪಿ ಹೋಟೆಲ್ ಎಲ್ಲೆಡೆಗೂ ಇವರ ತಿರುಗಾಟ. ನ್ಯಾಯ ಅನ್ಯಾಯ ತಪ್ಪು-ಒಪ್ಪುಗಳನ್ನು ವಿಮರ್ಶಿಸುವ ಮನ ಅವಳದಾಗಲಿಲ್ಲ.

ದಿನ, ವಾರಗಳು ಸರಿದಂತೆ ಮನೆ ನರಕ ಅವಳ ಪಾಲಿಗೆ. "ನಿನ್ನ ಹೊರತಾಗಿ ನನಗಿನ್ನೇನೂ ಬೇಡ!" ಎನ್ನುವ ಲೋಹಿತಾಕ್ಷನ ಸಂಗಡ ಎಲ್ಲಿಯಾದರೂ ದೂರ... ದೂರ... ಯಾರೂ ಕಾಣದ ತಾಣಕ್ಕೆ ಹೊರಟುಹೋಗುವ ಬಯಕೆ. ಶಿವಮೂರ್ತಿಯ ಮೇಲೆ ತಿರಸ್ಕಾರ. ಅವನು ಪ್ರೀತಿಯಿಂದ ಮಾತನಾಡಲು ಆ ಪ್ರೀತಿಯಲ್ಲಿ ಮಧುರ ಭಾವನೆಗಳನ್ನು ಕಾಣಲಿಲ್ಲ. ಆಗಲೇ ಅವಳ ಸುತ್ತಲೂ ಇನ್ನೊಂದು ಹೊಸ ಪ್ರಪಂಚದ ಸೃಷ್ಟಿಯಾಗಿತ್ತು!

* * * *

ತನ್ನ ಕೆಲವು ಬಟ್ಟೆಗಳನ್ನು ಚೀಲದಲ್ಲಿ ತುಂಬಿಕೊಂಡು ಮಂಗಳೂರಿಗೆ ಹೋಗಿಬರುತ್ತೇನೆಂದು ಸುಳ್ಳು ಹೇಳಿ ಹೊರಟಾಗ ತಮ್ಮಯ್ಯನವರು, "ಮರದ ಸಂದೂಕದಲ್ಲಿ ಹಣವಿದೆ. ನಿನಗೆ ಎಷ್ಟು ಬೇಕೋ ಅಷ್ಟು ತೆಗೆದುಕೋ, ಸಂಕೋಚ ಬೇಡ" ಎಂದರು.

ಅವರ ಸ್ವಭಾವವೇ ಹಾಗೆ. ಮಗುವಿನಂತಹ ಬುದ್ಧಿ. ಪೂರ್ಣ ವಿಶ್ವಾಸ, ನಂಬಿಕೆ. ಕಾಂತಿ ಬದುಕಿದ್ದಾಗ ಹಣಕಾಸಿನ ಜವಾಬ್ದಾರಿ, ಗದ್ದೆ ತೋಟದ ಮೇಲ್ವಿಚಾರಣೆ ಅವಳದ್ದು. ಈಗಲೋ ವೃದ್ಧರು ತಮ್ಮಯ್ಯ. ಈ ಹೊಸ ಸೊಸೆಗೆ ಎಲ್ಲವನ್ನೂ ಒಪ್ಪಿಸುವ ಮನಸ್ಸಿದ್ದರೂ ಅದೇಕೋ ಅವಳ ಸ್ವಭಾವದೊಡನೆ ಹೊಂದಿಕೊಳ್ಳಲಾಗಲಿಲ್ಲ ಅಲ್ಲಿ ಅವರಿಗೆ. ಹಾಗಿದ್ದರೂ ಸೊಸೆಗೆ ಹಣದ ತೊಂದರೆ ಬರಬಾರದೆಂದೂ, ಮನಬಂದಷ್ಟು ಖರ್ಚು ಮಾಡುವ ಸ್ವಾತಂತ್ರ್ಯ ನಿನಗಿದೆಯೆಂದೂ ತಿಳಿಸಿದ್ದರು ಅವರು. ಈ ಧೈರ್ಯದಿಂದಲೇ ಆಶಾ ತನಗೆ ಎಷ್ಟು ಬೇಕೋ ಅಷ್ಟು ನೋಟುಗಳ ಕಟ್ಟನ್ನು ತೆಗೆದುಕೊಂಡು ಲೋಹಿತಾಕ್ಷನ ಜೊತೆಯಲ್ಲಿ ಮೈಸೂರಿಗೆ ಹೊರಟುಬಿಟ್ಟಳು ಸದ್ದಿಲ್ಲದೆ....!

ಸದ್ದಿಲ್ಲದೆ ತಲುಪಿದ್ದಾಯ್ತು ಮೈಸೂರನ್ನು. ದೊಡ್ಡದಾದ ಹೋಟೆಲ್‌ನ ಬಾಡಿಗೆ ಕೋಣೆ. ಅಪರಿಚಿತ ಊರಿನಲ್ಲಿ ಈ ಅಪರಿಚಿತ ಹಕ್ಕಿಗಳು ಮನಬಂದತ್ತ ತಿರುಗಿದವು.

ಆಶಾ ಸಂತೋಷದಲ್ಲಿ, ಉನ್ಮಾದದಲ್ಲಿ ಹಕ್ಕಿಯಂತೆ ಹಾರಿದಳು ಗಗನಕ್ಕೆ. ನವಿಲಿನಂತೆ ನರ್ತಿಸಿದಳು ಆನಂದದಲ್ಲಿ ಮೈಮರೆತು. ಸಂತೋಷಾತಿರೇಕದಲ್ಲಿ ಹಾಡಿದಳು ಕೋಗಿಲೆಯಂತೆ. ಲೋಹಿತಾಕ್ಷನೊಡನೆ ಸ್ವರ್ಗದ ಸೋಪಾನವನ್ನೇರಿದಳು ರಾಣಿಯಂತೆ. ರಾತ್ರಿ ಹಗಲು ಅವನ ಸಾಮೀಪ್ಯ, ಮನ ಬಂದೆಡೆ ತಿರುಗಾಟ,... ಆಹ್, ಅದೇನು ಸಂತೋಷ.

"ಇಂತಹ ದಿನಗಳು ಕೊನೆಯವರೆಗೂ ಇರಲಿ ಲೋಹಿತ..." ಎಂದಳಾಕೆ ಲಲಿತಮಹಲನ್ನು ನೋಡುತ್ತ.

"ಮನುಷ್ಯನಿಗೆ ಯಾವ ಬಂಧನವೂ ಇರಬಾರದು. ಎಲ್ಲಿಂದೆಲ್ಲಿಗೆ ಹಾರಿ ಹೋಗುವಂತಿದ್ದರೆ ಆಹಾ ಅದೇನು ಸುಖ" ಎಂದಳು ಜಗನ್ಮೋಹಿನಿ ಪ್ಯಾಲೆಸ್ ನೋಡುತ್ತ.

"ಅಲ್ಲಿ ನೋಡು ಬಣ್ಣದ ಕಾರಂಜಿ. ಇಲ್ಲಿ ನೋಡು ಬಣ್ಣದ ದೀಪ. ಆಹ್, ನೋಡದೋ ಹಸಿರುದೀಪದ ಬೆಳಕು... ಅಲ್ಲಿಯದೋ ಕೆಂಪು ದೀಪ. ಎಂತಹ ದೃಶ್ಯ.... ಈ ಕಣ್ಣುಗಳು ಸಾಲದು..." ಬೃಂದಾವನ ನೋಡುತ್ತಿದ್ದ ಆಶಾಳ ಮನಸ್ಸು ಅಲ್ಲಿಯ ಬಣ್ಣದ ಕಾರಂಜಿಗಳಂತೆ ಸಂತೋಷದಿಂದ ಪುಟಿ ಪುಟಿದು ಉನ್ಮಾದದಿಂದ ತಬ್ಬಿಕೊಂಡಳು ಲೋಹಿತಾಕ್ಷನನ್ನು.

ನಂಜನಗೂಡು, ಶ್ರೀರಂಗಪಟ್ಟಣ ಎಲ್ಲಿ ಬೇಕೆಂದಲ್ಲಿ ತಿರುಗಾಟ. ಹಣ ನೀರಿನಂತೆ ಖರ್ಚಾದಾಗ ಆಶಾ ತನ್ನ ಕೈ ಬಳೆಗಳನ್ನೂ ಮಾರಿಕೊಂಡು ಬಂದ ಹಣವನ್ನು ಲೋಹಿತಾಕ್ಷನಿಗೇ ಕೊಟ್ಟುಬಿಟ್ಟಳು.

"ಆಹ್ ಮೈ ಸ್ವೀಟ್ ಗರ್ಲ್...! ನಿಜಕ್ಕೂ ನನ್ನ ಮೇಲೆ ನಿನಗೆ ಎಷ್ಟು ಪ್ರೀತಿ...." ಎಂದ ಲೋಹಿತಾಕ್ಷ ಅಚ್ಚರಿಯಿಂದ.

ಆಶಾ ಹಿಗ್ಗು ಎಲ್ಲೆ ಮೀರಿತ್ತು. ಆದರೂ ಒಳ ಮನದಲ್ಲಿ ಅದೇ ವ್ಯಥೆ. ವಂಡ್ಸೆಯ ತನ್ನ ಕೋಣೆಯ ನೆನಪು. ಮೂರ್ತಿಯ ನೆನಪು. ಎಷ್ಟು ಹಾರಾಡಿದರೂ ತಾನು ಹಿಂದಿರುಗಿ ಅಲ್ಲಿಗೇ ಹೋಗಬೇಕು. ಅಲ್ಲಿಗೆ ಹೋಗುವುದೆಂದರೆ ಅದೇನೋ ಯಾತನೆ.

"ನನಗಂತೂ ವಂಡ್ಸೆಗೆ ಹೋಗುವುದೇ ಬೇಡ ಎಂದೆನಿಸಿದೆ..."

"ಹಾಗಾದರೆ ಇಲ್ಲಿಯೇ ಇದ್ದುಬಿಡೋಣ...."

"ಓಹೋ ನಾನು ತಯಾರು" ಆಶಾ ಸಂಭ್ರಮದಲ್ಲಿ ಅಂದಳು, "ನಿನಗೆ ಗೊತ್ತಿಲ್ಲ, ನಾನೊಬ್ಬಳೇ ಆ ಕೋಣೆಯಲ್ಲಿ ಎಷ್ಟು ಕಷ್ಟಪಡ್ತೇನೆ ಎಂದು. ರಾತ್ರಿಯೆಲ್ಲಾ ನಿದ್ರೆಯಿಲ್ಲ."

"ಹಾಗೋ" ಉದ್ಗಾರ ತೆಗೆದ ಲೋಹಿತಾಕ್ಷ, "ನಾನು ಕನಸಿನಲ್ಲಿ ಕಾಡ್ತಾ ಇರಬೇಕು ನಿನ್ನನ್ನು ಅಲ್ಲವೇ?"

"ಊಹೂಂ..... ನೀನೇ ಕನಸಿನಲ್ಲಿ ಬಂದರೆ ನನಗೇಕೆ ಹೆದರಿಕೆ? ರಾತ್ರಿ ಮಲಗಿದರೆ ಯಾರೋ ನನ್ನ ಕೋಣೆಯಲ್ಲಿದ್ದಾರೆ ಎಂದೆನಿಸುತ್ತೆ ನನಗೆ."

"ಇನ್ಮೇಲೆ ಚಿಂತೆ ಮಾಡದೆ ನನ್ನನ್ನೇ ಧ್ಯಾನ ಮಾಡು."

ಆಶಾ ಕಣ್ಣುಗಳು ಅರೆ ಮುಚ್ಚಿದವು.... "ಧ್ಯಾನ ಮಾಡ್ತೇನೆ, ನಿನ್ನನ್ನೇ ಪೂಜೆ

ಮಾಡ್ತೇನೆ. ಆ ಮನೆಯ ಎಲ್ಲ ಬಂಧನಗಳನ್ನೂ ಕಿತ್ತೆಸೆದು ನಿನ್ನ ಹತ್ರವೇ ಓಡಿ ಬರ್ತೇನೆ...."

"ಓ ಮೈ.... ಗಾಡ್...!!"

"ಕೈ ಹಿಡಿದವನಿಗೆ ಪ್ರೀತಿಯಿಲ್ಲ ನನ್ನ ಮೇಲೆ. ಮನೆಯವರ ಸ್ವಭಾವಗಳೆಲ್ಲ ವಿಚಿತ್ರ. ನನಗಂತೂ ಅಲ್ಲಿ ಸ್ಥಾನವಿಲ್ಲ. ಯಾರ ಹೃದಯದಲ್ಲಿಯೂ ನನ್ನ ಬಗ್ಗೆ ಆದರವಿಲ್ಲ. ಇನ್ನು ನಾನೇಕೆ ಅಲ್ಲಿರಲಿ? ಒಂದಾಗಿ ಇರೋಣ..... ನಾವಿಬ್ಬರೂ ಒಂದಾಗಿ ವಾಸ ಮಾಡೋಣ.... ಏನ್ಹೇಳ್ತಿ ಲೋಹಿತಾಕ್ಷ?"

ಲೋಹಿತಾಕ್ಷನ ಮುಖ ಗಂಭೀರವಾಯಿತು, "ಅತಿ ಅವಸರ ನಿನ್ನದು."

"ಇಲ್ಲ.... ಇನ್ನೆಂದಿಗೂ ನಾನು ನಿನ್ನ ಬಿಟ್ಟಿರಲಾರೆ. ಅಬ್ಬಬ್ಬ, ಇಷ್ಟು ದಿನವೂ ನರಳಿದ್ದಾಯ್ತು ಅಲ್ಲಿ.... ಇನ್ನೆಂದಿಗೂ ಇರಲಾರೆ. ಹೇಗೂ ಮನೆಬಿಟ್ಟು ಬಂದಾಗಿದೆ ಇಲ್ಲಿಯವರೆಗೆ. ಇಲ್ಲೇ ಇದ್ದುಬಿಡೋಣ. ನೀನು ಹತ್ತಿರವಿದ್ದರೆ ನನಗೆ ಇನ್ಯಾರ ಭಯವೂ ಇಲ್ಲ. ಜೀವನಕ್ಕೆ ಕೆಲಸವೋ ಇನ್ನೇನೋ ಸಿಕ್ಕೀತು."

ಲೋಹಿತಾಕ್ಷ ಹಾರಿಬಿದ್ದ ಈ ಮಾತಿನಿಂದ. ಮುಖದ ಬಣ್ಣ ಬದಲಾಗಿದ್ದರೂ ಕೃತಕ ನಗುವನ್ನೆಳೆದುಕೊಳ್ಳುತ್ತ ಹೇಳಿದ, "ಹೇಗೆ ಸಾಧ್ಯ? ಈ ಪರಕೀಯ ಊರಿನಲ್ಲಿ ಕೋಮಲಾಂಗಿಯಾದ ನೀನ್ಹೇಗೆ ಉಳಿದೀಯೇ? ವಂಡ್ಸೆಯ ಶ್ರೀಮಂತ ಮನೆತನದ ಸೊಸೆಯನ್ನು ಲೋಹಿತಾಕ್ಷ ಓಡಿಸಿಕೊಂಡು ಹೋದ ಎಂದು ಜನ, ಮನೆಯವರೂ ಹೇಳೋದಿಲ್ವೆ?"

"ಹೇಳಲಿ.... ನಂಗೇನಂತೆ ಹೆದರಿಕೆ? ಇನ್ಮೇಲೆ ನಾನಂತೂ ಆ ಮನೆಯಲ್ಲಿ ಒಬ್ಬಳೇ ಇರಲಾರೆ. ಅಲ್ಲಿದ್ದರೆ ಇನ್ನು ಸ್ವಲ್ಪ ಸಮಯದಲ್ಲಿ ಹುಚ್ಚು ಹಿಡಿಯುವುದು ಖಂಡಿತ. ಯಾಕೆ ಸುಮ್ಮನಾದೆ ಲೋಹಿತ್..." ಅವಳು ಅವನ ಅಂಗೈಯನ್ನು ಸವರುತ್ತ ಕೇಳಿದಳು, "ನಿನ್ನ ಜೊತೆ ನಾನಿರುವುದು ನಿನಗಿಷ್ಟವಿಲ್ಲವೇ?"

"ನನ್ನದು ಜಾಲಿ ಲೈಫು. ಯಾರ ಬಂಧನವೂ ನನಗಿಷ್ಟವಿಲ್ಲ. ಯಾರ ಸರಪಳಿಗಳಿಂದಲೂ ನನ್ನ ಕಾಲುಗಳನ್ನು ಕಟ್ಟಿಸಿಕೊಳ್ಳುವ ಇಚ್ಛೆ ನನ್ನದಲ್ಲ."

"ಛೀ ಹೇಡಿ..." ತೀಕ್ಷ್ಣವಾಯಿತು ಆಶಾ ಸ್ವರ, "ನನ್ನ ಸಂಗಡ ನೀನ್ಯಾಕೆ ಸ್ನೇಹ ಬೆಳೆಸಿದೆ...? ದೂರವಿರಬಾರದಿತ್ತೇ?"

"ನಿನ್ನ ಸ್ನೇಹದ ಮಾತೆ.... ಅದು ಬೇರೆಯ ಪ್ರಶ್ನೆ." ಜೋರಾಗಿ ನಕ್ಕ ಅವನು, "ದೂರವಿದ್ದು ಹತ್ತಿರ ಹತ್ತಿರ ಬಂದವರು ಯಾರು ಮೊದಲು? ನೀನಾಗಿಯೇ ನನ್ನ ಕುತ್ತಿಗೆಗೆ ಜೋತು ಬಿದ್ದಿ. ಈಗ ನೋಡೋಣ ನಾನು ಅದೃಷ್ಟವಂತನೋ, ನೀನೋ ಎಂದು."

"ಇಬ್ಬರೂ....!"

"ಇರಬಹುದು. ಚೆನ್ನಾಗಿ ಯೋಚಿಸು ಆಶಾ. ಹೀಗೆ ನಾವಿಬ್ಬರು ಇರುವುದರಲ್ಲಿಯೇ ಇರುವುದು ಮಜಾ! ಸಮಯ ಬಂದಾಗ ನೋಡೋಣ."

ಆಶಾ ಮನದಲ್ಲಿ ಯಾವುದೋ ಅಶಂಕೆ. ಭೀತಿಯಿಂದ ಕಣ್ಣರಳಿಸಿದಳು, "ನಿಜವಾಗಿಯೂ ನೀನು ನನಗೆ ಮೋಸ ಮಾಡುವುದಿಲ್ಲವಲ್ಲ."

"ಹುಚ್ಚೀ.... ನಾನು ನರಿ ಸ್ವಭಾವದವನು ಎಂದುಕೊಂಡಿದ್ದೀಯಾ? ಮೋಸ ಮಾಡುವುದು ನನಗೆ ತಿಳಿದೇ ಇಲ್ಲ." ಕೆನ್ನೆ ಸವರಿದ ಲೋಹಿತಾಕ್ಷ.

ಮರುದಿನ ಏಳುತ್ತಿದ್ದಂತೆ ತಲೆಯೆಲ್ಲಾ ಸುತ್ತಿ ಬಂದು ಮುಖ ತೊಳೆಯುತ್ತಿದ್ದವಳಿಗೆ ವಾಂತಿಯಾಯಿತು. 'ತಿರುಗಾಟದ ಪರಿಣಾಮ. ಗಾಬರಿಯಾಗಬೇಕಿಲ್ಲ.' ತಿಂಡಿ ಗಂಟಲಿನಿಂದಿಳಿಯಲಿಲ್ಲ. ಅವಳ ಸೋತ ಮುಖ ಕಂಡು, ಕಳಕಳಿಯಿಂದ ವಿಚಾರಿಸಿಕೊಂಡ ಲೋಹಿತಾಕ್ಷ.

"ಪಿತ್ತದ ಉಪದ್ರ ಇದು. ಮನೆಯಿಂದ ಹೊರಟಂದಿನಿಂದಲೇ ತಲೆಸುತ್ತುತ್ತಾ ಇತ್ತು. ಇವತ್ತು ವಿಪರೀತ ಸಂಕಟ..." ಎಂದಳು.

ಒಂಬತ್ತು ಗಂಟೆಯ ನಂತರ ಮೃಗಾಲಯಕ್ಕೆ ಹೊರಟರು ಇಬ್ಬರೂ. ಆಶಾಗೆ ಅವನಿಂದ ಒಂದು ನಿಮಿಷವೂ ಅಗಲಲು ಇಷ್ಟವಿಲ್ಲ. ಅವನೊಡನೆ ಈ ಭುವಿಯಲ್ಲಿ ಸಮಾಧಿಯಾದರೂ ಅವಳಿಗಿಲ್ಲ ಬೇಸರ. ಹೋಗುತ್ತಾ ಅಂದಳು,

"ಈ ರೀತಿಯ ಸಂತೋಷ ನನಗೆ ಯಾವಾಗಲೂ ಆಗಿಲ್ಲ, ಆಹ್.... ಮೂರ್ತಿ ಮದುವೆಯಾದ್ಮೇಲೆ ನನ್ನನ್ನು ಎಲ್ಲಿಗೂ ಕರೆದೊಯ್ಯಲಿಲ್ಲ. ನನ್ನ ಮಾತಿಗೇ ಬೆಲೆ ಇಲ್ಲ ಅನ್ನು. ಪ್ರತಿಯೊಂದಕ್ಕೂ ಸರ್ರಕ್ ಅಂತ ರೇಗುವುದು ಅವರ ಸ್ವಭಾವ."

"ನನಗೆ ತಿಳಿದಂತೆ ಮೂರ್ತಿಗೆ ಸಿಟ್ಟು ಕಡಿಮೆಯಲ್ಲವೇ?"

"ಹೊರಗಿನವರ ದೃಷ್ಟಿಯಲ್ಲಿ ಹಾಗೆ. ಆದರೆ ನನಗೇಕೋ ಅವರ ಸ್ವಭಾವ ಅರ್ಥವಾಗುತ್ತಿಲ್ಲ. ಅವರೂ ನನ್ನನ್ನು ಅರ್ಥಮಾಡಿಕೊಂಡಿದ್ದರೆ ಯಾವ ಕಷ್ಟವೂ ಇರ್ತಿರಲಿಲ್ಲ."

"ಅದಕ್ಕೇ ಈಗ ನನ್ನ ಚಾನ್ಸ್!" ಹುಬ್ಬು ಹಾರಿಸಿ ಅವಳ ಕೈಯ್ಯನ್ನು ಒತ್ತಿದ ಮೃದುವಾಗಿ.

ನಡೆದುಕೊಂಡು ಹೊರಟವರಿಗೆ ದಾರಿ ಸಾಗಿದ್ದು ತಿಳಿಯಲಿಲ್ಲ. ಇದ್ದಕ್ಕಿದ್ದಂತೆ ನಡುರಸ್ತೆಯಲ್ಲಿ ಒಮ್ಮೆಲೆ ನಿಂತುಬಿಟ್ಟಳು ಆಶಾ. ಮರುಕ್ಷಣದಲ್ಲಿ ಲೋಹಿತಾಕ್ಷನ ಬಲಗೈಯನ್ನು ಬಿಗಿಯಾಗಿ ಹಿಡಿದು ದೊಡ್ಡ ರಸ್ತೆಯ ಬದಿಗೆ ಸರಿಯುತ್ತ ಆತ ಏನೆಂದು ಕೇಳುವ ಮೊದಲೇ ಇನ್ನಷ್ಟು ರಭಸವಾಗಿ ಎಳೆದುಕೊಂಡು ಹತ್ತಿರದ ದೊಡ್ಡ ಮರವೊಂದರ ಬದಿಗೆ ಆನಿಕೊಂಡು ನಿಂತುಬಿಟ್ಟಳು. ಮುಖ ಬೆವರಿಹೋಯಿತು....

"ಏನಾಯ್ತು ಆಶಾ, ನನಗೆ ಕಾಣಿಸದ ಹುಲಿ, ಆನೆ ಏನಾದರೂ ಬಂದಿತೇ ರಸ್ತೆಯಲ್ಲಿ? ಯಾಕೆ ಹೀಗೆ ನಡುಗ್ತಾ ಇದ್ದೀ?" ಬೆದರುಗಣ್ಣುಗಳಿಂದ ರಸ್ತೆಯಾಚೆ ನೋಡುತ್ತಿದ್ದ ಆಶಾಳನ್ನು ಕಂಡು ಕೇಳಿದ ಲೋಹಿತಾಕ್ಷ.

"ಹುಶ್! ಒಂದ್ನಿಮಿಷ ಸುಮ್ಮನಿರು." ರಸ್ತೆಯಂಚನ್ನು ನೋಡುತ್ತಾ ಕಣ್ಣುಗಳಲ್ಲಿ ಭೀತಿ ತುಂಬಿಕೊಂಡಿದ್ದ ಅವಳನ್ನು ಅರ್ಥವಾಗದೆ ನೋಡಿದ ಲೋಹಿತಾಕ್ಷ. ಏನಾಯಿತು ಇವಳಿಗೆ? ರಸ್ತೆಯಲ್ಲಿ ಯಾರನ್ನು ನೋಡುತ್ತಿದ್ದಾಳೆ? ಕ್ಷಣ ಹೊತ್ತಿನ ನಂತರ ಅವಳ ಕೈಹಿಡಿತ ಸಡಿಲವಾಯ್ತು.

"ಆ ತುದಿಯಲ್ಲಿ ಕಪ್ಪು ಸೂಟು ಹಾಕಿಕೊಂಡು ಹೋಗ್ತಾ ಇದ್ದಾನಲ್ಲ, ಅವನು ನನ್ನ ಸೋದರಮಾವನ ಮಗ ಜಗನ್ನಾಥ..."

"ಅವನಿಗೋಸ್ಕರ ಇಷ್ಟ್ಯಾಕೆ ಹೆದರಬೇಕು? ನಡಿ, ಮಾತನಾಡಿಸೋಣ..."

"ಏನು ತಲೆ ನಿನ್ನದು? ನಾನಿಲ್ಲಿ ನಿನ್ನ ಸಂಗಡ ಇರುವುದು ಅವನಿಗೆ ತಿಳಿದರೆ ಪರಿಣಾಮ ಏನಾಗುತ್ತೆ ಹೇಳು ನೋಡೋಣ. ಹಾಳಾದವನು ಇವತ್ತೇ ಕಾಣಿಸಿಕೊಳ್ಳಬೇಕೇ? ನನಗಿನ್ನು ಉಳಿಗಾಲವಿಲ್ಲ" ರಸ್ತೆಯತ್ತ ನೋಡುತ್ತಾ ಆ ವ್ಯಕ್ತಿ ಕಣ್ಮರೆಯಾದ ನಂತರ ಸರ್ರನೆ ಲೋಹಿತಾಕ್ಷನತ್ತ ತಿರುಗಿದಳು. "ಈಗಿಂದೀಗಲೇ ಸೀದಾ ವಂಡ್ಸೆಗೆ ಹೋಗೋಣ. ಇನ್ನು ಒಂದು ನಿಮಿಷವೂ ಇಲ್ಲಿರಬಾರದು."

"ಅವನೇನು ಭೂತವೇ?"

"ಪ್ಲೀಸ್, ಬೇಗ ನಡಿ." ಮರದ ಬದಿಯಿಂದ ರಸ್ತೆಗಿಳಿದು ಹಿಂದಿರುಗುತ್ತ ಅಂದಳು, "ಇವತ್ತೋ ನಾಳೆಯೋ ಅವನು ವಂಡ್ಸೆಗೆ ಬಂದೇ ಬರುತ್ತಾನೆ. ಅವನು ಬರುವ ಮೊದಲೇ ಮನೆ ಸೇರಿಕೊಳ್ಳಬೇಕು ನಾನು."

"ನಿನ್ನೆ ರಾತ್ರಿ ನಾನೂ ವಂಡ್ಸೆಗೆ ಹೋಗದೆ ನಿನ್ನ ಸಂಗಡ ಇಲ್ಲೇ ಇದ್ದುಬಿಡೋಣ ಎಂದು ನಿರ್ಧಾರ ಮಾಡಿದ್ದೆ." ಚೇಷ್ಟೆಯಡಗಿತ್ತು ಲೋಹಿತಾಕ್ಷನ ಸ್ವರದಲ್ಲಿ. ಕಣ್ಣಗಳಲ್ಲಿ ತುಂಟತನ.

"ಆದರೆ ನನಗೀಗ ಹೋಗಲೇಬೇಕು... ಹುಚ್ಚು ಮನಸ್ಸು ನನ್ನದು. ಏನೇನೋ ಹಾಳು ಯೋಚನೆಯನ್ನು ಮಾಡುತ್ತೆ...."

"ನಿಜ ಆಶಾ, ನೀನಿರುವ ಮನೆ, ನಿನ್ನ ಪರಿಸರ ನೋಡ್ಕೊಂಡು ಹಿಂದು ಮುಂದಿನ ಯೋಚನೆ ಮಾಡಬೇಕು ತಾನೇ? ವೃಥಾ ಹಗಲುಗನಸು!"

"ಯೋಚನೆಯನ್ನು ಮಾಡಿಯೇ ನಾನಿಲ್ಲಿಗೆ ಬಂದದ್ದು...." ತನ್ನ ಬದಲಾದ ನಿರ್ಧಾರಕ್ಕೆ ತಾನೇ ಅಚ್ಚರಿಪಡುತ್ತ ಅಂದಳು ಆಶಾ, "ಜಗನ್ನಾಥನನ್ನು ಕಂಡು ನನಗ್ಯಾಕೋ ಭೀತಿಯಾಗಿಹೋಗಿದೆ. ಈ ಗಳಿಗೆಯಲ್ಲೇ ಮನೆಗ್ಹೋಗಿ ತಲುಪಬೇಕು ನನಗೆ. ಆಮೇಲೆ ನನ್ನ ನಿರ್ಧಾರ ತಿಳಿಸ್ತೇನೆ."

"ನೀನೇನು ಮಾಡ್ತಿಯೋ ಮಾಡಿಕೋ. ನನ್ನನ್ನು ಮಾತ್ರ ಹೆಚ್ಚು ಸತಾಯಿಸಬೇಡ" ಅಸಹನೆಯಲ್ಲಿ ಅಂದ ಲೋಹಿತಾಕ್ಷ. ಆದರೆ ಮುಗುಳ್ನಗೆ ಮೂಡಿತ್ತು ಅವನ ಮುಖದ ಮೇಲೆ.

೮

ಆಶಾ ಅಂದುಕೊಂಡಂತೆ ಮುಂದೆ ಎಂಟು ದಿನಗಳಲ್ಲಿಯೇ ವಂಡ್ಸೆಗೆ ಬಂದು ತಲುಪಿದ ಜಗನ್ನಾಥ. ಈ ಅವಧಿಯಲ್ಲಿ ಲೋಹಿತಾಕ್ಷ ಎರಡು ಬಾರಿ ಮನೆಗೆ ಬಂದರೂ

ಅನ್ಯಮನಸ್ಕಳಾದ ಅವಳು ಅವನನ್ನು ನೋಡಲಿಚ್ಛಿಸಲಿಲ್ಲ, ಹೊಳೆಯ ದಡಕ್ಕೂ ಹೋಗಲಿಲ್ಲ.

ಬೆಳಗಿನ ಅಸೌಖ್ಯ, ಪಿತ್ತವಿಕಾರವನ್ನು ಕಾಣುತ್ತಿದ್ದ ರಂಗಮ್ಮನಿಗೆ ಸಂತಸವೇ ಸಂತಸ. ಮಗುವಿನ ತಾಯಿಯಾಗಲಿರುವ ಅವಳನ್ನು "ಜಾಗ್ರತೆಯಾಗಿರು ಆಶಾ, ಇವೆಲ್ಲ ಸಾಮಾನ್ಯ" ಎಂದರು.

ಮಗುವಿನ ತಾಯಿಯಾಗುವ ವಿಷಯ ಮೊದಲಬಾರಿ ತಿಳಿದಾಗ ಯಾವ ಹೆಂಗಸಾದರೂ ಸಂಭ್ರಮ ಪಡುತ್ತಾಳೆ. ಆದರೆ ಆಶಾ ನೂರು ಸಿಡಿಲುಗಳೆರಗಿದವರಂತೆ ತಲ್ಲಣಿಸಿದಳು ಭೀತಿಯಲ್ಲಿ. ಇದೊಂದು ಅನಿರೀಕ್ಷಿತ. ಇದನ್ನಾಕೆ ಬಯಸಿದ್ದಳೇ?....

ಜಗನ್ನಾಥ ಬಂದಾಗ ಮನೆ ಅಂಗಳದಲ್ಲಿಯೇ ಇದ್ದಳು. ಅವನನ್ನು ನಗುಮುಖದಲ್ಲಿ ಸ್ವಾಗತಿಸುತ್ತ ಅವನು ಮಂಗಳೂರಿನಿಂದಲೇ ಬಂದಿದ್ದನೆಂದು ತಿಳಿದಾಗ ಹೌಹಾರಿ ಹೋದಳು. ಸುತ್ತಮುತ್ತಲೂ ನೋಡುತ್ತ ಹತ್ತಿರ ಯಾರೂ ಇಲ್ಲವೆಂದು ತಿಳಿದುಕೊಂಡು ತಗ್ಗಿದ ಸ್ವರದಲ್ಲಿ "ಸರ್ವನಾಶವಾಯ್ತು ಜಗ್ಗೂ. ಎಂಟು ದಿನಗಳ ಹಿಂದೆ ಮನೆಯವರ ಹತ್ರ ಸುಳ್ಳು ಹೇಳಿ ಮಂಗಳೂರಿಗೆ ಹೋಗಿ ಬರ್ತೇನೆ ಅಂತ ತಿಳಿಸಿ ಗೆಳತಿ ಮನೆಗೆ ಹೋಗಿದ್ದೆ. ಯಾರಿಗೂ ಇಷ್ಟವಿರಲಿಲ್ಲ ನಾನು ಹೋಗುವುದು. ಈಗ ನೀನು ಬಂದುದರಿಂದ ನನ್ನ ಗುಟ್ಟು ರಟ್ಟು...."

"ಮಂಗಳೂರಿಗೆ ಕರ್ಕೊಂಡು ಹೋಗಲೆಂದೇ ಬಂದವನು ನಾನು. ಮೈಸೂರಿನಲ್ಲಿ ಕೆಲಸವಿತ್ತು. ಅದನ್ನು ಮುಗಿಸಿ ಮಂಗಳೂರಿಗೆ ಹೋಗಿ ಬಂದೆ. ನನ್ನ ಜೊತೇಲಿ ಬರ್ತೀಯಾ ಈಗ?"

"ಮನೆಯವರು ಏನ್ಹೇಳ್ತಾರೋ"

"ಅದೆಲ್ಲ ನನಗಿರಲಿ. ಅಲ್ಲ ನೀನ್ಯಾಕೆ ಇಷ್ಟೊಂದು ಇಳಿದು ಹೋಗಿದ್ದಿ? ಕನ್ನಡಿಯಲ್ಲಿ ಮುಖ ನೋಡ್ಕೋ.... ಗುರುತೇ ಸಿಕ್ಕೋಲ್ಲ ನಿನ್ನದು."

ಜಗನ್ನಾಥ ಬಂದನೆಂದರಿತು ಗದ್ದೆಯಿಂದ ಬೇಗನೇ ಮನೆಗೆ ಬಂದರು ತಮ್ಮಯ್ಯ. ಅಂದೇ ಸಾಯಂಕಾಲ ಮೂರ್ತಿಯೂ ಬಂದ ಕುಮಟೆಯಿಂದ. ಉಪಚಾರಗಳೊಂದಿಗೆ ಮಾತು, ಹರಟೆ, ಸಾಹಿತ್ಯ ವಿಮರ್ಶೆಗಳೆಲ್ಲ ನಡೆದವು. ವಂಡ್ಸೆಯಲ್ಲಿ ಆಕಾಶವಾಣಿ ಬೆಂಗಳೂರಿನ ಕಾರ್ಯಕ್ರಮ ಸರಿಯಾಗಿ ಕೇಳಿಸುವುದೇ ಇಲ್ಲ ಎಂದ ಮೂರ್ತಿ. ಮಾತಿನ ಕೊನೆಯಲ್ಲಿ ಜಗನ್ನಾಥ ಹೇಳಿದ,

"ನಾಳೆ ದಿನ ಆಶಾಳನ್ನು ಮಂಗಳೂರಿಗೆ ಕರ್ಕೊಂಡು ಹೋಗ್ತೇನೆ. ನಾನು ಬಂದ್ಮೇಲೆ ಸತ್ಯನಾರಾಯಣ ಪೂಜೆ ಮಾಡುವುದೆಂದು ನಿಶ್ಚಯಿಸಿದ್ದರು ಮನೇಲಿ. ನಿಮಗೆ ಅನಾನುಕೂಲವಾಗುತ್ತೋ ಏನೋ."

"ಹಾಗೇನಿಲ್ಲ. ಕರ್ಕೊಂಡು ಹೋಗಿ. ಅಮ್ಮಾ...." ಮೂರ್ತಿ ತಾಯಿಯತ್ತ ತಿರುಗಿದ, "ನಿನ್ನ ಧರ್ಮಸ್ಥಳದ ಹರಕೆ ಬಾಕಿ ಇತ್ತಲ್ಲ. ಮುಂದಿನವಾರ ನಾನಿಲ್ಲಿಗೆ ಬಂದಾಗ ಒಟ್ಟಿಗೇ ಹೋಗಿ ತೀರಿಸಿಕೊಂಡು ಬರೋಣ." ಒಂದು ಕ್ಷಣ ಯೋಚಿಸಿ ಮತ್ತೆ ಹೇಳಿದ, "ನಾಳೆ ಆಶಾ ಹೋಗಲಿ. ಮುಂದಿನ ವಾರ ಈಶ್ವರಿಯನ್ನು ಕರ್ಕೊಂಡು

ಮಂಗಳೂರಿನಲ್ಲಿ ಒಂದು ರಾತ್ರಿ ಉಳಿದು ಎಲ್ಲರೂ ಧರ್ಮಸ್ಥಳಕ್ಕೆ ಹೋಗಿಬರೋಣ. ಆಗದೇ?"

"ಓಹ್ಹೊ.... ಹ್ಹೊ...." ತಮ್ಮ ಕುರುಡು ಕಣ್ಣುಗಳನ್ನು ತಿಕ್ಕಿಕೊಂಡರು ರಂಗಮ್ಮ "ಆಗಲೇ ಎರಡು ವರ್ಷಗಳಾದವು ಹರಕೆ ಹೇಳಿಕೊಂಡು. ಸಂತೋಷವಪ್ಪ ಸಂತೋಷ. ಧರ್ಮಸ್ಥಳದಿಂದ ಬರ್ರಾಗ ಆಶಾನ್ನ ಕರ್ಕೊಂಡು ಬರೋಣ. ಆಮೇಲೆ ಅವಳು ನಿಮ್ಮಲ್ಲಿಗೆ ಬರುವುದು ಗಂಡು ಮಗೂನ್ನ ಎತ್ತಿಕೊಳ್ಳುವುದಕ್ಕೆ! ನಾಲ್ಕು ತಿಂಗಳ ನಂತರ...."

ಜಗನ್ನಾಥ, ಶಿವಮೂರ್ತಿ ಸಂತೋಷದಿಂದ ಆಶಾಳತ್ತ ತಿರುಗಿದರು. ತಾನು ತಂದೆಯಾಗಲಿದ್ದೇನೆ ಎಂಬ ಹೆಮ್ಮೆಯ ವಿಚಾರದಲ್ಲಿ ಬೀಗಿಹೋಯಿತು ಶಿವಮೂರ್ತಿಯ ಹೃದಯ. ಆದರೆ ತಾನು ಬಂದಾಕ್ಷಣ ಇಂತಹ ಸಂತೋಷದ ವಿಷಯವನ್ನು ಆಶಾ ಯಾಕೆ ತಿಳಿಸಲಿಲ್ಲ? ತಾನಾಗಿಯೇ ತಿಳಿಯಲಿ ಎಂದುಕೊಂಡಳೇ? ಅಥವಾ ರಾತ್ರಿ ತಿಳಿಸೋಣ ಎಂದುಕೊಂಡಳೇ? ಯಾಕೋ ಈ ದಿನ ಸರಿಯಾಗಿ ಮಾತನಾಡಲೇ ಇಲ್ಲ ಅವಳು. ಎಂದಿನಂತೆ ನಗು ಬೀರಲೂ ಇಲ್ಲ. ಏನಾಗಿದೆಯೋ ಇವಳಿಗೆ...

"ಹೋ... ಹೋ... ಕಂಗ್ರಾಚ್ಯುಲೇಶನ್ಸ್ ಆಶಾ..." ಜಗನ್ನಾಥ ಹೇಳುತ್ತ ಶಿವಮೂರ್ತಿಯ ಕೈಕುಲುಕಿದ, "ಮನೇಲಿ ನಿನ್ನೆ ತಾನೇ ನಾವು ನಿಮ್ಮ ವಿಚಾರ ಮಾತನಾಡಿದ್ದೆವು. ಇಲ್ಲಿಗೆ ಬಂದ್ಮೇಲೆ ಇದಕ್ಕಿಂತ ಸಂತಸದ ವಿಷಯ ಬೇರೆ ಬೇಕೇ?"

ಕೋಣೆಯ ತುಂಬಾ ನಗುವಿನ ತರಂಗಗಳಿದ್ದವು. ಎಲ್ಲರ ಮುಖಗಳಲ್ಲಿಯೂ ಸಂತಸದ ಹೊನಲು. ಆದರೆ ಆಶಾಗೆ ಯಾವುದೋ ಕಾರ್ಮುಗಿಲು ಕವಿದಂತೆ. ಈ ನಗೆಯಲ್ಲಿಯೂ ಇನ್ನಾವುದೋ ಕರ್ಕಶತೆ ಇರುವಂತೆ ಭಾಸವಾಗಿ ಎದ್ದುಹೋದಳು ಅಲ್ಲಿಂದ.

* * * *

ಮಂಗಳೂರಿಗೆ ಬಂದಾಗ ಪರಮೇಶ್ವರಯ್ಯ ನಿನ್ನೆಯ ರಾತ್ರೆ ಎಕ್ಸ್‌ಪ್ರೆಸ್ ಬಸ್ಸಿಗೆ ಬೆಂಗಳೂರಿಗೆ ಹೋಗಿದ್ದಾರೆಂಬ ಸುದ್ದಿ ತಿಳಿಯಿತು. ನಿನ್ನೆ ರುಕ್ಮಾಳಿಂದ ಟೆಲಿಗ್ರಾಂ ಬಂದಿತ್ತಂತೆ. ಅದರೊಂದಿಗೇ ಒಂದು ಎಕ್ಸ್‌ಪ್ರೆಸ್ ಕಾಗದ. ತನ್ನ ಗಂಡನಿಗೆ ತೀರಾ ಅಸೌಖ್ಯವೆಂತಲೂ ಬೆಂಗಳೂರು ಆಸ್ಪತ್ರೆಯಲ್ಲಿದ್ದಾರೆಂತಲೂ, ಸಾಧ್ಯವಾದರೆ ಬಂದು ಹೋಗಿ ಎಂದೂ ಬರೆದಿದ್ದಳು.

ಎಷ್ಟೋ ವರ್ಷಗಳ ನಂತರ ಆಶಾಳ ತಾಯಿಯ ಪತ್ತೆಯಾದದ್ದು! ಸಂತೋಷಾತಿರೇಕದಿಂದ ಅಮ್ಮನನ್ನು ನೋಡುವ ಉತ್ಸಾಹದಿಂದ ತಾನೂ ಹೋಗಲಿಚ್ಛಿಸಿದಳು ಬೆಂಗಳೂರಿಗೆ. ಜಗನ್ನಾಥ ಅವಳನ್ನು ಕರೆದೊಯ್ಯಲು ಒಪ್ಪಿಕೊಂಡರೂ ಆಮೇಲೆ ಹೇಳಿದ. "ನಿನ್ನ ತಾಯಿಗೆ ನೀನು ಬೇಡವೇ ಬೇಡ. ಹಾಗಿದ್ಮೇಲೆ ನೀನ್ಯಾಕೆ ಆತುರಪಟ್ಟು ಹೋಗ್ಬೇಕು ಅಲ್ಲಿಗೆ? ಬೇಕಾದರೆ ಅವಳಾಗಿಯೇ ಬರಲಿ ಇಲ್ಲಿಗೆ!"

ನಿಜ ಎನ್ನಿಸಿತು ಆಶಾಗೆ. ಹೆತ್ತ ತಾಯಿಗೇ ಮಗಳು ಬೇಡವಾದ ಮೇಲೆ ಈ ಮಗಳಿಗೇಕೆ ಬೇಕು ಆ ತಾಯಿ?

ಎರಡು ದಿನಗಳ ನಂತರ ಬಂದರು ಪರಮೇಶ್ವರಯ್ಯ. ಈ ಎರಡು ದಿನಗಳಲ್ಲಿ ಆಶಾಳನ್ನು ಚೆನ್ನಾಗಿ ಪರೀಕ್ಷಿಸಿದ ಜಗನ್ನಾಥನಿಗೆ ಅವಳು ಮೊದಲಿನಂತಿಲ್ಲವೆಂದು ತಿಳಿದುಹೋಯಿತು ಸ್ಪಷ್ಟವಾಗಿ. ಇಡೀ ದಿನವೆಲ್ಲ ಗಂಭೀರಳಾಗಿ ಕುಳಿತು ತನ್ನಲ್ಲೇ ಯೋಚನೆ. ಮುಖದಲ್ಲಿ ಯಾತನೆ. ಕಿವಿಗಳಿಗೆ ಹತ್ತಿ ತುಂಬಿಸಿಕೊಂಡು ಮೌನವಾಗಿ ಕುಳಿತುಬಿಡುತ್ತಾಳೆ. ಇಲ್ಲವೇ ತನ್ನಲ್ಲೇ ಗೊಣಗಾಟ. ಊಟ ತಿಂಡಿಯ ಸಮಯದಲ್ಲಿಯೂ ಮನಸ್ಸು ಎತ್ತಲೋ. ಸರಿಯಾಗಿದ್ದ ಹುಡುಗಿಗೆ ಏನಾಯಿತಪ್ಪ ಎಂಬ ಚಿಂತೆ ಜಗನ್ನಾಥನಿಗೆ.

ಅವಳನ್ನು ಕೇಳದೆ ತಾನೇ ಕರೆದೊಯ್ದ ಪರಿಚಯದ ಡಾಕ್ಟರರ ಹತ್ತಿರ. ಅವಳ ಕಿವಿನೋವು, ಬದಲಾದ ಮುಖ ಚಹರೆ, ಕುಂದುತ್ತಿರುವ ಆರೋಗ್ಯದ ಬಗ್ಗೆ ಹೇಳಿಕೊಂಡ ಕಳಕಳಿಯಲ್ಲಿ. ಅವಳನ್ನು ಪರೀಕ್ಷಿಸಿದ ಡಾಕ್ಟರರಿಗೆ ಕಾಯಿಲೆಯ ಲಕ್ಷಣಗಳೇನೂ ಕಾಣಸಿಗಲಿಲ್ಲ.

"ಗರ್ಭಿಣಿ ಹೆಂಗಸು, ತುಸು ವೀಕ್ ಆಗಿದ್ದಾರೆ. ಈ ಟಾನಿಕ್ ಮತ್ತು ಮಾತ್ರೆ ತೆಗೆದುಕೊಳ್ಳಲಿ. ಮೈ ಮನಸ್ಸುಗಳಿಗೂ ವಿಶ್ರಾಂತಿಯಿರಲಿ" ಎಂದರು.

ನಗು ಬಂದಿತು ಆಶಾಗೆ. ಮನೆಗೆ ಹಿಂದಿರುಗುತ್ತ ಅಂದಳು ಚೇಷ್ಟೆಯಲ್ಲಿ, "ಬುದ್ಧಿಗೇಡಿ ಡಾಕ್ಟರರು. ನನ್ನ ಮೈಗೆ ಒಂದಿಷ್ಟೂ ಕೆಲಸವಿಲ್ಲ ಎನ್ನುವುದೂ ತಿಳಿಯಲಿಲ್ಲವೇ?"

"ತಿಳಿದೇ ಹೇಳಿದ್ದು. ದೇಹಕ್ಕೆ ಕೆಲಸವಿದ್ದರೆ ಮನಸ್ಸಿಗೂ ವಿಶ್ರಾಂತಿ. ದೇಹ ಶ್ರಮವಿದ್ದವರಿಗೆ ಯೋಚನೆಗೆ ಅವಕಾಶವೇ ಇಲ್ಲ. ನಿನಗೆ ಕೆಲಸವಿಲ್ಲ. ಇಡೀ ದಿನ ಮಹಡಿ ಕೋಣೆಯಲ್ಲಿ ಏನ್ಮಾಡ್ತಿರ್ತಿಯೋ ದೇವರೇ ಬಲ್ಲ!"

ಎರಡು ದಿನಗಳ ನಂತರ ಬಂದ ಪರಮೇಶ್ವರಯ್ಯನವರಿಂದ ಸುದ್ದಿ ತಿಳಿಯುವ ಆತುರ ಎಲ್ಲರಿಗೂ. "ನಾನು ಹೋದಾಗ ಆಪರೇಶನ್ ಮಾಡಿ ಎರಡು ದಿನಗಳಾಗಿದ್ದವು. ಏನೋ ಗಡ್ಡೆ ಬೆಳೆದಿತ್ತಂತೆ ಹೊಟ್ಟೆಯೊಳಗೆ. ಈಗ ಹುಷಾರಾಗಿದ್ದಾನೆ."

"ಅಮ್ಮ ಹೇಗಿದ್ದಾಳೆ?" ಪ್ರಶ್ನಿಸಿದಳು ಆಶಾ.

"ಇಪ್ಪತ್ತೆರಡು ವರ್ಷಗಳಾದುವಲ್ಲ ನಾನು ನೋಡದೆ. ಪಾಪ, ಪ್ರಾಯ ಕಳೆದು ಮುಪ್ಪು ಆವರಿಸಿದೆ. ತುಮಕೂರಿನಲ್ಲಿ ಇದ್ದಳಂತೆ."

"ಏನು ಕೆಲಸವಂತೆ ಆ ಮಿಂಡನಿಗೆ?" ಹೆಂಡತಿಯ ಸ್ವರ ಕೇಳಿ ಸಿಡಿದೆದ್ದರು ಪರಮೇಶ್ವರಯ್ಯ. "ಮಿಂಡ ಅನ್ನಲಿಕ್ಕೆ ಅವನಿಗೆ ಏನಾಗಿದೆಯೇ? ತುಮಕೂರಿನಲ್ಲಿ ಬಟ್ಟೆ ಅಂಗಡಿ, ಅನಾಥಾಶ್ರಮ ಇದೆಯಂತೆ."

"ಯಾಕೆ... ಅನಾಥಾಶ್ರಮದಲ್ಲಿ ಯಾರಿದ್ದಾರಂತೆ?"

"ಇನ್ನೂ ನಿನ್ನ ಸಿಟ್ಟು ಇಳಿದಿಲ್ಲ. ಬಹಳ ಒಳ್ಳೆಯವನಂತೆ ಅವನು. ಜಾತಿಗೀತಿ

ಕೇಳ್ಲಿಲ್ಲ. ರುಕ್ಮಾ ದೇವರಂತೆ ನೋಡ್ಕೊಂಡಿದ್ದಾಳೆ ಅವನನ್ನು. ಅನಾಥಾಶ್ರಮದಲ್ಲಿ ಅನಾಥ ಮಕ್ಕಳನ್ನು ತಂದು ಸಾಕಿ ವಿದ್ಯೆ ಕೊಟ್ಟು ದೊಡ್ಡವರನ್ನಾಗಿ ಮಾಡ್ತಾರಂತೆ."

"ಹಸಿ ಸುಳ್ಳು! ಅನಾಥವಾಗಿರುವ ಈ ಮಗೂನ್ನ ತೆಗೆದುಕೊಂಡು ಹೋಗಿ ಸಾಕೋದಕ್ಕೆ ಆಗ್ಲಿಲ್ಲ, ಇನ್ನು ಊರವರನ್ನೆಲ್ಲ ಸಾಕ್ತಾಳಂತೆ ಇವಳ ತಲೆಕಾಯಿ."

"ನಂಗೇನೂ ತಿಳೀದು. ನನ್ನನ್ನು ಕಂಡು ಅದೆಷ್ಟು ಸಂತೋಷಪಟ್ಟಳೋ.... ಅತ್ತು ಅತ್ತು ಹಗುರವಾಯ್ತು ಅವಳ ಹೃದಯ. ಪಾಪ, ನಮ್ಮ ಕಣ್ಣಿಗಲ್ಲಿ ಅವಳು ಸುಖಿಯಾಗಿದ್ದರೂ ಅಂತರಂಗದಲ್ಲಿ ದುಃಖಿ. ಮೂರೋ ನಾಲ್ಕೋ ಮಕ್ಕಳಾಗಿದ್ದು ತೀರಿ ಹೋಗಿದ್ದಾವಂತೆ... ಪಾಪ, ಅವನಿಗೆ ಗುಣವಾದ್ಮೇಲೆ ಮನೆಗೆ ಕರ್ಕೊಂಡು ಬಾ ಎಂದಿದ್ದೇನೆ...."

"ಸರಿಹೋಯ್ತು ಬಿಡಿ" ಆವೇಶದಲ್ಲಿ ಕೂಗಿದರು ಅವರ ಹೆಂಡತಿ, "ಆ ನಾಯಿ ಮುಟ್ಟಿದ ಎಂಜಲು ಗಡಿಗೆಗೇ ಮನೆಯಲ್ಲಿ ಉಪಚಾರ! ನಾನೆಂದಿಗೂ ಬಿಡಲಾರೆ..."

"ಎಷ್ಟಿದ್ದರೂ ಒಡ ಹುಟ್ಟಿದವಳು. ಆಪತ್ಕಾಲದಲ್ಲಿ ಸಹಾಯ ಮಾಡುವುದು ನಮ್ಮ ಧರ್ಮ. ಆಶಾ, ನಿನಗೆ ಅಮ್ಮನನ್ನು ನೋಡ್ಬೇಕೂಂತ ಅನ್ನಿಸಿದರೆ ಕರ್ಕೊಂಡು ಹೋಗ್ತೇನೆ."

"ಏನೂ ಬೇಡ ಮಾವಾ. ಅವಳಿಗೆ ನನ್ನನ್ನು ನೋಡ್ಬೇಕೂ ಅಂತ ಇದ್ದರೆ ಇಲ್ಲಿಗೇ ಬರಲಿ...!" ಎಂದಳವಳು ನಿರಾಕರಿಸುತ್ತ.

ತನ್ನ ತಾಯಿ ಗಂಡ ಸತ್ತವಳು. ಆದರೆ ಇನ್ನೊಬ್ಬರ ಪ್ರೇಯಸಿ! ಜನನಿಂದನೆಗೆ ಗುರಿಯಾಗಿ ಅವನೊಡೆ ಬಾಳ್ವೆ ನಡೆಸಲು ಊರು ಬಿಟ್ಟು ಓಡಿದವಳು. ಜನರ ಮಾತು ಅವಳ ಹೆಸರಿಗೆ ಕಳಂಕದ ಮಸಿಯನ್ನು ಬಳಿಯಿತು. ಎಲ್ಲರಿಂದರೂ ತಿರಸ್ಕಾರ, ದ್ವೇಷ, ಅನಾದರ.

'ಇನ್ನು ನಾನು....?' ರಾತ್ರಿ ಮಲಗಿದ ಆಶಾ ತಲೆಯೊಳಗೆಲ್ಲ ಗೊಂದಲ, 'ವಂಡ್ಸೆಯ ಶ್ರೀಮಂತ ಸೊಸೆ ಲೋಹಿತಾಕ್ಷನ ಸಂಗಡ ಹೊರಟುಹೋದರೆ ಜನರು ಏನನ್ನಬಹುದು? ಅವನೊಡನೆ ಬಾಳುವ ಕನಸು ಕಟ್ಟಿ ಓಡಿ ಹೋಗುವುದು ಬಹಳ ಸುಲಭ. ದೂರದ ಊರಿನಲ್ಲಿ ಲೋಹಿತಾಕ್ಷನ ಪ್ರೀತಿಯ ನೆರಳು, ಸಾಮೀಪ್ಯವಿದ್ದರೂ ನನ್ನವರೆನ್ನುವವರು ಯಾರೂ ಇಲ್ಲ. ಒಬ್ಬ ಆತ್ಮೀಯನನ್ನು ಬಯಸಿದ ನಾನು ಎಲ್ಲಾ ಆತ್ಮೀಯರನ್ನೂ ಕಳೆದುಕೊಳ್ಳಬೇಕು. ಆಗ ಸುಖ ಸಿಕ್ಕೀತೇ? ಈಗಿಗಿಂತಲೂ ಹೆಚ್ಚಿನ ಮಾನಸಿಕ ಆಂದೋಲನ! ಅಶಾಂತಿ, ಹೃದಯದ ಬೇಗೆಯಲ್ಲಿ ಜೀವಂತ ದಹನ. ಸುಖಮಯವಾದ ನನ್ನ ಕನಸಿನ ಜೀವನದಲ್ಲಿ ದಳ್ಳುರಿ! ಓ ದೇವರೇ, ಲೋಹಿತಾಕ್ಷನ ಪರಿಚಯವಾದರೂ ನನಗೇಕಾಯಿತು? ಕನಸಿನ ಕುದುರೆಯ ಬೆನ್ನಟ್ಟಿ ನಾನೇಕೆ ಹೋದೆ? ಮೂರ್ತಿ ನನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲವೆಂದು ದೂರುವುದಕ್ಕಿಂತ ನಾನೇ ಅರ್ಥ ಮಾಡಿಕೊಳ್ಳಲಿಲ್ಲ ಎನ್ನುವುದೊಳಿತು! ವಂಡ್ಸೆಯ ಮನೆಯಲ್ಲಿ ಹೊಸತನ್ನು ಕಾಣಲು ಸಾಧ್ಯವಿಲ್ಲವೇ?

'ಎಲ್ಲವನ್ನೂ ಮರೆಯಬೇಕು. ಕಳೆದ ದಿನಗಳನ್ನು ಮನದಿಂದ ತಳ್ಳಿಹಾಕಿ ಮೂರ್ತಿಯನ್ನು ಇನ್ನಷ್ಟು ಹತ್ತಿರ ಮಾಡಿಕೊಂಡು, ನನ್ನ ಪ್ರೇಮಸುಧೆಯಲ್ಲಿ ಅವರು ಕಾಂತಿಯನ್ನು ಮರೆಯುವಂತೆ ಮಾಡಬೇಕು, ಮಾಡುತ್ತೇನೆ...!!'

೬

ಪ್ರಯಾಣಿಕರನ್ನು ಹೊತ್ತ ಬಸ್ಸು ಬೆಳಿಗ್ಗೆ ಸರಿಯಾಗಿ ಒಂಬತ್ತು ಗಂಟೆಗೆ ತಲುಪಿತು ಧರ್ಮಸ್ಥಳವನ್ನು. ಎಲ್ಲರೂ ಹಳೆಯ ಸಂಪ್ರದಾಯವಾದಿಗಳಂತೆ ನೇತ್ರಾವತಿ ನದಿಯಲ್ಲಿ ಮಿಂದು ಮಡಿಯುಟ್ಟು ಕಾಲ್ನಡಿಗೆಯಲ್ಲಿ ದೇವಸ್ಥಾನವನ್ನು ತಲುಪಿದರು. ತಂದ ಸಾಮಾನುಗಳನ್ನು ಒಂದು ಬಾಡಿಗೆ ರೂಮನ್ನು ಪಡೆದುಕೊಂಡು ಅಲ್ಲಿರಿಸಿ ಹೊಟ್ಟೆಗಿಷ್ಟು ಆಹಾರ ತುಂಬಿಸಿಕೊಂಡು ದೇವರ ದರ್ಶನಕ್ಕೆ ಹೊರಟರು ಎಲ್ಲರೂ. ದೇವಸ್ಥಾನದ ಇಕ್ಕೆಲಗಳಲ್ಲಿ ತುಂಬಿಕೊಂಡಿದ್ದ ಸಾಲಂಗಡಿಗಳಿಂದಲೇ ಹಣ್ಣುಕಾಯಿ ತೆಗೆದುಕೊಂಡಾಯ್ತು.

ವಿಶೇಷ ಪೂಜೆಯದಿನ, ಜನರ ಗಲಾಟೆಯೇ ವಿಪರೀತ. ಗಲಾಟೆಯ ಮಧ್ಯದಲ್ಲಿಯೇ ಇವರುಗಳೆಲ್ಲ ಈಶ್ವರ ಧ್ಯಾನ ಮಾಡುತ್ತ ದೇವರ ದರ್ಶನವನ್ನು ಪಡೆದುಕೊಂಡು ಹಣ್ಣುಕಾಯಿ ಅರ್ಪಿಸಿದರು. ಈಶ್ವರಿ ಭಕ್ತಿಯಿಂದ ಅದೆಷ್ಟೋ ಪ್ರದಕ್ಷಿಣೆ ಹಾಕಿದಳು ತನ್ನ ಪಾಡಿಗೆ ತಾನು. ತಮ್ಮಯ್ಯ ತಮ್ಮ ಕುರುಡು ಹೆಂಡತಿಯೊಂದಿಗೆ ಹನ್ನೆರಡು ಪ್ರದಕ್ಷಿಣೆ ಮುಗಿಸಿ ಹೊರಗಿನ ಚಾವಡಿಯಲ್ಲಿ ಬಂದು ಕುಳಿತರು. ಜಗನ್ನಾಥ, ಶಿವಮೂರ್ತಿ, ಪೃಥ್ವಿ ಒಂದೇ ಒಂದು ಪ್ರದಕ್ಷಿಣೆ ಹಾಕಿದರು ಅಷ್ಟೇ.

"ಈಗೆಲ್ಲ ಕಾಲ ಬದಲಾಗಿದೆ ರಂಗೂ...." ತಮ್ಮಯ್ಯ ಹೆಂಡತಿಯೊಂದಿಗೆ ಅಂದರು, "ಮದುವೆಯಾದ ಹೊಸತರಲ್ಲಿ ನಾವಿಲ್ಲಿಗೆ ಬಂದಿದ್ದೆವಲ್ಲ... ಆಗಿನಕ್ಕಿಂತಲೂ ಈಗ ಜನ ಜಾಸ್ತಿ."

"ದೇವರನ್ನು ಹೇಗೆ ಶೃಂಗರಿಸಿದ್ದಾರೆ. ಛೇ, ನನ್ನ ಕಣ್ಣುಗಳನ್ನು ಅಪಘಾತದಲ್ಲಿ ಕಳೆದುಕೊಂಡು ಬಿಟ್ಟಿದ್ದೇನಲ್ಲ...."

"ವ್ಯಥೆ ಪಡಬೇಡ, ನಿನ್ನ ಜೊತೆಯಲ್ಲಿ ನಾನಿದ್ದೇನೆ.... ಆ ಸಲ ದೇವರನ್ನು ನೀನು ಹೇಗೆ ನೋಡಿದ್ದಿಯೋ ಹಾಗೇ ಇದೆ ಈಗಲೂ..."

ಪೃಥ್ವಿ ತನ್ನ ಮುಗ್ಧ ಕಣ್ಣುಗಳನ್ನರಳಿಸಿಕೊಂಡು ಗಣ್ಯ ಮಹನೀಯರೊಬ್ಬರ ತುಲಾಭಾರ ದಿಟ್ಟಿಸುತ್ತಾ ಇದೆ. ತಾನೂ ಒಂದು ತಕ್ಕಡಿಯಲ್ಲಿ ಅಕ್ಕಿಯ ಜೊತೆಯಾಗಿ ಕುಳಿತರೆ ಹೇಗೆ ಎಂದುಕೊಂಡನೇನೋ. ಆಶಾ ಮಾತ್ರ ಅಲ್ಲೇ ಜಗಲಿಗೊರಗಿ ಕುಳಿತುಬಿಟ್ಟಿದ್ದಳು ಮೌನವಾಗಿ.

ಅಷ್ಟರಲ್ಲಿ ದೇವಸ್ಥಾನದ ಆವರಣದಲ್ಲಿ ಗಲಾಟೆಯೇ ಗಲಾಟೆ. ಎಲ್ಲರ ಕಣ್ಣಗಳಲ್ಲಿ ಕುತೂಹಲ. ಸಾಧಾರಣ ಇಪ್ಪತ್ತೇಳು ವರ್ಷದ ಕ್ಷೀಣ ಶರೀರದ ಹುಡುಗಿಯೊಬ್ಬಳನ್ನು

ಮೂವರು ಗಂಡಸರು ಹಿಡಿದುಕೊಂಡಿದ್ದಾರೆ. ಅವಳ ತಲೆಯ ಮೇಲೆ ಮಂತ್ರಿಸಿದ ನೀರಿನ ಅಭಿಷೇಕವಾಗುತ್ತಾ ಇದೆ ಒಬ್ಬ ಅರ್ಚಕನಿಂದ. ಅವಳೋ ಒದ್ದಾಡುತ್ತಾ ಇದ್ದಾಳೆ. ತಲೆಗೂದಲು ಕೆದರಿದ್ದು ಉಟ್ಟ ಸೀರೆಯ ಸೆರಗೂ ಜಾರಿದ್ದು ಮೈಮೇಲಣ ಪ್ರಜ್ಞೆಯಿಲ್ಲದವಳಂತಿದ್ದಾಳೆ. ಮುಖ ವಿಕಾರವಾಗಿ ಹೋಗಿದೆ.

ಕುಳಿತಿದ್ದ ಆಶಾ ಧಡಕ್ಕನೆ ಎದ್ದು ಮೂರ್ತಿಯ ಹತ್ತಿರಕ್ಕೆ ಬಂದು ಅವನ ಕೈ ಬಿಗಿಯಾಗಿ ಹಿಡಿದುಕೊಂಡು ಕೇಳಿದಳು, "ಅವಳನ್ನು ಏನು ಮಾಡ್ತಾ ಇದ್ದಾರೆ?"

"ಮೈಮೇಲೆ ಬಂದ ಭೂತದ ಉಚ್ಚಾಟನೆಯಾಗ್ತಾ ಇದೆ."

"ಇಂಥವರು ಇಲ್ಲಿಗೆ ಬರುವುದು ಸಾಮಾನ್ಯ" ತಮ್ಮಯ್ಯ ಅಂದರು, "ಕಾಲ ಬದಲಾಯಿಸಿದೆ ಎಂದುಕೊಂಡಿದ್ದೆ.... ಬದಲಾಗಿಲ್ಲ! ಇಂಥ ಜನರಿಗೆ ಈ ಸ್ಥಳದ ತೀರ್ಥವೇ ರಾಮಬಾಣ. ಧರ್ಮದ ಸ್ಥಳವೆಂದರೆ ಧರ್ಮಸ್ಥಳ ಒಂದೇ..."

ನೀರಿನ ಅಭಿಷೇಕದ ನಂತರ ಅರ್ಚಕ ಸಣ್ಣ ಕೋಲಿನಿಂದ ಅವಳ ಬೆನ್ನಿಗೆ ಏಟನ್ನು ಹಾಕತೊಡಗಿದ. ನೋವನ್ನು ತಾಳಲಾರದೆ "ಅಯ್ಯಮ್ಮೋ" ಎಂದರಚಿದಳು ಆಕೆ.

ಹೃದಯಕ್ರಿಯೆ ನಿಂತವರಂತೆ ಚಡಪಡಿಸಿದಳು ಆಶಾ.

"ಹೋಗ್ತೀಯೋ ಇಲ್ಲವೋ.... ಹೋಗ್ತೀಯೋ ಇಲ್ಲವೋ...! ಕಾಯುವ ದೇವರು ಮಂಜುನಾಥ ಒಬ್ಬನೇ. ಹೂಂ, ತೊಲಗು..." ಪೆಟ್ಟು ಹಾಕುತ್ತ ಅಬ್ಬರಿಸಿದಾಗ ಆ ಹುಡುಗಿ ಹೂಂಕರಿಸಿದಳು ನಾಲ್ಕು ಬಾರಿ.

ಕೋಲು ನೆಲವನ್ನಪ್ಪಿತು. ಆಮೇಲೆ ಇನ್ನೊಮ್ಮೆ ತಲೆಯ ಮೇಲೆ ನೀರಿನ ಪ್ರೋಕ್ಷಣೆ. ಹುಡುಗಿ ನಡುಗುತ್ತಿದ್ದಳು ತರಗೆಲೆಯಂತೆ. "ಇನ್ನು ಯಾರು ಕಾಟವೂ ಇಲ್ಲ. ಹೋಗಿ ಪ್ರಸಾದ ತೆಗೆದುಕೊಳ್ಳಿ" ಎಂದ ಅರ್ಚಕ ದರ್ಪದ ಧ್ವನಿಯಲ್ಲಿ.

ಆ ಮೂವರು ಗಂಡಸರು ದರದರನೆ ಎಳೆದುಕೊಂಡು ಹೊರಟರು ಅವಳನ್ನು. ಕ್ಷೀಣಕಾಯದ ಅವಳು ಹೇಗೋ ಕಾಲೆಳೆದುಕೊಂಡು ಹೊರಟಳು ಅವರ ಹಿಂದೆ. ಈಗಿನ ಕಾಲದ ಆಧುನಿಕ ಮನೋಭಾವದ ಜಗನ್ನಾಥ ಇದನ್ನು ನೋಡುತ್ತ ಹುಬ್ಬೇರಿಸಿದ,

"ಮಿಸ್ಟರ್ ಮೂರ್ತಿ, ನೀವಿದನ್ನು ನಂಬ್ತೀರಾ?"

"ಹಿಂದೆ ನಾನಿಲ್ಲಿಗೆ ಬಂದಾಗ" ತಮ್ಮಯ್ಯ ಅಂದರು, "ಇಂತಹದೇ ಒಂದು ಹುಡುಗಿ ಬಂದಿತ್ತು ಇಲ್ಲಿಗೆ. ಬ್ರಹ್ಮರಾಕ್ಷಸ ಹಿಡಿದಿತ್ತಂತೆ. ಇಲ್ಲಿಗೆ ಬಂದು ತೀರ್ಥ ಹಾಕಿಸಿಕೊಂಡ ಮೇಲೆಯೇ ಗುಣವಾಯ್ತು ಅವಳಿಗೆ. ಈ ಸ್ಥಳದ ಮಹಿಮೆ....! ಇಲ್ಲಿಯ ದೇವರ ತೀರ್ಥ ಮೈಮೇಲೆ ಬಿದ್ದರೆ ಸಾಕು, ಎಲ್ಲಾ ವಾಸಿ. ಎಂತಹ ಭೂತಗಳಿದ್ದರೂ ಪರಾರಿ..."

"ಕೆಲವರು ಹೇಳ್ತಾರಲ್ಲ ಅಪ್ಪಾ" ಈಶ್ವರಿ ಅಂದಳು, "ನೇತ್ರಾವತಿ ನದಿ ದಾಟಿ ದೇವಸ್ಥಾನಕ್ಕೆ ಬರುವಾಗ ಮೈಯಲ್ಲಿ ಸೇರಿರುವ ಭೂತ ಅಲ್ಲೇ ನಿಲ್ತಾವಂತೆ. ಪುನಃ ಅವರು ಹಿಂದಕ್ಕೆ ನದಿ ದಾಟಿದಾಕ್ಷಣ ಮೈಯ್ಯನ್ನು ಸೇರಿಕೊಳ್ತಾವಂತೆ. ನಿಜವೇ?"

"ಅನಾಗರಿಕತೆಯ ಲಕ್ಷಣ ಇದು" ಜಗನ್ನಾಥ ಜೋರಾಗಿ ನಕ್ಕ. "ಆ ಹುಡುಗಿಗೆ

ನರಗಳ ದೌರ್ಬಲ್ಯ ಅಥವಾ ಇನ್ನೇನೋ ಮಾನಸಿಕ ಕಾಯಿಲೆಯಿದ್ದಿರಬೇಕು. ಈ ತಣ್ಣೀರು ತತ್ಕಾಲ ನಂಬಿಕೆಯ ಶಮನ ಕೊಟ್ಟೀತು.... ಅಷ್ಟೇ. ಇದಕ್ಕೆಲ್ಲ ಡಾಕ್ಟರುಗಳೇ ವಾಸಿ."

"ನಂಬಿಕೆಗಿಂತ ಮಿಗಿಲಾಗಿ ಇಲ್ಲಿ ಸ್ಥಳದ ಮಹಿಮೆ. ಈ ಪವಿತ್ರ ಸ್ಥಳದಲ್ಲಿ ಎಂತಹ ಕಾಯಿಲೆಯೂ ವಾಸಿಯಾಗುತ್ತೆ" ಮೂರ್ತಿ ಹೇಳಿದ, "ನಂಬಿಕೆಯಿದ್ದು, ಇಲ್ಲದೆ ಬಂದ ಎಷ್ಟೋ ಜನರಿಗೆ ಈ ಪುಣ್ಯಕ್ಷೇತ್ರಗಳಲ್ಲಿ ಕಾಯಿಲೆ ವಾಸಿಯಾದದ್ದುಂಟು. ಭಾರತದ ಎಲ್ಲಾ ಕ್ಷೇತ್ರಗಳಲ್ಲಿಯೂ ಇದು ಸಾಮಾನ್ಯ."

"ನಂಬಿಕೆಯೇ ಪ್ರಧಾನ" ತಮ್ಮಯ್ಯ ಧೋತರದ ಚುಂಗನ್ನು ಸರಿಪಡಿಸಿಕೊಳ್ಳುತ್ತ ಅಂದರು, "ನಂಬಿದವರ ಕೈ ಬಿಡನು ಮಂಜುನಾಥ!"

"ನಂಬಿಕೆ ಎಂಬ ಮಾತನ್ನು ಖಂಡಿತವಾಗಿಯೂ ಒಪ್ಪಿಕೊಳ್ತೇನೆ ನಾನು. ಇಲ್ಲಿಗೆ ಬಂದಾತ ಇಲ್ಲಿಯ ತೀರ್ಥ ಮೈಮೇಲೆ ಬಿದ್ದರೆ ಅಥವಾ ತಾನದನ್ನು ಸ್ವೀಕರಿಸಿದರೆ ತನ್ನ ಕಾಯಿಲೆ ವಾಸಿಯಾಗುತ್ತೆ ಎಂದು ಬಲವಾಗಿ ನಂಬಿಕೊಂಡಿರುವುದರಿಂದಲೇ ಗುಣ ಸಿಕ್ಕುತ್ತೆ. ಆದರೆ ಈ ಸ್ಥಳದ ಮಹಿಮೆಯಿಂದಲ್ಲ..." ಎದುರು ಸವಾಲು ಹಾಕಿದ ಜಗನ್ನಾಥ.

"ನೀವು ಹೇಳಿದ್ದು ನಿಜ," ಈಶ್ವರಿ ಒಪ್ಪಿಕೊಂಡಳು ಅವನ ಮಾತನ್ನು, "ನಂಬಿಕೆ ಮುಖ್ಯ. ಅಪ್ಪಯ್ಯ ಒಂದು ಲೋಟ ನೀರನ್ನು ಗಾಯತ್ರಿ ಮಂತ್ರವನ್ನು ಜಪಿಸುತ್ತ ಎರಡು ತುಲಸೀ ದಳದ ಸಮೇತ ಕೊಟ್ಟರೆ ಎಷ್ಟೋ ಜನರ ಹೆದರಿಕೆ ವಾಸಿಯಾಗುತ್ತಲ್ಲ...."

ಅಷ್ಟರಲ್ಲಿ ಕಾಣಿಕೆ ಡಬ್ಬದ ಹತ್ತಿರ ಇನ್ನೊಂದು ದೊಡ್ಡ ಗಲಾಟೆ. ಧರ್ಮಸ್ಥಳದ ದೇವರ ಹೆಸರಿನಲ್ಲಿ ಸುಳ್ಳು ಹೇಳಿ ಆಣೆ ಹಾಕಿದ ಒಬ್ಬಾತ ಈಗ ತಪ್ಪು ಕಾಣಿಕೆಯೆಂದು ಒಂಬತ್ತು ರೂಪಾಯಿಗಳನ್ನು ಹಾಕಬೇಕಾಗಿದೆ ಕಾಣಿಕೆ ಡಬ್ಬಕ್ಕೆ. ತಾನು ಮಾಡಿದ ತಪ್ಪಿಗೆ ತನ್ನನ್ನೇ ಶಪಿಸಿಕೊಳ್ಳುತ್ತ ತನ್ನ ಹರಕು ಬಟ್ಟೆಯ ಗಂಟಿನಿಂದ ಮಾಸಿದ ನೋಟುಗಳನ್ನು ತೆಗೆದು ಕಣ್ಣೀರು ಸಮೇತ ಹಾಕುತ್ತಿದ್ದಾನೆ ಡಬ್ಬಿಯೊಳಗೆ. ಇವನಂತೆ ಅದೆಷ್ಟೋ ಜನರು ತಾವು ಹೇಳಿದ ತಪ್ಪಿಗೆ, ಸುಳ್ಳು ಪ್ರಮಾಣಕ್ಕಾಗಿ ಕಾಣಿಕೆ ಹಾಕಲು ನಿಂತಿದ್ದಾರೆ ಡಬ್ಬಿಯ ಹತ್ತಿರ.

"ಎಂತಹ Silly ಜನಗಳು!" ಜಗನ್ನಾಥ ಮುಖ ಓರೆ ಮಾಡುತ್ತ ಅಲ್ಲಿಂದೀಚೆಗೆ ಸರಿದ, "ದೇವರ ಹೆಸರಿನಲ್ಲಿ ಬಡವರಿಂದ ಹಣ ಸೆಳೆಯುವ ಉಪಾಯ...!"

"ಹೋಯ್.... ತಪ್ಪಾಯ್ತು ಎನ್ನಿ" ಗಡಬಡಿಸಿಕೊಂಡು ಅಂದರು ತಮ್ಮಯ್ಯ, "ನೀವು ನಿಂತಿರುವುದು ಆಕಾಶವಾಣಿ ಕೇಂದ್ರದಲ್ಲಲ್ಲ, ದೇವಸ್ಥಾನದ ಎದುರಿನಲ್ಲಿ ಎನ್ನುವುದು ನೆನಪಿರಲಿ, ತಪ್ಪಾಯ್ತು ಎನ್ನಿ."

"ಶಿವಮೂರ್ತಿ..." ಜಗನ್ನಾಥ ಇತ್ತ ಹೊರಳಿದ, "ನೀವು ತುಂಬ ಓದಿದವರು. ನೀವೂ ನಂಬ್ತೀರಾ ಇದನ್ನೆಲ್ಲ?"

"ಕೆಲವೊಮ್ಮೆ ನಂಬಲೇಬೇಕಾಗುತ್ತೆ."

"ಸುಬ್ರಹ್ಮಣ್ಯದಲ್ಲಿ 'ಮಡಿಸ್ನಾನ' ಇದೆಯಲ್ಲ, ನೋಡಿರಬೇಕು ನೀವೆಲ್ಲರೂ.

ಯಾರ್ಯಾರೋ ಊಟ ಮಾಡಿದ ಎಂಜಲಲ್ಲಿ ಹೊರಳುವುದು. ಇದೊಂದು ಹರಕೆಯಂತೆ! ಓಹ್, What a dirty place...! ತ್ಸೂ... ತ್ಸೂ..."

ಮೂರ್ತಿ ನಕ್ಕ, "ಆಧುನಿಕರು ನೀವು ಅಲ್ಲವೇ."

"ಇಂತಹುದನ್ನು ಕಂಡಾಗ ನನಗೇಕೋ ಕಸಿವಿಸಿ. ಮನದಲ್ಲಿ ಹೆಚ್ಚು ಹೆಚ್ಚು ವಿಮರ್ಶೆ ಮಾಡ್ತೇನೆ. ಸತ್ಯವನ್ನು ಮಾತ್ರ ಒಪ್ಪಿಕೊಳ್ತೇನೆ."

"ಎಷ್ಟಿದ್ದರೂ ಆಕಾಶವಾಣಿ ಕೇಂದ್ರದವರು ನೀವು. ಇದೇ ವಿಚಾರದಲ್ಲಿ ಒಂದು ಪ್ರಬಂಧ ಬರೆದು ಪ್ರಸಾರ ಮಾಡಿಬಿಡಿ. ನಾಟಕವಾದರೂ ಆಗಬಹುದು" ನಗುತ್ತ ಅಂದಳು ಈಶ್ವರಿ.

ವಾದ ವಿವಾದ ಇನ್ನೂ ಬೆಳೆಯುತ್ತಿತ್ತೋ ಏನೋ, ಮಂಗಳಾರತಿಯ ಹೊತ್ತಾದುದರಿಂದ ಎಲ್ಲರೂ ಅತ್ತ ತಿರುಗಿದರು. ಪ್ರಸಾದ ದೊರೆತ ನಂತರ ದೇವಸ್ಥಾನದಲ್ಲಿಯೇ ಊಟ. ಹಸಿದ ಹೊಟ್ಟೆಗೆ ಅದು ಅಮೃತ ಸಮಾನ.

ಊಟದ ನಂತರ ಅಲ್ಲಿಯೇ ಹತ್ತಿರವಿರುವ ಹೂದೋಟಕ್ಕೆ ಭೇಟಿ. ಅಲ್ಲಿಯ ಪ್ರಾಣಿ-ಪಕ್ಷಿಗಳನ್ನು, ಹೂವಿನ ಮಂಟಪವನ್ನು ಕಣ್ತುಂಬ ನೋಡಿ ಬಾಯ್ತುಂಬ ಹೊಗಳಿ ವಸತಿಗೃಹಕ್ಕೆ ಹಿಂದಿರುಗಿದ್ದಾಯ್ತು. ಸಾಯಂಕಾಲ ಅಲ್ಲಿಯ ಬಸ್ತಿ, ಜಮೆ ಉಗ್ರಾಣ, ಶಾಲೆ, ಅಮ್ಮನವರ ಗುಡಿ ಎಲ್ಲವನ್ನೂ ನೋಡಿದ್ದಾಯ್ತು. ರಾತ್ರೆ ವಸತಿಗೃಹದಲ್ಲಿಯೇ ನಿಲ್ಲುವ ಏರ್ಪಾಟು ಮಾಡಿಕೊಂಡಿದ್ದರು. ರಾತ್ರಿಯೂ ದೇವಸ್ಥಾನದಲ್ಲಿಯೇ ಊಟ.

"ಕಾಲ ಬದಲಾಗಿಲ್ಲ ರಂಗೂ..." ವಸತಿಗೃಹಕ್ಕೆ ಹಿಂದಿರುಗುತ್ತ ಅಂದರು ತಮ್ಮಯ್ಯ, "ಜನರ ಉಡುಪು ತೊಡಪು ಬದಲಾಗಿದ್ದರೂ ಆಚಾರ ವಿಚಾರ ಬದಲಾಗಿಲ್ಲ. ನಾನು ಚಿಕ್ಕವನಿದ್ದಾಗ ಹೇಗೆ ದೇವಸ್ಥಾನ ಇತ್ತೋ ಹಾಗೇ ಇದೆ ಈಗಲೂ. ಇನ್ನೂ ಜನ ಹೆಚ್ಚು...."

ದೀಪದ ಬೆಳಕಿನಲ್ಲಿ ಹಾಸಿಕೊಂಡ ಹಾಸಿಗೆಯ ಮೇಲೆ ಕುಳಿತುಕೊಂಡು ಮಾತಿಗಾರಂಭವಾಯಿತು. ಎಲ್ಲೆಲ್ಲೋ ಬಳಸಿ ಹೋದ ಮಾತು ಅಂದು ಮಧ್ಯಾಹ್ನ ನಡೆದ ಘಟನೆಯನ್ನು ಎತ್ತಿಕೊಂಡಿತು. ವಾದದಲ್ಲಿ ನಿಸ್ಸೀಮ ಜಗನ್ನಾಥ. ಅವನ ವಾದವನ್ನು ಅಲ್ಲಗಳೆಯುವ ಮೂರ್ತಿ. ತಮ್ಮಯ್ಯನವರು ನೀಟಾಗಿ ಕುಳಿತರು. ಆಶಾ ಹಾಗೂ ಈಶ್ವರಿಯರಿಗೆ ಇವರ ಚರ್ಚೆ ಕೇಳುವ ಕುತೂಹಲ.

"ಇವತ್ತು ಮಧ್ಯಾಹ್ನ ನೋಡಿದ ಹುಡುಗಿಯ ಮೈಯ್ಯಲ್ಲಿ ಭೂತ ಸೇರಿಕೊಂಡಿಲ್ಲ ಎನ್ನುತ್ತೀರಾ ನೀವು?" ತಮ್ಮಯ್ಯ ಕೇಳಿದರು, "ನಾಳೆ ಬೆಳಿಗ್ಗೆಯೊಳಗಾಗಿ ಅವಳು ಹುಷಾರಾಗಿರ್ತಾಳೆ..."

"ಮೊನ್ನೆ ನನ್ನ ಗೆಳೆಯ ಸಿಕ್ಕಿದ್ದ" ಮೂರ್ತಿ ಹೇಳಿದ, "ಅವನ ತಂಗಿಗೆ ಏನೋ ಅಸೌಖ್ಯ. ರಾತ್ರಿಯೆಲ್ಲಾ ನಿದ್ರೆಯಿಲ್ಲ. ಹೆದರಿಕೆ. ಯಾರೋ ತನ್ನ ಹತ್ರ ಇದ್ದಾರೆ ಅಂತ ಅನ್ನಿಸುತ್ತಾ ಇತ್ತಂತೆ. ಎಷ್ಟೋ ಸಲ ಹುಚ್ಚೀ ತರಹ ಕೂಗಾಡ್ತಾ ಇದ್ದಳಂತೆ. Mental worries (ಮಾನಸಿಕ ಚಿಂತೆ) ಎಂದು ಎಷ್ಟೋ ಡಾಕ್ಟರುಗಳು ಪರೀಕ್ಷಿಸಿ ಶಾಕ್

ಟ್ರೀಟ್‌ಮೆಂಟ್ ಮಾಡಿದ್ದರಂತೆ. ಪ್ರಯೋಜನ ಮಾತ್ರ ಸೊನ್ನೆ. ಕೊನೆಗೆ ಧರ್ಮಸ್ಥಳಕ್ಕೆ ಕರ್‍ಕೊಂಡು ಬಂದರಂತೆ. ಈಗ ಪೂರ್ಣ ಗುಣವಾಗಿದೆಯಂತೆ ಅವಳಿಗೆ."

"ಏನು....? ನೀರಿನ ಅಭಿಷೇಕದಿಂದಲೇ?"

"ಇಲ್ಲಿನ ನೀರು ತಲೆಯ ಮೇಲೆ ಬೀಳುತ್ತಿದ್ದಂತೆ ಅವಳ ಮೈಯಲ್ಲಿ ಸೇರಿಕೊಂಡಿದ್ದ ಅವಳ ಸೋದರತ್ತೆಯ ಭೂತವೋ ಪ್ರೇತವೋ ಏನೋ ಒಂದು ಬಿಟ್ಟು ಹೋಯ್ತಂತೆ. ಈಗವಳಿಗೆ ಮ್ಯಾರೇಜ್ ನಿಶ್ಚಯವಾಗಿದೆ. ಇದಕ್ಕೇನು ಹೇಳ್ತೀರಾ?"

ಆಶಾ ಕುಳಿತಲ್ಲಿಂದ ಎದ್ದು ಮೂರ್ತಿಯ ಹತ್ತಿರ ಬಂದು ಕುಳಿತುಕೊಂಡಳು ಸದ್ದಿಲ್ಲದಂತೆ. ಪುಟ್ಟಿ ಅಲ್ಲೇ ನಿದ್ದೆ ಹೋಗಿದ್ದ.

"ನಿಮಗೆ ಗೊತ್ತಿಲ್ಲ...." ಮಾತು ಮುಂದುವರಿಸಿದ ಮೂರ್ತಿ, "ನಮಗೆ ತಿಳಿಯದ ಅನೇಕ ವಿಚಾರಗಳಿವೆ ನಮ್ಮ ಸುತ್ತಲೂ. ನಾವಿಲ್ಲಿ ಕುಳಿತಿದ್ದಾಗಲೂ ನಮ್ಮ ಸುತ್ತಮುತ್ತ, ಅನೇಕ ಶಕ್ತಿಗಳು ತುಂಬಿಕೊಂಡಿರಬಹುದು. ಕಣ್ಣಿಗೆ ಕಾಣುವುದನ್ನು, ಕಂಡಷ್ಟು ಇಲ್ಲಿರುವುದು ಎಂದುಕೊಂಡರೆ ನಮ್ಮ ಊಹೆ ತಪ್ಪು. ಕಣ್ಣಿಗೆ ಕಾಣದ, ಕಿವಿಗೆ ಕೇಳದ, ಮೈಯ್ಯನ್ನು ಸ್ಪರ್ಶಿಸದ ಅನೇಕಾನೇಕ ಸೂಕ್ಷ್ಮಾತಿಸೂಕ್ಷ್ಮ ಶಕ್ತಿಗಳು ಇದ್ದಿರಬಹುದು ನಮ್ಮ ಸುತ್ತಲೂ. ಅದೇಕೆ ನೀವು ರೇಡಿಯೋ ಸ್ಟೇಷನ್‌ನಲ್ಲಿ ಬಿತ್ತರಿಸುವ ಸುದ್ದಿ ಗಾಳಿಯಲೆಯ ಮೂಲಕ ಬಂದು, ರೇಡಿಯೋ ಟ್ಯೂನ್ ಮಾಡಿದಾಕ್ಷಣ ನಮ್ಮ ಒಳಕಿವಿಯನ್ನು ಸ್ಪರ್ಶಿಸುವುದಿಲ್ಲವೇ?"

"ಹಾಗಾದರೆ ಇದೇ ಶಕ್ತಿಗಳಿಗೆ ಭೂತ ಪ್ರೇತ ಎಂಬ ನಾಮಕರಣಗಳನ್ನು ಮಾಡಿದ್ದಾರಲ್ಲವೇ?" ವ್ಯಂಗ್ಯವಾಗಿ ನಕ್ಕ ಜಗನ್ನಾಥ.

"ಇನ್ನೊಬ್ಬರ ಮೈಯ್ಯನ್ನು ಸ್ಪರ್ಶಿಸಿ, ದೇಹವನ್ನು ಸೇರಿ ಪ್ರಭಾವ ತೋರಿಸುವ ಕೆಲವು ಶಕ್ತಿಗಳನ್ನೇ ಭೂತ ಎನ್ತೇವೆ."

"ಅಣ್ಣಾ" ಈಶ್ವರಿ ಮುಂದೆ ಸರಿದು ಅಂದಳು, "ಮೃತ ವ್ಯಕ್ತಿಗೆ ಜೀವನದಲ್ಲಿ ಮಹತ್ತರವಾದ ಆಸೆಗಳಿದ್ದರೆ, ಆ ಆಸೆಗಳೊಂದೂ ನೆರವೇರದೆ ತೀರಿಹೋದಲ್ಲಿ ಅಂತವರು ಭೂತಗಳಾಗ್ತಾರೆಯೇ?"

"ಕರ್ಮಾಂತರಗಳನ್ನು ಸರಿಯಾಗಿ ಮಾಡದೇ ಇದ್ದಲ್ಲಿ ಮೃತವ್ಯಕ್ತಿ ತನಗೆ ಹತ್ತಿರವಾದವರನ್ನು ಪೀಡಿಸುತ್ತಾನೆಂದು ಹೇಳುತ್ತಾರೆ ನಮ್ಮ ಹಿರಿಯರು. ಅದಕ್ಕೇ ಶ್ರಾದ್ಧ, ತಿಥಿ ಎಂಬ ನೇಮವಿರುವುದು. ಆಸೆಯಿದ್ದ ಮೃತವ್ಯಕ್ತಿ ಅಂತರ್‌ಪಿಶಾಚಿಯಾಗಿ ತನ್ನ ಆಸೆಗಳನ್ನು ಪೂರೈಸಿಕೊಳ್ಳಲಾಗದೆ ಕೆಲವೊಮ್ಮೆ ಇನ್ನೊಬ್ಬರ ದೇಹವನ್ನು ಪ್ರವೇಶಿಸುತ್ತಾನೆ. ಇದನ್ನೇ ಭೂತ ಹಿಡಿದದ್ದು ಎನ್ನುತ್ತೇವೆ."

ಮಾತು ಭೂತ, ಪ್ರೇತ, ಪುನರ್ಜನ್ಮಗಳತ್ತ ತಿರುಗಿತು. ತದೇಕಚಿತ್ತಳಾಗಿ ಕೇಳುತ್ತಿದ್ದ ಆಶಾ ಮುಖ ಬಿಳುಪೇರಿದ್ದು ಗಮನಿಸಲಿಲ್ಲ ಯಾರೂ. ರಂಗಮ್ಮ ಮಲಗಿದ್ದರೂ ಮಾತಿನ ಮಧ್ಯೆ ಒಗ್ಗರಣೆ ಹಾಕುತ್ತಾ ಇದ್ದರು. ಅವರ ಮಾತು ಕೊನೆಯಲ್ಲಿ ಕಾಂತಿಯ ಸಾವಿನ ವಿಚಾರಕ್ಕೆ ತಿರುಗಿ ಚರ್ಚೆ ಪ್ರಾರಂಭವಾಯಿತು. ಕಾಂತಿಯ ವಿಷಯ ಬಂದಾಗ ಶಿವಮೂರ್ತಿಯ ಕಣ್ಗಳಲ್ಲಿ ನಿಸ್ತೇಜ ಭಾವ

ಮೂಡಿದರೂ ಉತ್ಸಾಹದಿಂದ ನೆಟ್ಟಗೆ ಕುಳಿತುಕೊಂಡ.... ಮಾತು ಸಾಗಿತು, ಕಾಂತಿಯ ಹೊಗಳಿಕೆಯೊಂದಿಗೆ....

ಇದ್ದಕ್ಕಿದ್ದಂತೆ ಜೋರಾಗಿ ಕೂಗಿಕೊಂಡಳು ಆಶಾ, "ಸಾಕು ನಿಲ್ಲಿಸಿ ಇನ್ನು...."

ಎಲ್ಲರಿಗೂ ಅಚ್ಚರಿಯೇ ಅಚ್ಚರಿ. ಜಗನ್ನಾಥ ಹತ್ತಿರ ಬಂದಾಗ ಅವಳು ಮೂರ್ತಿಯ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಸಣ್ಣಗೆ ನಡುಗುತ್ತಾ ಇದ್ದಳು.

"ಹೆದರು ಪುಕ್ಕಲು... ಏಯ್, ನಿನಗಿಷ್ಟವಿಲ್ಲದಿದ್ದರೆ ತೆಪ್ಪಗೆ ಕಿವಿಯಲ್ಲಿ ಹತ್ತಿ ತುಂಬಿಸಿಕೊಂಡು ಮಲಗಿಬಿಡು" ಎಂದ ಮೂರ್ತಿ.

ಮಾತು ಮತ್ತೆ ಮುಂದುವರಿಯಿತು. ತಮ್ಮಯ್ಯನವರೂ, ರಂಗಮ್ಮನೂ ಕಾಂತಿ ಸತ್ತ ದಿನ ಮನೆಯ ಹಿಂಬದಿಯಿಂದ ಹಕ್ಕಿಯ ಕೂಗನ್ನು ಕೇಳಿದೆವೆಂದೂ, ಅದು ಯಾವ ಹಕ್ಕಿಯ ಕೂಗು ಎನ್ನುವುದು ಅರ್ಥವಾಗಿಲ್ಲವೆಂದೂ ಹೇಳಿದಾಗ ಈಶ್ವರಿ ಅಂದಳು,

"ವಿಕಾರವಾಗಿ ಕೂಗಿಕೊಂಡ ಆ ಸದ್ದು ಇನ್ನೂ ಮರೆತಿಲ್ಲ ನಾನು. ಬೇರೆ ಯಾವ ಹಕ್ಕಿಯ ಕೂಗು ಅಲ್ಲ ಅದು."

"ಅಂದರೆ... ಸತ್ತ ಕಾಂತಿಯೇ ಕೂಗಿದ್ದು ಎನ್ನುವ ಅಭಿಪ್ರಾಯವೇ ನಿಮ್ಮದು?" ತೀಕ್ಷ್ಣವಾಗಿ ಕೇಳಿದ ಜಗನ್ನಾಥ.

ಮೂವರೂ ಒಬ್ಬರನ್ನೊಬ್ಬರು ನೋಡಿಕೊಂಡರು. ಶಿವಮೂರ್ತಿ ಹಣೆಯ ಮೇಲಿನ ಬೆವರನ್ನೊರಸಿಕೊಂಡು ಅಂದ, "ತಲಕಾವೇರಿಯ ದರ್ಶನಕ್ಕೆಂದು ಹೊರಟವರು ನಾವೆಲ್ಲರೂ. ಆದರೆ ಅವಳು ನಿಜವಾಗಿಯೂ ಕಾವೇರಿಯ ಪಾದವನ್ನೇ ಸೇರಿಬಿಟ್ಟಳು. ಈಗಲೂ ಅವಳು ನನ್ನನ್ನು ಬಿಟ್ಟುಹೋಗಿಲ್ಲ ಎಂದೆನಿಸುತ್ತೆ..."

"ಈಗೆಲ್ಲಿದ್ದಾಳೆ ನಿಮ್ಮ ಸಂಗಡ?"

ತಬ್ಬಿಬ್ಬಾದ ಮೂರ್ತಿ ಸುತ್ತಲೂ ನೋಡಿಕೊಂಡು ನಕ್ಕ, ತನ್ನಲ್ಲಿಯೇ. "ಎಲ್ಲಿಗೂ ಹೋಗಿಲ್ಲ. ಅಂದರೆ ಈ ಹೃದಯದಲ್ಲಿಯೇ ಇದ್ದಾಳೆ. ಅವಳು ಸತ್ತ ದಿನ ಮನೆಯ ಹಿಂಬದಿ ಏನೋ ಕಿರುಚಿದಂತಹ ಕೂಗು ನನಗೂ ಕೇಳಿಸಿತ್ತು. ಕಾಂತಿಯೇ ಹಾಗೆ ಕೂಗಿಕೊಂಡದ್ದು ಅಂತ ಅಪ್ಪ ಅಮ್ಮ ಎಲ್ಲರೂ ಹೇಳಿದ್ರು.... ನಂಗೇನೂ ನಂಬಿಕೆ ಬರ್ಲಿಲ್ಲ. ಆದರೆ ಆಮೇಲಿಂದ ಯಾವಾಗಲೂ ಅಂತಹ ಕೂಗನ್ನು ಕೇಳಲಿಲ್ಲ ನಾನು...."

"ಆಸೆ ಇಟ್ಕೊಂಡು ಸತ್ತ ಅವಳನ್ನು ಒಂದ್ಸಲವಾದರೂ ನೀವ್ಯಾರು ನೋಡಿದ್ದೀರಿ.... ಹೇಳಿ?" ಕೇಳಿದ ಜಗನ್ನಾಥ.

ಇಲ್ಲವೆಂಬಂತೆ ನಾಲ್ವರೂ ತಲೆಯಲ್ಲಾಡಿಸಿದರು. ರಂಗಮ್ಮ ಉಸ್ ಎನ್ನುತ್ತ ಎದ್ದು ಕುಳಿತರು. "ಆ ಮಹಾತಾಯಿ ನಮಗೆ ಕಾಣಿಸಿಕೊಳ್ಳುವಷ್ಟು ಪಾಪ ಮಾಡಿದವಳಲ್ಲ. ಎಲ್ಲರನ್ನೂ ಶೋಕ ಸಾಗರದಲ್ಲಿ ಮುಳುಗಿಸಿ ಹೊರಟುಹೋದಳು ಅಷ್ಟೇ."

ಆಶಾ ಕಣ್ಣುಗಳು ಅರೆ ಮುಚ್ಚಿದವು. ಯಾರು ಈಗ ಶೋಕ ಸಾಗರದಲ್ಲಿರುವವರು? ಹಳತು ಹೋಗಿ ಹೊಸತು ಬಂದಿದೆ. ಮತ್ತೆ ಶೋಕ! ಆದರೆ ಇವರಾರು ನನ್ನ ಹತ್ತಿರ ನಿಂತವರು? ಅದೇ ಮಗುವಿನ ಮುಖ.... ಕಣ್ಣುಗಳು. ಆ

ಉದ್ದದ ಜಡೆ ಸುತ್ತ ಸುತ್ತ ತಿರುಗುತ್ತಿದೆಯಲ್ಲ. ಇದೋ ನಾನು.... ನಾನು.... ಎಂಬ ಅಟ್ಟಹಾಸದ ನಗೆ....

ಆಶಾ ಕುಳಿತಲ್ಲಿಂದ ಹಿಂದೆ ಸರಿದಳು.... ಆ ಕಣ್ಣುಗಳೇಕೆ ತನ್ನನ್ನು ಕ್ರೂರವಾಗಿ ದಿಟ್ಟಿಸುತ್ತಿವೆ?.... ಅಯ್ಯೋ, ಆ ಉದ್ದದ ಜಡೆ ತನ್ನ ಸುತ್ತ ಸುತ್ತ ತಿರುಗಿ ಕುತ್ತಿಗೆಯನ್ನು ಬಳಸಿ ಎಳೆಯುತ್ತಿದೆಯಲ್ಲ.... ಅಯ್ಯೋ....

ಕಿಟಾರನೆ ಕಿರುಚಿಕೊಂಡು ನೆಲಕ್ಕುರುಳಿದಳು. ಮಾತನಾಡುತ್ತಿದ್ದವರೆಲ್ಲ ಗಡಬಡಿಸಿಕೊಂಡು ಏನಾಯಿತಪ್ಪ ಎಂದು ಎದ್ದು ಹತ್ತಿರ ಬಂದರು. ಆಶಾ ಮೂರ್ಛೆ ಹೋಗಿದ್ದಳು. ತುಟಿ ಕಚ್ಚಿದ್ದರಿಂದ ತುಸು ನೀಲಿಯಾಗಿ ರಕ್ತ ಒಸರಿತ್ತು. ಈಶ್ವರಿ ಅವಸರದಲ್ಲಿ ನೀರು ತಂದು ಚಿಮುಕಿಸಿದಳು ಮುಖದ ಮೇಲೆ.

"ಇದೇನು ಆಶಾ... ಯಾಕೆ ಹೆದರಿಕೊಂಡೆ?" ಕಣ್ಣು ತೆರೆದ ಅವಳ ಹತ್ತಿರಕ್ಕೆ ಬಂದು ತೀರಾ ಆತ್ಮೀಯತೆಯಿಂದ ಮೂರ್ತಿ ಕೇಳಿದಾಗ ತಾನೇನೋ ಕನಸು ಕಾಣುತ್ತಿದ್ದೇನೆ ಎಂದುಕೊಂಡಳು ಆಶಾ.

"ರಾತ್ರಿ ಹೊತ್ತು ಭೂತ ಪ್ರೇತಗಳ ವಿಷಯ ಮಾತನಾಡಬೇಡಿ ಎಂದೆ ನಾನು. ನೀವ್ಯಾರೂ ಕೇಳ್ಲಿಲ್ಲ" ಗೊಣಗಿದರು ರಂಗಮ್ಮ "ಒಂದಿಷ್ಟು ನೀರು ಕುಡಿಯಲು ಕೊಡು ಈಶ್ವರಿ..."

"ಮೂರ್ತಿ ನಿನಗೆಷ್ಟು ಸಾರೆ ಹೇಳಿದೆ, ಒಂದು ಸಲ ಡಾಕ್ಟರರ ಹತ್ತಿರ ಕರ್ಕೊಂಡು ಹೋಗು ಎಂದು" ತಮ್ಮಯ್ಯ ಅಂದರು. "ನಿನಗೋ ಈಗೀಗ ಯಾರ ಮೇಲೆಯೂ ಲಕ್ಷ್ಯವಿಲ್ಲ...."

ಎಲ್ಲರ ಮಾತುಗಳೂ ಅಲ್ಲಿಗೇ ನಿಂತವು. ಈಶ್ವರಿ ಆಶಾಳ ಹತ್ತಿರವೇ ಮಲಗಿಕೊಂಡು ಅದೇನೋ ಒಂದಿಷ್ಟು ಧೈರ್ಯ ಹೇಳಿದಳು. ಆದರೆ ಆಶಾಳ ದೇಹ ಎಷ್ಟು ಬೆವರಿ ನಡುಗಿತ್ತೋ ಅಷ್ಟೇ ಮನಸ್ಸು ತಲ್ಲಣಿಸಿಹೋಗಿತ್ತು. ಮನದಲ್ಲಿ ಉಂಟಾದ ಈ ಭೀತಿಯ ನಡುಕ ಮಾತ್ರ ನಿಲ್ಲಲೇ ಇಲ್ಲ...!

೧೦

ಈ ಭೀತಿ ವಂಡ್ಸೆಗೆ ಹಿಂದಿರುಗಿದ ಮೇಲೆ ಇನ್ನಷ್ಟು ಬೆಳೆಯುತ್ತಲೇ ಹೋಯಿತು. ಮರೆಯಬೇಕೆಂದು ಸತತವಾಗಿ ಪ್ರಯತ್ನಿಸಿದರೂ ಮರೆಯಲಾಗದೆ ಒದ್ದಾಡಿದಳು. ಅವಳು ಬಂದ ಸುದ್ದಿಯನ್ನರಿತು ಲೋಹಿತಾಕ್ಷ ಎರಡು ಬಾರಿ ಮನೆಗೆ ಬಂದರೂ ಭೇಟಿಯಾಗಲಿಲ್ಲ. ಜಬ್ಬಣ್ಣನೊಂದಿಗೆ ಗುಟ್ಟಾಗಿ ಕಾಗದ ಕಳುಹಿಸಿದರೂ ಉತ್ತರಿಸಲಿಲ್ಲ ಆಶಾ.

ಇನ್ನೆಂದಿಗೂ ಅವನ ಸಹವಾಸ ತನಗೆ ಬೇಡ. ಅವನೇನು ಕೊಟ್ಟ ನನಗೆ? ಬರಿಯ ದೈಹಿಕ ತೃಪ್ತಿಯೇ? ಮಾನಸಿಕ ನೆಮ್ಮದಿಯೇ? ಓಹ್, ನಾನವನಿಂದ ಸೆಳೆಯಲ್ಪಡುತ್ತಾ

ಇದ್ದೇನೆ.... ಅಡ್ಡ ದಾರಿಯಲ್ಲಿ ತಿರುಗಿ ಹೋಗಿದ್ದೇನೆ ನಾನು. ಅಪಾಯದ ಕೆಂಪು ದೀಪ ಎದುರಿನಲ್ಲಿ! ಅದರ ಸೋಂಕು ತಾಗುವ ಮೊದಲೇ ಹೊರಟುಹೋಗಬೇಕು ಅವನಿಂದ ದೂರಕ್ಕೆ. ಕೈ ಹಿಡಿದಾತ ನನ್ನಿಂದ ದೂರ ಸರಿದರೂ ನನಗೆ ದೂರ ಸರಿಯುವ ಹಕ್ಕಿಲ್ಲ. ಒಂದಲ್ಲ ಒಂದು ದಿನ ನನ್ನ ವ್ಯಥಿತ ಮನದ ಬೇಗುದಿ ಅವನಿಗೂ ತಿಳಿದೀತು. ಒಂದಲ್ಲ ಒಂದು ದಿನ ಈ ಮನೆ ನಂದನವನವಾದೀತು ನನ್ನ ಪಾಲಿಗೆ....

ಹೊಳೆಯ ದಡದ ತಿರುಗಾಟ ನಿಂತುಹೋಯಿತು. ಜಬ್ಬಣ್ಣ ಎರಡು ಕಾಗದವನ್ನು ತಂದುಕೊಟ್ಟ ಲೋಹಿತಾಕ್ಷನಿಂದ. ಎರಡನ್ನೂ ಹರಿದು ಮುದ್ದೆ ಮಾಡಿ ಹಾಕಿದವು ಅವಳ ಕೈಗಳು. "ಹರೀನ್ ಗುಡ್ಡದ ಅಯ್ಯ ನಿಮ್ಮನ್ನು ಕರ್ಕೊಂಡು ಬಾ ಅಂತಂದ್ರು" ಎಂದ ಒಂದು ದಿನ. "ಹೋಗೋ ಆಚೆ, ಎಲ್ಲಿಗೂ ಹೋಗೋದಿಲ್ಲ ನಾನು" ಎಂದರಚಿಕೊಂಡಳು. ಪಾಪ, ಜಬ್ಬಣ್ಣ ಇದೇ ಸುದ್ದಿಯನ್ನು ಹೊತ್ತುಕೊಂಡು ಹೋಗಿ ಮುಟ್ಟಿಸಿದ ಲೋಹಿತಾಕ್ಷನಿಗೆ.

ಮನಸ್ಸು ಹಕ್ಕಿಯಂತೆ ನೆಗೆದು ಅವನತ್ತ ಹಾರಿ ಅವನೊಡನೆ ವಿಹರಿಸುವ ಬಯಕೆ ಪ್ರಕಟಿಸಿದರೂ ಸಂಯಮದಿಂದ ತಡೆಹಾಕಿದಳು. ತನ್ನದೀ ಮನೆ. ತಾನು ಮನೆಯವರೊಡನೆ ಹೊಂದಿಕೊಂಡು ಹೋಗಬೇಕು ಎಂದುಕೊಂಡಳು. ಆಮೇಲಿನ ದಿನಗಳಲ್ಲಿ ಅವಳ ಸ್ವಭಾವವೇ ಬೇರೆಯಾಯ್ತು. ರಂಗಮ್ಮನ ಬಗ್ಗೆ ಸಹಾನುಭೂತಿ, ತಮ್ಮಯ್ಯನವರ ತೋಟಗದ್ದೆಗಳಲ್ಲಿ ಆಸಕ್ತಿ, ಚೆನ್ನಕ್ಕನೊಡನೆ ಪ್ರೀತಿಯ ಮಾತಿನೊಂದಿಗೆ ಅಡಿಗೆಯಲ್ಲಿ ಸಹಕಾರ.... ಕೆಲಸದ ನೀಲಿಯ ಸುಖದುಃಖ.... ಎಲ್ಲಾ ಕೇಳಿಕೊಳ್ಳತೊಡಗಿದಳು. ಮನೆಯ ಒಳಗೆ ಹೊರಗೆ ಎಲ್ಲಿ ಬೇಕಂದಲ್ಲಿ ಯಾರೊಡನೆ ಹೇಗೆ ಮಾತು ಬೇಕೋ ಹಾಗೆ ಮಾತನಾಡುತ್ತ ಎಲ್ಲರ ಪ್ರೀತಿ ವಿಶ್ವಾಸ ಗಳಿಸುವ ಪ್ರಯತ್ನ. ಆದರೆ ಅದೇಕೋ ತನ್ನ ಮಾತು, ಕೃತಿಗಳೆಲ್ಲ ತನಗೇ ನಾಟಕೀಯ ಎಂದೆನಿಸತೊಡಗಿತು ಅವಳಿಗೆ.

ಅದೊಂದು ದಿನ ರಾತ್ರಿ ಚೆನ್ನಕ್ಕ ಮಹಡಿ ಕೋಣೆಗೆ ಬರುತ್ತ ತಂದಿದ್ದ ಹಾಲಿನ ಗ್ಲಾಸನ್ನು ಅವಳ ಮುಂದೆ ಇರಿಸಿ "ದೊಡ್ಡಮ್ಮ ಅಂದರು, ಬಸುರಿ ಹೆಂಗಸು ಹಾಲು ಕುಡೀಬೇಕಂತೆ. ಕುಡೀರಿ ಅಮ್ಮಾ" ಎಂದಳು.

"ಕೂತ್ಕೋ ಚೆನ್ನಕ್ಕ. ನಂಗ ಹಾಲು ಅಂದರೆ ಯಾವಾಗಲೂ ವೈರತ್ವ. ಈಗ ತಂದಿದ್ದೀಯಾ, ಕುಡೀತೇನೆ. ಇನ್ಮೇಲೆ ಇದೇ ಹಾಲಿಗೆ ಒಂದು ತೊಟ್ಟು ಹೆಪ್ಪು ಹಾಕಿಟ್ಟುಬಿಡು. ರುಚಿಯಾದ ಮೊಸರು ತಿನ್ನಬಹುದು...."

"ನಿಮ್ಮಿಷ್ಟ. ಕಾಂತಿಯಮ್ಮನಿಗೆ ಹಾಲು ಪಂಚಪ್ರಾಣವಾಗಿತ್ತು..."

"ಮತ್ತೆ ಕಾಂತಿ?" ಹುಬ್ಬುಗಂಟಿಕ್ಕಿ ಅಡಿಗೆಯವಳತ್ತ ನೋಡಿದಳು ಆಶಾ... ಓ ಕಾಂತಿಯನ್ನೇಕೆ ಇವರೆಲ್ಲ ಇಷ್ಟು ಹೊಗಳುತ್ತಾರೆ?

"ಚೆನ್ನಕ್ಕ, ನಿನ್ನ ಆ ಕಾಂತಿ ಹ್ಯಾಗಿದ್ದಳು... ರೂಪ ವಿವರಿಸು..."

"ಸಾಕ್ಷಾತ್ ರತಿದೇವಿ ಹಾಗೇ ಇದ್ದರಮ್ಮ" ಚೆನ್ನಕ್ಕನ ಬಾಯಿ ಓರೆಯಾಯಿತು. ಎಡಹುಬ್ಬು ಹಾರಿಸುತ್ತ ಅಂದಳು, "ರೂಪ ಅಂದರೆ ಕೈ ತೊಳ್ಕೊಂಡು ಮುಟ್ಟಬೇಕು.

ಮಾತು ಅಂದರೆ ಮಾತು, ಮನೆಯೆಲ್ಲ ನಗಬೇಕು. ಗುಣ ಅಂದರೆ ಗುಣ.... ಒಂದಿನವೂ ಸಿಡುಕಿದ್ದಿಲ್ಲ ನಮ್ಮ ಮೇಲೆ...."

"ಸಾಕು ನಿಲ್ಲಿಸು...." ಆಶಾ ಕಿವಿಗಳಲ್ಲಿ ಏನೋ ಸದ್ದಾದಂತೆ ಭಾಸವಾಗಿ ಜೋರಾಗಿ ಚೀರಿದಳು, "ಇನ್ಮೇಲೆ ನಾನೇನು ಮಾಡ್ತೇನೆ ಗೊತ್ತಾ... ಕಾಂತಿಯಂತಹದೇ ದೊಡ್ಡ ಗೊಂಬೆಯನ್ನು ತಂದು ಈ ಮನೇಲಿರಿಸ್ತೇನೆ. ನೀವೆಲ್ಲರೂ ಆ ಗೊಂಬೆ ಸಂಗಡ ಮಾತನಾಡ್ತಿರಿ. ಇಲ್ಲಿ ನಾನು ಜೀವವಿದ್ದ ಹೆಣವಾಗಿ ಬಿದ್ದಿರ್ತೇನೆ. ತಗೊಂಡು ಹೋಗು ಈ ಹಾಲನ್ನು" ಎನ್ನುತ್ತ ಧಡಾರನೆ ನೂಕಿದಳು ಲೋಟವನ್ನು. ಹಾಲು ಚೆಲ್ಲಿತು ನೆಲದ ಮೇಲೆ.... "ಇಡೀ ದಿನ ಕಾಂತಿ... ಕಾಂತಿ..." ಮನೆಯೆಲ್ಲ ಕೇಳಿಸುವಂತೆ ಜೋರಾಗಿ ಅರಚಿದಳು, "ಹೋಗು ಇಲ್ಲಿಂದ ಹೊರಟ್ಹೋಗು. ಅವಳ ಧ್ಯಾನ ಮಾಡಿ ತೃಪ್ತಿಪಟ್ಟುಕೋ."

"ಅಯ್ಯೋ ಅಮ್ಮಾ" ಚೆನ್ನಕ್ಕ ಮುಖ ತಿರುಚಿ ವಿಕಾರ ಮಾಡಿ ಅಂದಳು. "ಎಷ್ಟು ಕೋಪ ನಿಮಗೆ. ಮಾತಿಗೆ ಮುಂಚೆಯೇ ಅಬ್ಬರ...!"

"ಹೋಗೇ ಆಚೆ. ಬುದ್ಧಿಗೆಟ್ಟವಳು. ನಿನ್ನ ದೇವತೆಯಂತಿದ್ದ ಕಾಂತಿಯಂತೆ ನಾನೂ ಸತ್ತು ಮಣ್ಣುಗೂಡಿದ ಮೇಲೆ ಈ ಮನೆಗೆ ಬರುವ ಮೂರನೆಯ ಸೊಸೆಯೆದುರು ನನ್ನ ಗುಣಗಾನ ಮಾಡಿ...." ಉದ್ವೇಗ, ಸಿಟ್ಟಿನಿಂದ ಕಂಪಿಸುತ್ತಿದ್ದ ಅವಳ ಕಣ್ಣಗಳಲ್ಲಿ ನೀರು ತುಂಬಿಕೊಂಡು ಕೆನ್ನೆಯ ಮೇಲುರುಳುತ್ತಿದ್ದಂತೆ ಮಂಚದ ಮೇಲುರುಳಿ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಜೋರಾಗಿ ಅಳಲಾರಂಭಿಸಿದಳು.

ಹೆದರಿಹೋದ ಚೆನ್ನಕ್ಕ ಓಡಿದಳು ಬಾಗಿಲತ್ತ. ಆದರೆ ಆ ವೇಳೆಗಾಗಲೇ ಬಾಗಿಲಲ್ಲಿ ಬಂದು ನಿಂತಿದ್ದಾರೆ ತಮ್ಮಯ್ಯ. ಅಡಿಗೆಯವಳು ಇನ್ನೂ ಹೆದರಿ ಬಾಯಿ ಓರೆ ಮಾಡುತ್ತ ಇಳಿದು ಹೋದಳು ಕೆಳಗೆ. ನಿಧಾನವಾಗಿ ಒಳಗೆ ಕಾಲಿರಿಸಿದರು ತಮ್ಮಯ್ಯ. ಆಶಾ ಅವರನ್ನು ನೋಡಿದೊಡನೆ ಅಳುವನ್ನು ಹತ್ತಿಕ್ಕಿಕೊಂಡು ಬಿಕ್ಕಿದಳು ಜೋರಾಗಿ.

"ಏನಾಯ್ತಮ್ಮ.... ಏನಿದು ಗಲಾಟೆ?" ಪ್ರಶ್ನಿಸಿದರು ತಮ್ಮಯ್ಯ ಅವಳಿಗೆದುರಾಗಿರುವ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ.

ದಿಟ್ಟಿಸಿ ನೋಡಿದಳು ವೃದ್ಧರನ್ನು. ಉಗುಳು ನುಂಗಿಕೊಳ್ಳುತ "ನನ್ನನ್ನೇನೂ ಕೇಳ್ಬೇಡಿ ಮಾವಯ್ಯ, ಹೋಗಿ ಮಲಗಿಕೊಳ್ಳಿ" ಎನ್ನುತ್ತ ಮಂಚಕ್ಕೆ ಹಣೆ ಕುಟ್ಟಿಕೊಂಡಳು. ತುಸು ಹೊತ್ತಿನ ನಂತರ ನೋಡುತ್ತಾಳೆ, ಅವರಿನ್ನೂ ಕುಳಿತುಕೊಂಡೇ ಇದ್ದಾರೆ.

"ಹೋಗಿ ಮಾವಯ್ಯ" ನೋವಿನ ನಗೆಯಲ್ಲಿ ಅಂದಳು ಆಶಾ, "ನಂಗೆ ಏನೇನೂ ಆಗಿಲ್ಲ. ಹೀಗೆ ಅತ್ತುಬಿಟ್ಟರೆ ಸಮಾಧಾನವಾಗುತ್ತೆ ನನ್ನ ಮನಸ್ಸು."

"ಅವನಿಗೂ ಬುದ್ಧಿಯಿಲ್ಲ. ನಾಡಿದ್ದು ಶನಿವಾರ ಮನೆಗೆ ಬಂದಾಗ ಒಂದಿಷ್ಟು ಬುದ್ಧಿ ಹೇಳ್ತೇನೆ..." ಎನ್ನುತ್ತ ಎದ್ದರವರು.

"ಅಷ್ಟು ಉಪಕಾರ ಮಾಡಿಬಿಡಿ. ಅವರು ನನ್ನ ಜೊತೆ ಮಾತು ಬಿಟ್ಟರೂ ನನಗೆ ಬೇಸರವಿಲ್ಲ. ಈ ಮನೆಯಲ್ಲಿಯೇ ಅವರಿರುವಂತೆ ಮಾಡಿಕೊಡಿ..... ಇಲ್ಲವಾದರೆ ನಾನೇನಾಗ್ತೇನೆಯೋ ನನಗೇ ತಿಳಿಯದು..."

ತಲೆ ಬಗ್ಗಿಸಿಕೊಂಡು ಕೆಳಗಿಳಿದು ಹೋದರು ತಮ್ಮಯ್ಯ. ಆಶಾ ಮನಸ್ಸು ಮತ್ತೆ ರೋದಿಸಿತು. ಮನದಿಂದ ದೂರವಾಗುತ್ತಿರುವ ಲೋಹಿತಾಕ್ಷನ ನೆನಪು ಬಂದಿತು ಆ ಗಳಿಗೆಯಲ್ಲಿ.... ಅವನೊಬ್ಬನೇ ಆತ್ಮೀಯ ಎಂದೆನಿಸಿತು. ಚಿತ್ತಸ್ವಾಸ್ಥ್ಯ ಕೆಟ್ಟುಹೋಗುವ ಈ ಗಳಿಗೆಯಲ್ಲಿ ಹರುಷದ ಗಾಳಿಯನ್ನು ಮನದಲ್ಲಿ ಎಬ್ಬಿಸುವವನು ಅವನೊಬ್ಬನೆ. ಓ, ಲೋಹಿತ್... ಮರೆಯಬೇಕೆಂದರೂ ಆಗುತ್ತಾ ಇಲ್ಲ. ಈ ಬಂಧನಕ್ಕಿಂತ ನಿನ್ನ ಸಾಮೀಪ್ಯ ಸಾವಿರ ಪಾಲು ಮೇಲು...! ನನ್ನ ಮನದ ಶೋಕ ನಿನ್ನಿಂದಲೇ ನಿವಾರಣೆ.... ಒಂದೇ ಒಂದು ಬಾರಿ ನನ್ನ ಬಳಿಗೆ ಬಂದರೆ ಸಾಕು... ಅಬ್ಬಬ್ಬ ಎಂತಹ ಕಿವಿ ನೋವು...

ಎಷ್ಟು ಹೊತ್ತು ಸರಿಯಿತೋ! ಅವಳ ಕಣ್ಣುಗಳು ಗೋಡೆಯ ಮೇಲೆ ತೂಗು ಹಾಕಿದ ಕಾಂತಿಯ ಭಾವಚಿತ್ರವನ್ನು ದಿಟ್ಟಿಸುತ್ತಿದ್ದವು.... ನಗು ನಗುತ್ತಿದ್ದ ಕಾಂತಿ.... ಇವಳಿಂದಲೇ ಇಷ್ಟೆಲ್ಲ ಅಶಾಂತಿ...! ತಡಮಾಡದೆ ಎದ್ದು ಕಾಂತಿಯ ಭಾವಚಿತ್ರವನ್ನು ಅಲ್ಲಿಂದ ತೆಗೆದು ಮಂಚದಡಿಯಲ್ಲಿರಿಸಿ ನಿಶ್ಚಿಂತೆಯಲ್ಲಿ ಮಲಗಲೆತ್ನಿಸಿದಳು.... ಅಗಲವಾದ ಸುಪ್ಪತ್ತಿಗೆಯ ಜೋಡು ಮಂಚ. ಆದರೆ ಒಂಟಿಯಾಗಿ ಮಲಗಬೇಕಾದ ದುಃಸ್ಥಿತಿ.... ಕಣ್ಣೀರಿನಲ್ಲಿ ತೊಯ್ದಿತ್ತು ತಲೆದಿಂಬು....

೧೧

ಆ ಶನಿವಾರ ಎಂದಿನಂತೆ ಮನೆ ಅಂಗಳದಲ್ಲಿ ಬಂದು ನಿಂತಿತು ಮೋಟರ್ ಬೈಕ್. ಪುಟ್ಟ ಪೃಥ್ವಿ ಮಂಗನಂತೆ ಕುಪ್ಪಳಿಸುತ್ತ ತಂದೆಯ ಹೆಗಲನ್ನೇರಿಕೊಂಡ. ರಂಗಮ್ಮ ಓಡಿಬಂದು ಮಗನ ಕೈ ಮೈ ಎಲ್ಲಾ ಮುಟ್ಟಿ ವಿಚಾರಿಸಿಕೊಂಡರು ಪ್ರೀತಿಯಲ್ಲಿ. ಆಶಾ ಬಹಳ ಇಳಿದುಹೋಗಿದ್ದಳೆಂದು ಅವಳನ್ನು ನೋಡಿದಾಕ್ಷಣ ತಿಳಿದುಹೋಯಿತು ಮೂರ್ತಿಗೆ. ಅವಳ ಆರೋಗ್ಯದ ಬಗ್ಗೆ ವಿಚಾರಿಸಿಕೊಂಡ ಕಳಕಳಿಯಿಂದ.

"ಈಗಿನ್ನೂ ನಾಲ್ಕನೆಯ ತಿಂಗಳು. ಐದರಲ್ಲಿ ಅಥವಾ ಏಳರಲ್ಲಿ ಸೀಮಂತ ಮಾಡ್ಬೇಕು.... ಹೆರಿಗೆ ಮಂಗಳೂರಿನಲ್ಲಿ" ಎಂದರು ರಂಗಮ್ಮ.

"ಸಂತೋಷವಾಗಿ ಮಾಡೋಣವಂತೆ. ಪೃಥ್ವಿರಾಜರಿಗೆ ಒಬ್ಬ ತಮ್ಮ ಬೇಡವೇ?"

"ಊಹೂಂ ತಂಗಿ ಬೇಕು... ಬಣ್ಣದ ಅಂಗಿ ತೊಟ್ಟ ತಂಗಿ ಬೇಕು" ತಂದೆಯ ಹೆಗಲಿನಿಂದ ಕೆಳಗಿಳಿದು ಎದೆ ಸೆಟೆಸಿ ನಿಂತ ಪೃಥ್ವಿ, "ಬಣ್ಣ ಬಣ್ಣದ ಅಂಗಿ ತೊಟ್ಟು, ಕುದುರೆ ಮೇಲೆ ಕೂತುಕೊಂಡು, ಅಣ್ಣನ ಬೆನ್ನನ್ನು ಹಿಡಿದುಕೊಂಡು ಹೇಯ್...! ಹೇಯ್ ಎನ್ನುವ ತಂಗೀ ಬೇಕು....."

ಆಶಾ ಸಮೇತ ಎಲ್ಲರೂ ಹೋ... ಹೋ ಎಂದು ನಗುತ್ತಿದ್ದಂತೆ ತಮ್ಮಯ್ಯನವರ ಹೆಗಲನ್ನೇರಿದ ಪೃಥ್ವಿ, "ಚಲ್ ಮೇರೆ ಘೋಡೆ ಟಿಕ್ ಟಿಕ್ ಟಿಕ್, ಚಲ್ ಮೇರೆ ಘೋಡೆ ಟಿಕ್ ಟಿಕ್ ಟಿಕ್... ತಂಗಿ ಬರ್ತಾಳೆ, ಸಿಹಿ ತರ್ತಾಳೆ, ನನ್ನ ಕೂಡ ಆಡ್ತಾಳೆ, ಅಜ್ಜನ ಬೆನ್ನನ್ನು ಏರ್ತಾಳೆ.... ಹೇಯ್...."

"ಮಂಗಾ, ಬಹಳ ಜೋರಾಗಿದ್ದೀಯಲ್ಲೋ ನೀನೀಗ. ಮುಂದಿನ ವರ್ಷ ನಿನ್ನನ್ನು ಸ್ಕೂಲ್‌ಗೆ ಸೇರಿಸಬೇಕು..." ನಕ್ಕು ಹೇಳಿದ ಮೂರ್ತಿ.

"ಬಿಡು ನಿನ್ನ ಸ್ವಭಾವ" ಮೊಮ್ಮಗನನ್ನು ಕೆಳಗಿಳಿಸಿದರು ತಮ್ಮಯ್ಯ. "ನೀನಂತೂ ಹೃದಯಹೀನ. ಮನೇಲಿರುವವರ ಮೇಲೆ ನಿನಗಿಲ್ಲ ಲಕ್ಷ್ಯ. ನನಗೋ ದಿನೇ ದಿನೇ ನಿಶ್ಶಕ್ತಿ ಜಾಸ್ತಿಯಾಗ್ತಿದೆ. ಗದ್ದೆ ತೋಟಗಳ ಅವಸ್ಥೆಯೋ ಹೇಳತೀರದು. ಈ ಸಲ ಅವುಗಳಿಗೂ ಕಾಯಿಲೆ. ತೆಂಗಿನ ಕಾಯಿಗಳೆಲ್ಲ ಬೆಳೆದು ಬುಡು ಬುಡು ಬೀಳ್ತಾ ಇವೆ...."

ಮೂರ್ತಿ ಕೇಳಿದವನಂತೆ ನಟಿಸುತ್ತ ಮುಖ ತಿರುಗಿಸಿದ.

"ನಾನೇ ಹೆಡ್ಡು ಕೆಲಸ ಮಾಡಿಬಿಟ್ಟೆ. ಇಷ್ಟೊಂದು ಆಸ್ತಿಯಿರುವಾಗ ನಿನಗೆ ಓದಿಸಿದ್ದೇ ತಪ್ಪಾಯ್ತು ನನ್ನಿಂದ. ಏನೋ ನಾಲ್ಕು ದಿನ ಬೇಸರ ಕಳೆಯಲು ಕೆಲ್ಸಕ್ಕೆ ಸೇರಿಕೊಳ್ತೇನೆ ಎಂದಿ. ಹೂಂ ಎಂದೆ. ನೀನೋ ಅಲ್ಲಿಯೇ ಕಾಯಂ. ಅದೇನಪ್ಪ, ನಿನಗೆ ಹೆಂಡತಿ ಬೇಡವೇ? ಎಂತವನೋ ಏನೋ. ನಿನ್ನ ಸ್ವಭಾವವೇ ತಿಳೀತಾ ಇಲ್ಲ ನನಗೆ."

ಶಿವಮೂರ್ತಿ ಎದ್ದುಬಿಟ್ಟ ಅಲ್ಲಿಂದ. "ಆಶಾ, ಈ ಬ್ಯಾಗ್ ಮೇಲಿರಿಸಿ ಬಾ. ಏನಮ್ಮಾ ಲೋಹಿತಾಕ್ಷ ಬರಲಿಲ್ಲವೇ?"

"ಒಂದೆರಡು ಸಾರೆ ಬಂದಿದ್ದ. ಹೋಗಿ ಬನ್ನಿ ಇಬ್ಬರೂ."

ಆಶಾ ಹೋಗಲು ಒಪ್ಪಿಕೊಳ್ಳಲಿಲ್ಲ. ಮೂರ್ತಿ ಪೃಥ್ವಿಯನ್ನು ಕರೆದುಕೊಂಡು ಹೊರಟುಹೋದ. ತಮ್ಮಯ್ಯ ಸೊಸೆಯತ್ತ ತಿರುಗಿದರು,

"ನಾನೇನು ಮಾಡಲಿ? ಅವನಂತೂ ನನ್ನ ಮಾತಿಗೆ ಬೆಲೆ ಕೊಡುವುದಿಲ್ಲ" ಎಂದರು ವಿಷಾದದ ಸ್ವರದಲ್ಲಿ.

"ಹೋಗಲಿ ಬಿಡಿ. ಎಲ್ಲಾ ಅವರವರ ಪಡೆದು ಬಂದದ್ದು."

ಆ ರಾತ್ರಿಯ ಊಟ ನಗುಮಾತಿನ ಮಧ್ಯೆ ನಡೆಯಿತು. ಮೂರ್ತಿ ಎಂದಿಗಿಂತಲೂ ಹರ್ಷವಾಗಿದ್ದ. ಇಂತಹ ದಿನಗಳು ತನ್ನ ಪಾಲಿಗಿದ್ದರೆ ತಾನು ಧನ್ಯೆ ಎಂದುಕೊಂಡಳು ಆಶಾ. ಆಗ ಈಶ್ವರಿಯ ಒಂದು ಮಾತು ನೆನಪಿಗೆ ಬಂದಿತು. "ಅವನ ಮನಸ್ಸಿಗಾದ ಆಘಾತದಿಂದ ಅವನಿನ್ನೂ ಚೇತರಿಸಿಕೊಂಡಿಲ್ಲ. ಕ್ರಮೇಣ ಇಲ್ಲಿಗೆ ಬಂದುಳಿಯುತ್ತಾನೆ" ಓ.... ನೋಡೋಣ, ಅಲ್ಲಿಯವರೆಗೂ ಇರಲಿ ನನ್ನ ನಿರೀಕ್ಷೆ..... ಎಂದುಕೊಂಡಳು. ಲೋಹಿತಾಕ್ಷ ತನಗೆ ಸಿಗಲಿಲ್ಲವೆಂದು ಮೂರ್ತಿ ಹೇಳಿದಾಗ ಅವಳಿಗೆ ಒಂದಿನಿತೂ ಬೇಸರವೆನಿಸಲಿಲ್ಲ.

ಊಟದ ನಂತರ ಮೂರ್ತಿ ಮಹಡಿಗೆ ಬಂದಾಗ ಎಂದಿನಂತೆ ಗೋಡೆಯ ಮೇಲೆ ಕಾಂತಿಯ ಭಾವಚಿತ್ರವನ್ನು ಕಾಣದೆ ಅಬ್ಬರಿಸಿದ. ಆಶಾ ಬೆಚ್ಚಿದರೂ ಅವನ ಅಬ್ಬರದ ಧ್ವನಿಗೆ ಉತ್ತರಿಸಲಿಲ್ಲ.

"ಅವಳ ನೆನಪಿಗೋಸ್ಕರ ಇರಿಸಿದ ಫೋಟೋ ಏನಾಯ್ತು?"

"ಅವಳ ನೆನಪು ನಿಮಗೇಕೇ? ಈಗ ನಿಮ್ಮೆದುರಿನಲ್ಲಿರುವವಳು ಆಶಾ" ಎಂದಳವಳು ದಿಟ್ಟಳಾಗಿ.

"ಕಾಂತಿಯ ಫೋಟೋ ಅಲ್ಲಿರಲೇಬೇಕು. ಎಲ್ಲಿಟ್ಟಿದ್ದೀ?"

"ಎಲ್ಲಿಟ್ಟರೂ ನಿಮಗೇನಂತೆ." ಆಶಾ ಸ್ವರವೂ ಏರಿತು. "ಅಲ್ಲಿದ್ದರೇನು, ಪೆಟ್ಟಿಗೆಯಲ್ಲಿದ್ದರೇನು... ತೆಗೆದು ತಿಪ್ಪೆಗೆ ಬಿಸಾಕಿದರೇನಂತೆ. ಹೋದವರಂತೂ ಹಿಂದಕ್ಕೆ ಬರಲಾರರು." ಅವನ ಸಮೀಪಕ್ಕೆ ಬಂದು ಹೆಗಲ ಮೇಲೆ ಕೈಯ್ಯಿರಿಸುತ್ತ ಅಂದಳು, "ಹಾಗೆ ಫೋಟೋ ನೋಡ್ತಾ ಇದ್ದರೆ ಮನದ ವ್ಯಥೆ ಹೆಚ್ಚೀತೇ ಹೊರತು ಕಡಿಮೆಯಾಗದು."

"ಯಾವ ಸ್ಥಾನದಲ್ಲಿ ಅದು ಇರಬೇಕಿತ್ತೋ ಆ ಸ್ಥಾನದಲ್ಲಿ ಇರಲೇಬೇಕು."

"ನಿಜ, ಯಾವ ಸ್ಥಾನದಲ್ಲಿ ನಿಮ್ಮ ಈ ಆಶಾ ಇರಬೇಕೋ ಆ ಸ್ಥಾನದಲ್ಲಿಯೇ ಅವಳನ್ನಿರಿಸಿಕೊಳ್ಳಿ. ಕಾಂತಿ ಆ ಫೋಟೋದಿಂದ ಎದ್ದು ನಿಮ್ಮ ಮಗ್ಗುಲ ಹತ್ರ ಬಂದು ಮಲಗಲಾರಳು." ನೋವಿನ ನಗೆಯಲ್ಲಿ ಅವಳೆಂದಳು, "ನಿಮ್ಮ ಹತ್ತಿರ ನಾನಿಲ್ಲವೇ? ಬನ್ನಿ ಮಂಚದ ಮೇಲೆ ಕೂತ್ಕೊಳ್ಳಿ. ವಾರದಲ್ಲಿ ಎರಡೇ ದಿನ ನೀವಿಲ್ಲಿರೋದು. ಆಗಲಾದರೂ ಸಂತೋಷವಾಗಿ ಹೊತ್ತು ಕಳೆಯೋಣ...."

"ಮೊದಲು ಆ ಫೋಟೋ ತಂದು ಅಲ್ಲಿಡು....!"

"ಮತ್ತೆ ಮತ್ತೆ ಕೆಣಕಬೇಡಿ ನನ್ನನ್ನು. ಇನ್ಮೇಲೆ ಆ ಫೋಟೋದಲ್ಲಿರುವವಳನ್ನು ಮರೆಯಲೇಬೇಕು ನೀವು."

"ಅದೆಂದಿಗೂ ಸಾಧ್ಯವಿಲ್ಲ.... ಈ ಮನೆಗೆ ಬಂದಾಗ ಅವಳನ್ನೊಮ್ಮೆ ಈ ಕೋಣೆಯಲ್ಲಿ ನೋಡದೇ ಇದ್ದರೆ ಏನೋ ಸಂಕಟ...."

"ನಾನಿಲ್ಲವೇ? ಬೇಸರವೇ, ವೇದನೆಯೇ ಏನಾಗುತ್ತಿದೆ ನಿಮಗೆ? ನಿಮ್ಮದಿದು ಹೊಸ ಬದುಕು. ನಿಮ್ಮ ಬದುಕಿನ ತುಂಬ ನೊರೆ ಹಾಲಾಗಿ, ಸವಿಜೇನಾಗಿ ನಿಮ್ಮೊಡನೆ ಇರುವ ನಾನಿಲ್ಲವೇ?"

ಆಶಾ ಆ ರೀತಿ ಪ್ರಶ್ನಿಸಿದಾಗ ಅವನ ಕಣ್ಣುಗಳು ಗೋಡೆಯತ್ತ, ಮನದೊಳಗೆ ಏನಾಗುತ್ತಿತ್ತೋ ಯಾರಿಗೆ ಗೊತ್ತು? ಅಪಾರ ವೇದನೆ ತುಂಬಿಕೊಂಡಿತ್ತು ಕಣ್ಣಗಳಲ್ಲಿ. ಯಾಕೆ ಈ ಚಿಂತೆ? ಓಹ್, ತನಗೆ ಮಾತನಾಡಲು ತಿಳಿಯದೆ? ಇವರನ್ನು ಸುಖಿಯನ್ನಾಗಿ ಮಾಡುವ ತಂತ್ರ ತಿಳಿಯದೆ? ಅದೇಕೆ ತಮ್ಮಿಬ್ಬರ ಮನಸ್ಸು ಒಂದಾಗುತ್ತಿಲ್ಲ ಇನ್ನೂ....

ಮಂಚದ ಮೇಲೆ ಅವನ ಪಕ್ಕದಲ್ಲಿಯೇ ಕುಳಿತು ಏನೇನೋ ಮಾತನಾಡಿದಳು. ನೀಲಿ, ಜುಬ್ಬಣ್ಣನರ ನಡುವೆ ನಡೆದ ಜಗಳ, ಸ್ವಾರಸ್ಯಕರವಾದ ಮಾತುಗಳನ್ನು ಹೇಳಿದಾಗಲೂ ಮೂರ್ತಿಯಿಂದ ಒಂದೇ ಒಂದು ಉತ್ಸಾಹದಾಯಕವಾದ ಮಾತು ಬರಲಿಲ್ಲ.

ಕೋಣೆಯ ದೀಪವಾರಿತು. ಪಿಸು ಸ್ವರದಲ್ಲಿ ಕೇಳಿದಳು. "ವಾರವೆಲ್ಲ ನನ್ನನ್ನು ಬಿಟ್ಟಿರ್ತೀರಲ್ಲ. ನಾನು ಬೇಕು ಅಂತ ಅನ್ನಿಸುವುದಿಲ್ಲವೇ? ನನ್ನ ಯೋಚನೆ ಬರುವುದಿಲ್ಲವೇ? ನಾನು ಹೇಗಿದ್ದೇನೆ ಎಂದು ಚಿಂತಿಸುವುದಿಲ್ಲವೇ ನೀವು?"

"ಸಂತೋಷವಾಗಿದ್ದಿ ಎಂದುಕೊಳ್ಳೆತೇನೆ."

“ಆಹ್, ಬಹಳ ಸಂತೋಷ ಅಲ್ಲವೇ? ನಿಮ್ಮ ಅಮ್ಮ ನಿಜವಾಗಿಯೂ ಸುಖಿ. ಈ ಮುದಿ ಪ್ರಾಯದಲ್ಲಿಯೂ ತಮ್ಮ ಗಂಡನನ್ನು ಒಂದು ದಿನವೂ ಬಿಟ್ಟಿರಲಾರರು.”

“ತಪ್ಪೇನಾಯ್ತು. ಮದುವೆಯಾದ್ಮೇಲೆ ಒಟ್ಟಿಗೇ ಇರಬೇಕಾದ್ದು ನ್ಯಾಯ. ಇದರಲ್ಲಿ ಹಾಸ್ಯ ಮಾಡುವುದೇನೂ ಇಲ್ಲ.”

“ಹಾಗಿದ್ದರೆ ನಾನೇಕೆ ಇಷ್ಟು ದೂರ? ನನ್ನನ್ನು ಕಂಡರೆ ಯಾಕೋ ನಿಮಗಾಗುವುದೇ ಇಲ್ಲ. ನಾವೇನು ತಪ್ಪು ಮಾಡಿದೆ?”

ನಿಟ್ಟುಸಿರು ತೆಗೆದ ಅವನು. “ಕಾಂತಿಯಿದ್ದಿದ್ದರೆ ಅವಳ ಹತ್ರ ಕೇಳಬಹುದಿತ್ತು ನನ್ನ ರಸಿಕ ಸ್ವಭಾವ ಹೇಗಿತ್ತು ಎಂದು. ಅವಳಿಲ್ಲ ಈಗ. ಅವಳ ಜೊತೆ ನನ್ನ ಉತ್ಸಾಹವೂ ಸತ್ತುಹೋಗಿದೆ....”

“ಅಯ್ಯೋ, ಮತ್ತೆ ಮತ್ತೆ ಹಳೆಯ ಪಲ್ಲವಿ! ಇನ್ನೆಂದಿಗೆ ಇದರಿಂದ ಮುಕ್ತಿ? ಯಾರನ್ನು ನಾನು ಅತಿಯಾಗಿ ದ್ವೇಷಿಸುತ್ತೇನೆಯೋ ಅವಳ ವಿಷಯವನ್ನೇ ಮತ್ತೆ ಮತ್ತೆ ಕೇಳಿಸಿಕೊಳ್ಳಬೇಕು....” ಆಕೆ ಸರ್ರನೆ ದೂರ ಸರಿದಳು ಅವನಿಂದ. ನಿಜವಾಗಿಯೂ ಈ ದಿನ ಅವಳು ಬಹಳ ಇಷ್ಟದಿಂದ, ಪ್ರೀತಿಯಿಂದ, ತುಂಬು ಮನಸ್ಸಿನಿಂದ ಅವನೊಡನೆ ಮಾತನಾಡಬಯಸಿದ್ದಳು; ಬೆರೆಯಲಿಚ್ಛಿಸಿದ್ದಳು. ಆತನನ್ನು ಹರ್ಷಚಿತ್ತನನ್ನಾಗಿ ಮಾಡಬೇಕೆಂದೂ ಯೋಚಿಸಿದ್ದಳು ಆದರೇನಾಯಿತು? ಅದು ಕಲ್ಲುಬಂಡೆ! ಹೇಗೆ ಮಾಡಿದರೂ ವಿಚಲಿತಗೊಳ್ಳದ ಹೃದಯ!! ಸಿಟ್ಟಿನಿಂದ ತನ್ನ ಹಾಸಿಗೆಯನ್ನು ನೆಲಕ್ಕೆ ಬಿಸಾಡಿ ಉರುಳಿಕೊಂಡಳು ಅದರ ಮೇಲೆ. ಕೈ ಬಳೆಗಳ ಘಲ್ ಘಲ್ ನಾದದೊಂದಿಗೆ ಬಿಕ್ಕುವ ಸದ್ದು.

‘ಓ... ಪ್ರೀತಿಸದ, ನನ್ನನ್ನು ಅರಿತುಕೊಳ್ಳಲಾಗದ, ನನ್ನ ಸಾಮೀಪ್ಯವನ್ನು ಬಯಸದೇ ಇದ್ದವನೇ, ನಿನಗೆ ನಾನು ಬೇಡ.... ನನಗೇಕೆ ಬೇಕು ನೀನು? ಕಾಂತಿಯನ್ನು ಪ್ರತಿ ಮೂಲೆ ಮೂಲೆಗಳಲ್ಲಿ, ಪ್ರತಿ ವಸ್ತುಗಳಲ್ಲಿ ನೋಡಿ ತೃಪ್ತನಾಗು! ನನಗೇನಂತೆ. ನಾನು ಹೊರಟುಹೋಗುತ್ತೇನೆ ದೂರ... ದೂರ. ಓಹ್ ಲೋಹಿತ್, ಇನ್ನೆಂದಿಗೂ ನಿನ್ನನ್ನು ನಾನು ಬಿಡಲಾರೆ. ನಿನ್ನ ಪ್ರೀತಿ, ಆತ್ಮೀಯತೆ, ಸಾಮೀಪ್ಯ ನನಗಿದ್ದರೆ ನೀನು ಕೊಡುವ ಅಂಬಲಿಯೂ ನನಗೆ ಅಮೃತ ಸಮಾನ. ಧಿಕ್ಕಾರವಿರಲಿ ಈ ಮನೆಗೆ, ಈ ಜನಕ್ಕೆ. ಇದೋ ನಾನು ಬಂದೇ ಬರುತ್ತೇನೆ ನಿನ್ನ ಬಳಿಗೆ. ಎಲ್ಲವನ್ನೂ ತೊರೆದು ಹೊರಟುಹೋಗೋಣ ಎಲ್ಲಿಗಾದರೂ.’

* * * *

ಬೆಳಗಾಯಿತು. ರಾತ್ರೆಯೆಲ್ಲಾ ನಿದ್ರೆಯಿಲ್ಲದ ಉರಿಯುತ್ತಿರುವ ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ ಎದ್ದಾಗ ದೇಹದಲ್ಲಿ ತೀರಾ ನಿಶ್ಶಕ್ತಿ ಬಂದಂತೆ, ತಲೆ ತಿರುಗಿ ಕೆಳಗೆ ಬೀಳುವಂತಾಯಿತು. ನಿಮಿಷ ನಿಮಿಷಕ್ಕೂ ಲೋಹಿತಾಕ್ಷನನ್ನು ಕಾಣುವ ಹಂಬಲ. ಹೋಗುವುದು ಹೇಗೆ? ಕೆಳಗಿಳಿದು ಕಾಫಿ ಮುಗಿಸಿ ಪುನಃ ಮಹಡಿಗೆ ಬಂದಾಗ ನೋಡುತ್ತಾಳೆ, ಯಾವ ಸ್ಥಾನದಲ್ಲಿ ಕಾಂತಿಯ ಫೋಟೋ ಇತ್ತೋ ಆ ಸ್ಥಾನದಲ್ಲಿಯೇ,

ಅಲಂಕೃತವಾಗಿದೆ ಅದು. ನೋಡುತ್ತಿದ್ದಂತೆ ಮನಸ್ಸು ಪಿಸುಧ್ವನಿಗೈದಿತು, 'ನೋಡು, ನೀನಿಲ್ಲದೇ ಹೋದಲ್ಲಿ ಈ ಕೋಣೆಯೊಂದು ದೇವತೆಯ ಮಂದಿರವಾದೀತು...!'

ದ್ವೇಷದ ಹೆಮ್ಮರ ಇನ್ನಷ್ಟು ಎತ್ತರಕ್ಕೆ ಬೆಳೆಯಿತು. ತನ್ನಲ್ಲೇ ವ್ಯಂಗ್ಯವಾಗಿ ನಗುತ್ತ ಮೂರ್ತಿಯ ಪಕ್ಕದಲ್ಲಿ ಬಂದು ಕುಳಿತಳು. ಕಣ್ಣುಗಳು ಎದುರಿನಲ್ಲಿರುವವನನ್ನು ನೋಡುತ್ತಿದ್ದರೂ ಒಳಮನಸ್ಸಿನ ಕಣ್ಣುಗಳಿಗೆ ಕಾಣಿಸುತ್ತಿರುವ ವ್ಯಕ್ತಿಯೇ ಬೇರೆ. ಲೋಹಿತಾಕ್ಷ ಅವಳ ನಿಸ್ತೇಜ ಮುಖದ ಮೇಲೆ ಕೈಯ್ಯಾಡಿಸುತ್ತ ಹೇಳುತ್ತಿದ್ದ ಭಾಸ, 'ನಡಿ ಆಶಾ, ನೀನೆಲ್ಲಿಗೆ ಹೋಗಲು ಇಷ್ಟಪಡುತ್ತಿಯೋ ಅಲ್ಲಿಗೆ ನಾನು ಕರೆದೊಯ್ಯುತ್ತೇನೆ.'

ಮೂರ್ತಿ ನಿನ್ನೆಯಂತೆ ಅನ್ಯಮನಸ್ಕನಾಗಿರಲಿಲ್ಲ. ಹತ್ತಿರ ಬಂದು ಕುಳಿತವಳನ್ನು ನಲ್ಮೆಯಿಂದ ಮಾತನಾಡಿಸಿದ. "ನಿನ್ನ ಆರೋಗ್ಯ ಏನೇನೂ ಚೆನ್ನಾಗಿಲ್ಲ. ಎಷ್ಟಿದ್ದರೂ ಬಸುರಿ ಹೆಂಗಸು. ಡಾಕ್ಟರರ ಹತ್ತಿರ ತೋರ್ಸಿಕೊಂಡು ಬರೋಣ."

ಲೋಹಿತಾಕ್ಷನನ್ನು ಧ್ಯಾನಿಸುತ್ತಿದ್ದ ಆಶಾಗೆ ಅವನ ಮಾತಿನಲ್ಲಿರುವ ಕರುಣೆಯನ್ನು ಗುರುತಿಸಲಾಗಲಿಲ್ಲ. ಅವನು ಮೆಲ್ಲನೆ ಕೆನ್ನೆ ತಟ್ಟುತ್ತ ಕೇಳಿದ, "ನಿನ್ನ ಆರೋಗ್ಯದ ವಿಚಾರ ನಿನಗೇ ಗೊತ್ತಿಲ್ಲ. ನಡಿ, ಇವತ್ತು ಊಟವಾದ್ಮೇಲೆ ಡಾಕ್ಟರರ ಹತ್ತಿರ ಹೋಗಿ ಬರೋಣ. ಏನೇ.... ಸಮಾಧಿ ಸ್ಥಿತಿಯಲ್ಲಿದ್ದೀಯೋ ಹ್ಯಾಗೆ?"

"ಏನು ಹೇಳಿದಿರಿ?"

"ಚೆನ್ನಾಯ್ತು ಬಿಡು" ಪಕಪಕನೆ ನಗುತ್ತ ಆತನೆಂದ, "ಕಿವಿ ಪೂರ್ತಿ ಕಿವುಡಾಯಿತೇ? ನನಗೀಗ ಪೇಟೆಗ್ಹೋಗಿ ಬರಬೇಕು. ಅಪ್ಪನಿಗೆ ಏನೇನೋ ಸಾಮಾನು ಬೇಕಂತೆ."

"ಇವತ್ತು ಆದಿತ್ಯವಾರ."

"ಗೊತ್ತು, ಕಿಣಿ ಅಂಗಡಿ ಆದಿತ್ಯವಾರವೂ ತೆಗೆದಿರುತ್ತಲ್ಲ. ಈ ಸಾರೆ ಬೇಸಾಯದ ಗದ್ದೆಗಳಿಗೆ ಔಷಧಿ ಬಿಡಬೇಕು. ಫಾಲಿಡಾಲ್ ತೆಗೆದುಕೊಂಡು ಬಾ ಎಂದಿದ್ದಾನೆ ಅಪ್ಪ. ಹಾಗೇ ಬೇರೆ ಕೆಲಸವಿದೆ. ನಿಂಗೇನಾದರೂ ಬೇಕಾಗಿದೆಯೇ?"

ಮೂರ್ತಿ ಕೇಳುತ್ತ ಕೆಳಗಿಳಿದು ಹೋದ. ತನ್ನನ್ನೂ ಪೇಟೆಗೆ ಕರೆದಿದ್ದರೆ ಸಂತೋಷವಾಗಿ ಹೋಗಿ ಬರ್ತಾ ಇದ್ದೆ. ಯಾಕೋ ಕರೆಯಲಿಲ್ಲ. ಮತ್ತೆ ಅರ್ಧ ಗಂಟೆಯಲ್ಲಿ ಅವಳೂ ಕೆಳಗಿಳಿದು ಬಂದು ಸೀದಾ ನಡೆದುಬಿಟ್ಟಳು ಲೋಹಿತಾಕ್ಷನ ಮನೆಯತ್ತ.

ದಿನನಿತ್ಯವೂ ನಡೆಯುತ್ತಿದ್ದ ದಾರಿ. ಆದರೆ ಅದೇಕೋ ನಡುಗುತ್ತಾ ಇವೆ ಕಾಲ್ಗಳು. ಮೈಸೂರಿನಿಂದ ಬಂದ ಮೇಲೆ ಅವನ ಭೇಟಿಯಾಗಿರಲೇ ಇಲ್ಲ. ಹೇಗಿದ್ದಾನೋ, ಈಗ.... ಏನು ಹೇಳುತ್ತಾನೋ....

"ಅರೆರೆ ಆಶಾ..." ಬಾಗಿಲಲ್ಲಿ ನಿಂತ ಅವಳನ್ನು ಕಂಡು ಹಾರಿಕೊಂಡು ಬಂದ ಲೋಹಿತಾಕ್ಷ, "ಬಾ ಒಳಗೆ, ಏನು ಅಪರೂಪ. ಏನು ವಿಶೇಷ? ಯಾಕೆ ಮುಖ ಬಾಡಿದೆ?" ಎನ್ನುತ್ತ ಒಳಗೆ ಕರೆದ.

"ಈಗ್ತಾನೆ ಶಿವಮೂರ್ತಿ ಬಂದು ಹೋದರು. ಹೇಗಿದ್ದಿ ನೀನು. ಅಸೌಖ್ಯವಂತೆ, ಹೇಳಿದರು ಮೂರ್ತಿ."

"ನಂಗೇನಾಗಿದೆ ಅಸೌಖ್ಯಕ್ಕೆ? ನಿನ್ನನ್ನು ನೋಡದೆ ತುಂಬ ಸಮಯವಾಗಿತ್ತಲ್ಲ. ಯಾಕೋ ನಿನ್ನೆ ಮನಸ್ಸಿಗೆಲ್ಲ ಕಿರಿಕಿರಿಯಾಯ್ತು..."

"ಆಗ ನನ್ನ ನೆನಪಾಯ್ತು" ಗೊಳ್ಳನೆ ನಕ್ಕು ಅವನೆಂದ, "ಈಗ ನಿನ್ನ ಆಗಮನವಾಯ್ತು. ನೀನು ಲಕ್ಕೀ ಆಶಾ. ಶಿವಮೂರ್ತಿ ನಿನ್ನನ್ನು ಎಷ್ಟು ಪ್ರೀತಿಸ್ತಾರೆ ಏನ್ನೋದು ಇವತ್ತೇ ನಂಗೆ ತಿಳಿದದ್ದು..."

"ಏನ್ಹೇಳಿದರು ನನ್ನ ವಿಚಾರದಲ್ಲಿ?" ಆತಂಕದ ಪ್ರಶ್ನೆ.

"ಏನಿಲ್ಲ. ಆದರೆ ನಿನ್ನ ಕಣ್ಣಗಳಲ್ಲಿ ಯಾಕೆ ನೀರು? ಅಳ್ತಿದ್ದೀಯಾ.... ಛೇ ಛೇ..." ಅವಳ ಮುಖವನ್ನು ಮೇಲೆತ್ತುತ್ತ ಕೇಳಿದ ಲೋಹಿತಾಕ್ಷ.

"ಅವರೇನೇ ಹೇಳಿರಲಿ ನಿನ್ನ ಹತ್ರ. ನಂಗೆ ಬೇಸರವಿಲ್ಲ. ನಿನ್ನನ್ನೇ ನಂಬಿಕೊಂಡು ಬಂದಿದ್ದೇನೆ ಲೋಹಿತ್.... ಅವರು ನನ್ನನ್ನು ಎಷ್ಟು ಪ್ರೀತಿಸ್ತಾರೋ ನಾನರಿಯೆ. ಆದ್ರೆ ನಂಗೆ ಅವರ ಜೊತೆ ಒಂದಾಗಿ ಇರಲು ಸಾಧ್ಯವಿಲ್ಲ ಇನ್ನು. ಕೊರತೆ ನನ್ನಲ್ಲಿಯೋ, ಅವರಲ್ಲಿಯೋ ಅಥವಾ ಮನೆಯವರಲ್ಲೋ ಅದೂ ನಾರಿಯೆ. ಒಟ್ಟಿನಲ್ಲಿ ನನಗೆ ಬೇಕು ಅಲ್ಲಿಂದ ಬಿಡುಗಡೆ. ಅದಕ್ಕೆ ನೀನೊಬ್ಬನೇ ಆಸರೆ!"

"ಸಮಾಧಾನ ಮಾಡ್ಕೋ" ನಕ್ಕ ಲೋಹಿತಾಕ್ಷ. "ಯೋಚನೆ ಮಾಡಿ ತಿಳಿಸ್ತೇನೆ. ಈಗ ನೀನು ಮನೆಗ್ಹೋಗು.... ನಿನಗೆ ಗೊತ್ತಿಲ್ಲ.... ನನ್ನದು ಜಾಲಿ ಲೈಫು.... ಸ್ವತಂತ್ರ ಹಕ್ಕಿ ನಾನು.... ಆದರೆ ನಿನ್ನ ಗೆಳೆತನ ನಿನ್ನ ಸಾಮೀಪ್ಯ ನನ್ನನ್ನು ಹೊಸ ಮನುಷ್ಯನನ್ನಾಗಿ ಮಾಡಿವೆ. ಆಶಾ ಇಷ್ಟೊಂದು ಸೂಕ್ಷ್ಮ ಹೃದಯಿ ನೀನಾಗಬಾರದು...!"

ಆಶಾ ಕತ್ತೆತ್ತಿ ನೋಡಿದಳು ಅವನತ್ತ. ಓ.... ನಾನೇಕೆ ಇವನೊಡನೆ, ಇವನ ಹಿಂದೆ ಓಡಿಬರುತ್ತಿದ್ದೇನೆಯೋ ನನಗೇ ತಿಳಿಯದು. ನಿರ್ಬಲ ಹೃದಯ ನನ್ನದು.

ಬಂದವಳು ಒಂದು ನಿಮಿಷಕ್ಕಿಂತ ಹೆಚ್ಚು ಹೊತ್ತು ನಿಲ್ಲದೆ ಆ ಗಳಿಗೆಯಲ್ಲಿ ಹೊರಟುಬಿಟ್ಟಳು ಮನೆಯತ್ತ. ಲೋಹಿತಾಕ್ಷ ಅವಳೊಡನೆ ನದಿಯ ದಡದವರೆಗೂ ಬರುತ್ತ ಹೇಳಿದ, "ನಮ್ಮಿಬ್ಬರ ಪರಿಚಯ, ಗೆಳೆತನ, ಈ ರೀತಿಗೆ ತಿರುಗಿದ್ದು ನಿಜಕ್ಕೂ ಆಶ್ಚರ್ಯ... ಇದೊಂದು ಆಕಸ್ಮಿಕ!"

೧೨

ಊಟಕ್ಕೆ ಕುಳಿತಾಗ ಮೂರ್ತಿ ಹೇಳಿದ, "ಲೋಹಿತಾಕ್ಷನ ಮನೆಗೆ ಹೋಗಿದ್ದೆ ಅಮ್ಮಾ ಅವನಿಗೆ ಸದ್ಯದಲ್ಲಿಯೇ ವರ್ಗವಾಗಲಿದೆಯಂತೆ. ಜೇರೆಲ್ಲಿಯಾದರೂ ಒಳ್ಳೆಯ ಕೆಲಸ ಸಿಕ್ಕಿದರೆ ಇದನ್ನು ಬಿಟ್ಟುಬಿಡ್ತಾನಂತೆ."

"ಮೊನ್ನೆ ಇಲ್ಲಿಗೆ ಬಂದಾಗ ಹೇಳಿದ್ದ. ಬ್ಯಾಂಕ್ ಕೆಲಸವನ್ನು ಬಿಟ್ಟುಬಿಡಬೇಡ

ಎಂತಲೂ ಹೇಳಿದೆ ನಾನು. ಈ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮುಂಬಯಿಯತ್ತ ಹೋಗ್ತಾನೆ ಅಂತ ಕಾಣುತ್ತೆ... ಹೇಗಿದ್ದರೂ ಒಂಟಿಜೀವಿ. ನಡೆಯುತ್ತೆ ಬಿಡು." ಎಂದರು ತಮ್ಮಯ್ಯ.

ಆಶಾಗೆ ಹೇಗ್ಹೇಗೊ ಆಯಿತು ಈ ಮಾತನ್ನು ಕೇಳಿ. ತಾನು ಅವನಲ್ಲಿಗೆ ಹೋದಾಗ ಈ ವಿಷಯವನ್ನೇಕೆ ತಿಳಿಸಲಿಲ್ಲ? ಅವನೆಲ್ಲಿಯಾದರೂ ಹೋಗಿಬಿಟ್ಟರೆ ಈ ಹಳ್ಳಿಯಲ್ಲಿ ನಾನೊಬ್ಬಳೇ! ಊಹೂಂ, ಲೋಹಿತಾಕ್ಷ ಇರದೇ ಹೋದಲ್ಲಿ ಈ ಸ್ಥಳದಲ್ಲಿ ಒಂದು ದಿನವೂ ಇರಲಸಾಧ್ಯ.... ಅವನೊಂದಿಗೆ ತಾನೂ ಹೋಗಿ ಬಿಡಬೇಕು...

"ಯಾಕೇ ಊಟ ಮಾಡ್ತಾ ಇಲ್ಲ... ಕನಸಿನಲ್ಲಿದ್ದೀಯಾ?" ಎನ್ನುತ್ತ ಶಿವಮೂರ್ತಿ ತನ್ನ ತಟ್ಟೆಯಲ್ಲಿದ್ದ ಅನ್ನದ ಮುದ್ದೆಯನ್ನು ತೆಗೆದು ಅವಳ ಬಾಯಿಗಿರಿಸುತ್ತ "ಹೋ ಹೋ" ಎಂದು ನಗತೊಡಗಿದ. ಬೆಚ್ಚಿಬಿದ್ದ ಆಶಾ ತನ್ನ ಬಾಯಿಗೆ ಬಿದ್ದ ಅನ್ನದ ಮುದ್ದೆಯನ್ನು ಎಡಗೈಯ್ಯಿಂದ ಅತ್ತ ನೂಕಿ ತನ್ನ ತಟ್ಟೆಯಲ್ಲಿದ್ದ ಅನ್ನವನ್ನು ತೆಗೆದು "ಇಕೊಳ್ಳಿ... ಇದನ್ನು ತಿನ್ನಿ" ಎಂದಳು ಅವನ ಬಾಯಿಯತ್ತ ತಂದು.

"ಕೊಡಿಲ್ಲಿ, ನೀನು ಹಾಕುವ ತುತ್ತನ್ನು ಬೇಡ ಅನ್ನುವ ಪಾಪಿ ನಾನಲ್ಲ" ಎಂದು ಬಾಯಿಯನ್ನು ತೆರೆದು 'ಆಂ' ಎಂದು ನುಂಗಿಬಿಟ್ಟ.

"ಛೀ... ಛೀ... ತಮಾಷೆ ಮಾಡಿದ್ದೆ. ನನ್ನ ಎಂಜಲನ್ನವನ್ನು ನಿಜವಾಗಿಯೂ ತಿಂದುಬಿಟ್ಟಿರಲ್ಲ..." ವಿಷಾದಗೊಂಡಳು ಆಶಾ.

"ಏನಾಯ್ತು ಮಹಾ. ನಾನೂ ನೀನೂ ಒಂದೇ. ಇನ್ನೊಂದು ತುತ್ತು ಹಾಕು ಬಾಯಿಗೆ.... ತಿಂತೇನೇ" ಎನ್ನುತ್ತ ಅವಳ ತಲೆಕೂದಲನ್ನು ಮೃದುವಾಗಿ ಹಿಡಿದೆಳೆದುಕೊಂಡ ತನ್ನತ್ತ.

ಅವರ ಸರಸಕ್ಕೆ ತೊಂದರೆಯಾಗದಂತೆ ತಲೆ ಬಗ್ಗಿಸಿದರು ತಮ್ಮಯ್ಯ. ಪೃಥ್ವಿ ಮಾತ್ರ ನಗತೊಡಗಿದ ಚಪ್ಪಾಳೆ ತಟ್ಟುತ್ತ, ಊಟ ಮುಗಿಸಿ ಮಹಡಿಗೆ ಬಂದೊಡನೆಯೇ ಶಿವಮೂರ್ತಿ ಅವಳನ್ನು ತನ್ನತ್ತ ಎಳೆದುಕೊಳ್ಳುತ್ತ ಮೆಲ್ಲನೆ ಹೇಳಿದ ಕಿವಿಯಲ್ಲಿ,

"ಏನು ಹುಚ್ಚು ಹಿಡಿಸ್ತಾ ಇದ್ದಿ ಆಶಾ.... ಈಗಂತೂ ಹೊಟ್ಟೆಯೊಳಗೆ ನನ್ನ ರೂಪ ಹೊತ್ಕೊಂಡು ಬಹಳ ಚೆನ್ನಾಗಿ ಕಾಣೆಸ್ತಾ ಇದ್ದೀ.... ಹಾಂ ಆರೋಗ್ಯ ಚೆನ್ನಾಗಿ ನೋಡಿಕೊಳ್ಳಬೇಕು ಮರೀ..."

ಅದೇಕೋ ಆಶಾಗೆ ಅವನ ಮಾತಿನಿಂದ ಒಂದಿನಿತೂ ಸಂತೋಷವಾಗಲಿಲ್ಲ. ಸಾಯಂಕಾಲ ಅವನ ಒತ್ತಾಯದಿಂದ ಪರಿಚಿತ ಡಾಕ್ಟರರಿಂದ ಪರೀಕ್ಷಿಸಿಕೊಳ್ಳಲು ಒಪ್ಪಿಕೊಂಡಳು.

"ಪೃಥ್ವಿ ಬೇಡ ನಮ್ಮ ಜೊತೆಯಲ್ಲಿ. ನಾವಿಬ್ಬರೂ ಡಾಕ್ಟರರಲ್ಲಿಗೆ ಹೋಗಿ ಅಲ್ಲಿಂದ ಹಾಯಾಗಿ ಮರವಂತೆ ಬೀಚಿಗೆ ಹೋಗ್ಬರೋಣ" ಎಂದ ಮೂರ್ತಿ.

ಮೂರು ಗಂಟೆಗೆಲ್ಲಾ ಹೊರಟು ಸಿದ್ಧಳಾದಳು ಆಶಾ. ಕನ್ನಡಿಯಲ್ಲಿ ಮುಖ ನೋಡಿಕೊಂಡಾಗ ನಿಜಕ್ಕೂ ತಾನು ಬಹಳ ಇಳಿದು ಹೋಗಿದ್ದೇನೆ ಎಂದೆನಿಸಿತು.... ಅಷ್ಟರಲ್ಲಿ "ಆಶಾ, ಹೊರಟಾಯಿತೇ ನಿನಗೆ..." ಎಂದು ಕೇಳುತ್ತ ಶಿವಮೂರ್ತಿ ಬಂದುಬಿಟ್ಟ ಮಹಡಿಗೆ.

ಬಂದವನೇ ಸಿಡಿಲು ಹೊಡೆದವರಂತೆ ಗಕ್ಕನೆ ನಿಂತು ಬಿಟ್ಟ. ಅವನ ಶಾಂತಮುಖ ಇದ್ದಕ್ಕಿದ್ದಂತೆ ಕೋಪದಿಂದ ಬುಸುಗುಟ್ಟಿತು. "ಬೇರೆ ಯಾವ ಸೀರೆಯೂ ನಿನಗಿರಲಿಲ್ಲವೇ?" ಘರ್ಜಿಸಿದ ಆತ.

"ಏನಾಗಿದೆ ಈ ಸೀರೆಗೆ?" ಅಚ್ಚರಿಗೊಂಡಳು ಆಶಾ.

"ಪೆಟ್ಟಿಗೆ ತುಂಬಾ ನಿನ್ನ ಮತ್ತು ಕಾಂತಿಯ ಸೀರೆ ರಾಶಿ ರಾಶಿಯಿದ್ದರೂ ಇದನ್ಯಾಕೆ ಉಟ್ಟುಕೊಂಡೆ? ತೆಗಿ ಮೊದಲು" ಎನ್ನುತ್ತ ಅವಳ ಹತ್ತಿರಕ್ಕೆ ಬಂದು ಕೈ ಹಿಡಿದ, "ಮೊದಲು ಈ ಸೀರೆ ತೆಗಿ!"

ಅವನ ಕೈ ಅತ್ತ ನೂಕಿದಳು, "ಊಹೂಂ, ನನ್ನ ಇಷ್ಟದ ಸೀರೆಯನ್ನು ಉಡುವ ಹಕ್ಕು ನನಗಿಲ್ಲವೇ?"

"ನಿನಗೆ ಇಷ್ಟ.... ನನಗೆ ಕಷ್ಟ.... ಈ ಕೆಂಪು... ಈ ಕೆಂಪನ್ನು ನೋಡಿದಾಕ್ಷಣ ತಲೆ ತಿರುಗುತ್ತೆ... ತೆಗಿ ಪ್ಲೀಸ್...."

ಅವನ ಒರಟು ಮಾತಿನಿಂದ ತಬ್ಬಿಬ್ಬಾದ ಆಶಾ ಹಿಂದೆ ಸರಿದಳು. ನಯವಾಗಿ ಇದೇ ಮಾತನ್ನು ಹೇಳಿದ್ದರೆ ಕೆಂಪು ಸೀರೆಯನ್ನು ಆ ಗಳಿಗೆಯಲ್ಲಿ ಬದಲಾಯಿಸಿಬಿಡುತ್ತಿದ್ದಳು ಅವಳು. ಆದರೀಗ ಪ್ರತಿ ಉತ್ತರ ಕೊಡುವ ಛಲ ಎದ್ದಿತ್ತು ಅವಳಲ್ಲಿಯೂ!

"ಆಶಾ..." ಅವನ ಸ್ವರ ಏರಿತು, "ಕೆಂಪು ಬಣ್ಣವನ್ನು ಎಲ್ಲಿಯೇ ಕಂಡರೂ ನಾನದನ್ನು ದ್ವೇಷಿಸ್ತೇನೆ. ಓಹ್.... ಇನ್ನು ಒಂದು ಕ್ಷಣವೂ ನೀನು ಈ ಕೆಂಪು ಸೀರೆಯಲ್ಲಿರಬಾರದು. ಹೋಗು ಬದಲಾಯಿಸು..." ತನ್ನ ಎರಡು ಕೈಗಳಿಂದ ತಲೆಯನ್ನು ಭದ್ರವಾಗಿ ಹಿಡಿದುಕೊಂಡು ಕುಳಿತ ಕುರ್ಚಿಯಲ್ಲಿ.

ಆಶಾ ಮುಖ ಕಂದಿತು. ಹಿಂದೆ ಇದೇ ಹೂದಾನಿಯಲ್ಲಿರಿಸಿದ್ದ ಕೆಂಪು ಗುಲಾಬಿ ಹೂವುಗಳು ಮುದ್ದೆಯಾಗಿ ಹೋದುದೂ ನೆನಪಿಗೆ ಬಂದಿತು. ಅದೇ ವೇಳೆಯಲ್ಲಿ ಕೆಳಗೆ ಪೃಥ್ವಿಯ ಸ್ವರ ಕೇಳಿಸಿತು, "ಈಶ್ವರಿ ಅತ್ತೆ ಬಂದ್ಲು. ಈಶ್ವರಿ ಅತ್ತೆ ಬಂದ್ಲು...."

"ಬಾ ಬಾ.... ಇದೇನು ಒಂದು ಕಾಗದವನ್ನೂ ಬರೆಯದೆ ಬಂದಬಿಟ್ಟೆ...." ರಂಗಮ್ಮನ ಸ್ವರ.

"ನಾನು ಹೇಳಿದ್ದು ಕೇಳಿಸಲಿಲ್ಲವೇ?" ಗುಡುಗಿದ ಮೂರ್ತಿ.

ನಿಂತಲ್ಲಿಂದ ಹೊರಳಿದಳು ಅವನತ್ತ, "ಕೇಳಿಸಿತು. ಆದರೆ ನಿಜ ಹೇಳಿ, ನೀವ್ಯಾಕೆ ಕೆಂಪನ್ನು ಕಂಡರೆ ಹೀಗೆ ರೇಗ್ತೀರಿ?"

"ಮೊದಲು ಬೇರೆ ಸೀರೆ ಉಡು."

"ಊಹೂಂ, ಮೊದಲು ಉತ್ತರ ಹೇಳಿ."

ಧಡಕ್ಕನೆ ಎದ್ದ ಮೂರ್ತಿ, ಅವನ ಮುಷ್ಟಿ ಬಿಗಿದುಕೊಂಡವು. "ಹಠಮಾರಿ, ನಿನಗೆ ನಿನ್ನದೇ ಹಠ. ಕಾಂತಿಯ ಒಂದು ಪಾಲು ಒಳ್ಳೆಯ ಗುಣವೂ ನಿನ್ನಲ್ಲಿಲ್ಲ. ಓ.... ತೆಗಿ... ಆ ಕೆಂಪನ್ನು. ನನ್ನ ಮನಕ್ಕೆ ಈ ರೀತಿ ಕಿಚ್ಚನ್ನಿಡುವುದೇ ನಿನಗೆ ಸಂತಸ."

"ಏನು....?" ಹುಬ್ಬೇರಿಸಿದಳು ಆಶಾ. "ಯಾರ ಮನಕ್ಕೆ ಕಿಚ್ಚನ್ನಿಟ್ಟೆ ನಾನು?

ನಿಮ್ಮ ಮನಕ್ಕೆ? ನಿಮ್ಮ ಹೃದಯಕ್ಕೆ?? ಹ್ಹ ಹ್ಹ.... ಹ್ಹ" ಅಟ್ಟಹಾಸದ ನಗೆಯಲ್ಲಿ ಅವಳೆಂದಳು, "ಇರಬಹುದು, ಆದರೆ ನನ್ನ ಈ ಹೃದಯಕ್ಕೆ ಕಿಚ್ಚನ್ನಿಟ್ಟವರು ಯಾರು?..... ನೀವು... ಹಾಗೂ ಮನೆಯವರು."

"ಹೇಯ್..." ಸಣ್ಣಗೆ ನಡುಗುತ್ತಿದ್ದ ಮೂರ್ತಿ ಗರ್ಜಿಸಿದ ಇನ್ನೊಮ್ಮೆ. "ಬಾಯಿ ಮುಚ್ಚು...! ಕಾಂತಿ ರಕ್ತದ ಓಕುಳಿಯಲ್ಲಿ.... ಓ.... ರಕ್ತದ ಮಡುವಿನಲ್ಲಿ ಪ್ರಾಣಬಿಟ್ಟಳು. ಆ ನೆನಪನ್ನು ಮತ್ತೆ ಮತ್ತೆ ಕೆದಕಲು ನೀನು ಬೇಕೆಂದೇ ಈ ಕೆಂಪನ್ನು ಉಪಯೋಗಿಸ್ತಾ ಇದ್ದೀ... ಅಯ್ಯೋ...."

"ಅಯ್ಯೋ...." ಅವನ ಸ್ವರದಲ್ಲಿ ಅಣಕವಾಡಿದಳು ಅವಳೂ.

ಈ ಅಣಕದ ನುಡಿ ಅವನ ಕೆರಳಿದ ಕೋಪಾಗ್ನಿಗೆ ಇನ್ನಷ್ಟು ತುಪ್ಪವನ್ನೆರೆದಂತಾಯಿತು. "ವಾರದಲ್ಲಿ ನಾನಿರೋದು ಕೇವಲ ಒಂದೇ ದಿನ ಇಲ್ಲಿ. ಆಗಲಾದರೂ ಸಮಾಧಾನ, ತೃಪ್ತಿಯಲ್ಲಿರೋದಕ್ಕೆ ಬಿಡು ನನ್ನನ್ನು.... ಓಹ್ ತೆಗಿ ಅದನ್ನು...."

"ಓಹ್..." ವ್ಯಂಗ್ಯ ನಗೆ ಹೊರಹೊಮ್ಮಿತು.... "ವಾರದಲ್ಲಿ ಆರು ದಿನವೂ ನಾನೊಬ್ಬಳೇ ಇರ್ತೀನಲ್ಲ. ಸಮಾಧಾನ, ತೃಪ್ತಿಯಲ್ಲಿದ್ದೇನೆಯೇ? ನಿಮಗೆ ಮಾತ್ರ ಬೇಕು ಸುಖ, ಸಮಾಧಾನ ತೃಪ್ತಿ! ನಾನು ಮಾತ್ರ ಕೈತೊಳೀತಾ ಇರ್ಬೇಕು ಕಣ್ಣೀರಿನಲ್ಲಿ...."

"ಅಧಿಕ ಪ್ರಸಂಗೀ...." ಜೋರಾಗಿ ಅರಚಿದ ಮೂರ್ತಿ, "ಅತಿಯಾಯ್ತು ನಿನ್ನ ಮಾತು. ನನ್ನ ತಲೆ ಇನ್ನು ಸ್ವಲ್ಪ ಹೊತ್ತಿಗೆ ಸಿಡಿದು ಹೋಳಾಗಿ ಹೋಗುತ್ತೆ."

"ನಿಮ್ಮ ತಲೆಯೊಂದೇ ಅಲ್ಲ.... ನನ್ನ ತಲೆಯೂ ಸಿಡಿದು ಹೋಳಾಗಿ ಹೋಗ್ತಾ ಇದೆ."

"ನಿನಗಿವತ್ತು ಏನೋ ಆಗಿದೆ. ಈ ಇದೇ ಡ್ರೆಸ್‌ನಲ್ಲಿ ಇನ್ನೊಂದಿಷ್ಟು ಕೆಂಪು ಬಣ್ಣ ಮುಖಕ್ಕೆ ಹಚ್ಕೊಂಡು ಮೆರವಣಿಗೆ ಹೊರಡು. ನನಗೇನಂತೆ.... ಅಥವಾ ಇಲ್ಲೇ ಕೂಗಾಡ್ತಾ ಬಿದ್ದಿರು" ಎನ್ನುತ್ತ ಅಲ್ಲಿಂದೆದ್ದು ಧಡ್ ಧಡ್ ಎಂದು ಹೆಜ್ಜೆ ಹಾಕುತ್ತ ಇಳಿದು ಹೋದ ಕೆಳಗೆ. ಮತ್ತೊಂದು ನಿಮಿಷದಲ್ಲಿ ಕೇಳಿಸಿತು ಮೋಟರ್ ಬೈಕ್‌ನ ಸದ್ದು. ಕಿಟಕಿಯಿಂದ ನೋಡುತ್ತಾಳೆ, ವಾಹನ ಅಂಗಳ ದಾಟಿ ಹೋಗುತ್ತಾ ಇದೆ. ನೋಡುತ್ತ ನೋಡುತ್ತ ಕಣ್ಣುಗಳು ತುಂಬಿ ಬಂದವು.

ಮನಸ್ಸು ಓಡಿತು ಲೋಹಿತಾಕ್ಷನ ಸಾನ್ನಿಧ್ಯದಲ್ಲಿ ಸುಖವನ್ನರಸಲು. "ಲೋಹಿತ್, ಇದೋ ಬಂದಿದ್ದೇನೆ ನಾನು. ಇನ್ಮೇಲೆ ಎಂದೆಂದಿಗೂ ನಿನ್ನನ್ನು ದೂರ ಮಾಡಲಾರೆ" ಬಿಕ್ಕುತ್ತ ಅವನ ತೋಳತೆಕ್ಕೆಯಲ್ಲಿ ಮುಖ ಮರೆಯಿಸಿ ಅಳುತ್ತಿದ್ದಾಳೆ.

"ಏನಾಯಿತು ನನ್ನ ಚಿನ್ನಾ. ನಿನ್ನ ದುಃಖವನ್ನೆಲ್ಲ ಹೇಳಿಕೋ ನನ್ನ ಹತ್ರ...." ಮೆಲ್ಲನೆ ಕಣ್ಣೀರನ್ನೊರಸುತ್ತಿದ್ದಾನೆ ಅವನು.

"ನನ್ನ ಸಹನೆ, ಸಮಾಧಾನ ಕೊಚ್ಚಿ ನೀರಾಗಿ ಹೋಯ್ತು. ಈ ಒಂದು ಕೆಂಪು ಸೀರೆಗಾಗಿ ಎಷ್ಟೊಂದು ಗಲಾಟೆಯಾಗಿ ಹೋಯಿತು. ಮೊದಲು ಕೆಂಪು ಸೀರೆ ತೆಗೆದು ಬೇರೆ ಉಡು ಅಂತ ಕೂಗಾಡಿಬಿಟ್ಟರು."

"ಆಹ್.... ಈ ಕೆಂಪು ಸೀರೆಯಲ್ಲಿ ಅದೇ ಆಗ ಅರಳಿದ ಕೆಂಪು ಗುಲಾಬಿಯಂತೆ ಕಾಣಿಸ್ತಾ ಇದ್ದೀಯಲ್ಲ."

"ಇಲ್ಲಿಲ್ಲ. ಇಲ್ಲಿಂದ ಎಲ್ಲಿಯಾದರೂ ನಾವಿಬ್ಬರೇ ಇರುವ ಸ್ಥಳಕ್ಕೆ ಹೊರಟುಹೋಗೋಣ.... ನಡಿ... ನಡೀ...."

ಮಂಚದ ಮೇಲುರುಳಿಕೊಂಡ ಆಶಾಳ ಕಿವಿಯೊಳಗೆಲ್ಲಾ ಯಾತನೆ, ವೇದನೆ. ತಡೆಯಲಾರದೆ ಹತ್ತಿರದಲ್ಲಿದ್ದ ಹತ್ತಿಯನ್ನು ಉಂಡೆಯಂತೆ ಮಾಡಿ ಕಿವಿಯೊಳಗೆ ಭದ್ರವಾಗಿರಿಸಿಕೊಂಡಳು. ಕೆಳಗೆ ಈಶ್ವರಿ ಬಂದಿದ್ದಾಳೆ. ತಾನವಳನ್ನು ಮಾತನಾಡಿಸಬೇಕು ಎಂದೆನಿಸಿದರೂ ಕೆಳಗಿಳಿದು ಹೋಗಲಿಲ್ಲ.

ಪೂರ್ಣ ಕತ್ತಲೆಯಾಗಿ ಆ ದೊಡ್ಡ ಮನೆಯಲ್ಲೆಲ್ಲ ದೀಪ ಬೆಳಗಿಕೊಂಡಿತು. ಆದರೆ ಈ ಹೃದಯದಲ್ಲಿಯೋ ಪೂರ್ಣ ಕತ್ತಲೆ.... ಏನೋ ಶೂನ್ಯಭಾವ. ಅಂದು ಮೊದಲ ಬಾರಿಗೆ ಅವರಿಬ್ಬರ ಹಾಸಿಗೆಗಳೂ ಬೇರೆ ಬೇರೆಯಾದವು. ಮೂರ್ತಿಯಿಂದ ಸಿಡಿದೆದ್ದ ಆಶಾ ತಾನಾಗಿಯೇ ದೂರ ಹಾಸಿಕೊಂಡು ಮಲಗಿದಾಗ ಹತ್ತಿರ ಬಾ ಎನ್ನಲ್ಲಿಲ್ಲ ಮೂರ್ತಿ. ಓ.... ಮಧ್ಯಾಹ್ನದ ಆ ರಸನಿಮಿಷಗಳೆಲ್ಲಿ ಹೋದವು? ಏನಾಗಿಹೋಯಿತು ಮೂರ್ತಿಗೆ?

ಅವನ ವಿಷಯದಲ್ಲಿ ಇನ್ನಷ್ಟು ದ್ವೇಷ, ತಿರಸ್ಕಾರ ತುಂಬಿಕೊಂಡಿತು. ತಮ್ಮಿಬ್ಬರ ಮಧ್ಯೆ ಯಾವುದೋ ಅಡ್ಡಗೋಡೆಯಿದೆ. ಅದು ಕದಲದ ಹೊರತು ಇಬ್ಬರಿಗೂ ಸುಖವಿಲ್ಲ ಎಂದೆನಿಸಿತು.

ಅವಳು ಅಳುತ್ತಿರುವ ಸದ್ದು ಕೋಣೆಯಲ್ಲಿ ಮಾರ್ದನಿಗೊಂಡರೂ ಮಂಚದಿಂದಿಳಿದು ಮೂರ್ತಿ ಅವಳ ಹತ್ತಿರ ಬಂದು ಸಂತೈಸಲಿಲ್ಲ. ಅದೇಕೋ...., ಸಂತೈಸುವ ಮನಸ್ಸೂ ಅವನದಾಗಲಿಲ್ಲ. ಆ ಕೆಂಪು ಸೀರೆ ಈ ಗಳಿಗೆಯಲ್ಲಿಯೂ ಇತ್ತು ಅವಳ ಮೈಮೇಲೆ!

೧೩

ಬೆಳಿಗ್ಗೆ ಎದ್ದು ನೋಡುತ್ತಾಳೆ... ಖಾಲಿಯಾಗಿದೆ ಮಂಚ. ಯಾವಾಗಲೋ ಎದ್ದು ಹೋಗಿದ್ದ ಮೂರ್ತಿ. ಮಂಚದ ಮೇಲಿನ ಹಾಸಿಗೆ ನೋಡಿದರೆ ಅವನು ರಾತ್ರಿಯೆಲ್ಲ ನಿದ್ರಿಸಿಲ್ಲವೆನ್ನುವುದು ಸ್ಪಷ್ಟವಾಗಿ ತಿಳಿದು ಕಸಿವಿಸಿಗೊಂಡಳು ತನ್ನಲ್ಲೇ. ತನ್ನಂತೆ ಅವರೂ ನೊಂದುಕೊಂಡಿದ್ದಾರೆ. ಆದರೆ ಯಾಕೆ ನೊಂದುಕೊಂಡರು? ತನ್ನಿಂದ ಆದ ತಪ್ಪೇನು? ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತ ತಾನುಟ್ಟ ಕೆಂಪು ಸೀರೆಯನ್ನು ನೋಡಿಕೊಂಡಳು....

'ಓಹೋ, ನೋಡೋಣ. ಈ ಸೀರೆಯಲ್ಲಿಯೇ ಇರುತ್ತೇನೆ. ಇವತ್ತೆಲ್ಲ ಈ ಸೀರೆಗೋಸ್ಕರ ಏನೇನು ಗಲಾಟೆಯಾಗುತ್ತೋ ಅದನ್ನೂ ನೋಡಿಯೇಬಿಡೋಣ...."

ಆದರೆ ಅಂದು ನಸುಕಿನಲ್ಲಿಯೇ ಶಿವಮೂರ್ತಿ ಯಾರಿಗೂ ತಿಳಿಸದೆ ಕುಮಟೆಗೆ

ಹೊರಟುಹೋಗಿದ್ದಾನೆ ಎನ್ನುವುದು ಅನಂತರ ತಿಳಿಯಿತು ಈಶ್ವರಿಯಿಂದ. ಮನೆಯವರೆಲ್ಲ ಅವಳನ್ನೇ ದೂರಿಕೊಂಡರು. ಎಂದಿನಂತೆ ಈಶ್ವರಿಯೂ ನಗುಮುಖದಲ್ಲಿರಲಿಲ್ಲ. ಆದರೆ ಆಶಾಳನ್ನು ಟೀಕಿಸುವ ಬುದ್ಧಿ ಅವಳದಲ್ಲ.

"ಅತ್ತಿಗೇ, ಅಣ್ಣನ ಮನಸ್ಸು, ಹೃದಯ ಹೂವಿನ್ಹಾಗೆ. ಅಪ್ಪ, ಅಮ್ಮ ಚಿಕ್ಕಂದಿನಿಂದಲೂ ಅವನನ್ನು ಅಂಗೈ ಮೇಲೆ ಬೆಳೆಸಿದ್ದಾರೆ. ಮನಸ್ಸಿಗೇನೋ ಅಸಮಾಧಾನವಾಗಿಯೇ ಅಣ್ಣ ಕಾಫಿಯನ್ನು ಕುಡಿಯದೆ ಬೆಳಗಾಗುವ ಮುಂಚೆ ಹೊರಟ್ಹೋಗಿದ್ದಾನೆ..... ನಿನ್ನೆ ನಿಮ್ಮಿಬ್ಬರಲ್ಲಿ ಬಿರುಸಾಗಿ ಚರ್ಚೆ ನಡೀತಲ್ಲ.... ಏನದು?" ಕೇಳಿದಲು ಈಶ್ವರಿ ಆಶಾಳ ಮುಖವನ್ನು ನೋಡಲಾರದೆ.

"ನಿನ್ನೆ ಅವರ ಮನ ನೋಯುವಂತಹದೇನೂ ಆಗಲಿಲ್ಲ. ನಾನೀಗ ಉಟ್ಟಿರುವ ಕೆಂಪು ಸೀರೆಗಾಗಿ ಬಾಯಿಗೆ ಬಂದಂತೆ ಕೂಗಾಡಿ ನನ್ನಿಂದ ರಾತ್ರಿ ದೂರ ಹಾಸಿಕೊಂಡು ಮಲಗಿಬಿಟ್ಟರು. ಹೇಳು ಈಶ್ವರಿ, ಕೆಂಪು ಎಂದಾಕ್ಷಣ ಅವರ ಮುಖ ಯಾಕೆ ವಿಕಾರವಾಗುತ್ತೇ?"

ಈಶ್ವರಿಯ ಮುಖ ಕಂದಿತು. ಹಣೆಯ ಮೇಲೆ ನೀರಿಗೆಗಳು ಮೂಡಿದವು. "ಕೆಂಪು ಕಂಡರೆ ಅಣ್ಣನಿಗೆ ದ್ವೇಷ ಅಲ್ಲ ಅತ್ತಿಗೆ, ಹೇಗೆ ಹೇಳಲಿ ನಾನು ನಿನಗೆ? ಬೇಸರ ಮತ್ತು ವ್ಯಥೆಯಿಂದ ಅಂದಿನ ದುರಂತ ಚಿತ್ರದ ನೆನಪು ಬರುತ್ತದೆ ಅವನಿಗೆ."

"ಯಾವ ದುರಂತ?"

"ಕಾರು ಅಪಘಾತದಲ್ಲಿ ಕಾಂತಿ ಸತ್ತಳಲ್ಲ..... ಅಂದಿನ ಆ ನೆನಪು ಕೆಂಪು ಬಣ್ಣ ಕಂಡಾಕ್ಷಣ ಮರುಕಳಿಸುತ್ತೆ. ಬಾ, ಹೊರಗೆ ಹೋಗೋಣ. ಇಂತಹ ವಿಷಯ ಇಲ್ಲಿ ಮಾತನಾಡಬಾರದು...."

ಇಬ್ಬರೂ ಮನೆ ಅಂಗಳ ದಾಟಿ ದೊಡ್ಡ ಮಾವಿನ ಮರದಡಿಯಲ್ಲಿ ಕುಳಿತರು. ಬೆಳಗಿನ ಸೂರ್ಯಕಿರಣಗಳು ರಂಗವಲ್ಲಿಯಂತೆ ಹರಡಿದ್ದವು ನೆಲದ ಮೇಲೆ. ಈಶ್ವರಿ ಪಿಸು ಧ್ವನಿಯಲ್ಲಿ ಹೇಳತೊಡಗಿದಳು:

"ಅಪ್ಪ ಅಮ್ಮ ಅಡಿಗೆ ಚೆನ್ನಕ್ಕ ಎಲ್ಲರೂ ಈ ಅಪಘಾತದ ವಿಚಾರವನ್ನು ಸಾವಿರ ಸಲ ಹೇಳಿರಬಹುದು. ನಾನೂ ಅದನ್ನೇ ಬಳಸಿ ಬಳಸಿ ಹೇಳುವುದಿಲ್ಲ ಬಿಡು. ಅಂದಿನ ಅಪಘಾತದಲ್ಲಿ ನಾನು ನನ್ನ ಪತಿಯನ್ನು ಕಳೆದುಕೊಂಡಿದ್ದರೂ ನನ್ನ ಮನಸ್ಸು ಭದ್ರವಾಗಿದೆ. ಅಣ್ಣನ ಮನಸ್ಸಿನ ನೋವು ಮಾಸಿಲ್ಲ ಇನ್ನೂ. ಅಂದು ನಡೆದದ್ದು ಹೀಗೆ, ತಲಕಾವೇರಿಗೆಂದು ನಾನು, ನನ್ನವರು ಅಣ್ಣ, ಕಾಂತಿ, ಪೃಥ್ವಿ ಮತ್ತು ಅಪ್ಪ ಅಮ್ಮ ಇಷ್ಟು ಜನ ಹೊರಟಿದ್ದೆವು. ಅಣ್ಣ ಕಾರು ಡ್ರೈವ್ ಮಾಡ್ತಾ ಇದ್ದ. ಅಣ್ಣನ ಹತ್ತಿರ ಕಾಂತಿ, ಪೃಥ್ವಿ ಹಾಗೂ ಅಮ್ಮನೂ. ಹಿಂದಿನ ಸೀಟಿನಲ್ಲಿ ಬಾಗಿಲ ಹತ್ತಿರ ನನ್ನವರು, ಪಕ್ಕದಲ್ಲಿ ನಾನು, ಹಾಗೂ ಅಪ್ಪ ಕುಳಿತಿದ್ದೆವು.

"ಸಂತೋಷಕರವಾದ ಪ್ರಯಾಣ. ಮುಂದಿನ ಅನಾಹುತದ ಕಲ್ಪನೆ ನಮಗಿದ್ದಿರಲಿಲ್ಲ. ಸಂಪಾಜೆ ಘಾಟಿ ಮುಗಿಯುವ ತನಕ ಎಲ್ಲಾ ಸರಿಯಾಗಿತ್ತು. ನಾವಂತೂ ಮಡಕೇರಿಗೆ ಹೋಗುವ ಆ ದಾರಿಗಳಲ್ಲಿ ಕಾಣುವ ಪ್ರತಿಯೊಂದು ಪ್ರಕೃತಿ ದೃಶ್ಯವನ್ನು ನೋಡುತ್ತ ಉಲ್ಲಾಸದಿಂದ ಮುಂದೆ ಸಾಗಿದ್ದೆವು. ಎಲ್ಲ ಕಡೆಗೂ ಹಸಿರೇ

ಹಸಿರು. ನೋಡಿದಷ್ಟೂ ಸಾಲದು. ನಮಗೆಲ್ಲ ಈ ಅಪಘಾತ ನಡೆಯುವ ಎರಡು ನಿಮಿಷಗಳ ಮೊದಲು ನನ್ನವರು 'ಕಿಟಕಿ ಪಕ್ಕದಲ್ಲಿ ಕೂತ್ಕೊಂಡು ಹೊರಗಿನ ದೃಶ್ಯ ನೋಡ್ತಿಯಾ?' ಎಂದು ಕೇಳಿದರು ನನ್ನನ್ನು. ಬೇಡ ಎಂದೆ ನಾನು....

"ಹರಟೆ ಮಾತಿನಲ್ಲಿ ನಾವೆಲ್ಲ ತಲ್ಲೀನರಾಗಿದ್ದೆವು" ಈಶ್ವರಿ ಸ್ವರ ತಗ್ಗಿತು. ಹಣೆಯ ಮೇಲಿಳಿದ ಕೂದಲನ್ನು ಆಚೆಗೆ ತಳ್ಳುತ್ತ ಹೇಳಿದಳು, "ಘಾಟಿಯ ತಿರುವಿನಲ್ಲಿ ವೇಗವಾಗಿ ಲಾರಿಯೊಂದು ಬರುತ್ತಾ ಇತ್ತು. ಅಣ್ಣ ಜಾಗ್ರತೆಯಾಗಿ ಕಾರನ್ನು ನಡೆಸುತ್ತಾ ಇದ್ದರೂ ಎದುರಿಗೆ ಬರುತ್ತಿರುವ ಭೀಮಾಕಾರದ ಲಾರಿಯನ್ನು ಕಂಡು.... ಸರಿಯಾಗಿ ಈಗ ನೆನಪಿಲ್ಲ..... ಅಣ್ಣ ತನ್ನ ಶಕ್ತಿಯೆಲ್ಲ ಸೇರಿಸಿ ಕಾರಿನ ಬ್ರೇಕ್ ಹಾಕಿದ. ಆದರೆ ಅದಕ್ಕೆ ಮುನ್ನವೇ ಲಾರಿ ಕಾರಿಗೆ ಡಿಕ್ಕಿ ಹೊಡೆದು ತಿರುಗಿ ಬಿತ್ತು ಕಾರು. ಮುಂದೇನು ಹೇಳಲಿ ಅತ್ತಿಗೇ.... ಅಬ್ಬಬ್ಬ...."

ತನ್ನ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡಳು ಈಶ್ವರಿ, "ಕಾರಿನ ಮುಂಬದಿ ಕುಳಿತಿದ್ದ ಕಾಂತಿ, ಹಿಂಬದಿ ಕುಳಿತಿದ್ದ ನನ್ನವರು ಕಾರಿನ ಅಡಿಯಲ್ಲಿ ಬಿದ್ದು ಪೂರ್ಣ ನಜ್ಜುಗುಜ್ಜಾದರು. ಅವರ ಶರೀರ ಗುರುತು ಹಿಡಿಯಲಾರದಷ್ಟು ವಿಕಾರವಾಗಿ ಹೋಗಿದ್ದವು. ಅಮ್ಮನ ಕಣ್ಣುಗಳಿಗೆ ಕಿಟಕಿಯ ಗಾಜು ಬಡಿದು ರಕ್ತ ಸೋರುತ್ತಾ ಇತ್ತು. ನನ್ನ ಎಡಗೈ ಮೂಳೆ ಮುರಿದಿತ್ತು. ಅಪ್ಪ, ಅಣ್ಣ, ಪೃಥ್ವಿಗೆ ಎಲ್ಲೋ ಸಣ್ಣಪುಟ್ಟ ಗಾಯವಾಗಿತ್ತು ಅಷ್ಟೇ.

"ಜನ ಸೇರಿ ಗಲಾಟೆಯಾಗಿ ಹೋಯಿತು.... ಆದರೆ ನಾನು ನನ್ನನ್ನು ಪ್ರೀತಿಸುವ ಪತಿಯನ್ನು, ಅಣ್ಣನ ತನ್ನ ಮುದ್ದಿನ ಪತ್ನಿಯನ್ನು ಶಾಶ್ವತವಾಗಿ ಕಳೆದುಕೊಂಡೆವು." ಈಶ್ವರಿಯ ಕಣ್ಣುಗಳಿಂದ ನೀರು ಚಿಮ್ಮಿತು, "ಕೆಂಪು ರಕ್ತದ ಓಕುಳಿಯಲ್ಲಿ ಮುಳುಗಿದ್ದ, ಗುರುತು ಸಿಗಲಾರದ ಮಾಂಸದ ಮುದ್ದೆಯೇ ಎಂದೆನಿಸುವ ಆ ಎರಡು ದೇಹಗಳು.... ಅಯ್ಯೋ ಅತ್ತಿಗೇ, ನಾನಂತೂ ಪ್ರಜ್ಞೆ ತಪ್ಪಿ ಬೀಳುವ ಸ್ಥಿತಿಯಲ್ಲಿದ್ದೆ. ಅಣ್ಣ ಪೂರ್ತಿಯಾಗಿ ಪ್ರಜ್ಞೆ ತಪ್ಪಿ ಬಿದ್ದಿದ್ದ. ಅವನಿಗೆ ಎಚ್ಚರವಾಗುವಾಗ ಅದೆಷ್ಟೋ ಹೊತ್ತಾಗಿತ್ತು.

"ಅವನ ಮನಸ್ಸು ಇಷ್ಟು ದೊಡ್ಡ ಆಘಾತವನ್ನು ಸಹಿಸಲಿಲ್ಲ. ಮೂರು ತಿಂಗಳೆಲ್ಲಾ ಪೂರ್ಣ ಹುಚ್ಚನಂತೆ ಇದ್ದ ಅವನು. ಮುಸ್ಸಂಜೆ ಹೊತ್ತಿನಲ್ಲಿ, ಬೆಳಗಿನ ಜಾವದಲ್ಲಿ ನೀಲ ಬಾನಿನಲ್ಲಿ ಕೆಂಪು ಬಣ್ಣ ಕಂಡರೂ ಉರಿದುಬೀಳುತ್ತಿದ್ದ. ಇದ್ದಕ್ಕಿದ್ದಂತೆ ಅಂದಿನ ಅಪಘಾತದಲ್ಲಿ ಆ ಕೆಂಪು ರಕ್ತ ಅವನ ಮನದ ಮೇಲೆ ಯಾವ ಪರಿಣಾಮ ಬೀರಿತೋ ನಾನರಿಯೆ. ಆದರೆ ಇಲ್ಲಿ ನೋಡು ನಾನಿದ್ದೇನಲ್ಲ..." ಅವಳ ನೋವಿನ ಮುಖದಲ್ಲಿಯೂ ನಗೆ ಚಿಮ್ಮಿತು, "ಕಲ್ಲುಗುಂಡಿನ್ಹಾಗೆ ಇದ್ದೇನೆ. ಪ್ರೀತಿಸುತ್ತಿದ್ದ, ನನ್ನೊಡನೆ ಮೂರು ವರ್ಷ ಬಾಳ್ವೆ ನಡೆಸಿದ ನನ್ನ ಆತ್ಮೀಯ ಪತಿ ನನ್ನೆದುರು ಮೃತ್ಯುವನ್ನಪ್ಪಿದರೂ ನನಗೆ ಯಾವ ರೀತಿಯ ಹುಚ್ಚೂ ಹಿಡಿಯಲಿಲ್ಲ, ಎಂತಹ ಆಘಾತವೂ ಆಗಲಿಲ್ಲ."

"ನಿನ್ನ ಅದೃಷ್ಟ. ಒಬ್ಬರಂತೆ ಒಬ್ಬರು ಇರಲಾರರು. ನೀನು ಎಲ್ಲಾ ಭಾವನೆಗಳನ್ನೂ ಅದುಮಿ ಇಟ್ಟುಕೊಳ್ಳುತ್ತಿ."

"ಛೇ, ಅದುಮಿ ಹಿಡಿಯಲ್ಪಟ್ಟ ಕೋಪ, ತಾಪ, ದ್ವೇಷ ಎಂದಿಗೂ ಒಳ್ಳೆಯದಲ್ಲ

ಎನ್ನುವುದೂ ತಿಳಿಯದೇ ನಿನಗೆ? ದೇವರು ಸಹನೆ, ದೃಢ ಮನಸ್ಸು ಕೊಟ್ಟಿದ್ದಾನೆ ನನಗೆ. ಅವನ ದೃಷ್ಟಿಯಲ್ಲಿ ನನ್ನ ಕಷ್ಟ ತೃಣಕ್ಕೆ ಸಮಾನ. ಹಿಂದಣ ಜನ್ಮದ ಪಾಪ ತೊಳೆಯಲು ಹುಟ್ಟಿ ಬಂದವಳು ನಾನು. ಅಣ್ಣನಂತೆ ದುಃಖ, ವ್ಯಥೆ ನನಗಿಲ್ಲವೇ? ಅಣ್ಣ ಬೇರೆ ಮದುವೆಯಾದ. ನನಗೇನಿದೆ...? ಎತ್ತಿನ ದುಡಿತ ಒಂಟಿ ಬಾಳು. ಆದೂರ ನಮ್ಮ ಕಷ್ಟಗಳಿಗೆ ನಾವೆಂದಿಗೂ ಇತರರನ್ನು ದೂರಬಾರದು. ಸಮಯ ಸಿಕ್ಕಿದಾಗ ವೇದಾಂತದ ಪುಸ್ತಕಗಳು ಮನಸ್ಸಿಗೆ ನೆಮ್ಮದಿ ಕೊಡುತ್ತವೆ."

ಆಶಾಳ ಯೋಚನೆ ತಿರುಗಿತು ಬೇರೆ ದಾರಿಗೆ. ಅಂದು ರಾತ್ರಿ ದೀಪದ ಬೆಳಕಿನಲ್ಲಿ ಈಶ್ವರಿಯೊಡನೆ ಮಾತನಾಡುವ ಉತ್ಸಾಹದಲ್ಲಿ ಪ್ರಶ್ನಿಸಿದಳು ಆಶಾ, "ಸುಖ ಎನ್ನುವುದು ಎಲ್ಲಿ ಸಿಗುತ್ತೆ ಈಶ್ವರಿ?"

"ಅದೇನು ಮಾರಾಟಕ್ಕೆ ಇರಿಸಿದ ವಸ್ತು ಅಂತ ತಿಳಿದಿದ್ದೀಯಾ" ನಕ್ಕು ಅಂದಳು ಈಶ್ವರಿ, "ಅದು ನಮ್ಮ ಮನದೊಳಗೇ ಇದೆ! ಸಕಲ ಸಂಪತ್ತು ಸಿಕ್ಕಿದಾಕ್ಷಣ ಸುಖವೂ ಸಿಗುತ್ತೆ ಎನ್ನುವುದು ಪೂರ್ಣ ಸುಳ್ಳು. ಮನದಲ್ಲಿ ಸುಖವಿಲ್ಲದವನಿಗೆ ಎಷ್ಟು ಧನ-ಕನಕ ಕೊಟ್ಟರೂ ಅದು ತೃಣಕ್ಕೆ ಸಮಾನ. ಅತಿಯಾದ ಚಿಂತೆ, ಅತೃಪ್ತಿ, ಅಸೂಯೆ ಇವು ಇರುವವರ ಹತ್ತಿರ ಸುಖದ ನೆರಳೂ ಸೋಂಕದು..."

"ಮನೆಯಲ್ಲಿ ಯಾರ ಕನಿಕರ, ಸಹಾನುಭೂತಿ, ಆತ್ಮೀಯತೆ ಇರದಿದ್ದರೂ ಮನಸ್ಸಿಗೆ ಸುಖ ಸಿಕ್ಕೀತೇ?"

"ಯಾಕೆ ಸಿಗಲಾರದು? ಇನ್ನೊಬ್ಬರ ಆತ್ಮೀಯತೆ, ಕರುಣೆ, ಸಹಾನುಭೂತಿ ಬೇಕು ನಿಜ. ಆದರೆ ಸಿಗಲಿಲ್ಲವೆಂದಾಕ್ಷಣ ಸುಮ್ಮನೆ ಕೊರಗುವುದರಿಂದ ಏನೂ ಪ್ರಯೋಜನ ಸಿಗದು..."

"ಚಿಂತೆಗೆ ಮೂಲಕಾರಣವೇನು?"

"ಅಷ್ಟೂ ತಿಳಿಯದೇ ಮಂಕೇ" ಕೈಯ್ಯಿಂದ ಹಣೆಯನ್ನು ತಟ್ಟಿಕೊಳ್ಳುತ್ತ ಅಟ್ಟಹಾಸದ ನಗೆ ನಕ್ಕಳು ಈಶ್ವರಿ, "ಮನುಷ್ಯ ಜೀವನದಲ್ಲಿ ಸುಖವನ್ನು ಹಲವು ವಿಧದಲ್ಲಿ ಪಡೆಯಲು–ನೋಡಲು ಕಲಿತುಕೊಳ್ಳಬೇಕು ಅತ್ತಿಗೇ. ಯಾರು ಏನು ಹೇಳಿದರೂ ಮನಕ್ಕೆ ಹಚ್ಚಿಕೊಳ್ಳದಿರುವುದು, ಈ ಕಿವಿಯಿಂದ ಕೇಳಿ, ಆ ಕಿವಿಯಿಂದ ಬಿಡುವುದು, ಯಾರೇ ತೆಗಳಲಿ, ಹೊಗಳಲಿ ಸ್ಥಿತಪ್ರಜ್ಞನಂತಿರುವುದು. ಇವೆಲ್ಲ ಸುಖದ ಸೋಪಾನವನ್ನೇರಲು ಸಹಾಯಕ. ನಮಗಿರುವುದರಲ್ಲಿ ತೃಪ್ತಿಪಟ್ಟುಕೊಳ್ಳದೆ ಮನದಲ್ಲಿ ಸುಮ್ಮನೆ ಕೊರಗುವುದೇ ಚಿಂತೆಗೆ ದಾರಿ."

"ಒಂದ್ಮಾತು ಈಶ್ವರಿ....." ದೀಪದ ಬೆಳಕಿನಿಂದ ಸರಿದು ಈಶ್ವರಿಯ ಹತ್ತಿರದಲ್ಲಿ ಕುಳಿತು ಕೇಳಿದಳು ಆಶಾ, "ತನ್ನ ಪತಿಯನ್ನು ಬಿಟ್ಟು ಇನ್ನೊಬ್ಬನ ಜೊತೆ ಓಡಿಹೋದ ಹೆಂಗಸು ಸುಖಿಯಾಗಿರ್ತ್ತಾಳಾ?"

"ಯಾರಿಗೆ ಗೊತ್ತು. ಅವರ ಮನಸ್ಸಿನ ದುಃಖವನ್ನು ಓದಲಾರೆವು ನಾವು. ಇನ್ನೊಬ್ಬನ ಜೊತೆಗೆ ಓಡಿಹೋಗುವ ಮೊದಲು ಜನನಿಂದನೆಗೆ ಗುರಿಯಾದರೂ ಎಂತಹ ಕಷ್ಟಗಳೇ ಬಂದರೂ ಧೈರ್ಯದಿಂದ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸ ಅವಳಿಗಿರಬೇಕು...."

"ತನ್ನ ಮಕ್ಕಳನ್ನು ಬಿಟ್ಟು ಇನ್ನೊಬ್ಬನ ಸಂಗಡ ಓಡಿಹೋದವಳು ಹೇಗಿರ್ತಾಳೆ?"

ಈಶ್ವರಿ ಅರ್ಥವಾಗದೆ ನೋಡಿದಳು ಅತ್ತಿಗೆಯನ್ನು, "ಪ್ರಶ್ನೆಗಳ ಮೇಲೆ ಪ್ರಶ್ನೆಗಳು! ಹಾಂ, ನೀನೀಗ ನಿನ್ನ ಅಮ್ಮನ ವಿಷಯವನ್ನು ಕೇಳ್ತಾ ಇದ್ದೀಯಾ?"

"ಇಲ್ಲ.... ಇಲ್ಲ.... ನನ್ನ.... ಅಮ್ಮ... ಅವಳು ಸುಖಿಯಾಗಿದ್ದಾಳೆ. ಅವಳನ್ನು ಜನರು ದೂರಿಕೊಳ್ತಾ ಇದ್ದರೂ ಈಶ್ವರೀ, ಅವಳು ಕೆಟ್ಟವಳಲ್ಲ ಅಂತ ಅನ್ನಿಸ್ತಾ ಇದೆ ನನಗೆ. ಅವಳೇನು ತಪ್ಪು ಮಾಡಿದ್ದಾಳೆ? ನನ್ನ ಅಪ್ಪ ತೀರಿ ಹೋದ್ಮೇಲೆ ಇನ್ನೊಂದು ಮದ್ವೆಯಾದಳು. ನಿಜವಾಗಿಯೂ ತನಗೆ ಯಾರು ಇಷ್ಟವೋ ಅವರೊಡನೆ ಎರಡನೆಯ ಮದ್ವೆ ಮಾಡಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ಸ್ತ್ರೀಯರಿಗಿದ್ದರೆ ಎಷ್ಟು ಒಳಿತು..."

"ಇಂತಹ ಸುಧಾರಣೆ ಬೇಕಿಲ್ಲ ಅತ್ತಿಗೇ...." ತಕ್ಷಣ ಅಂದಳು ಈಶ್ವರಿ, "ಪಾಶ್ಚಾತ್ಯರಂತೆ ಗಂಡನೆಂಬ ವ್ಯಕ್ತಿಯನ್ನು ಸೀರೆಗಳಂತೆ ಮೇಲಿಂದ ಮೇಲೆ ಬದಲಾಯಿಸ್ತಾ ಇದ್ದರೆ ಆ ವ್ಯಕ್ತಿಗೆ ಯಾವ ಬೆಲೆಯಿದೆ ಹೇಳು ನೋಡೋಣ? ಏನೇ ಆಗಲಿ, ಸಹಬಾಳ್ವೆ ಅತ್ಯಗತ್ಯ."

"ಗಂಡಸು ಎಷ್ಟೇ ಮದುವೆಗಳನ್ನು ಮಾಡಿಕೊಳ್ಳಬಹುದು. ಹೆಂಡತಿ ಸತ್ತರೆ ಇನ್ನೊಂದು ಮದುವೆ! ಹೆಂಡತಿಯೊಡನೆ ಸುಖವಿಲ್ಲದಿದ್ದರೆ ಇನ್ನೊಂದು ಮದುವೆ...? ಹೆಂಡತಿ ಬೇಡವೆಂದು ಮನಸ್ಸಿಗನ್ನಿಸಿದರೆ ತನಗಿಚ್ಛೆ ಬಂದ ಹುಡುಗಿಯರೊಡನೆ ಚೆಲ್ಲಾಟ! ಹೆಣ್ಣಿಗೆ ಹೇಗೆ ಒಂದೇ ಮದುವೆಯೋ ಹಾಗೇ ಗಂಡಿಗೂ ಒಂದೇ ಮದುವೆಯೆಂಬ ನಿಯಮವನ್ನ ಮಾಡಬಾರದೇಕೇ?"

"ಹ್ಹ ಹ್ಹ... ಹ್ಹ" ಈಶ್ವರಿ ವಿಚಿತ್ರವಾಗಿ ನೋಡಿದಳು ಆಶಾಳತ್ತ, "ಇಬ್ಬರಿಗೂ ಒಂದೇ ನಿಯಮಗಳನ್ನು ಹಾಕಲು ಬ್ರಹ್ಮನಿಂದಲೂ ಸಾಧ್ಯವಿಲ್ಲ. ಗಂಡಸು ನಿರ್ಭಯನಾಗಿ ನೂರು ಹುಡುಗಿಯರ ಜತೆ ಹೋಗಬಲ್ಲ. ಅವನಷ್ಟು ಸ್ವಾತಂತ್ರ್ಯವನ್ನು ಹೆಂಗಸಿಗೂ ಕೊಡೋಣ. ಆಗ ಏನಾಗುತ್ತೆ ಹೇಳು? ಹೆಂಗಸೂ ತನಗಿಚ್ಛೆ ಬಂದಂತೆ ಬೇಕಾದ ಗಂಡಸಿನೊಡನೆ ಹೋಗಲಿ.... ಪರಿಣಾಮ...? ಛೇ ಛೇ.... ಅವಳು ಬೀದಿನಾಯಿ! ಮಾನಗೆಟ್ಟ ಸೂಳೆ ಅವಳು...!!"

ಗಂಭೀರವಾಗಿದ್ದ ಆಶಾ ಮುಖ ಒಮ್ಮೆಲೆ ಬಿರುಸಾಯಿತು. ಆದರೂ ತಲೆ ತಗ್ಗಿಸಿದಳು. ಈಶ್ವರಿ ಅವಳ ಹೆಗಲ ಮೇಲೆ ಕೈಯ್ಯಿರಿಸುತ್ತ ಅನುಮಾನದಿಂದ ನೋಡಿದಳು....

"ಈಶ್ವರಿ, ನಿನ್ನ ಅಣ್ಣ ಎರಡನೆಯ ಮದುವೆಯಾದಂತೆ ನಿನಗೂ ಎರಡನೆಯ ಮದುವೆಯಾಗಿದ್ದರೆ ನೀನೆಷ್ಟು ಸಂತೋಷವಾಗಿರ್ತಾ ಇದ್ದೆ. ಸಮಾಜ... ಹುಚ್ಚು ಸಮಾಜ ನಿನ್ನನ್ನು ಕತ್ತಲೆಗೆ ತಳ್ಳಿದೆ..." ಉದ್ವೇಗದಲ್ಲಿ ಮುಖ ಎತ್ತುತ್ತ ಅಂದಳು ಆಶಾ.

ಈಶ್ವರಿಯ ಮುಖದಲ್ಲಿ ಹೊಸ ಭಾವ ಮಿಂಚಿ ಮಾಯವಾಯಿತು. ನಗುವ ಕಣ್ಣಿಗಿಂದ ನೋಡಿದಳು ಅತ್ತಿಗೆಯತ್ತ. "ಉಪ್ಪು ಹುಳಿ ತಿನ್ನುವ ಈ ಶರೀರಕ್ಕೆ ಎಲ್ಲ ಆಶೆಗಳೂ ಬೇಕೆನ್ನುವುದು ಸಹಜ. ಗಂಡ ಸತ್ತವಳು ಎಂಬ ತಿರಸ್ಕಾರ ಬೇರೆ. ನನ್ನ ಮನೆಯಲ್ಲಿಯೇ ನಾನು ಊಳಿಗದವಳು ಎಂದೆನಿಸುತ್ತಿತ್ತು ನನಗೆ. ಆದರೂ ನಾನೀಗ ಸುಖಿ..." ಅವಳು ಶಾಂತವಾಗಿ ಅಂದಳು, "ನನ್ನ ಶೂನ್ಯ ಬದುಕಿಗಾಗಿ ಅಳುತ್ತ

ಸುಖಿಯಾಗಿರುವವರನ್ನೆಲ್ಲ ದ್ವೇಷಿಸಿದೆ. ನನ್ನ ದುಃಖ ಇದರಿಂದ ಇಮ್ಮಡಿಯಾಗಿ ನನ್ನನ್ನೇ ನುಂಗತೊಡಗಿತು ದೈತ್ಯಾಕಾರ ತಾಳಿಕೊಂಡು. ಆಮೇಲೆ ನನ್ನ ಮನಸ್ಸನ್ನು ಪೂರ್ತಿಯಾಗಿ ವೇದಾಂತದತ್ತ ತಿರುಗಿಸಿದೆ. ಈಗ ಭಗವದ್ಗೀತೆ ನನ್ನ ದಾರೀದೀಪ. ವಿವೇಕಾನಂದರ ಅಮೃತವಾಣಿ, ಪರಮಹಂಸರ ಜೀವನ ಚರಿತ್ರೆ ನನ್ನ ಬದುಕಿಗೊಂದು ಹೊಸ ಪಾಠ ಕಲಿಸಿತು... ಕಷ್ಟಪಡುವುದಕ್ಕೆಂದೇ ಬಂದೆವು ಈ ಲೋಕಕ್ಕೆ. ಹೆಂಡತಿ, ಮಕ್ಕಳು, ಈ ಸಂಸಾರ ಎಲ್ಲವೂ ನಶ್ವರ, ದೇವರೊಬ್ಬನೇ ಸತ್ಯ. ಕಷ್ಟ, ಸುಖ, ದುಃಖ ಏನೇ ಬರಲಿ ನಿನಗೇ ಅರ್ಪಿತ ದೇವಾ!–ಎನ್ನುತ್ತೇನೆ ನಾನು. ಈಗ ನಾವಿಬ್ಬರೂ ಚರ್ಚೆ ಮಾಡಿದೆವಲ್ಲ ಸುಖ ಎಲ್ಲಿ ಸಿಗುತ್ತೆ ಎಂದು ಇದೋ, ಈಗ ನಾನ್ಹೇಳಿದ ದಾರಿಯಲ್ಲಿ ನಡೆದರೆ ಸುಖದ ಬಾಗಿಲು ತೆರೆಯುತ್ತೆ."

ತನ್ಮಯಳಾಗಿ ಕೇಳುತ್ತಿದ್ದ ಆಶಾ ಅಂದಳು, "ನಂಗೆಲ್ಲಾ ಈ ನಿನ್ನ ವೇದಾಂತ ತಲೆಯೊಳಕ್ಕೆ ಹೋಗದು!"

"ಮೊದಲು ಕಷ್ಟವೆನಿಸಿದರೂ ದಾಹವಾದಾಗ ನೀರು ಬಯಸುವಂತೆ ಈ ತತ್ವಜ್ಞಾನಗಳು, ಯೋಗಿಗಳ ಜೀವನ ಚರಿತ್ರೆಗಳು, ಭಗವದ್ಗೀತೆ ಎಲ್ಲವೂ ಇನ್ನೂ ಓದಬೇಕೆನಿಸುತ್ತೆ. ಅಣ್ಣನ್ಹತ್ರ ಒಂದೆರಡು ಪುಸ್ತಕಗಳಿವೆ ಓದಿಕೋ. ಇನ್ನೊಂದ್ಸಾರೆ ಬರ್ವಾಗ ಬೇರೆ ಪುಸ್ತಕಗಳನ್ನು ತರ್ತೇನೆ.... ಓದಿದ್ಮೇಲೆ ಹೇಳು ನೀನು.... ಅದಿರಲಿ ಅತ್ತಿಗೇ, ಈಗ ನಿಜ ಹೇಳು ಅಣ್ಣ ನಿನ್ನ ಜೊತೆ ಸರಿಯಾಗಿಲ್ಲವೇ?"

ಆಶಾ ಸುಮ್ಮನೆ ನಕ್ಕಾಗ ಈಶ್ವರಿ ಅವಳ ಎರಡೂ ಕೈಗಳನ್ನು ತನ್ನ ಕೈಯ್ಯಲ್ಲಿ ತೆಗೆದುಕೊಳ್ಳುತ್ತ ಆತ್ಮೀಯವಾಗಿ ಅಂದಳು, "ನೀನು ಬಹಳ ಗಂಭೀರ ಸ್ವಭಾವದವಳು. ಏನನ್ನೋ ಮನಸ್ಸಿನಲ್ಲಿ ಇಟ್ಕೊಂಡು ಕೊರಗ್ತಾ ಇದ್ದಿ ಅನ್ನೋದು ತಿಳಿಯಿತು ನನಗೆ. ಆದರೆ ಅಣ್ಣನ ಗುಣ ನಿನಗಿನ್ನೂ ತಿಳಿದಿಲ್ಲ ಅತ್ತಿಗೇ, ಅವನು ಧರ್ಮರಾಯನ ಹಾಗೆ. ಯಾರಿಗೂ ಕೇಡು ಬಗೆಯುವ ಮನಸ್ಸು ಅವನದಲ್ಲ. ನಿನ್ನ ಮನಸ್ಸು ನೋಯಬೇಕು ಎನ್ನುವುದೂ ಅವನಿಗಿಲ್ಲ. ಇನ್ನು ಅವನು ಈ ಮನೇಲಿ ಬಂದುಳಿಯುವುದು....? ಹಾಂ.... ಅದಕ್ಕಾಗಿ ಬೇಸರಿಸಬೇಡ. ಇನ್ನೊಂದ್ಸಾರೆ ನಾನೇ ಅಣ್ಣನಿಗೆ ಎಲ್ಲವನ್ನೂ ತಿಳಿಸಿ ಹೇಳಿ... ಖಂಡಿತವಾಗಿಯೂ ಇದೇ ಮನೆಯಲ್ಲಿ ಅವನು ಉಳಿದುಕೊಳ್ಳುವಂತೆ ಮಾಡ್ತೇನೆ. ನಂಬು ನನ್ನ ಮಾತನ್ನು...."

೧೪

ಈಶ್ವರಿ ಸುರತ್ಕಲ್‌ಗೆ ಹೊರಟುಹೋದ ನಂತರ ಆಶಾ ತನ್ನ ಸಂಯಮದ ಕಟ್ಟನ್ನು ಪೂರ್ತಿಯಾಗಿ ಕಳಚಿಕೊಂಡು ಲೋಹಿತಾಕ್ಷನ ಸಾನ್ನಿಧ್ಯದಲ್ಲಿ ಸುಖವನ್ನರಸಲು ಪ್ರಯತ್ನಿಸಿದಳು. "ಮನೆ ನರಕವಾಗ್ತಿದೆ ನನ್ನ ಪಾಲಿಗೆ. ಮಗು ಹುಟ್ಟುವ ಮೊದಲೇ ಇಲ್ಲಿಂದ ಎಲ್ಲಿಗಾದರೂ ಹೊರಟುಹೋಗೋಣ" ಎನ್ನತೊಡಗಿದಳು ಅವನಿಗೆ.

ರಂಗಮ್ಮನಿಗೋ ಬಸುರಿ ಸೊಸೆಯನ್ನು ಎಷ್ಟು ಉಪಚರಿಸಿದರೂ ಸಾಲದು. ಅವರ ಅತಿ ಉಪಚಾರದಲ್ಲಿ ಯಾವ ಆತ್ಮೀಯತೆಯನ್ನೂ ಕಾಣಲಿಲ್ಲ ಈ ಸೊಸೆ!

ಇದೇ ಸಮಯದಲ್ಲಿ ಜಗನ್ನಾಥನಿಂದಲೂ, ಮಂಗಳೂರಿನಿಂದ ಅವಳ ಸೋದರಮಾವನಿಂದಲೂ ಏಕಕಾಲಕ್ಕೆ ಎರಡು ಪತ್ರಗಳು ಒಂದೇ ಒಕ್ಕಣೆಯನ್ನು ಹೊತ್ತುಕೊಂಡು ಬಂದು ಅವಳ ಕೈಸೇರಿದವು.

"ನಿನ್ನ ಮಲತಂದೆ ಅಥವಾ ನಿನ್ನ ಅಮ್ಮನ ಎರಡನೆಯ ಗಂಡ ಒಂದು ವಾರದ ಹಿಂದೆ ತುಮಕೂರಿನಲ್ಲಿ ತೀರಿಹೋದರು ಎಂದು ರುಕ್ಮಾಳಿಂದ ಕಾಗದ ಬಂದಿದೆ. ಆಪರೇಶನ್ ಆಗಿ ಕೆಲವು ಸಮಯ ಚೆನ್ನಾಗಿಯೇ ಇದ್ದ. ಅವಳ ದುರದೃಷ್ಟ. ಇಲ್ಲಿಯೇ ಬಂದುಳಿ ಎಂದು ಕಾಗದ ಬರೆದಿದ್ದೇನೆ" ಎಂದು ಬರೆದಿದ್ದರು ಸೋದರಮಾವ.

ಜಗನ್ನಾಥನೂ ಇವೆಲ್ಲ ವಿಷಯಗಳನ್ನು ಬರೆಯುತ್ತ ಕೊನೆಗೆ, "ಏನು ಆಶಾ, ನಿನ್ನಿಂದ ಪತ್ರಗಳೇ ಇಲ್ಲ? ಕೂಸು ಹುಟ್ಟುವ ಮುಂಚೆ ಕುಲಾವಿ ತಯಾರಿಸುವುದರಲ್ಲಿದ್ದೀಯಾ? ಇಡೀ ದಿನವೆಲ್ಲ ಮಹಡಿ ಕೋಣೆಯಲ್ಲಿ ಚಿಂತೆ ಮಾಡ್ತಾ ಇರ್ತೀಯಾ? ಒಂದು ಕಾಗದ ಬರಿ. ಸಾಧ್ಯವಾದಾಗ ನಾನೇ ಬರುತ್ತೇನೆ ನಿಮ್ಮಲ್ಲಿಗೆ" ಎಂದು ಬರೆದಿದ್ದ.

ತನ್ನ ತಾಯಿ ಮತ್ತೆ ವಿಧವೆ! ಎರಡನೆಯ ಗಂಡನಲ್ಲಿ ಮಕ್ಕಳನ್ನು ಪಡೆಯದೆ ಇನ್ನು ಮುಂದೆ ಯಾವ ಆಶ್ರಯವೂ ಇಲ್ಲದೆ ಪರವೂರಿನಲ್ಲಿ ಹೇಗಿರುತ್ತಾಳೋ ಎಂಬ ಯೋಚನೆಯೊಂದಿಗೆ "ನಿನಗೆ ಹಾಗೇ ಆಗಬೇಕು! ನನ್ನನ್ನು ಮೂಲೆಗೆಸೆದು ಹೋದುದಕ್ಕೆ ಇದೋ ನಿನಗಾದ ಪ್ರಾಯಶ್ಚಿತ್ತ!" ಎಂದುಕೊಂಡಳು ಸಂತಸದಲ್ಲಿ.

ಆದರೆ ತನ್ನದೂ ಅದೇ ದಾರಿ? ಲೋಹಿತಾಕ್ಷನ ಸಂಗಡ ಹೊಸ ಬಾಳ್ವೆ ಮಾಡಲು ಹೊರಟವಳು ತಾನು. ಮುಂದೆ ಹುಟ್ಟಲಿರುವ ಮಗುವನ್ನು ಅನಾಥಾಶ್ರಮಕ್ಕೆ ಸೇರಿಸುವ ಯೋಚನೆ ತನ್ನದು.... ಅವಳ ಮೈಯೆಲ್ಲ ಲಘುವಾಗಿ ಕಂಪಿಸಿತು.

ಲೋಹಿತಾಕ್ಷ ಈ ವಿಷಯದಲ್ಲಿ ತನ್ನ ಯಾವ ಅಭಿಪ್ರಾಯವನ್ನೂ ತಿಳಿಸಿರಲಿಲ್ಲ ಸ್ಪಷ್ಟವಾಗಿ. ನಿಜ ಹೇಳಬೇಕೆಂದರೆ ಅವನಿಗೆ ಅಚ್ಚರಿ ತಂದಿತ್ತು ಆಶಾಳ ವರ್ತನೆ. ತಮ್ಮಿಬ್ಬರಲ್ಲಿ ಆದದ್ದು ಮೊದಲು ಗೆಳೆತನ. ಅನಂತರ ಆಶಾ ಅವನ ಬಲೆಗೆ ಬಿದ್ದುಬಿಟ್ಟಿದ್ದಳು ಅವಳಿಗರಿಯದ ರೀತಿಯಲ್ಲಿ. ಅದೆಷ್ಟೋ ಹಕ್ಕಿಗಳು ಬಿದ್ದಿದ್ದಾವೆ ಅವನ ಬಲೆಗೆ. ಆದರೇನಂತೆ, ಈವರೆಗೂ ಯಾವದೇ ಹಕ್ಕಿಯನ್ನು ಶಾಶ್ವತವಾಗಿ ಬಂಧಿಸಿಟ್ಟವನಲ್ಲ ಅವನು. ಈ ಹಕ್ಕಿ ಮಾತ್ರ ಅವನ ಬಂಧನಕ್ಕೊಳಗಾಗಿ ಅವನನ್ನೂ ಬಂಧಿಸಿಕೊಳ್ಳಲೆತ್ನಿಸುತ್ತಿತ್ತು. ಆಶಾ ಸ್ವಭಾವ ಚೆನ್ನಾಗಿ ತಿಳಿದಿತ್ತು ಅವನಿಗೂ. ಕೇವಲ ಅವಳ ದೈಹಿಕ ಆಕರ್ಷಣೆಗೆ ತಾನು ಒಳಗಾದವನಲ್ಲ ಎಂದೆನಿಸುತ್ತಿತ್ತು. ಅವಳಿಗಿಂತ ಸುಂದರಿಯರನೇಕರನ್ನು ಕಂಡಿಲ್ಲವೇ ಅವನು? ಹಾಗಿದ್ದರೆ ಇವಳಲ್ಲೇನು ವಿಶೇಷ? ಮಂಡೆಯ ಈ ಹುಡುಗಿ ಇವನನ್ನು ಎಷ್ಟು ಹಚ್ಚಿಕೊಂಡಿದ್ದಾಳೆಂದರೆ ಮಗುವಿನಂತಹ ಮನಸ್ಸಿನ ಅವಳ ಬಗ್ಗೆ ಅವನಿಗೇನೋ ಒಂದು ವಿಧದ ಮರುಕ, ಅನುಕಂಪ! ತಮ್ಮಿಬ್ಬರ ಮಿಲನ ಜನ್ಮ ಜನ್ಮಾಂತರಗಳಿಂದ ಒಂದುಗೂಡಿಕೊಂಡು ಬಂದಿದೆ ಎಂದೆನಿಸುತ್ತಿದೆ ಅವನಿಗೆ.

ಹಾಗಿದ್ದರೂ ಯಾವಾಗ ಆಶಾ ಅವನನ್ನೇ ಪೂರ್ಣ ನಂಬಿ ಅವನೊಡನೆಯೇ ಮದುವೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡಳೋ ಆಗ ಹೌಹಾರಿಹೋದ ಲೋಹಿತಾಕ್ಷ. ಇದನ್ನವನು ನಿರೀಕ್ಷಿಸಿರಲಿಲ್ಲ. ಎಲ್ಲರಂತೆ ಇವಳೂ ಚೆಲ್ಲಾಟದವಳು. ಮೈಸುಖ ಬೇಕಾಗಿದೆ ಇವಳಿಗೂ.... ಎಂದುಕೊಂಡಿದ್ದ. ಆದರೆ ಅವಳೋ.... ಅವನೊಡನೆ ಹೇಳಿಕೊಳ್ಳದ ವಿಷಯಗಳಿಲ್ಲ.

ಅಂದಿನ ಕೆಂಪು ಸೀರೆಯ ಗಲಾಟೆಯಾದ ನಂತರ ಆಶಾ ಅನೇಕ ಬಾರಿ ಬಂದಳು ಅವನಲ್ಲಿಗೆ. 'ನೀನೇ ನನ್ನವನು' ಎಂದು ಅವನು ಕಂಡಾಗಲೆಲ್ಲ ಒತ್ತಿ ಒತ್ತಿ ಹೇಳತೊಡಗಿದಳು. ಅವಳು ಬಂದಾಗಲೆಲ್ಲ ಅದೇ ಮೊದಲಿನ ಪ್ರೀತಿಯಲ್ಲಿ ಅವನು ಬರಮಾಡಿಕೊಂಡರೂ ಯಾಕೋ ಅವಳ ಆಗಮನ ಅಹಿತವೆನಿಸತೊಡಗಿತು ಅವನಿಗೆ. ಅವಳೇನೋ ನಂಬಿದ್ದಾಳೆ ತನ್ನನ್ನು. ತಾನು ಅವಳಿಗೆ ಪತಿಯಾಗಲು ಯೋಗ್ಯನಲ್ಲದಿದ್ದರೂ ತನ್ನಲ್ಲಿ ಅವಳಿಗೆ ವಿಶ್ವಾಸ! ಅವಳೊಡನೆ ಕೂಡಿ ಮುಂದುವರಿಯುವ ತನ್ನ ಗೃಹಸ್ಥ ಜೀವನ ಸುಖಮಯವಾದೀತು. ಆದರೆ...?

ಈ ಯೋಚನೆಯೊಂದಿಗೆ ಮೈರಕ್ತವೆಲ್ಲ ಹೆಪ್ಪುಗಟ್ಟಿದಂತೆನಿಸಿತು ಅವನಿಗೆ. ತಾನು ಮಾಡುತ್ತಿರುವುದು ಅನ್ಯಾಯ.... ಮೋಸ. ಹೆಜ್ಜೇನುಗಳಿಂದ ತನ್ನನ್ನು ರಕ್ಷಿಸಿ ಕಾಪಾಡಿ, ಉಪಚರಿಸಿ ಈ ಗಳಿಗೆಯವರೆಗೂ ತನ್ನಲ್ಲಿ ವಿಶ್ವಾಸವನ್ನಿರಿಸಿದ ಅವರ ಮನೆಗೆ ಅವಮಾನದ ಉರಿಯನ್ನು ಹೊತ್ತಿಸಿ ಆ ಮನೆಯ ಸೊಸೆಯೊಂದಿಗೆ ತಾನು ಇಲ್ಲಿಂದ ಓಡಿಹೋಗುವುದೇ.... ಹೇಡಿ ಕೆಲಸ...!

"ನಿನ್ನಂತವನನ್ನು ಕಂಡೇ ಇಲ್ಲ ಲೋಹಿತಾಕ್ಷ. ಬೇಗ ಒಂದು ಮದುವೆ ಆಗಿಬಿಡು. ನನ್ನ ತೋಟದ ಮ್ಯಾನೇಜರ್‌ನನ್ನಾಗಿ ಮಾಡಿಬಿಡ್ತೇನೆ ನಿನ್ನನ್ನು..... ನನಗೂ ಅನುಕೂಲ" ಎಂದು ತಮ್ಮಯ್ಯನವರು ಅದೊಂದು ದಿನ ಹೇಳಿದಾಗ ದಿಗಿಲುಗೊಂಡ ಲೋಹಿತಾಕ್ಷ ಅವರತ್ತ ನೋಡಿದ.

ಕಪಟವರಿಯದ ಸಾಧು ಪ್ರಾಣಿ ತಮ್ಮಯ್ಯ. ತಾಯಿಯಂತೆ ಉಪಚರಿಸುವ ರಂಗಮ್ಮ. ಗೆಳೆಯನಂತೆ ನಂಬಿಕೊಂಡಿದ್ದ ಶಿವಮೂರ್ತಿ.... ಓ.... ಇವರೆಲ್ಲರಿಗೂ ಕಿಚ್ಚು ಹೊತ್ತಿಸುವ ಪಾಪ ತನ್ನದಾಗಬೇಕೇ? ಇವರು ನೀಡುವ ಅಭಿಮಾನಕ್ಕೆ ತಾನು ನೀಡಿದ್ದೇನು? ಇದೆಂದಿಗೂ ಸಲ್ಲದು. ತನ್ನದು ಸ್ವಚ್ಛಂದ ಜೀವನ. ಅಲ್ಲಿ ಯಾವ ಬಲೆಯೂ ಇರಬಾರದು....!

ಹೀಗಾಗಿ ಆಶಾ ಅನೇಕ ಬಾರಿ ಅವನಲ್ಲಿಗೆ ಬಂದರೂ ಅವನ ಮೌನ ಪ್ರಶ್ನೆಯಾಯಿತು ಅವಳ ಪಾಲಿಗೆ.

* * * *

ಓಡುತ್ತ ತೇಕುತ್ತ ಬಂದಳು ಕೆಲಸದ ನೀಲಿ. ತಲೆಗೂದಲು ಕೆದರಿತ್ತು. ಕೆಂಪಾಗಿದ್ದವು ಕಣ್ಣುಗಳು. ಮನೆಯಲ್ಲಿ ಏನೋ ಗಲಾಟೆ ಆಗಿರಬೇಕು. ದೂರ ಹೊತ್ತು ತಂದಿದ್ದಾಳೆ ಇಲ್ಲಿಗೆ.

"ಏಂತ ಹೇಳ್ಲಿ ಅಮ್ಮಾ ಈ ದರಿದ್ರ ಗಂಡನಿಂದ ನಾ ಪಡ್ಚ ಆದೆ. ಇನ್ನು ಜೀವ

ಕುಯ್ದರೂ ಆ ನರಕದ ಮನೀಗೆ ಹೋತಿಲ್ಲೆ ನಾನು. ಕಾಂಬೋ, ನನ್ನ ಹಣೆಬರಹ ಹೀಗಾಯ್ತಲ್ಲ...." ಎನ್ನುತ್ತ ಆಶಾ ಕಾಲ ಕೆಳಗೆ ಕುಸಿದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ರಂಗಮ್ಮ, ಚಿನ್ನಕ್ಕ ಹೊರಗೆ ಬಂದರು. ಮನೆ ಹಿಂಬದಿಯಲ್ಲಿದ್ದ ಜಬ್ಬಣ್ಣನೂ ಓಡಿಕೊಂಡು ಬಂದ ಅಲ್ಲಿಗೆ. ಗಂಡನನ್ನು ಕಂಡಾಕ್ಷಣ ಕುಳಿತವಳು ಎದ್ದು ನಿಂತಳು.... ಸೀರೆಯ ಸೆರಗನ್ನು ಕಟ್ಟಿಕೊಂಡಳು.

"ಹೆಸರಿಗೊಂದು ಗಂಡ ನೀನು. ನಿನ್ನ ಕೂಳಿನಲ್ಲಿ ಇಷ್ಟು ದಿನವೂ ಸತ್ತು ಬಿದ್ದೆ ನೊಣದ್ಹಾಂಗೆ..... ಇನ್ನು ನಿನ್ನ ದಾರಿ ನಿಂಗೆ, ನನ್ನ ದಾರಿ ನಂಗೆ."

"ಹಲ್ಕಾ ಮಗಳೇ, ಎಂತ ಬೊಗಳ್ತೆ ನೀನು?" ಅವನ ಸ್ವರ ಏರಿತು...

"ನಾನೇನು ನಿನ್ನ ಸಂಗಡ ಇಪ್ಪವಳಲ್ಲ. ನೀ ಎಲ್ಲ ಬೇಕಾರೂ ಹೋಯ್ಕೋ. ನನ್ನ ಜತಿ ಬೇಕಿದ್ರೆ ಬೇರೆ ಮನಿ ಮಾಡು" ಆರ್ಭಟಿಸಿದಳು ನೀಲಿ, "ನಿನ್ನ ತಮ್ಮ ಇವತ್ತು ಬಾಸುಂಡೆ ಬಪ್ಪಂಗೆ ಹೊಡ್ದ ನನ್ನನ್ನು. ಇನ್ನು ಹೋತಿಲ್ಲೆ ಆ ಮನೀಗೆ."

ಇವರ ಗಲಾಟೆ ಕೇಳಿ ಓಡಿ ಬಂದರು ತಮ್ಮಯ್ಯನವರೂ. ನೀಲಿ ಅವರ ಕಾಲು ಹಿಡಿಯುತ್ತ ತನ್ನನ್ನು ಹೇಗಾದರೂ ಆ ನರಕದ ಮನೆಯಿಂದ ಉದ್ಧರಿಸಬೇಕೆಂದು ಬೇಡಿಕೊಂಡಳು. ಮೈದುನನದು ಅತಿಯಾಯಿತೆಂದೂ ತಾನು ಅಲ್ಲಿ ಹೆಣದಂತೆ ಆಗಿಹೋಗಿದ್ದೇನೆಂದೂ ಗೊಳೋ ಎಂದು ಅತ್ತುಬಿಟ್ಟಳು.

"ಯಾರ ಬಾಯಲ್ಲಿ ಹೇಳ್ಲಿ ಅಯ್ಯ.... ಆ ರಾಕ್ಷಸನಿಂದ ಪೆಟ್ಟು ತಿಂದು ತಿಂದು ಮೈ ಮೂಳೆಯೆಲ್ಲ ಪುಡಿ ಪುಡಿ. ನಿಮ್ಮನೆ ಗೊಬ್ಬರ ಗುಂಡೀಲಿ ಹುಗಿದು ಹಾಕಿ ಅಯ್ಯ ನನ್ನನ್ನು... ರಕ್ಷಿಸಿ.... ರಕ್ಷಿಸಿ...."

"ಏಯ್ ಬಳೆ ತೊಟ್ಟ ಗಂಡಸೇ!" ತಮ್ಮಯ್ಯ ಜಬ್ಬಣ್ಣನತ್ತ ಹೊರಳಿದರು, "ನೀನೇನು ಗಂಡಸೋ ಅಥವಾ ಷಂಡನೋ.... ಆ ನಿನ್ನ ತಮ್ಮ ನಿನ್ನ ಹೆಂಡ್ತಿಗೆ ಹೊಡೀವಾಗಲೂ ಬಾಯ್ಮುಚ್ಚಿ ಕೂತಿದ್ದೀಯಲ್ಲ."

"ಮಸ್ತಿ ಮಾಡ್ತಲು ಮಸ್ತಿ. ಹಾಕ್ಕಂಡು ಬಾರಸ್ತೆ ಎರಡು."

"ಯಾವಾಗಲೂ ಅವಳದೊಂದು ಗೋಳು. ಕೇಳಿ ಕೇಳಿ ಸಾಕಾಯ್ತು. ಇನ್ನೊಬ್ಬ ಗಂಡಸಿಗೆ ಏನು ಅಧಿಕಾರವಿದೆ ಇವಳನ್ನು ಮುಟ್ಟಲು? ನಡಿ, ಈಗಲೇ ಹೋಗಿ ನಿನ್ನ ಮಕ್ಕಳನ್ನೆಲ್ಲ ಕರ್ಕೊಂಡು ಬಾ ಇಲ್ಲಿಗೆ"

"ದರಿದ್ರ ಹೆಣ್ಣೇ...." ಹೆಂಡತಿಯತ್ತ ಸರ್ರನೆ ಬಾಗಿ ಅವಳ ತಲೆಗೂದಲನ್ನು ಹಿಡಿದೆಳೆದು ಬೆನ್ನಿಗೆ ಏಟು ಹಾಕುತ್ತ "ಬಾಯ್ಮುಚ್ಚಿಕೊಂಡು ಮನೀಗೆ ಹೋಗು ಕಾಂಬೋ... ಬತ್ಲು ದೂರು ತಗಂಡು, ಹೋಗು ಮನೀಗೆ" ಎಂದು ಅಬ್ಬರಿಸಿದ.

"ಏಯ್...." ಅವನ ರಟ್ಟೆ ಹಿಡಿದೆಳೆದಳು ತಮ್ಮಯ್ಯ. "ನನ್ನ ಮುಂದೆ ನಿನ್ನ ಜಬರದಸ್ತು! ನಡಿ, ಈಗಿಂದೀಗಲೇ ಹೋಗಿ ನಿನ್ನ ಸಂಸಾರ ತಗೊಂಡು ಬಾ ಇಲ್ಲಿಗೆ. ನಮ್ಮ ಸ್ಥಳದಲ್ಲಿಯೇ ಒಂದು ಸಣ್ಣ ಮನೆ ಮಾಡಿಸಿಕೊಡ್ತೇನೆ ನಿಮಗೆ. ಅಲ್ಲಿವರೆಗೆ ಇವತ್ತು ನಾಳೆ ದನದ ಕೊಟ್ಟಿಗೆಯ ಬದಿಯಲ್ಲಿ ಇರಿ."

ಜಬ್ಬಣ್ಣನ ಕ್ಷೀಣ ಕೈಕಾಲುಗಳು ನಡುಗಿದವು. "ಅಯ್ಯ. ಈ ಮನೆ ಋಣ ತಿಂದ್ಕಂಡು.... ಈ ಆಕಾಶ.... ನೆಲ... ಸೂರ್ಯ..."

"ಬಾಯ್ಮುಚ್ಕೋ...!" ತಮ್ಮಯ್ಯ ಗುಡುಗಿದರು, "ನಿನ್ನ ವಿವರಣೆ ಬೇಕಿಲ್ಲ. ಈಗಿಂದೀಗಲೇ ಹೋಗಿ ಎಲ್ಲರನ್ನೂ ಕರ್ಕೊಂಡು ಬಾ. ಚೆನ್ನಕ್ಕ, ರಾತ್ರಿ ಈ ಸಂಸಾರಕ್ಕೆ ಸಾಲುವಷ್ಟು ಅನ್ನ ಮಾಡಿಬಿಡು. ಅವಳ ಮೇಲೆ ನಿನ್ನ ದರ್ಬಾರು... ಹೇಯ್... ಹೋಗೋ ಬೇಗ... ಹೂಂ..."

ಅವರ ಮಾತನ್ನು ಮೀರಲಾರದೆ ನಿರುಪಾಯನಾಗಿ ಮುಂದಡಿಯಿಟ್ಟ ಜಬ್ಬಣ್ಣ. ತಮ್ಮಯ್ಯನವರ ಮಾತನ್ನು ಮೀರಿದರೆ ಈ ಮುದಿ ಪ್ರಾಯದಲ್ಲಿ ಕೆಲಸಕ್ಕೂ, ಅನ್ನದ ತುತ್ತಿಗೂ ಕಲ್ಲು ಎನ್ನುವದೂ ತಿಳಿಯದೇ? ಆದದ್ದು ಆಗಲಿ ಎಂದು ಹೊರಟ. ಮುಂದೆ ಹೋದವನು ಎರಡು ಹೆಜ್ಜೆ ಹಿಂದೆ ಸರಿದು, "ಅಮ್ಮಾ.... ಸ್ವಲ್ಪ ಅತ್ಯಾಗೆ ಬತ್ತರಾ?" ಎಂದು ಕೇಳಿದ ತಗ್ಗಿದ ಧ್ವನಿಯಲ್ಲಿ.

ಆಶಾ ಅಂಗಳ ದಾಟಿ ದೊಡ್ಡ ಗೇಟಿನತ್ತ ಬರುತ್ತಿದ್ದಂತೆ ಗೇಟಿನ ಪಕ್ಕದಲ್ಲಿ.... ನಿಂತು ಜಬ್ಬಣ್ಣ "ಇಕೊಳ್ಳಿ ಅಮ್ಮಾ, ನಿಮಗೊಂದು ಕಾಗದ. ಹಾಳು ಮರೆವು, ನೆನಪೇ ಹೋಗಿತ್ತು ನಂಗೆ" ಎಂದಂದು ಮುಂಡಾಸಿನೊಳಗಿಂದ ಒಂದು ಸಣ್ಣ ಕಾಗದವನ್ನು ಅವಳ ಕೈಯ್ಯಲ್ಲಿರಿಸಿ, "ಅವರೆದುರು ಹ್ಯಾಗೆ ಕೊಡಲಿ? ಈಗ ನೆನಪಾಯ್ತು. ಹರೀನ್ ಗುಡ್ಡದ ಅಯ್ಯನವರು ಕೊಟ್ಟಿದ್ದರು ನಿಮಗೆ" ಎಂದ.

ಓ... ಲೋಹಿತಾಕ್ಷನಿಂದ ತನಗೆ ಕಾಗದ! ಏನು ವಿಶೇಷ ಬರೆದಿದ್ದಾನೆ? ಮೊನ್ನೆ ಹೋದಾಗ ಅವನೇನು ಹೇಳಿರಲಿಲ್ಲ. ಇವತ್ತು ಕಾಗದ ಕಳಿಸುವಂತಹ ವಿಷಯವಾದರೂ ಏನಿದೆಯೋ? ಆತುರಗೊಂಡು ಕಾಗದವನ್ನಡಗಿಸಿಕೊಂಡು ಓಡಿದಳು ಮಹಡಿಗೆ.

"ಪ್ರಿಯ ಆಶಾ, ವಂಡ್ಸೆಯಿಂದ ನಾನು ಬಹಳ ದೂರ ಹೊರಟಿದ್ದೇನೆ. ಒಂದು ಸಲ ಬಂದು ಹೋಗು" ಎಂದು ಬರೆದಿತ್ತು ಕಾಗದದಲ್ಲಿ. ಆಶಾಗೆ ದಿಗಿಲು, ಸಂತಸ ಏಕಕಾಲಕ್ಕಾಯಿತು. ತಡಮಾಡದೆ ಮತ್ತೆ ಅರ್ಧ ಗಂಟೆಯೊಳಗಾಗಿ ಹೊರಟುಬಿಟ್ಟಳು ಲೋಹಿತಾಕ್ಷನ ಮನೆಗೆ.

* * * *

ಮನೆಯಲ್ಲಿರುವ ಸಾಮಾನುಗಳೇ ಬಹಳ ಸ್ವಲ್ಪ. ಅವನ್ನೆಲ್ಲ ನೀಟಾಗಿ ಒಪ್ಪವಾಗಿ ಜೋಡಿಸಿಡಲಾಗಿತ್ತು. ಆಶಾ ಒಳಗೆ ಬರುತ್ತಿದ್ದಂತೆ ಆನಂದಾತಿರೇಕದಿಂದ, "ಅಂತೂ ಕೊನೆಗೊಮ್ಮೆ ವಂಡ್ಸೆಯ ನೀರಿನ ಋಣ ಮುಗಿಯಿತೇ? ಎಲ್ಲಿಗೆ ಹೋಗೋಣವೆಂದು ನಿರ್ಧರಿಸಿದೆ?' ಎಂದು ಕೇಳಿದಳು ಅವನನ್ನು ಬಿಗಿದಪ್ಪಿ.

"ಇನ್ನೂ ನಿರ್ಧರಿಸಿಲ್ಲ ಆಶಾ. ಕೂತ್ಕೋ... ಕೂತ್ಕೋ... ನನ್ನಲ್ಲಿ ಯಾವ ಒಳ್ಳೆಯ ಗುಣವಿದೆಯೆಂದು ನೀನು ನನ್ನ ಹತ್ರ ಬಂದೆ? ನಾನೋ ಹುಟ್ಟು ದರಿದ್ರ, ಪಟಿಂಗ.... ಉಂಡಾಡಿ ಗುಂಡ."

"ಹಾಗೆ ಹೇಳ್ಬೇಡ. ಹೇಳ್ಬೇಡ.... ನೀನು ಹೇಗಿದ್ದರೂ ನನ್ನ ಲೋಹಿತಾಕ್ಷ ಎಂದೆಂದಿಗಿದ್ದರೂ ನಾನು ನಿನ್ನವಳು."

"ಇದ್ದೇಗೆ ಸಾಧ್ಯ...?" ಕೈಕಟ್ಟಿಕೊಂಡು ಕಿಟಕಿಯ ಬಳಿಗೆ ಸರಿಯುತ್ತ ಹೇಳಿದ ಲೋಹಿತಾಕ್ಷ. "ನಂದನವನವಾದ ನಿನ್ನ ಮನೆಯನ್ನು ಹಾಳು ಸೂರೆ ಮಾಡುವುದು ನನಗೆ ಹಿತವೆನಿಸದು.... ನನ್ನನ್ನು ಮರೆತುಬಿಡು!"

"ಇಲ್ಲ.... ನನ್ನ ಸುಖ ಬದುಕು ಈಗ ನಿನ್ನ ಕೈಲಿದೆ."

"ಅದು ನಿನ್ನ ಭ್ರಮೆ. ಇಲ್ಲಿಲ್ಲ. ಅದು ನಿನ್ನ ಕೈಲಿದೆ! ನೀನೀಗ ಬೆನ್ನಟ್ಟಿ ಬಂದದ್ದು..." ಸರ್ರನೆ ಅವಳತ್ತ ಹೊರಳಿ ಅವಳ ಎರಡೂ ಭುಜಗಳನ್ನು ಒತ್ತಿಹಿಡಿದು ಅವನೆಂದ, "ಬಿಸಿಲ್ಗುದುರೆಯನ್ನು... ಮರಿಚಿಕೆಯನ್ನು! ಹಳೆಯದನ್ನೆಲ್ಲ ಮರೆತುಬಿಡು. ನಿನ್ನ ಸುಖಜೀವನವನ್ನು ಕೆಡಿಸುವಂತಹ ಪಾಪಿ ನಾನಲ್ಲ."

"ಲೋಹಿತ್..." ಅವಳ ಕಣ್ಗುಗಳು ತುಂಬಿ ಬಂದವು. "ನನ್ನ ದೇಹ, ಮನಸ್ಸು ಎಲ್ಲವೂ ನಿನಗರ್ಪಿತ. ಇಬ್ಬರೂ ರಿಜಿಸ್ಟರ್ಡ್ ಮದುವೆ ಮಾಡಿಕೊಳ್ಳೋಣ. ನಿನಗೆ ಒಂದಿನಿತೂ ಕೇಡು ಬಗೆಯದೆ, ನಿನ್ನಲ್ಲಿ ಒಂದಿನಿತೂ ಅವಿಶ್ವಾಸ ತೋರಿಸದೆ ನಿನಗೆ ಹೇಗೆ ಬೇಕೋ ಹಾಗೆ ಹೊಂದಿಕೊಂಡಿರ್ತೇನೆ."

"ಹುಚ್ಚಿ...." ವಿಲಕ್ಷಣವಾಗಿ ನಕ್ಕ ಅವನು, "ಶಿವಮೂರ್ತಿಯೊಡನೆ ಹೊಂದಿಕೊಳ್ಳಲಾಗದ ನೀನು.... ನೀನು ಹ್ಯಾಗೆ ಹೊಂದಿಕೊಳ್ತಿ ನನ್ನ ಜೊತೆ? ನಾನೇನು ನಿನಗೆ ಕೊಟ್ಟೆ? ಹ್ಞೂಂ.... ಏನೂ ಇಲ್ಲ. ನಿನ್ನ ಜೊತೆ ಹಾಗೇ ಸ್ವಲ್ಪ ದಿನ ಆಟವಾಡಿದೆ ಅಷ್ಟೇ...!"

ಆಶಾ ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡು ಆರ್ತಳಾಗಿ ನೋಡಿದಳು ಅವನತ್ತ. "ಊಹೂಂ. ನನಗೆ ನೀನೊಬ್ಬನೇ ಆತ್ಮೀಯ. ನೀನಿಲ್ಲದ ಮೇಲೆ ಈ ವಂಡ್ಸೆಯಲ್ಲಿ ಇನ್ನೇನಿದೆ? ಈ ಆಶಾ ಮೊದಲೇ ಅಲ್ಲಿ ಹೆಣವಾಗಿದ್ದಾಳೆ. ಇನ್ನು ಅವಳ ನಿಜವಾದ ಹೆಣವನ್ನು ನೋಡುವ ದಿನವೂ ಹತ್ತಿರ ಬಂದೀತು...."

ಅಳುತ್ತಿರುವ ಅವಳತ್ತ ನೋಡಿದ ಲೋಹಿತಾಕ್ಷ ತನ್ನ ಮೇಲೆ ನಂಬಿಗೆ, ವಿಶ್ವಾಸ ಅವಳಿಗಿದೆ. ಅವಳ ಮನಸ್ಸನ್ನು ನಾನೇಕೆ ಕೆಡಿಸಲಿ?... ಪಾಪ.... ಆಸೆಯ ಗೋಪುರ ಅವಳದು!

"ಸರಿ ಆಶಾ, ನಿನ್ನಿಷ್ಟವೇ, ನನ್ನಿಷ್ಟ, ನಾಳೆ ರಾತ್ರಿ ಹೊರಡೋಣ ಇಲ್ಲಿಂದ. ಅಷ್ಟರೊಳಗಾಗಿ ಸಿದ್ಧಳಾಗ್ತಿಯಾ?"

"ಓಹೋ.... ನಾನು ಈಗಲೇ ತಯಾರು!" ಧಪಕ್ಕನೆ ಎದ್ದು ನಿಂತು ಆಶಾ ಪಕ್ಕನೆ ನಕ್ಕುಬಿಟ್ಟಳು, "ನಂಗೊತ್ತು, ಇಷ್ಟು ಹೊತ್ತು ನೀನು ನನ್ನನ್ನು ಪರೀಕ್ಷೆ ಮಾಡ್ತಾ ಇದ್ದಿ ಎಂದು. ನಿನ್ನ ಆಶಾ ನೀನಿಟ್ಟ ಯಾವುದೇ ಪರೀಕ್ಷೆಯಲ್ಲಿ ಗೆಲ್ತಾಳೆ ಗೊತ್ತೆ?"

"ಹಾಗೇನು?" ಅವಳತ್ತ ಬಗ್ಗಿದ ಅವನೂ, "ನಾಳೆ ರಾತ್ರಿ ಎಂಟು ಗಂಟೆಗೆ ಸಿದ್ಧಳಾಗಿ ದೊಡ್ಡ ರಸ್ತೆ ಹತ್ರ ಬಂದುಬಿಡು. ಹೇಗೂ ತಿಂಗಳ ಬೆಳಕೂ ಇದೆ. ಸ್ವಲ್ಪ

ಹೊತ್ತು ಕಾಯ್ತೀನೆ ನಿನಗಾಗಿ. ನೀನಲ್ಲಿಗೆ ಬಾರದೇ ಹೋದಲ್ಲಿ ನಿಮ್ಮನೆ ಹತ್ರ ಬಂದು ಮೆಲ್ಲನೆ ಸಿಳ್ಳು ಹಾಕ್ತೇನೆ.... ಆಗಬಹುದೋ...?"

ಉನ್ಮಾದ, ಸಂತೋಷದಿಂದ ಮೈಮರೆಯಿತು. ತಲೆ ಮಾತ್ರ ಸಮ್ಮತಿ ಸೂಚಿಸಿತು. ಅವಳ ಕೈಹಿಡಿದು ಕಣ್ಣಲ್ಲಿ ಕಣ್ಣಿಟ್ಟು ಅವಳತ್ತ ಬಗ್ಗಿ, "ಇಷ್ಟು ದಿನಗಳಿಂದಲೂ ನನ್ನನ್ನು ಸುಖಿಯನ್ನಾಗಿ ಮಾಡಿದ ನಿನಗೆ ಚಿರಋಣಿ ಆಶಾ..." ಎಂದ ತುಸು ನಕ್ಕು. "ಜೀವನವಿರುವುದು ಸುಖಪಡುವುದಕ್ಕಾಗಿ. ಸದಾಕಾಲವೂ ಹೊಸತನ, ಹೊಸ ಗೆಳೆಯರು, ಹೊಸ ಊರು, ಎಲ್ಲವೂ ಹೊಸತಾಗಿದ್ದರೆ ಅದೇನು ಮಜಾ.... ಅದೇನು ಆನಂದ, ಆಹ್..."

ಅರೆ ಮುಚ್ಚಿದವು ಅವಳ ಕಣ್ಣುಗಳು. "ನಿಜ ನಿನ್ನ ಮಾತು" ಎಂದುಸುರಿದಳು ಬಹಳ ಮೆಲ್ಲನೆ.

ಅಲ್ಲಿಂದ ಹೊರಡುವ ಮುನ್ನ ಇನ್ನೊಮ್ಮೆ ಅವನಿಂದ ಎಲ್ಲ ವಿವರಗಳನ್ನು ಕೇಳಿ ತಿಳಿದುಕೊಂಡು "ಖಂಡಿತವಾಗಿಯೂ ನಾಳೆ ರಾತ್ರಿ ಎಂಟು ಗಂಟೆಗೆ ದೊಡ್ಡ ರಸ್ತೆಯ ಹತ್ತಿರ ರೆಡಿಯಾಗಿರ್ತೇನೆ.... ಎಲ್ಲಿಯಾದರೂ ನನ್ನನ್ನು ಬಿಟ್ಟು ಹೋಗ್ಬೇಡ.... ನನಗಾಗಿ ಕಾಯು" ಎಂದಳು ಅಲ್ಲಿಂದ ಹೊರಡುತ್ತ.

ಲೋಹಿತಾಕ್ಷನ ಕಣ್ಣುಗಳು ಮಿನುಗಿದವು. ತುಂಟತನದ ನಗೆ ನಕ್ಕ. "ಹೋಗಿ ಬಾ ಆಶಾ, ದೇವರು ಒಳ್ಳೆಯವನು!" ಎಂದ ತನ್ನ ಕೈ ಬೀಸುತ್ತ.

ಕುಣಿಯುತ್ತ, ಹಾರುತ್ತ ಸಂತಸದಲ್ಲಿ ಗಾಳಿಯಂತೆ ತೇಲುತ್ತ ಮನೆಗೆ ಹೊರಟ ಅವಳಿಗೆ ಲೋಹಿತಾಕ್ಷನ ಸಿಳ್ಳಿನ ಧ್ವನಿ ಆ ಕಾಡುದಾರಿಯಲ್ಲಿ ಅದೆಷ್ಟೋ ದೂರದವರೆಗೂ ಕೇಳಿಸುತ್ತಲೇ ಇತ್ತು.

ಅವಳು ಮನೆಗೆ ಬಂದು ತಲುಪಿದಾಗ ಜಬ್ಬಣ್ಣ ತನ್ನ ಏಳು ಮಕ್ಕಳ ಸಮೇತ ಬಂದುಬಿಟ್ಟಿದ್ದ ಅಲ್ಲಿಗೆ. ರಾತ್ರಿಯ ಗಂಜಿಯೂಟವನ್ನು ಮುಸ್ಸಂಜೆಯ ಹೊತ್ತಿನಲ್ಲಿಯೇ ಬಡಿಸಿ ಅವರಿಗೆಲ್ಲಾ ದನದ ಕೊಟ್ಟಿಗೆಯ ಬದಿಯಲ್ಲಿ ವಾಸಕ್ಕೆ ಏರ್ಪಡಿಸಿಯಾಯ್ತು. ಕುಲುಕುಲು ನಗುತ್ತಿದ್ದ ನೀಲಿಯ ಮುಖದಲ್ಲಿ ಕೃತಜ್ಞತೆ ತುಂಬಿದ್ದು "ಅಯ್ಯ, ಹೆಂಗಾದರೂ ನನ್ನ ಸಂಸಾರ ಗಟ್ಟಿ ಮಾಡಿದಿರಿ" ಎನ್ನುತ್ತಿದ್ದಳು.

ಆಹ್.... ಕೊನೆಗೂ ನೀಲಿಗೆ ಪ್ರತ್ಯೇಕ ಸಂಸಾರವಾಯಿತು. ಹಕ್ಕಿಯಂತಹ ಸ್ವಚ್ಛಂದ ಬದುಕು ಅವಳದು.... ಆಶಾ ಅಂದುಕೊಂಡಳು ತನ್ನಲ್ಲೇ. "ನಾಳೆ ನನ್ನ ಬದುಕೂ ಸುಖವನ್ನರಸುವ ದಾರಿಯಲ್ಲಿ ಮುಂದೆ ಸಾಗುತ್ತದೆ..... ನಾನು ಲೋಹಿತಾಕ್ಷ ಇಬ್ಬರೇ. ಆದರೆ ನಾನೀಗ ಮಾಡುತ್ತಿರುವುದು ಸರಿಯೇ? ತಪ್ಪೇ? ನನ್ನನ್ನು ಸಾಕಿದ ಅತ್ತೆ, ಮಾವ, ಜಗನ್ನಾಥ ಇವರೆಲ್ಲ ತನ್ನ ವಿಷಯದಲ್ಲಿ ಏನಂದುಕೊಳ್ಳುವರೋ.... ಆದರೆ ಈ ಆಶಾ ಯಾರಿಗೆ ಬೇಕಾಗಿದ್ದಾಳೆ? ಹ್ಹೆ ಹ್ಹೆ..... ಅವಳಿಗೂ ಯಾರೂ ಬೇಡ...!

ರಾತ್ರಿ ಸೊಸೆಯನ್ನು ತಮ್ಮ ಕೋಣೆಗೆ ಕರೆದರು ರಂಗಮ್ಮ. ಅವಳ ಆರೋಗ್ಯವನ್ನು ವಿಚಾರಿಸಿಕೊಳ್ಳುತ್ತ ಅವಳ ಮೈಕೈ ತಡವಿ ಹೊಟ್ಟೆಯ ಮೇಲೆ ಕೈಯ್ಯಾಡಿಸುತ್ತ ಕೇಳಿದರು, "ಎಷ್ಟನೆಯ ತಿಂಗಳು?"

"ಇದೀಗ ಏಳನೆಯ ತಿಂಗಳು...."

"ಓ.... ಮುಂದಿನ ತಿಂಗಳು ಸೀಮಂತ ಮಾಡ್ಬೇಕು ನಿನಗೆ. ಚೊಚ್ಚಿಲು ಬಸುರಿ. ಎಲ್ಲಾ ಕ್ರಮವಾಗಿ ಆಗಬೇಕಲ್ಲ." ಎಂದಂದು ಅವಳ ಕಿವಿ, ಕತ್ತು, ಕೈ ಎಲ್ಲಾ ಮುಟ್ಟಿ ಮುಟ್ಟಿ ನೋಡುತ್ತಾ "ಇದೇನು? ಮೈಮೇಲೆ ಚಿನ್ನವನ್ನೇ ಹಾಕ್ಕೊಂಡಿಲ್ಲ. ಎಲ್ಲಾ ಆಭರಣಗಳನ್ನೂ ಕಳಚಿ ಇಟ್ಟಿದ್ದೀಯಾ? ಕುತ್ಗೆ ತುಂಬಾ, ಕೈ ತುಂಬಾ ಹಾಕಿಕೊಳ್ಳಬೇಕು. ನನಗಂತೂ ಚಿನ್ನಾಭರಣವೆಂದರೆ ಪಂಚಪ್ರಾಣ, ಕಾಂತಿಗೂ ಹಾಗೇ ಇತ್ತು. ನೋಡು, ನಿನ್ನ ಸೀಮಂತಕ್ಕೆ ಏನಾದರೂ ಒಂದು ಆಭರಣ ಮಾಡಿಸಲೇಬೇಕು...."

"ನನಗೆ ಯಾವುದೂ ಇಷ್ಟವಿಲ್ಲ ಅತ್ತೆ."

"ಹಾಗೆ ಹೇಳ್ಬಾರ್ದು." ಅವರು ಹಳೆಯ ಮರದ ಪೆಟ್ಟಿಗೆಯಿಂದ ಒಂದು ಚರ್ಮದ ಚೀಲವನ್ನೆತ್ತಿಕೊಂಡು ಅದರಲ್ಲಿದ್ದ ಬಳೆ, ಸರ, ವಜ್ರದ ಹರಳುಗಳ ಮೂಗುತಿ, ಹವಳದ ಸರ, ಪಚ್ಚೆಸರ, ಗುಂಡುಸರ, ಚಿನ್ನದ ಸೊಂಟಪಟ್ಟಿ, ಬೆಳ್ಳಿಯ ಕಾಲ್ಬಳೆಗಳು ಎಲ್ಲವನ್ನೂ ತೆಗೆದು ಅವಳೆದುರು ಬಿಡಿಸಿಟ್ಟರು. ದೀಪದ ಬೆಳಕಿನಲ್ಲಿ ಆಭರಣಗಳು ಝುಗ್ ಝುಗ್ ಎಂದು ಕೋರೈಸಿದವು.

"ನೋಡು ಎಲ್ಲವನ್ನು. ಯಾವ ಮಾದರಿಯ ಸರ, ಬಳೆ ಬೇಕು ಅಂತ ತಿಳಿಸು. ಮಾಡಿಸೋಣ. ಕಾಂತಿಯ ಸೀಮಂತದ ದಿನ ನೂರಾರು ಜನ ಸೇರಿದ್ದರು. ಇನ್ನು ನಿನ್ನ ಸೀಮಂತವನ್ನೂ ಗಡದ್ದಿನಲ್ಲಿ ಮಾಡುವ ಆಸೆ ನನಗೆ.... ಯಾಕೆ ಮಾತಾಡ್ತಾ ಇಲ್ಲ?"

ಆಶಾ ಮೆಲ್ಲನೆ ಅಲ್ಲಿಂದೇಳಲು ಪ್ರಯತ್ನಿಸಿದಾಗ ರಂಗಮ್ಮ ಕೈ ಹಿಡಿದುಕೊಂಡರು, "ಯಾವುದೂ ಬೇಡವೇ ನಿನಗೆ? ಹಾಯ್, ಆ ದಿನದ ಕಾರು ಅಪಘಾತದಲ್ಲಿ ನನ್ನ ಕಣ್ಣುಗಳನ್ನು ಕಳೆದುಕೊಂಡೆ. ಸರಿಯಾಗಿ ನನ್ನ ಕಣ್ಣುಗಳಿದ್ದಿದ್ದರೆ ಇವೆಲ್ಲ ಆಭರಣ ಹಾಕಿಕೊಂಡು ಊರೆಲ್ಲ ತಿರುಗ್ತಾ ನಿನ್ನನ್ನೂ ತಿರುಗಿಸ್ತಾ ಇದ್ದೆ. ಹೋಗ್ಲಿ ಬಿಡು, ಚೆನ್ನಾಗಿರುವ ರೇಶ್ಮೆ ಸೀರೆಯನ್ನಾದರೂ ತೆಗೆ. ಹಣಕ್ಕಾಗಿ ಯಾವತ್ತು ಸಂಕೋಚ ಮಾಡ್ಬೇಡ...." ಎಂದರು ಪ್ರೀತಿಯಲ್ಲಿ.

ಆಶಾ ಮಾತಿಲ್ಲದೆ ಆಭರಣಗಳನ್ನೆಲ್ಲ ಅವರ ಚರ್ಮದ ಚೀಲದಲ್ಲಿ ಸರಿಯಾಗಿ ಹೊಂದಿಸಿಟ್ಟು ಅಲ್ಲಿಂದೆದ್ದುಬಿಟ್ಟಳು. ರಂಗಮ್ಮ ಅದೇನೋ ಗೊಣಗಿಕೊಂಡರು ತಮ್ಮಲ್ಲಿ. ನಗು ಬಂದಿತು ಅವಳಿಗೆ. ನನ್ನ ಸೀಮಂತದ ತಯಾರಿ ಇಲ್ಲಿ.... ಆದರೆ ನನ್ನ ಜೀವನದ ಹೊಸ ದಾರಿ ಅಲ್ಲಿ! ಓ... ಕಟ್ಟಲಿ ಹಗಲುಗನಸನ್ನು. ನನಗೇನಂತೆ.... ನಾನಿಲ್ಲಿಂದ ಹೊರಟುಹೋದಮೇಲೆ ಹೊಸದೊಂದು ಇತಿಹಾಸವೇ ತೆರೆದಂತಾಗಬಹುದು...!

ನಾಳಿನ ಸಿದ್ಧತೆಗಳ ತಯಾರಿಯಲ್ಲಿ ಅವಳಿಗೇನೋ ಆತಂಕ. ಯಾವ ಘಳಿಗೆಯಿಂದಲೋ ನಾನಿಲ್ಲಿಗೆ ಬಂದೆ.... ಇಲ್ಲಿದ್ದೆ. ಈಗ ಹೋಗುತ್ತಾ ಇದ್ದೇನೆ ಇಲ್ಲಿಂದ.... ಇನ್ನೆತ್ತಲೋ. ಈ ಪಯಣ ನನ್ನ ಪಾಲಿಗೆ ಏನನ್ನು ಕೊಡಬಹುದು? ಓ.... ಇದಾರು ನಿಂತವರು ಇಲ್ಲಿ? ಗಹಗಹಿಸುವ ನಗೆ ತುಂಬಿಹೋಗಿದೆ ಕೋಣೆಯನ್ನೆಲ್ಲ. "ಥ್ಯೂ ಕಳಂಕಿನಿ... ಈ ಪವಿತ್ರ ಸ್ಥಳದಲ್ಲಿ ನಿನಗೆಲ್ಲಿದೆ ಸ್ಥಳ?

ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡ ಅವಳ ಕಿವಿಗಳಲ್ಲಿ ಎಂದೂ ಇಲ್ಲದ ಯಾತನೆ ಕಾಣಿಸಿಕೊಂಡು 'ಓಹ್... ಹಾಳು ಕಿವಿ, ನಿನ್ನಿಂದಲೇ ನನಗೆ ಈ ದುರ್ಗತಿ'

ಎಂದು ಗೋಗರೆಯುತ್ತ 'ಇವತ್ತೇ ಕೊನೆ.... ನಿನ್ನ ಈ ಪವಿತ್ರ ಸ್ಥಳ ನಿನಗೇ ಇರಲಿ.... ನಾನು ಹೊರಟುಹೋಗುತ್ತೇನೆ' ಎಂದು ಅಂದುಕೊಳ್ಳುತ್ತ ಅಟ್ಟಹಾಸದ ನಗೆ ನಕ್ಕಳು.

೧೫

ಮರುದಿನ ಬೆಳಿಗ್ಗೆ ಏಳು ಗಂಟೆಯ ಹೊತ್ತಿಗೆ ಕಾಂತಿನಿವಾಸಕ್ಕೆ ಬಂದ ಲೋಹಿತಾಕ್ಷ.

"ಇದೇನಪ್ಪ, ಬೆಳಿಗ್ಗೆ ನಿನ್ನ ದರ್ಶನ?" ಎಂದರು ತಮ್ಮಯ್ಯ ಸ್ನೇಹ, ಆತ್ಮೀಯದಿಂದ ಅವನ ಮೇಲೆ ಕೈಯ್ಯಿರಿಸುತ್ತ. ತಾವೇ ಅಡಿಗೆ ಕೋಣೆಗೆ ಕರೆದೊಯ್ದು ಬಿಸಿ ಬಿಸಿ ಕಾಫಿಯನ್ನಿತ್ತು ಉಪಚರಿಸಿದರು ಅವನನ್ನು.

"ನಿಮ್ಮಿಂದ ಬಹಳ ದೂರ ಹೋಗ್ತಾ ಇದ್ದೇನೆ.... ಎಲ್ಲಿದ್ದರೂ ನಿಮ್ಮ ಆಶೀರ್ವಾದ ನನಗಿರಲಿ ಎಂದು ಕೇಳಿಕೊಳ್ಳೋದಕ್ಕೆ ಬಂದಿದ್ದೇನೆ ನಾನು" ಎಂದ ಆತ ತಮ್ಮಯ್ಯ ಹಾಗೂ ರಂಗಮ್ಮನವರ ಕಾಲು ಮುಟ್ಟಿ ನಮಸ್ಕರಿಸುತ್ತ.

"ಅದೇನಪ್ಪ, ಈ ಊರು ಬೇಜಾರಾಯ್ತೋ ಅಥವಾ ಬೇರೆಲ್ಲಿಗಾದರೂ ಟ್ರಾನ್ಸ್‌ಫರ್ ಆಯ್ತೋ?"

"ಬೇಜಾರೂ ಇಲ್ಲ, ಟ್ರಾನ್ಸ್‌ಫರೂ ಆಗ್ಲಿಲ್ಲ. ಒಟ್ಟಿನಲ್ಲಿ ಹೋಗ್ತಾ ಇದ್ದೇನೆ ನಾನಿಲ್ಲಿಂದ. ಬೇರೆಲ್ಲಿಯಾದರೂ ಒಳ್ಳೆಯ ಕೆಲಸ, ಕೈತುಂಬಾ ಸಂಪಾದನೆ ಸಿಕ್ಕೀತು ನಿಮ್ಮ ಆಶೀರ್ವಾದದಿಂದ."

"ನನ್ನ ಆಶೀರ್ವಾದವೇನು ಬಂತು? ನಿನ್ನ ಅದೃಷ್ಟ ಚೆನ್ನಾಗಿದ್ದರೆ ನೀನೆಲ್ಲಿದ್ದರೂ ಮೇಲೆ ಬಂದೇಬರ್ತೀಯಾ..." ಕೈಯೆತ್ತಿ ಹರಸಿದರು ತಮ್ಮಯ್ಯ.

"ಕುಂದಾಪುರದ ಬದಿಗೆ ಬಂದಲ್ಲಿ ಇಲ್ಲಿಗೆ ಬರಲು ಮರೆಯಬೇಡ!" ಆತ್ಮೀಯವಾಗಿ ಅಂದರು ರಂಗಮ್ಮ.

ಅವನ ಕಣ್ಣುಗಳು ನೋಡಿದವು ಸುತ್ತಲೂ. ಆಮೇಲೆ ಇನ್ನೊಮ್ಮೆ ದಂಪತಿಗಳ ಕಾಲಿಗೆರಗಿ ಹೊರಟುಹೋದ ಅಲ್ಲಿಂದ.

ಲೋಹಿತಾಕ್ಷ ಬೆಳಿಗ್ಗ ಬಂದು ಹೋಗಿದ್ದನೆಂದು ಆಶಾಗೆ ತಿಳಿದದ್ದು ಮಧ್ಯಾಹ್ನದ ನಂತರ. ತನಗೊಂದು ಮಾತನ್ನು ತಿಳಿಸದೆ, ತನ್ನನ್ನು ಭೇಟಿಯಾಗದೆ ಯಾಕೆ ಹೊರಟುಹೋದ ಅವನು? ತಮ್ಮ ವ್ಯವಹಾರಗಳನ್ನು ಚೆನ್ನಾಗಿ ಅರಿತಿದ್ದ ಮನೆಯಾಳು ಜಬ್ಬಣ್ಣನೊಂದಿಗೂ ಹೇಳಿ ಹೋಗಲಿಲ್ಲವೇಕೆ? ಅವನು ಬಂದು ಹೋದುದು ಆ ಆಳಿಗೂ ತಿಳಿದಿಲ್ಲ... ಲೋಹಿತಾಕ್ಷ ಯಾವ ಕೆಲಸವೂ ಇಲ್ಲದೆ ಬಂದಿರಲಾರ ಇಲ್ಲಿಗೆ. ಏನನ್ನೋ ಹೇಳಲಿದ್ದೀತು... ರೂಪಾಯಿಯೂ ಬೇಕಾಗಿದ್ದಿರಬಹುದು.... ಛೇ, ಯಾಕೆ ತಿಳಿಸದೆ ಹೊರಟುಹೋದ?

ತತ್‌ಕ್ಷಣ ಲೋಹಿತಾಕ್ಷನಿಗೆ ಒಂದು ಚೀಟಿಯನ್ನು ಬರೆದು ಲಕೋಟೆಯಲ್ಲಿರಿಸಿ

ಜಬ್ಬಣ್ಣನನ್ನು ಕರೆದು ಅಂದಳು, "ಇಕೋ, ಇದನ್ನು ಹರೀನ್ ಗುಡ್ಡದ ಅಯ್ಯನವರಿಗೆ ತಲುಪಿಸಿ ಬಾ. ರೂಪಾಯಿಯೇನಾದರೂ ಬೇಕಿದ್ದರೆ ತಿಳಿಸಬೇಕಂತೆ ಅಂತ ಹೇಳು. ನೋಡು ಜಾಗ್ರತೆ! ಇವತ್ತೊಂದೇ ದಿನ ನನ್ನ ಈ ಕೆಲಸಗಳಿಗೆ ನೀನು ಅಲ್ಲಿಗೆ ಹೋಗೋದು. ಇವತ್ತೇ ಕೊನೆ. ಯಾರ ಹತ್ರವೂ ಹೇಳ್ಬಾರ್ದು.... ಹಿಡಿ" ಎಂದಂದು ಐದರ ನೋಟನ್ನು ಅವನ ಅಂಗೈ ಮೇಲೆ ಹಾಕಿದಳು.

"ಇದ್ಯಾಕೆ ಬಿಡಿ ಅಮ್ಮಾ...." ಕೈ ನೀಡಿ ಅದನ್ನು ತೆಗೆದುಕೊಂಡು ಜೇಬಿಗಿಳಿಸಿ ಲಕೋಟೆಯನ್ನು ಮುಂಡಾಸಿನೊಳಗೆ ಹುದುಗಿಸಿಕೊಂಡ ಜಬ್ಬಣ್ಣನ ದೇಹ ಕೆಳಕ್ಕೆ ಬಗ್ಗಿತು, "ನಿಮ್ಮ ದಾಸಾನುದಾಸ ಅಮ್ಮಾ ನಾನು. ನಿನ್ನ ಋಣದಲ್ಲಿ ಇಪ್ಪತ್ತಿಗೆ ಸಾಕಿದ ನಾಯಿ ಹಂಗೆ ಇರಕ್ಕಲ್ದ ನಾನು? ಈ ನಂಬಿಕೆ ಸೇವಕ ಎರಡು ಬಗೆವ ಮನಸಾ ಅಲ್ಲಾ. ಅದಕ್ಕೆ ಈ ದಿಕ್ಕು, ಈ ಸೂರ್ಯ, ಈ ನೆಲ, ಭೂಮಿ, ಆಕಾಶ ಸಾಕ್ಷಿ ಅಮ್ಮಾ... ಹೋಗ್ಬತ್ತೆ ನಾನು.... ಯಾರ್ಹತ್ರವೂ ಹೇಳ್ತಿಲ್ಲೆ" ಎನ್ನುತ್ತ ಹೊರಟುಹೋದ.

ಹೊತ್ತು ಸರಿದಂತೆ ಆಶಾಗೆ ಏನೋ ಉದ್ವೇಗ. ಹೊರಡುವ ಸಿದ್ಧತೆಗಳನ್ನೆಲ್ಲ ಮಾಡಿಕೊಂಡು ಯಾರಿಗೂ ಕಾಣದ ರೀತಿಯಲ್ಲಿ ರಾತ್ರಿ ಎಂಟು ಗಂಟೆಗೆ ಹೊರಟು ಬಿಡಬೇಕು ಇಲ್ಲಿಂದ. ಚಿನ್ನಾಭರಣ ಮತ್ತು ಕೆಲವು ಬಟ್ಟೆಗಳ ಒಂದು ಸಣ್ಣ ಟ್ರಂಕು. ಅದನ್ನು ದೊಡ್ಡ ರಸ್ತೆಯವರೆಗೂ ಸಾಗಿಸುವುದೆಂತು? ಅಲ್ಲಿಗೆ ಹೋಗುವ ದಾರಿಯ ಪಕ್ಕದಲ್ಲಿಯೇ ಜಬ್ಬಣ್ಣನಿಗೋಸ್ಕರ ಗುಡಿಸಲು ಸಿದ್ಧವಾಗುತ್ತಿದ್ದು ಹತ್ತಾರು ಕೆಲಸದಾಳುಗಳು ಕೆಲಸ ಮಾಡುತ್ತಿದ್ದಾರೆ ಅಲ್ಲಿ. ಅವರ ಕಣ್ಣು ತಪ್ಪಿಸಿ, ಮನೆಯವರಿಗೂ ಕಾಣದಂತೆ, ಟ್ರಂಕನ್ನು ಸಾಗಿಸುವುದು ಬಹಳ ಕಷ್ಟಕರ. ಹೀಗಾಗಿ ಊಟದ ಹೊತ್ತಿನಲ್ಲಿ ಯಾರಿಗೂ ಅರಿಯದ ರೀತಿಯಲ್ಲಿ ಹೊರ ಬಾಗಿಲಲ್ಲಿ ಜಾರಿಬಿಡಬೇಕು ಎಂದುಕೊಂಡಳು.

ಆಶಾ ಇದೇ ಯೋಚನೆಯಲ್ಲಿದ್ದಾಗಲೇ ಮೋಟರ್ ಬೈಕ್‌ನ ಗುಡು ಗುಡು ಸದ್ದು. ಬೆಚ್ಚಿಬಿದ್ದು ಗಡಬಡಿಸಿಕೊಂಡು ನಡು ಅಂಗಳಕ್ಕೆ ಬಂದಾಗ ಸದ್ದು ಮಾಡುತ್ತಾ ಬಂದು ನಿಂತಿತು ಮೋಟರ್ ಬೈಕ್. ಅಲ್ಲಿಯೇ ಮೂರು ಗಾಲಿಯ ಸೈಕಲನ್ನು ತುಳಿಯುತ್ತಿದ್ದ ಪೃಥ್ವಿ ಅದನ್ನು ಬಿಟ್ಟು ಹಾರಿದ ಬೈಕ್‌ನತ್ತ.

ಇವತ್ತು ಇನ್ನೂ ಗುರುವಾರ. ಯಾವಾಗಲೂ ವಾರದ ಮಧ್ಯೆ ಬಂದವನೇ ಅಲ್ಲ ಶಿವಮೂರ್ತಿ. ಇಂದು ಅನಿರೀಕ್ಷಿತ ಆಗಮನ! ವಾಹನವನ್ನು ಬದಿಗಿರಿಸುತ್ತಿದ್ದಂತೆ ಓಡಿಕೊಂಡು ಬಂದರು ರಂಗಮ್ಮ. ಮಗ ಬಂದದ್ದು ಅವರಿಗೂ ಅನಿರೀಕ್ಷಿತ.

"ಇವತ್ತೆಲ್ಲ ಕಾಲೇಜಿನ ಹುಡುಗರ ಗಲಾಟೆಯೇ ಗಲಾಟೆ. ಹೊಡೆದಾಟವೂ ಆಯ್ತು. ನಾಲ್ಕು ದಿನ ಕಾಲೇಜು ಬಂದ್ ಎಂದರು ಪ್ರಿನ್ಸಿಪಾಲರು.... ಅಲ್ಲಿದ್ದು ಏನ್ಮಾಡ್ಲಿ ಅಂತ ಇಲ್ಲಿಗೆ ಬಂದೆ."

"ಸರ್ವನಾಶವಾಯ್ತು... ಎಲ್ಲಾ ಹಾಳಾಯ್ತು." ತನ್ನಲ್ಲಿ ಜೋರಾಗಿ ಕೂಗಿಕೊಂಡಳು ಆಶಾ.... ನೇರವಾಗಿ ಪತಿಯತ್ತ ನೋಡಿದಳು. ಅವನ ಮುಖವೂ ಸೋತಿತ್ತು. ಆದರೆ ಹುಬ್ಬುಗಂಟಿಕ್ಕಿ ಅವಳನ್ನೇ ದಿಟ್ಟಿಸುತ್ತಿದ್ದ ಅವನು. ನೇರವಾಗಿ

ಅವನತ್ತ ನೋಡಲಾರದೆ ಅವನ ಕಣ್ಣು ತಪ್ಪಿಸಿ ಒಳಗೆ ಹೊರಟಾಗ "ನಿಲ್ಲು, ನಿನ್ನ ಹತ್ರ ಮಾತನಾಡ್ಬೇಕು ನನಗೆ" ಎಂದ ಶಿವಮೂರ್ತಿ.

ರಂಗಮ್ಮ ಮಗನಿಗೋಸ್ಕರ ತಾವೇ ಒಳಗೆ ಹೋಗಿ ಕಾಫಿ ತಂದುಕೊಟ್ಟರು. ಮಗನ ಹತ್ತಿರವೇ ಕುಳಿತುಕೊಂಡರು. ಆಶಾ ಮುಳ್ಳಿನ ಮೇಲೆ ನಿಂತವಳಂತೆ ಚಡಪಡಿಸಿದಳು. ಹೊರಡುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡ ಮೇಲೆ ಹೀಗೆ ಅನಿರೀಕ್ಷಿತವಾಗಿ ಇವನು ಬಂದುಬಿಡಬೇಕೇ?.... ಇಲ್ಲಿ, ಈ ದಿನವಂತೂ ಇಲ್ಲಿಂದ ಹೊರಡಲು ಸಾಧ್ಯವಿಲ್ಲ. ಈಗಲೇ ಜಬ್ಬಣ್ಣನೊಂದಿಗೆ ಹೇಳಿಕಳುಹಿಸುವುದೊಳಿತು. ಆದರೆ ಅವನೆಲ್ಲಿದ್ದಾನೋ ಈಗ?

"ಅಮ್ಮಾ, ಹಾಗೇ ತಿರುಗಾಡಿಕೊಂಡು ಬರ್ತೇನೆ. ನಡಿ, ಆಶಾ, ಹೋಗೋಣ ಬಾ" ಎನ್ನುತ್ತ ಎದ್ದು ನಿಂತ ಶಿವಮೂರ್ತಿ.

ಆಶಾ ಅವನೊಡನೆ ಹೊರಡಲು ನಿರಾಕರಿಸಿದಾಗ "ನಡಿ, ನಿನ್ನ ಹತ್ರ ಮಾತನಾಡ್ಬೇಕು ನನಗೆ. ಹಾಗೇ ಚಕ್ರ ಹೊಳೆಯುತ್ತ ಹೋಗ್ಬರೋಣ... ಹೂಂ...." ಎಂದ ಇನ್ನೊಮ್ಮೆ.

ಮರುಮಾತಿಲ್ಲದೆ ಉಟ್ಟ ಬಟ್ಟೆಯಲ್ಲಿಯೇ ಹೊರಟುಬಿಟ್ಟಳು ಅವನೊಡನೆ. ತಲೆಯೊಳಗೆಲ್ಲ ಗೊಂದಲ. ಲೋಹಿತಾಕ್ಷನ ಹತ್ತಿರ ಯಾರನ್ನು ಕಳುಹಿಸಬೇಕು? ತನಗಾಗಿ ಅವನು ರಾತ್ರಿಯ ಹೊತ್ತು ಕಾಯುತ್ತಿದ್ದಾಗ ತನಗೆ ಹೋಗಲಾಗದಿದ್ದರೆ ಏನು ಮಾಡಬೇಕು? ಮೂರ್ತಿ ಬಂದಿದ್ದಾನೆಂದು ಅವನಿಗೆ ಹೇಗೆ ತಿಳಿದೀತು....

"ನೀನೀಗ ತುಂಬ ಬದಲಾಗಿದ್ದೀಯಾ?"

ಬೆಚ್ಚಿಬಿದ್ದಳು ಆಶಾ. "ಹ್ಞ.... ಹೂಂ.... ಇಷ್ಟು ದಪ್ಪನಾಗಿ ಹೀಗೆ ದೇಹವೂ ಬದಲಾಗುವುದು ಸಹಜ...."

'ಪೃಥ್ವಿ ಹಿಲ್'ನ್ನು ಇಳಿದು ಚಕ್ರ ಹೊಳೆಯುತ್ತ ಬಂದಾಗ ಸೂರ್ಯ ಮುಳುಗುವ ಸಿದ್ಧತೆಯಲ್ಲಿದ್ದ. ದಾರಿಯಲ್ಲೆಲ್ಲ ಮೂರ್ತಿ ಗಂಭೀರನೂ ಮೌನಿಯೂ ಆಗಿದ್ದ. ಹಸಿರು ಹುಲ್ಲಿನ ಮೇಲೆ ಅವರೀರ್ವರೂ ಕುಳಿತುಕೊಂಡರೂ ಇಬ್ಬರಲ್ಲಿಯೂ ಮಾತಿಲ್ಲ. ಆಶಾಳ ಆತಂಕದ ಮುಖವನ್ನೇ ದಿಟ್ಟಿಸುತ್ತಿದ್ದ ಶಿವಮೂರ್ತಿ.

ಇಡೀ ಆಗಸವೆಲ್ಲ ಕೆಂಪು ಬಣ್ಣದಿಂದ ತುಂಬಿತು. ಚಕ್ರ ಹೊಳೆಯ ಸುತ್ತಲೆಲ್ಲ ನಯನ ಮನೋಹರ ದೃಶ್ಯ. ಆಗಸದಲ್ಲಿ ಹಾರುವ ಕಪ್ಪು ಬಿಳಿ ಹಕ್ಕಿಗಳ ಸಾಲು, ಬೀಸುವ ತಂಗಾಳಿ, ಸಂಜೆಯ ತಂಪು ಮೈನಗಳಿಗೆ ಸಂತಸ. ಆದರೆ ಆಶಾ ಕುಳಿತಲ್ಲಿಯೇ ಚಡಪಡಿಸುತ್ತ ತತ್‌ಕ್ಷಣ ಎದ್ದುಬಿಟ್ಟಳು.

"ಕತ್ತಲೆಯಾಯ್ತು ಹೋಗೋಣ ಬನ್ನಿ..." ಅವಳ ಕಿವಿಗಳು ಸೂಕ್ಷ್ಮವಾಗಿ ತರಗೆಲೆಯ ಸದ್ದನ್ನು ಕೇಳಿದವು. ಲೋಹಿತಾಕ್ಷ ಈಗ ಇಲ್ಲಿಯೇ ಬಂದುಬಿಟ್ಟರೆ? ಇಲ್ಲಿಯೇ ಅವನ ಸಿಳ್ಳಿನ ಧ್ವನಿ ಕೇಳಿಸಿದರೆ...?

"ಯಾಕೆ ನಡುಗ್ತಾ ಇದ್ದಿ...? ಕೂತ್ಕೋ ಇನ್ನೂ ಸ್ವಲ್ಪ ಹೊತ್ತು....? ಈ ಕತ್ತಲೆಯಲ್ಲಿ ಯಾರು ಬರ್ತಾರೋ ನಾನೂ ನೋಡ್ತೇನೆ!

"ನೀವು ಕೂತಿರಿ.... ನಾನು ಹೊರಟೆ" ಎಂದಂದು ಮುಂದಡಿಯಿಟ್ಟಳು ಆಶಾ....

ಓ... ರಾತ್ರಿಯ ಆ ಎಂಟು ಗಂಟೆಗೆ ಇನ್ನು ಹೆಚ್ಚು ಸಮಯವಿಲ್ಲ. ಇದೇಕೆ ಇವತ್ತು ಬಲಗಣ್ಣು ಅದುರುತ್ತಾ ಇದೆ? ಲೋಹಿತಾಕ್ಷ ಕಾಯುತ್ತಾ ಇದ್ದಾನೆ ತನಗೋಸ್ಕರ. ಆದರೆ ಇಲ್ಲಿಯೋ ಅಡ್ಡ ಮುಳ್ಳಿನಂತೆ ಬಂದುಬಿಟ್ಟಿದ್ದಾನೆ ಮೂರ್ತಿ. ಅವನೊಡನೆ ಜಗಳವಾಡಿ, ಎಲ್ಲಾ ತಿಳಿಸಿ ಹೊರಟುಹೋಗುವ ಧೈರ್ಯ ಅವಳಿಗಿಲ್ಲ. ಆ ಧೈರ್ಯವಿದ್ದಿದ್ದರೆ ಇಷ್ಟು ದಿನವೂ ಬೆದರಿ ಮುದುರಿ ಕುಳಿತುಕೊಳ್ಳುತ್ತಾ ಇದ್ದಳೇ? ಲೋಹಿತಾಕ್ಷನನ್ನು ಎಳೆದುಕೊಂಡೇ ಹೋಗುತ್ತಾ ಇದ್ದಳೇನೋ...."

ರಾತ್ರಿ ಎಲ್ಲರೂ ಒಟ್ಟಾಗಿ ಊಟಕ್ಕೆ ಕುಳಿತಾಗ ರಂಗಮ್ಮ ಅಂದರು, "ಮುಂದಿನ ತಿಂಗಳು ಮುಹೂರ್ತ ನೋಡಿಕೊಂಡು ಒಂದು ಶಿವಪೂಜೆಯನ್ನೂ, ಇವಳ ಸೀಮಂತವನ್ನೂ ಮಾಡೋಣ ಎಂದ್ಕೊಂಡಿದ್ದೇನೆ...."

"ಈಗ್ಯಾಕೆ ಬಿಡು ಇವೆಲ್ಲ ಸಂಭ್ರಮ."

"ಚೆನ್ನಾಗಿ ಹೇಳಿದಿ. ಕಾಂತಿ ತಿಥಿಗಿಂತ ಮೊದಲೇ ಮುಗಿಯಬೇಕು. ಸೀಮಂತ.... ಅಲ್ಲವೋ, ಚೊಚ್ಚಿಲು ಬಸುರಿಗೆ ಏನೊಂದೂ ಮಾಡಬೇಡವೇ...? ಕಾಂತಿಯ ಸೀಮಂತದ ದಿನ ಅದೆಷ್ಟು ಹಾರಾಡಿದ್ದೀಯಲ್ಲ."

ಅವನ ತುತ್ತಿನ ಕೈ ಕೆಳಗಿಳಿಯಿತು. "ಆಗಿನ ಮಾತೇ ಬೇರೆ. ಆಗಿನಂತೆ ಈಗಿಲ್ಲ ನಾನು. ಇನ್ನೊಮ್ಮೆ ಅಂದಿನ ದಿನಗಳು ಬರಲಾರವು ಅಮ್ಮಾ.... ಅದು ಮಾತ್ರ ನಿಜ!

ಆಶಾ ಹೇಗೋ ನಾಲ್ಕು ತುತ್ತನ್ನು ಇಳಿಸಿ ಅವಸರದಲ್ಲಿ ಓಡಿಬಂದಳು ಮಹಡಿಗೆ. ಗಡಿಯಾರದ ಮುಳ್ಳು ಎಂಟರ ಅಂಕೆಯ ಮೇಲೆ! ದೃಷ್ಟಿ ಹರಿಯಿತು ಕಿಟಕಿಯಿಂದಾಚೆ ರಸ್ತೆಯತ್ತ. ಲೋಹಿತಾಕ್ಷ ಕಾಯುತ್ತಾ ಇರಬಹುದು ತನಗಾಗಿ. ತಾನೀಗ ಹೋಗುವುದೆಂತು? ಕೆಳಗಿನ ಕೋಣೆಯಲ್ಲಿ ಬಾಗಿಲನ್ನು ತೆರೆದುಕೊಂಡು ಮೂರ್ತಿ, ರಂಗಮ್ಮ ತಮ್ಮಯ್ಯ ಎಲ್ಲರೂ ಒಟ್ಟಾಗಿ ಕುಳಿತಿದ್ದಾರೆ... ಗಂಟೆ ಎಂಟೂವರೆಗೆ ಹತ್ತಿರವಾದಾಗ ತೀರಾ ಹುಚ್ಚಿಯಂತಾದಳು. ಪ್ರತಿ ಸೆಕಂಡನ್ನೂ ಆತುರದಿಂದ ನೋಡಿದಳು. ಕಿಟಕಿಯಿಂದಾಚೆ ಏನೂ ಕಾಣುತ್ತಿಲ್ಲ. ದನದ ಕೊಟ್ಟಿಗೆಯಲ್ಲಿ ನಿನ್ನೆ ವಾಸವಾಗಿದ್ದ ನೀಲಿ, ಜಬ್ಬಣ್ಣ ಮತ್ತು ಮಕ್ಕಳು ತಮಗಾಗಿ ಸಿದ್ಧಪಡಿಸಿದ ಗುಡಿಸಲಿಗೆ ಹೊರಟುಹೋಗಿದ್ದರು.... ನಸು ಬೆಳದಿಂಗಳಲ್ಲಿ ಏನೇನೂ ಕಾಣುವುದಿಲ್ಲವಲ್ಲ.

ಒಂಬತ್ತರ ಹೊತ್ತಿಗೆ ಕೆಳಗಿನ ದೊಡ್ಡ ಬಾಗಿಲು ಕಿರ್‌ಡರ್ ಎಂಬ ಸದ್ದಿನೊಂದಿಗೆ ಮುಚ್ಚಿಕೊಂಡಿತು.... "ಅಯ್ಯೋ, ನೀನಿನ್ನು ಈ ಸೆರಮನೆಯಲ್ಲಿ ಬಂದಿಯಾಗಿ ಹೋದೆ!" ಚೀರಿಟ್ಟಿತು ಅವಳ ಮನ.

ಶಿವಮೂರ್ತಿ ಮಹಡಿಗೆ ಬಂದ... ಅವಳತ್ತ ನೋಡದೆ ಏನೊಂದೂ ನುಡಿಯದೆ ತನ್ನ ಹಾಸಿಗೆಯನ್ನೆತ್ತಿಕೊಂಡು ಕೆಳಗಿಳಿದು ಹೋದ. ತಿರಸ್ಕಾರದಿಂದ ಹಲ್ಲು ಕಚ್ಚಿದಳು. "ಹೋಗು.... ನನ್ನಿಂದ ದೂರ ಸರಿದು ಹೋಗು....!"

ಸಮಯ ಸರಿಯಿತು ಬಹಳ ನಿಧಾನವಾಗಿ. ತಾನಂತೂ ರಸ್ತೆಯತ್ತ ಹೋಗಲಿಲ್ಲ. ಅವನಾದರೂ ಬರಲೇಬೇಕಿತ್ತು. ಯಾಕೆ ಬರಲಿಲ್ಲ? ಸುತ್ತಲೆಲ್ಲ ನೀರವತೆ. ಆಗಾಗ

ಕಾಡಿನ ಸದ್ದು... ಮರಗಿಡಗಳ ಸದ್ದು ಮಾತ್ರ. ಆದರೆ ಪರಿಚಿತ ಧ್ವನಿಯಾಗಲೀ, ಸಿಳ್ಳಿನ ಸ್ವರವಾಗಲೀ ಆ ನೀರವತೆಯನ್ನು ಭೇದಿಸಲಿಲ್ಲ. ಪ್ರತಿ ರಾತ್ರಿಯಂತೆ ಆ ರಾತ್ರಿಯೂ ಮೌನದಲ್ಲಿಯೇ ಮುಗಿಯುತ್ತ ಬಂದಿತು. ಹೊಸ ಘಟನೆ ಯಾವುದೂ ನಡೆಯಲಿಲ್ಲ.

* * * *

ಬೆಳಿಗ್ಗೆ ತನ್ನ ಕೆಂಪಾದ ಕಣ್ಣುಗಳನ್ನು ತಿಕ್ಕಿಕೊಳ್ಳುತ್ತ ಕೆಳಗಿಳಿದು ಬಂದಾಗ ಜಬ್ಬಣ್ಣ ಹೊರ ಅಂಗಳದಲ್ಲಿ ಕಸ ತೆಗೆಯುತ್ತಾ ಇದ್ದ. ನಿನ್ನೆಯೆಲ್ಲ ಅವನು ಎಲ್ಲಿದ್ದನೋ ಯಾರಿಗೆ ಗೊತ್ತು.

"ಏಯ್.... ನಿನ್ನೆ ನಾನು ಕೊಟ್ಟ ಚೀಟಿಯನ್ನು ತಲುಪಿಸಿದ್ದಿಯಾ? ಅವನೇನಾದರೂ ಹೇಳಿಕಳುಹಿಸಿದ್ದನೇ ನಿನ್ನ ಹತ್ರ?" ಅವನ ಹತ್ತಿರ ಬಂದು ಪ್ರಶ್ನಿಸಿದಳು ಪಿಸು ಸ್ವರದಲ್ಲಿ.

"ಅವರಿಗೇ ಕೊಟ್ಟು ಬಂದೆ ಅಮ್ಮಾ. ಎತ್ಲಾಗೋ ಹೊಂಟಿದ್ದರು ಆ ಹೊತ್ನಲ್ಲಿ. ನಿಮ್ಮ ಚೀಟಿ ಕಂಡ್ಕಂಡು ಸುಮ್ಮನೆ ನಕ್ಕರು. ಆಮೇಲೆ ಹೊರಟುಬಿಟ್ಟರು ಬಾಗಿಲಿಗೆ ಕೀಲಿ ಹಾಕ್ಕಂಡು. ನಂಗೆ ಸೊಪ್ಪು ತರ್ಲಿಕ್ಕೆ ಇತ್ತಲ್ವ. ಕತ್ತಿಹಿಡ್ಕಂಡು ಅವರ ಹಿಂದೆ ಹ್ವಾದೆ" ವಿಧೇಯ ಜಬ್ಬಣ್ಣ ಕೈ ತಿರುಚಿದ.

"ಎಲ್ಲಿಗೆ ಹೋದ ಅವನು?"

"ನಾ ಸೊಪ್ಪು ಕಡೀತಾ ಇದ್ದೆ ರಸ್ತೆ ಹತ್ರ.... ನಂಗೆಂತ ಕಸಬು ಅಂತರಾ ನೀವು.... ಸೊಪ್ಪೂ ಕಡದ್ಹಾಂಗಾತು... ದಾರಿ ಬದಿ ಜನಾನೂ ನೋಡ್ದಾಂಗೆ ಆತು ಅಂತ ರಸ್ತೆ ಬದೀಗೆ ಸೊಪ್ಪು ಕಡೀತಾ ಇದ್ದೆ. ಹರೀನ್ ಗುಡ್ಡದ ಅಯ್ಯ ಕೊಲ್ಲೂರಿಗೆ ಹೋಪೋ ಬಸ್ಸು ಇತ್ತಲ್ದ ಅದನ್ನು ಹತ್ಕಂಡು ಹೊರಟ್ಹೋದರು. "ಮನೀವರಿಗೆಲ್ಲಾ ಹೇಳಿಬಿಡು ಜಬ್ಬಣ್ಣಾ, ನಾ ದೂರ ಹೋಗ್ತೆ" ಎಂತಲೂ ಹೇಳೀರು ನನ್ನ ಹತ್ರ...."

"ಸುಳ್ಳು ಹೇಳ್ತಾ ಇದ್ದೀಯಾ?"

"ಇಲ್ಲ ಅಮ್ಮಾ... ದೇವರಾಣೆಗೂ ಇದು ಸತ್ಯ. ನಿಮ್ಮನೆ ಅನ್ನ ನೀರು ತಿಂದ್ಕಂಡು ಇಪ್ಪತ್ತಿಗೆ ಈ ನೆಲ, ಈ ಆಕಾಶ, ಸೂರ್ಯ, ಚಂದ್ರ ಎಲ್ಲಾ ಸಾಕ್ಷಿ ಅಮ್ಮಾ." ನೆಲಮುಟ್ಟಿ ನಮಸ್ಕರಿಸಿದ ಜಬ್ಬಣ್ಣ ತಗ್ಗಿದ ಸ್ವರದಲ್ಲಿ ಅಂದ, "ನಿನ್ನೆ ಒಂದು ಅನರ್ಥ ಆಗ್ಹೋಯ್ತು ಅಮ್ಮಾ ಎಂತ ಹೇಳ್ಲಿ. ಈ ಮನೇಲಿ ಇಪ್ಪತ್ತಿಗೆ ನಿಮಗೆ ಎರಡು ಬಗೀವ ಮನಸಾ ನಾ ಅಲ್ಲ ಅಮ್ಮಾ. ಹರೀನ್ ಗುಡ್ಡದ ಅಯ್ಯ ಬಸ್ಸು ಹತ್ಕಂಡು ಕೊಲ್ಲೂರು ಬೀದಿಗೆ ಹೋದರಲ್ದ.... ಅದೇ ಹೊತ್ತಿಗೆ ಚಿಕ್ಕ ಅಯ್ಯನವರ ಮೋಟರ್ ಬೈಕ್ ಬಂತು ಅಮ್ಮಾ.... ಎಂತ ಹೇಳ್ಲಿ...? ನನ್ನ ಬುದ್ಧಿ ಈ ನೀಲಿಯಿಂದಾಗಿ ಪೂರ್ಣ ಕೆಟ್ಹೋಗಿತ್ತು.... ಯಾವುದೋ ಗ್ಯಾನದಲ್ಲಿದ್ದೆ.... ಅಯ್ಯನವರ್ಹತ್ರ..."

ಅಷ್ಟರಲ್ಲಿ ಮೂರ್ತಿಯ ಮೋಟರ್ ಬೈಕ್ ಸದ್ದು ಮಾಡುತ್ತಾ ಅಂಗಳದಲ್ಲಿ ಬಂದು ನಿಂತುದನ್ನು ಕಂಡು ಜಬ್ಬಣ್ಣ ಕಸದ ರಾಶಿಯನ್ನೆತ್ತಿಕೊಂಡು ಸರಕ್ಕನೆ ಸರಿದುಹೋದ ಅಲ್ಲಿಂದ. ಆಶಾಗೆ ಅವನ ಮಾತಿನಿಂದ ಯಾವುದೂ ಅರ್ಥವಾಗಲಿಲ್ಲ. ಶಿವಮೂರ್ತಿ ಈ ಬೆಳಗಿನ ಹೊತ್ತು ಎಲ್ಲಿಗೆ ಹೋಗಿದ್ದ ಎನ್ನುವುದೂ ತಿಳಿಯಲಿಲ್ಲ. ಶಿವಮೂರ್ತಿ

ಬೈಕನ್ನು ನಿಲ್ಲಿಸಿ ಒಳಗೆ ಹೋದಾಕ್ಷಣ ಅವಳು ಸರಸರನೆ ಹೊರಟುಬಿಟ್ಟಳು ಹರೀನ್ ಗುಡ್ಡಕ್ಕೆ.

ನಿಜವಾಗಿಯೂ ಎಲ್ಲಿಗೆ ಹೋದ ಲೋಹಿತಾಕ್ಷ? ರಾತ್ರಿ ಎಂಟು ಗಂಟೆಗೆ ರೆಡಿಯಾಗಿರು ಎಂದವನು ಸಾಯಂಕಾಲವೇ ಹೊರಟುಹೋದುದೇಕೆ? ನೋಡೋಣ ಮನೆಯಲ್ಲಿದ್ದಾನು ಈಗ.

ಚಕ್ರ ಹೊಳೆಯವರೆಗೂ ಓಡಿಕೊಂಡು ಬಂದಾಗ ತನ್ನ ಹಿಂದೆ ಹೆಜ್ಜೆಯ ಸದ್ದು ಕೇಳಿಸಿದಂತಾಗಲು ಗಕ್ಕನೆ ನಿಂತು ಹೊರಳಿ ನೋಡಿದಳು. 'ಇಲ್ಲೇ ಎಲ್ಲೋ ಇದ್ದಿರಬೇಕು ಲೋಹಿತಾಕ್ಷ, ನನಗಾಗಿ ಕಾಯುತ್ತಿರಬೇಕು' ಎಂದುಕೊಳ್ಳುತ್ತಿದ್ದಂತೆ ಮಿನುಗಿದವು ಕಣ್ಣುಗಳು. ಆದರೆ ಓಹ್.... ಅವಳ ಹಿಂದೆ ಬಂದವನು ಶಿವಮೂರ್ತಿ! ಕಾಲುಗಳು ಅಲ್ಲೇ ಹೂತು ಹೋದಂತೆನಿಸಿತು.

"ನನ್ನ ಹಿಂದೆ ಯಾಕೆ ಬಂದಿರಿ?" ಸಿಡುಕಿ ಕೇಳಿದಳು ಶಿವಮೂರ್ತಿಯನ್ನು.

"ನೀನೆಲ್ಲಿಗೆ ಹೋಗ್ತಿಯೋ ಅಂತ ನೋಡಲು."

"ನಾನೆಲ್ಲಿಗಾದರೂ ಹೋಗಿ ಸತ್ತುಕೊಳ್ತೇನೆ. ನಿಮಗೇನಂತೆ. ಸುಮ್ಮನೆ ವಾಕಿಂಗ್ ಬಂದಿದ್ದೆ ಇಲ್ಲಿಯವರೆಗೆ."

"ಗೊತ್ತು ನನಗೆ ನೀನ್ಯಾಕೆ ಬಂದಿದ್ದಿ ಎಂದು. ಅಯ್ಯೋ ಪಾಪ, ನಾನು ಬಂದುದು ತೊಂದರೆಯಾಯ್ತು" ಕೆಣಕಿದ ಮೂರ್ತಿಯ ಕಣ್ಣುಗಳು ಕ್ರೋಧದಲ್ಲಿ ಕಿಡಿಕಾರಿದವು. ಅವಳನ್ನೇ ಅಳೆಯುವಂತೆ ನೋಡುತ್ತ "ಆಶಾ.... ನೀನು.... ನೀನು..." ಎಂದು ಮುಂದೇನೋ ಹೇಳಬಯಸಿದವನು ಹೇಳಲಾಗದೆ ನಾಲಗೆಯಿಂದ ತುಟಿಯನ್ನು ಸವರಿಕೊಳ್ಳುತ್ತ ಭಾರವಾದ ನಿಟ್ಟುಸಿರು ತೆಗೆದು ಅಲ್ಲಿಂದ ಹೊರಳಿದ ಮನೆಯತ್ತ.

೧೬

ಆ ದಿನವೆಲ್ಲ ಕಳೆಯಿತು ಆತಂಕದಲ್ಲಿ, ನಿರೀಕ್ಷೆಯಲ್ಲಿ. ಲೋಹಿತಾಕ್ಷ ಬರಲಿಲ್ಲ. ಜಬ್ಬಣ್ಣನನ್ನು ಕಳುಹಿಸಿದಾಗ 'ಕೀಲಿ ಹಾಕಿದೆ ಅಲ್ಲಿ' ಎಂಬ ಸುದ್ದಿಯನ್ನು ಹೊತ್ತು ತಂದ ಆ ದೂತ. ಆ ರಾತ್ರಿಯೂ ಶಿವಮೂರ್ತಿ ಮಹಡಿಯಲ್ಲಿ ಮಲಗಲಿಲ್ಲ. ಅವಳೊಂದಿಗೆ ಮಾತನಾಡಲೂ ಇಲ್ಲ. ಅವನ ಮುಖ, ಅವನ ಸಾಮೀಪ್ಯ, ಅವನ ಮಾತಿನಲ್ಲೆಲ್ಲ ತಿರಸ್ಕಾರ ತುಂಬಿಕೊಂಡಿದ್ದ ಆಶಾಗೆ ತನ್ನ ಒಂಟಿ ಹಾಸಿಗೆಯನ್ನು ಕಂಡು ಬೇಸರವೆನಿಸಲಿಲ್ಲ. ಅದೇಕೋ ಗಹಗಹಿಸಿ ನಕ್ಕಿತು ಅವಳ ಮನಸ್ಸು.

ಮೂರ್ತಿಯ ಮುಖ ಕಂದಿಹೋಗಿತ್ತು. ತಮ್ಮಯ್ಯ, ರಂಗಮ್ಮನಿಗೆ ತೀರಾ ಕಳಕಳಿ. ಸೊಸೆ ಬಿದುರುಕಡ್ಡಿಯಾಗಿದ್ದರೂ ಮಗನ ಮೇಲೆ ಕಾಳಜಿ ಅವರದು. ಸೊಸೆ ಆ ರಾತ್ರಿ ಊಟ ಮಾಡದಿದ್ದರೂ ಯಾರೂ ಏನೂ ಹೇಳಲಿಲ್ಲ. ಆದರೆ ಶಿವಮೂರ್ತಿ ಅನ್ನವನ್ನು

ಕಲಿಸಿ ಹಾಗೇ ಬಿಟ್ಟಿದ್ದಾಗ ತಂದೆಗೆ ಸಂಕಟ, "ಡಾಕ್ಟರರ ಹತ್ತಿರ ತೋರಿಸಿಕೊಂಡು ಔಷಧಿ ತಾ" ಎಂದರು.

"ಹೊಟೇಲ್‌ನ ಅನ್ನವನ್ನುಂಡು ಹೊಟ್ಟೆ ಹಾಳಾಗಿರಬಹುದು." ಎಂದರು ರಂಗಮ್ಮ ಮರುಕದಲ್ಲಿ.

ಆ ರಾತ್ರಿಯೂ ಆಶಾ ಪಾಲಿಗೆ ನಿದ್ರೆ ಸರಿಯಿತು ಬಹಳ ದೂರಕ್ಕೆ. ಮೂರು ರಾತ್ರೆಗಳಿಂದ ನಿದ್ರೆಯಿಲ್ಲದೆ ರಸ ಹೀರಿದ ಕಬ್ಬಿನ ಸಿಪ್ಪೆಯಂತಾಯಿತು ಅವಳ ಮುಖ. ಎದ್ದು ನಿಲ್ಲಲು ಶಕ್ತಿಯಿಲ್ಲದವಳಂತೆ ತೂರಾಡಿಕೊಂಡೇ ಕೆಳಗಿಳಿದು ಬಂದಳು. ರಂಗಮ್ಮನಿಗೆ ಕಣ್ಣು ಕಾಣಿಸದು. ತಮ್ಮಯ್ಯನವರಿಗೆ ಹೆಂಗಸರ ಆರೋಗ್ಯದ ವಿಷಯ ತಿಳಿಯದು. ಚೆನ್ನಕ್ಕನಿಗೆ ಮಾತ್ರ ಅವಳನ್ನು ಕಂಡು ಅಯ್ಯೋ ಎನಿಸಿ "ಏನಮ್ಮಾ... ಹುಷಾರಿಲ್ಲವೇ" ಎಂದು ಕೇಳಿದಳು ಎಂದಿಲ್ಲದ ಆತ್ಮೀಯತೆಯಲ್ಲಿ.

ಇದೇ ಹೊತ್ತಿನಲ್ಲಿ ಹೊರಗೆ ಚಿರಪರಿಚಿತ ಸ್ವರ ಕಿವಿಗೆ ಕೇಳಿದಂತಾಗಲು ಅಚ್ಚರಿಪಟ್ಟಳು ತನ್ನಲ್ಲೇ. ಅದರೊಂದಿಗೆ ಮೂರ್ತಿಯ ಸ್ವರವೂ ಕೇಳಿಸಿತು, "ಬನ್ನಿ ಬನ್ನಿ. ನಿಮ್ಮನ್ನೇ ಕಾಯ್ತಾ ಇದ್ದೆ.

"ನಿನ್ನೆ ಮಧ್ಯಾಹ್ನ ಸಿಕ್ತು ನಿನ್ನ ಟೆಲಿಗ್ರಾಂ. ಇವತ್ತು ನಸುಕಿನಲ್ಲಿ ಹೊರಟು ಬಂದೆ. ಏನು, ಆಶಾಗೆ ಹುಷಾರಿಲ್ಲವೇ?"

ಅರೆ... ಪರಮೇಶ್ವರಯ್ಯ ಇಲ್ಲಿಗೇಕೆ ಬಂದರು? ಟೆಲಿಗ್ರಾಂ ಕೊಟ್ಟು ಮೂರ್ತಿ ಅವರನ್ನೇಕೆ ಕರೆಯಿಸಿಕೊಂಡರು? ಆಶಾ ತಕ್ಷಣ ಹೊರಗೆ ಬಂದಳು ಅವರನ್ನು ಮಾತನಾಡಿಸಲು.

"ಟೆಲಿಗ್ರಾಂ ಕೊಟ್ಟು ಇಷ್ಟು ಅವಸರದಲ್ಲಿ ಯಾಕೆ ಕರೆಯಿಸಿದೆ ಇವರನ್ನು? ಸೀಮಂತ ಈಗಲೇ ಮಾಡುವದೇ?" ತಮ್ಮಯ್ಯ ಕೇಳಿದರು ಆಶ್ಚರ್ಯದಲ್ಲಿ.

"ಹೂಂ, ಮಾಡಿ ಅವಳನ್ನು ಕಳುಹಿಸೋಣ. ಅಲ್ಲಿಯೇ ಇರಲಿ ಅವಳು." ಎಂದ ಮೂರ್ತಿ ಬೇರೆಲ್ಲೋ ನೋಡುತ್ತ.

"ಇದೇನು ಆಶಾ, ಎಲುಬಿನ ಹಂದರವಾಗಿದ್ದೀಯಲ್ಲ. ಏನಾಗಿದೆ ನಿನಗೆ? ನಿನಗೆ ಅಸೌಖ್ಯವೆಂತಲೇ ಅಂದುಕೊಂಡೆ ಮೂರ್ತಿಯ ಟೆಲಿಗ್ರಾಂ ಸಿಕ್ಕಿದಾಗ.... ನಿಜವಾಯ್ತು ನನ್ನ ಊಹೆ. ಅರೆ ಮೂರ್ತಿ, ಡಾಕ್ಟರರ ಹತ್ತಿರ ತೋರಿಸಲೇ ಇಲ್ಲವೇ? ಈಗ ಆ ಹೊಟ್ಟೆಯ ಹೊರತಾಗಿ ಇನ್ನೇನೂ ಇಲ್ಲವಲ್ಲ" ಎಂದರು ಪರಮೇಶ್ವರಯ್ಯ.

ಕಾಫಿ ಉಪಚಾರವಾಯಿತು. ಮಧ್ಯಾಹ್ನದ ಊಟವೂ ಮುಗಿಯಿತು. ಅಷ್ಟು ಹೊತ್ತು ತಾನು ಪರಮೇಶ್ವರಯ್ಯನವರನ್ನು ಯಾಕೆ ಕರೆಯಿಸಿದೆ ಎಂದು ಹೇಳಲೇ ಇಲ್ಲ. ಪರಮೇಶ್ವರಯ್ಯ ಊಟಕ್ಕಿಂತ ಮೊದಲು ಆಶಾಳನ್ನು ಏಕಾಂತದಲ್ಲಿ ಕರೆದು ಮತ್ತೊಮ್ಮೆ ಅವಳ ಆರೋಗ್ಯವನ್ನು ವಿಚಾರಿಸಿಕೊಳ್ಳುತ್ತ ಕೊನೆಗೆ ಅಂದರು.

"ನಿನ್ನ ಅಮ್ಮ ಹದಿನೈದು ದಿನಗಳ ಹಿಂದೆ ಬಂದಿದ್ದಳು ನಮ್ಮ ಮನೆಗೆ. ನಮ್ಮ ಜೊತೆಯೇ ಉಳಿದುಕೋ ಎಂದೆ. ಇಲ್ಲ ಎಂದುಬಿಟ್ಟಳು. ಈಗವಳು ತುಮಕೂರಿನ

ಅನಾಥಾಶ್ರಮವನ್ನು ನಡೆಸಿಕೊಂಡೇ ಇದ್ದಾಳೆ. ನಿನ್ನನ್ನೂ ವಿಚಾರಿಸಿಕೊಂಡಳು. ಒಂದ್ಸಾರೆ ತುಮಕೂರಿಗೆ ಕರ್‍ಕೊಂಡು ಬಾ ಎಂದಿದ್ದಾಳೆ ನನ್ನ ಹತ್ರ."

"ನನ್ನ ನೆನಪು ಈಗಾಯಿತೇ ಅವಳಿಗೆ? ಏನ್ಮಾಡ್ತಾಳಂತೆ ನನ್ನನ್ನು ನೋಡಿ?"

"ಎಷ್ಟಿದ್ದರೂ ತಾಯಿಯ ಹೃದಯ. ನೋಡಬೇಕೆನ್ನುವ ಚಪಲ ಸಹಜವಾದದ್ದು. ಹೋಗಿ ಬಾ ಒಂದ್ಸಾರೆ. ನೀನು ಬಾಣಂತನಕ್ಕೆ ಹೇಗಿದ್ದರೂ ಬರ್‍ತೀಯಲ್ಲ ನಮ್ಮ ಮನೆಗೆ.... ಆಗ ಬರ್‍ತೇನೆ ಎಂದಿದ್ದಾಳೆ ರುಕ್ಮಾ. ನಿನ್ನ ಬಗ್ಗೆ ಅವಳಿಗೆ ಪ್ರೀತಿ, ಅನುಕಂಪ ಎಷ್ಟಿದೆ ಅಂತ ಮಾತಿನಲ್ಲೇ ತಿಳಿಯುತ್ತೆ."

"ನಾನಂತೂ ತಾಯಿಯಿಲ್ಲವೇ ಇಲ್ಲವೆನ್ನುವ ಭಾವನೆಯನ್ನು ಬೆಳೆಸಿಕೊಂಡವಳು. ಇನ್ನು ಆ ಒಂದು ಹೊಸ ಪಾಶವನ್ನು ಕಟ್ಟಿಕೊಂಡು ನಾನ್ಯಾಕೆ ತಲೆ ಕೆಡಿಸಿಕೊಳ್ಳಲಿ? ಮಗಳು ಯಾವಾಗಲೋ ಸತ್ತು ಹೋಗಿದ್ದಾಳೆ ಅವಳ ಪಾಲಿಗೆ."

"ಹೇಳ್ಬೇಡ ಹಾಗೇ..." ಕಣ್ಣು ಮುಚ್ಚುತ್ತ ದರು ಪರಮೇಶ್ವರಯ್ಯ... "ಎಲ್ಲಾ ಹೇಳಿಕೊಂಡಿದ್ದಾಳೆ ನನ್ನ ಹತ್ರ. ಅವಳದು ಹೇಳಿ ಮುಗಿಯದ ಕಥೆ. ಕಣ್ಣೀರಿನ ವ್ಯಥೆ..."

ಊಟ ಮುಗಿದ ನಂತರ ಶಿವಮೂರ್ತಿ ಪರಮೇಶ್ವರಯ್ಯನವರನ್ನು, ತನ್ನ ತಂದೆ ತಾಯಿಯನ್ನೂ ಒಳಕೋಣೆಗೆ ಕರೆದ. ಹಾಗೇ ಆಶಾಳನ್ನೂ ಅಲ್ಲಿಗೇ ಬರುವಂತೆ ತಿಳಿಸಿದ. ಇಷ್ಟು ರಹಸ್ಯವಾಗಿ ಮಾತನಾಡುವುದೇನಿದೆ ಎಂದು ಚಕಿತಗೊಂಡರು ಎಲ್ಲರೂ. ಶಿವಮೂರ್ತಿ ಮಾತನ್ನು ಹೇಗೆ ಪ್ರಾರಂಭಿಸಬೇಕು ಎನ್ನುವುದು ತಿಳಿಯದೆ ಹತ್ತು ನಿಮಿಷ ಮೌನವಾಗಿ ಕೋಣೆಯಲ್ಲಿಯೇ ತಿರುಗಿದ ಅತ್ತ ಇತ್ತ.

"ನೋಡಿ...." ಬೆರಳೆತ್ತಿ ಪರಮೇಶ್ವರಯ್ಯನವರತ್ತ ತಿರುಗಿದ, "ನಿಮ್ಮ ಆಶಾಳನ್ನು ನಾಳೆ ಬೆಳಿಗ್ಗೆಯೇ ಬಸ್ಸಿಗೆ ಕರ್‍ಕೊಂಡು ಹೋಗಿಬಿಡಿ. ಹೇಗಿದ್ದರೂ ಹೆರಿಗೆ ನಿಮ್ಮಲ್ಲಿಯೇ. ಅವಳೂ ಇನ್ಮೇಲೆ ಉಳಿದುಬಿಡಲಿ ನಿಮ್ಮಲ್ಲಿ."

"ಇದೇನೋ ನಿನ್ನ ಅವಸರ?" ರಂಗಮ್ಮ ತನ್ನ ಕುರುಡು ಕಣ್ಣುಗಳನ್ನು ಅತ್ತಿತ್ತ ಹೊರಳಿಸುತ್ತ ಅಂದರು, "ಏನೊಂದೂ ಸಡಗರ, ವಿಶೇಷ ಅಡಿಗೆ ಮಾಡದೆ ಬಸುರಿಯನ್ನು ಕಳುಹಿಸಿಕೊಡಬೇಕೇ?"

"ಇವಳ ರೂಪಕ್ಕೆ ಸಡಗರ!" ಮೂರ್ತಿ ತುಟಿ ಕಚ್ಚಿದ, "ಠಕ್ಕು ಪ್ರೀತಿ... ಮರ್ಯಾದೆ. ಹೊಲಸು ತುಂಬಿದ ದೇಹ, ಮನಸ್ಸು. ಓಹ್... ಎಲ್ಲಾ ಬೂಟಾಟಿಕೆ. ಮನೆಗೆ ಕಳಂಕದ ಮಸಿಯೆಳೆದವಳಿಗೆ ಇನ್ನು ಸಂಭ್ರಮದ ಉಪಚಾರ ಬೇಕೇ?!"

ಅವನ ಕೆಂಪಾಗುತ್ತಿರುವ ಮುಖದತ್ತ ನೋಡಿದಳು ಆಶಾ. ಅಯ್ಯೋ, ನನ್ನ ಮತ್ತು ಲೋಹಿತಾಕ್ಷನ ಸಂಬಂಧದ ಸುಳಿವು ತಿಳಿದುಹೋಗಿದೆ ಇವನಿಗೆ. ಆದರೆ ನಾನೇಕೆ ಹೆದರಬೇಕು? ಎಂದಾದರೂ ಒಂದು ದಿನ ತಿಳಿಯಲೇ ಬೇಕಿತ್ತು. ಆದರೂ ನನ್ನ ಮನದಲ್ಲೇಕೆ ಈ ಭೀತಿ? ಲೋಹಿತಾಕ್ಷ ಮನೆಗೆ ಕೀಲಿ ಹಾಕಿಕೊಂಡು ಹೊರಟುಹೋಗಿ ಎರಡು ದಿನಗಳಾದವು. ಇನ್ನೂ ಬಂದಿಲ್ಲ. ಅವನ ಆಶ್ರಯ ನನಗೆ ಸಿಗದಿದ್ದೀತೇ? ಅದೇಕೆ ನನ್ನ ಧೈರ್ಯ ಹೀಗೆಂದು ಕುಗ್ಗಿ ಕುಗ್ಗಿ ಹೋಗುತ್ತಾ ಇದೆ....?

ಆಶಾ ಮೆಲ್ಲನೆ ಅಲ್ಲಿಂದೆದ್ದು ಹೊರಗೆ ಹೊರಟಾಗ ಅಬ್ಬರಿಸಿದ ಮೂರ್ತಿ. "ಇಲ್ಲೇ

ಇರು. ಮಾಡಬಾರದ ಕೆಲಸಗಳನ್ನು ಮಾಡಿ ಈಗ ಅಡಗಿ ಕುಳಿತುಕೊಳ್ಳುವ ನಟನೆ ನಿನ್ನದು.... ನಿನ್ನ ಆಟವೆಲ್ಲ ತಿಳಿದಿದೆ ಬಿಡು..."

ಆದರೆ ಅವಳು ಅವನತ್ತ ನೋಡದೆ ಹೆಜ್ಜೆ ಮುಂದಿರಿಸಿದಾಗ ಅವಳತ್ತ ಬಗ್ಗಿ ರಟ್ಟೆ ಹಿಡಿದು ಬಲವಂತವಾಗಿ ಕುಳ್ಳಿರಿಸಿದ ಗೋಡೆಯ ಬದಿಯಲ್ಲಿ. "ಕೂತ್ಕೋ ಇಲ್ಲಿಯೇ! ಲೋಹಿತಾಕ್ಷ ನಿನಗಾಗಿ ಕಾಯ್ತಾ ಇದ್ದರೆ ಕಾದುಕೊಂಡಿರಲಿ ಬಿಡು.... ಮೇಲೆ ನೋಡಿದರೆ ಮಹಾ ಪತಿವ್ರತೆ. ಒಳಗೋ ಸೂಳೆಯ ಅವತಾರ!"

"ಬಾಯ್ಮುಚ್ಚು ಮೂರ್ತಿ" ತಮ್ಮಯ್ಯ ಎದ್ದು ನಿಂತರು, "ನೀನೇನು ಮಾತನಾಡ್ತಾ ಇದ್ದಿಯೋ ಇಲ್ಲಿ. ನನ್ನ ಸೊಸೆ ಎಂದರೆ ಅಪ್ಪಟ ಚಿನ್ನದ ತುಂಡು."

"ನಿಜ ಅಪ್ಪಾ, ಆದರೂ ಚಿನ್ನದ ತುಂಡಿನ ಮೇಲೆಲ್ಲ ಕೊಳೆ ಚೆನ್ನಾಗಿ ಕೂತುಬಿಟ್ಟಿದೆ. ಇನ್ನು ಹ್ಯಾಗೆ ಅದನ್ನು ಎತ್ತಿ ತಲೆ ಮೇಲಿಟ್ಟು ಪೂಜಿಸಲಿ? ಇನ್ನು ಹ್ಯಾಗೆ ಆ ಚಿನ್ನವನ್ನು ನನ್ನದು ಅಂತ ಹೆಮ್ಮೆಯಿಂದ ಹೇಳಿಕೊಳ್ಳಲಿ.... ಇವಳೇ... ಲೋಹಿತಾಕ್ಷನ ಪ್ರೇಯಸಿ ಅಪ್ಪಾ... ಎಂಜಲು ಗಡಿಗೆ!"

ಅಲ್ಲಿ ಕುಳಿತ ಮೂವರೂ ಅವಾಕ್ಕಾದರು. ನಿಜವೇ ಈ ವಿಷಯ? ಯಾರಿಗೂ ತಿಳಿಯಲಿಲ್ಲವೇಕೆ? ರಂಗಮ್ಮ ಆಚೆ ಈಚೆ ಮುಖ ತಿರುಗಿಸುತ್ತ ಅವನ ಮಾತನ್ನು ಅಲ್ಲಗಳೆದು "ನಿನ್ನ ಕಿರಿಗೆ ಯಾರೋ ಹೇಳಿದ ಚಾಡಿ ಇದು" ಎಂದರು.

"ನಾನೂ ಈ ಮಾತನ್ನು ಮೊದಲಿಗೆ ನಂಬಲಿಲ್ಲ ಅಮ್ಮಾ. ಲೋಹಿತಾಕ್ಷನ ಮೇಲಾಗಲೀ, ಇವಳ ಮೇಲಾಗಲೀ ನನಗೆ ಕಿಂಚಿತ್ ಅನುಮಾನವೂ ಬಂದಿರಲಿಲ್ಲ. ನನ್ನ ಒಳ್ಳೆಯತನ, ಸಾಧು ಬುದ್ಧಿ ನನಗೇ ಮುಳ್ಳಾಯಿತು. ವಾರವೆಲ್ಲ ಅವನೊಡನೆ ಚೆಲ್ಲಾಟ. ನಾನು ಮನೆಗೆ ಬಂದಾಗ ಪ್ರೀತಿಯ ನಟನೆ. ಅವರವರಲ್ಲಿ ಪತ್ರ ವ್ಯವಹಾರ, ಕಾಡು ಬೆಟ್ಟಗಳಲ್ಲಿ ಅಲೆದಾಟ, ಸುತ್ತಾಟ... ತ್ಲೂ ತ್ಲೂ.... ನಾಚಿಗ್ಗೇಡು."

"ಯಾರ್‍ಹೇಳಿದರು ನಿನಗೆ?" ತಗ್ಗಿದ ಸ್ವರದಲ್ಲಿ ಕೇಳಿದರು ಪರಮೇಶ್ವರಯ್ಯ.

"ಕೆಲಸದಾಳು ಜಬ್ಬಣ್ಣ. ಮೊನ್ನೆ ಕುಮಟೆಯಿಂದ ಮನೆಗೆ ಬರ್‍ತಾ ಇದ್ದಾಗ ದೊಡ್ಡ ರಸ್ತೆಯ ಹತ್ತಿರವೇ ಸಿಕ್ಕಿದ್ದ ಅವನು. 'ಹರೀನ್ ಗುಡ್ಡದ ಅಯ್ಯ ಬಸ್ಸು ಹತ್ಕಂಡು ಹೋದ್ರು. ಇನ್ನು ಅಮ್ಮಾವ್ರಿಗೆ ಬೇಸರ... ಜೊತೆ ಇಲ್ಲ' ಎಂದ ನನ್ನತ್ತ ನೋಡಿ ನಕ್ಕು. ಅವನ ಮಾತು ಅರ್ಥವಾಗದೆ ಬೈಕನ್ನು ಬದಿಗೆ ನಿಲ್ಲಿಸಿ 'ಏನೋ, ಏನ್ಹೇಳಿದೆ?' ಎಂದು ಕೇಳಿದೆ. 'ಬಿಡಿ ಅಯ್ಯ. ಅವರವರ ಪ್ರೇಮ ವ್ಯವಹಾರದಲ್ಲಿ ನಮಗ್ಯಾಕೆ ಅಧಿಕ ಪ್ರಸಂಗ. ಕಾಲ ಬಂದದೆ ಹೀಂಗೆ. ಇರ್‍ಲಿ ಇರ್‍ಲಿ... ಇಬ್ಬರಲ್ಲಿಯೂ ನಡೀತಾ ಇತ್ತು ಆಟ... ನಡೀಲಿ ನಡೀಲಿ....' ಎಂದ. ಅವನ ಈ ಬೆಪ್ಪುತನದ ಮಾತನ್ನು ಮೊದಲು ನಂಬಲಿಲ್ಲ ನಾನು. ಅವನ ರಟ್ಟೆ ಹಿಡಿದು ನಿಲ್ಲಿಸಿ ಕೇಳಿದೆ... ಅವನೋ ಯಾವ ಲೋಕದಲ್ಲಿದ್ದನೋ... ಹೆದರಿಹೋದ.... ಅವನ ಬಾಯಿಯಿಂದಲೇ ಕೇಳಿ ತಿಳಿದುಕೊಂಡೆ ಎಲ್ಲವನ್ನೂ."

ಕೋಣೆಯಲ್ಲಿ ಮೌನವಾವರಿಸಿತು. ಮೂರ್ತಿ ಆಚೆ ಈಚೆ ತಿರುಗುತ್ತ ಮುಷ್ಟಿ ಬಿಗಿದು ಅಂದ, "ಲೋಹಿತಾಕ್ಷನನ್ನು ಉಪಚರಿಸಿ ಮನೆಯವರಂತೆ ನೋಡಿಕೊಂಡದ್ದಕ್ಕೆ ಇದೇ ನಮಗೆ ಆದ ಆಘಾತ? ಅವನು ಕೊಟ್ಟ ಪೆಟ್ಟು ಸಹಿಸಲಸಾಧ್ಯ. ಇವಳಿಗೆ ಯಾವ

ಸುಖಕ್ಕೆ ಕಡಿಮೆಯಾಗಿತ್ತು ಇಲ್ಲಿ... ತಲೆತಲಾಂತರಗಳಿಂದಲೂ ಹೆಸರು ಪಡೆದ ವಂಶದ ಕೀರ್ತಿ ಮಣ್ಣುಗೂಡಿತು."

"ನೀನು ಕೇಳಿದ ಸುದ್ದಿ ಸುಳ್ಳು..." ಪರಮೇಶ್ವರಯ್ಯ ಆಶಾಳತ್ತ ನೋಡಿದರು, "ಅವಳು ಇಂತವಳಲ್ಲ!"

"ಪಾಪ, ನಿಮ್ಮ ಮುದ್ದಿನ ಸೊಸೆ!" ವ್ಯಂಗ್ಯವಾಗಿ ನಕ್ಕ ಶಿವಮೂರ್ತಿ, "ಅವಳ ಗುಣ ಎಷ್ಟಿದ್ದರೂ ನಿಮಗೆ ಕಪ್ಪಾಗಿ ಕಾಣಲಾರದು. ಪ್ರತಿನಿತ್ಯ ಅವನೊಂದಿಗೆ ಭೇಟಿ, ಅವನೊಡನೆ ಸರಸ. ಅಪ್ಪಾ, ಜಬ್ಬಣ್ಣನಿಗೆ ಈ ವಿಷಯ ತಿಳಿದಿದ್ದರೂ ಆ ದ್ರೋಹಿ ಒಂದಿನವೂ ಹೇಳಲೇ ಇಲ್ಲ ನಮ್ಮ ಹತ್ರ."

"ಎಲ್ಲಿದ್ದಾನೆ ಜಬ್ಬಣ್ಣ?" ಗುಡುಗಿನಂತೆ ಗುಡುಗುತ್ತ ಎದ್ದು ನಿಂತರು. ತಮ್ಮಯ್ಯ.... "ಈಗಲೇ ಕರ್‍ಕೊಂಡು ಬರ್ತೇನೆ" ಎಂದಂದು ಹೊರಗೆ ನಡೆದರು. ಮತ್ತೊಂದು ಕ್ಷಣದಲ್ಲಿ ಅವನನ್ನು ಎಳೆದುಕೊಂಡೇ ಬಂದರು ಒಳಕೋಣೆಗೆ.

"ಹೂಂ, ಚಿಕ್ಕ ಅಯ್ಯ ಕೇಳಿದ್ದಕ್ಕೆಲ್ಲಾ ಸರಿಯಾಗಿ ಉತ್ತರಿಸು. ನಮ್ಮ ಸೊಸೆ ಲೋಹಿತಾಕ್ಷನ ಸಂಗಡ ಇದ್ದದ್ದು ಹೌದೋ?"

ಹೌಹಾರಿಹೋದ ಮುದುಕನ ಶರೀರ ನಡುಗತೊಡಗಿತು ತರಗೆಲೆಯಂತೆ. ಕಣ್ತೆರೆದು ಕುಳಿತ ಆಶಾ ದೀನಳಾಗಿ ನೋಡಿದಳು ಅವನತ್ತ. ಆ ಕಣ್ಣುಗಳಲ್ಲಿನ ಯಾಚನೆಯನ್ನು ಕಂಡು ಅವನೂ ಅರ್ಧ ಜೀವವಾಗಿ ಹೋದ. ಆಶಾ ಅಲ್ಲಿಂದೇಳಲು ಪ್ರಯತ್ನಿಸಿದಾಗ ಮೂರ್ತಿ ಅವಳ ಕೂದಲನ್ನು ಹಿಡಿದೆಳೆದು "ಏಯ್... ಆಚೆ ಈಚೆ ಹೋದರೆ ಸಿಗ್ದುಹಾಕ್ತೇನೆ ನೋಡ್ಕೊ, ಸರಿಯಾಗಿ ಮುಖ ಎತ್ತಿ ಕುಳಿತುಕೋ" ಎಂದ ಕೋಪದಲ್ಲಿ.

"ಅವಳ ಮೈಗೆ ಕೈ ಹಚ್ಚಬೇಡ" ಮಗನನ್ನು ಈಚೆಗೆಳೆದರು ತಮ್ಮಯ್ಯ. "ನಡೆದುದನ್ನೆಲ್ಲ ಜಬ್ಬಣ್ಣ ಹೇಳಲಿ...."

ಜಬ್ಬಣ್ಣ ಕೈ ಹಿಸುಕಿಕೊಂಡ... ದೇಹವನ್ನು ತೀರಾ ಬಳುಕಿಸುತ್ತ "ಎಂತದೂ ಇಲ್ಲೆ ಅಯ್ಯ.... ನಾನು ಆ ದಿನ ಯಾವುದೋ ಗ್ಯಾನದಾಗೆ ಇದ್ದೆ... ಹುಚ್ಚುಚ್ಚು ಹರಟೆ ಮಾಡ್ದೆ...." ಎಂದ.

"ಹ್ಞಂ...." ಮೂರ್ತಿ ಅವುಡುಗಚ್ಚಿ ಅಲ್ಲೇ ತೂಗುಹಾಕಿದ್ದ ಬೆಲ್ಟನ್ನು ಕೈಗೆತ್ತಿಕೊಂಡ. "ನಿಜ ಬೊಗಳು ನಾಯೀ. ಮೊನ್ನೆ ಈ ಬೆಲ್ಟಿನಿಂದ ನಿನ್ನ ಬೆನ್ನಮೇಲೆ ಹತ್ತು ಸಾರೆ ಬಾರಿಸಿದ್ದೆ. ಆಗ ನಿಜ ಸಂಗತಿ ಹೊರಗೆ ಬಂದಿತ್ತು.... ಈಗ ಇಪ್ಪತ್ತು ಸಾರೆ ಬಾರಿಸ್ತೇನೆ ನೋಡಿಕೋ...."

ಬೆಲ್ಟನ್ನು ನೋಡಿ ಜೀವ ಹೋದವರಂತೆ "ಅಯ್ಯಮ್ಮೋ" ಎಂದರಚಿದ ಆ ಮುದುಕ.

"ಆಶಾ ಮತ್ತು ಲೋಹಿತಾಕ್ಷರ ಬಗ್ಗೆ ನಿನಗೇನು ತಿಳಿದಿದೆಯೋ ಅದನ್ನು ಇದ್ದ ಹಾಗೇ ಹೇಳಿಬಿಡು. ಎಲ್ಲಿ, ಬ್ರಹ್ಮಲಿಂಗೇಶ್ವರನ ಮೇಲೆ ಆಣೆಹಾಕಿ ನನ್ನ ಕೈಮೇಲೆ

ಪ್ರಮಾಣ ಮಾಡಿ ಹೇಳು ನೋಡೋಣ" ಎಂದಂದು ಶಿವಮೂರ್ತಿ ತನ್ನ ಬಲಹಸ್ತವನ್ನು ಚಾಚಿದ ಅವನೆದುರು.

ಕಣ್ಣು ಕತ್ತಲೆಯಿಟ್ಟಿತು ಜಬ್ಬಣ್ಣನಿಗೆ. ಮಾರ್ಣಕಟ್ಟೆಯ ಯಕ್ಷಬ್ರಹ್ಮಲಿಂಗೇಶ್ವರ.... ಮಾತಿಗೆ ತಪ್ಪದ ಆ ದೇವರ ಮೇಲೆ ಸುಳ್ಳು ಪ್ರಮಾಣ? ಆಣೆಯಿಟ್ಟು ಸುಳ್ಳು ಹೇಳಲೇ? ಚಿಕ್ಕಂದಿನಿಂದಲೂ ಭಕ್ತಿಯಿಂದ, ನಂಬಿಕೆಯಿಂದ ನಡೆದುಕೊಳ್ಳುತ್ತಿರುವ ಪ್ರತಿವರ್ಷವೂ ಕಾಣಿಕೆಯನ್ನೊಪ್ಪಿಸಿ ಆ ದೇವರ ಮೇಲೆಯೇ ನನ್ನೆಲ್ಲ ಭಾರವನ್ನೊಪ್ಪಿಸುವ ನಾನು ಸುಳ್ಳನ್ನು ಹೇಳಲೇ? ಆ ದೇವರು ನನ್ನನ್ನು ಸುಮ್ಮನೆ ಬಿಟ್ಟಾರೆಯೇ?

ಶಿವಮೂರ್ತಿ ಮತ್ತೊಮ್ಮೆ ಅಬ್ಬರಿಸಿದಾಗ ಅವನು ನಡುಗುತ್ತ ತನ್ನ ಬಲಹಸ್ತವನ್ನು ತನ್ನ ಚಿಕ್ಕ ಅಯ್ಯನ ಕೈಯ್ಯ ಮೇಲಿರಿಸಿ "ಯಕ್ಷಬ್ರಹ್ಮಲಿಂಗೇಶ್ವರ ದೇವರ ಮೇಲೆ ಆಣೆ ಹಾಕಿ ನಿಜ ಹೇಳ್ತೇನೆ." ಎಂದುಬಿಟ್ಟ!

ಅಯ್ಯೋ, ಯಾವ ವಿಷಯ ಇಷ್ಟು ಸಮಯಗಳಿಂದಲೂ ನಂಬಿಕೆಯ ಆಳೊಬ್ಬನಿಂದ ಅತ್ಯಂತ ಗೌಪ್ಯವಾಗಿತ್ತೋ ಆ ವಿಷಯ ಇಂದು ಮೊದಲ ಬಾರಿಗೆ ಬೆಳಕಿಗೆ ಬಂದು ಆ ಕೋಣೆಯಲ್ಲಿ ನೂರು ಸಿಡಿಲುಗಳ ಘರ್ಜನೆಯನ್ನು ಎಬ್ಬಿಸಿ ಎಲ್ಲರ ಮನದೊಳಗೂ ಕತ್ತಲೆಯನ್ನು ಹರಡಿಸಿತು. ಹೇಳಿದನು ಅಲ್ಲೇ ನೆಲಕ್ಕೆ ಕುಸಿದು ಹಣೆಯನ್ನು ತಟ್ಟಿಕೊಂಡು, "ತಪ್ಪಾಯ್ತು ಅಮ್ಮಾ ನಾ ದುಷ್ಟ, ಬುದ್ಧಿಹೀನ" ಎಂದು ಅಳತೊಡಗಿದ.

"ನಿಲ್ಲಿಸು ನಿನ್ನ ವೇಷ.... ಇನ್ನೇನಿದೆ ಹೇಳು."

"ಆಯ್ತು ಅಯ್ಯ, ಎಲ್ಲಾ ಹೇಳ್ದೆ. ಈ ನಿಮ್ಮ ನೆಲದಲ್ಲಿ ಇಪ್ಪತ್ತಿಗೆ, ಈ ಮನೆ ಈ ಅನ್ನದ ಋಣ ತಿಂಬತ್ತಿಗೆ. ಈ ಆಕಾಶ, ನೆಲ, ಸೂರ್ಯ ಚಂದ್ರರ, ದಿಕ್ಕುಗಳ ಸಾಕ್ಷಿಯಾಗಿಯೂ ನಾ ಸುಳ್ಳು ಹೇಳ್ಲಿಲ್ಲ.... ಎಲ್ಲಾ ಹೇಳಿ ಮುಗಸ್ದೆ."

"ಸಾಕು ನಿನ್ನ ರಗಳೆ... ನಡೆ ಹೊರಗೆ" ತಮ್ಮಯ್ಯ ಹೇಳಿದಾಗ ಗುಸುಗುಡುತ್ತ ಬಗ್ಗಿಕೊಂಡು ಹೊರಗೆ ನಡೆದ ಜಬ್ಬಣ್ಣ. ಅಲ್ಲಿಯೇ ಇದ್ದ ಆಶಾಗೆ ಮೂರ್ಛೆ ಬರುವಂತಾಯಿತು. ಒಂದೇ ಹಾಗೆ ಕಣ್ಣು ಕೆಕ್ಕರಿಸಿ ನೋಡುತ್ತಿದ್ದಾರೆ ಮೂರ್ತಿ, ಪರಮೇಶ್ವರಯ್ಯ, ತಮ್ಮಯ್ಯ. ಈ ಕೋಣೆಯಿಂದ ಹೊರಗೆ ಹೋಗುವುದೂ ಅಸಾಧ್ಯವಾಗಿದೆ ಅವಳಿಗೆ.

"ತಿಳಿಯಿತೇ ಅಪ್ಪಾ..." ಮೂರ್ತಿಯೇ ಹೇಳಿದ, "ಮೊನ್ನೆಯಿಂದ ನನ್ನ ಮನದಲ್ಲಾಗುವ ಸಂಕಟವನ್ನು ನೀವ್ಯಾರೂ ಅರಿಯಲಿಲ್ಲ. ನನ್ನ ಕೈ ಹಿಡಿದವಳು ಇನ್ನೊಬ್ಬ ಗಂಡಸಿನೊಂದಿಗೆ ಚೆನ್ನಾಟ! ಅದಕ್ಕೆ ಇತ್ತೀಚಿನ ದಿನಗಳಲ್ಲಿ ಇವಳು ಯಾಕೋ ಒಂದು ತರಹವಾಗಿದ್ದಳಲ್ಲ.... ಆಹ್... ಈಗ ತಿಳಿಯಿತಲ್ಲ..."

"ಲೋಹಿತಾಕ್ಷ ಎಲ್ಲಿ? ಅವನನ್ನೂ ಇಲ್ಲಿಗೇ ಕರ್ಕೊಂಡು ಬಾ.... ಸೊಸೆಯೆಂದು ಇವಳಿಗೆ ಮುದ್ದು ಮಾಡಿದ್ದು ಜಾಸ್ತಿಯಾಯ್ತು." ಭುಸುಗುಡುತ್ತ ಅಂದರು ರಂಗಮ್ಮ.

"ಅವನೆಲ್ಲಿದ್ದಾನೆ? ಎಲ್ಲಿಗೋ ಹೋಗಿದ್ದಾನೆ ಕೀಲಿ ಹಾಕಿಕೊಂಡು. ಮನೇಲಿದ್ದ ಸಾಮಾನುಗಳೂ ಇಲ್ಲ.... ತಪ್ಪು ಅವನದಲ್ಲ.... ಇವಳದು." ಶಿವಮೂರ್ತಿ ಪರಮೇಶ್ವರಯ್ಯನವರತ್ತ ನೋಡುತ್ತ ಹೇಳಿದ, "ನಿಮ್ಮನ್ನು ಟೆಲಿಗ್ರಾಂ ಕೊಟ್ಟು ಯಾಕೆ

ಕರೆಯಿಸಿದೆ ಗೊತ್ತೇ? ಈ ಕಳಂಕಿನಿಯನ್ನು ಇನ್ಮೇಲೆ ಮನೇಲಿರಿಸಿಕೊಳ್ಳಲಾರೆ ನಾನು. ಕರ್‍ಕೊಂಡು ಹೋಗಿಬಿಡಿ. ಇವತ್ತಿಗೆ ಮುಗಿಯಿತು ನನ್ನ ಮತ್ತು ಅವಳ ಸಂಬಂಧ."

"ಮೂರ್ತಿ..." ಕೂಗಿದರು ತಮ್ಮಯ್ಯ.

"ಹೌದಪ್ಪ, ನಾಯಿ ಮುಟ್ಟಿದ ಎಂಜಲು ಗಡಿಗೆ ಯಾರಿಗೆ ಬೇಕು. ಅದಕ್ಕಿರುವ ಸ್ಥಾನ ತಿಪ್ಪೆಗುಂಡಿ! ಕಾಂತಿ ಸತ್ತು ಹೋದಾಗಲೇ ನನ್ನ ಸಮಾಧಾನ ಹೊರಟುಹೋಗಿದೆ. ಈಗಂತೂ ಮನಸ್ಸು ಕಾದ ಕುಲುಮೆ."

"ಏನೋ ವಿಷಗಳಿಗೆಯಲ್ಲಿ ಅವನ ಸ್ನೇಹವಾಗಿರಬಹುದು. ಮರೆತುಬಿಡು." ನಡುಗುವ ಸ್ವರದಲ್ಲಿ ಅಂದರು ಪರಮೇಶ್ವರಯ್ಯ.

"ಇರಬಹುದು. ಆದರೆ ಕ್ಷಮೆ ನನ್ನ ಹತ್ತಿರವಿಲ್ಲ! ಸುಖ, ಐಶ್ವರ್ಯ, ನನ್ನಂತಹ ಸುಂದರ ಪತಿಯಿರುವಾಗಲೂ ಏನೂ ಇಲ್ಲದ ದರಿದ್ರನೊಬ್ಬನನ್ನು ಪ್ರೀತಿಸಿದಳಲ್ಲವೇ.... ಹೂಂ, ನನಗೇನಂತೆ, ಹೊರಟುಹೋಗ್ಲಿ ಅವನ ಜೊತೆಗೆ."

"ಇದೇನು ನಿನ್ನ ಮಾತು?" ತಮ್ಮಯ್ಯ ರಂಗಮ್ಮ ಒಟ್ಟಾಗಿ ಪ್ರಶ್ನಿಸಿದಾಗ ಅವನೂ ಅಷ್ಟೇ ಶಾಂತನಾಗಿ ಹೇಳಿದ,

"ನಾನೇನೂ ಅವಳನ್ನು ಯಾವ ರೀತಿಯ ಹಿಂಸೆಗೂ ಒಳಪಡಿಸುವವನಲ್ಲ. ಅವಳನ್ನು ಬೈಯ್ಯುವದೂ ಇಲ್ಲ. ಅವಳಿಗೆ ಯಾರ ಜೊತೆ ಇಷ್ಟವೋ ಅವರ ಜೊತೆಯೇ ಹೊರಟುಹೋಗಲಿ! ಅಥವಾ ನಿಮ್ಮ ಮುದ್ದಿನ ಈ ಸೊಸೆಯನ್ನು ನೀವೇ ಕರ್‍ಕೊಂಡು ಹೋಗಿಬಿಡಿ ನಿಮ್ಮೂರಿಗೆ..."

"ಹಾಂ.... ಅವಳ ಬಾಳಿನ ಗತಿಯೇನು?" ಗಂಟಲು ಕಟ್ಟಿ ಬಂದಿತು ಪರಮೇಶ್ವರಯ್ಯನವರಿಗೆ.

"ಅವಳ ಭವಿಷ್ಯ ಅವಳ ಕೈಯಲ್ಲೇ ಇದೆ. ಅವಳು ಮಾಡಿದ ತಪ್ಪಿಗೆ ಅವಳೇ ಹೊಣೆ. ಅದಕ್ಕೆ ಹೇಳ್ತಾರಲ್ಲ (ತಂದೆಯತ್ತ ತಿರುಗಿ) ಕುಲ ನೋಡಿ ಹೆಣ್ಣು ತಾ ಎಂದು..."

"ಅಂದರೆ ಏನಾಗಿತ್ತು ಅವಳಿಗೆ?"

"ಎಷ್ಟಿದ್ದರೂ ರಕ್ತಗುಣ. ತಾಯಿಯಂತೆ ಮಗಳು... ಹೀಕ್..."

ಅವನ ಮಾತು ಪೂರ್ಣವಾಗುವ ಮೊದಲು ಬಿರುಗಾಳಿಯಂತೆ ಕೋಣೆಯಿಂದ ಹೊರಟುಹೋದಳು ಆಶಾ. ತಮ್ಮಯ್ಯನವರು ಎಲ್ಲವನ್ನೂ ತಿಳಿದುಕೊಂಡರಾದರೂ ಸೊಸೆಯ ಅಪಾರ ನೋವಿನ ಮುಖ, ಆ ಪ್ರಶಾಂತ ಗಂಭೀರ ಮೌನವನ್ನು ಕಂಡು.... ಇದ್ದಕ್ಕಿದ್ದಂತೆ ಅವಳು ತನ್ನೆರಡೂ ಕಣ್ಣುಗಳನ್ನು ಮುಚ್ಚಿಕೊಂಡು ಹೊರಗೆ ಹೋದುದನ್ನು ಕಂಡು "ಅಯ್ಯೋ" ಎಂದುಕೊಂಡರು. ತನ್ನ ಮನೆತನದಲ್ಲಿ ಈವರೆಗೂ ಇಂತಹ ಪ್ರಸಂಗ ನಡೆದೇ ಇಲ್ಲ. ಹೀಗಿರುವಾಗ ಮನೆತನಕ್ಕೆ ಅಪಕೀರ್ತಿ ತಂದ ಹೊಣೆ ಅವಳದಾಗಿದ್ದರೂ, ಅವಳ ಮೇಲೆ ಸಹಜವಾಗಿ ಅವರು ಕೋಪಗೊಂಡಿದ್ದರೂ ಒಳಮನಸ್ಸು ನುಡಿಯುತ್ತಲೇ ಇತ್ತು. "ತಪ್ಪು ಅವಳದಲ್ಲ" ಎಂದು.

"ಹಿಂದಿನದನ್ನು ಮರೆತುಬಿಡೋಣ. ಇನ್ನು ಇಂತಹದನ್ನು ಮಾಡಬೇಡವೆಂಬ ಬುದ್ಧಿ ಹೇಳೋಣ" ಎಂದರು ಮಗನಿಗೆ.

“ಅದೆಂದಿಗೂ ಸಾಧ್ಯವಿಲ್ಲ”

“ಈಗವಳನ್ನು ತ್ಯಜಿಸಿದರೆ ಮನೆಯ ಗೌರವ ಇನ್ನೂ ಅಳಿದು ಹೋಗುತ್ತೆ.”

“ಗೌರವ, ಲಜ್ಜೆಯಿಲ್ಲದ ಹೆಂಗಸನ್ನು ಈ ಮನೆಯಲ್ಲೆಂದಿಗೂ ಇರಿಸಿಕೊಳ್ಳಬಾರದು... ಇದು ಖಂಡಿತ.”

“ತನ್ನ ವರ್ತನೆಯಿಂದ ಅವಳಿಗೂ ಪಶ್ಚಾತ್ತಾಪವಾದೀತು. ಪಶ್ಚಾತ್ತಾಪ ಪಟ್ಟ ವ್ಯಕ್ತಿ ತನ್ನ ಪಾಪವನ್ನು ಕಳೆದುಕೊಳ್ಳುತ್ತಾನೆ. ಇನ್ಮೇಲೆ ಒಬ್ಬರಿಗೊಬ್ಬರು ಹೊಂದಿಕೊಂಡಿರಿ” ಎಂದರು ಪರಮೇಶ್ವರಯ್ಯ.

“ಹೇಗೆ ಹೊಂದಿಕೆಯಾದೀತು?” ಮೂರ್ತಿ ಪುನಃ ರೋಷದಿಂದ ಭುಸುಗುಟ್ಟಿದ, “ಅವಳ ತಾಯಿ ಗಂಡ ಸತ್ತ ಮೇಲೆ ಇನ್ನೊಬ್ಬನ ಸಂಗಡ ಓಡಿಹೋದಳು. ಇವಳು ಗಂಡ ಇರುವಾಗಲೇ ಇನ್ನೊಬ್ಬನ ಜೊತೆ ಮಜಾ ಮಾಡಿದ್ಲು. ಇಂಥವಳ ಜೊತೆ ಪ್ರೀತಿ, ಪ್ರೇಮದಿಂದ ಇರಬೇಕೇ? ಕರುಣೆ, ಆತ್ಮೀಯತೆ ತೋರಬೇಕೇ? ಇವಳು ನನ್ನವಳು ಎಂಬ ಅಭಿಮಾನದಿಂದ ಹೇಳಿಕೊಳ್ಳಬೇಕೇ?”

ಕೋಣೆಯಲ್ಲಿದ್ದ ಉಳಿದ ಮೂವರು ಸ್ತಬ್ಧರಾಗಿಹೋದರು ಒಂದು ಕ್ಷಣ.

“ನನ್ನಿಂದ ಇದಾವುದೂ ಸಾಧ್ಯವಿಲ್ಲ. ನಿಮ್ಮ ಮನೆಯಲ್ಲಿ ಬೆಳೆದ ಹುಡುಗಿಯನ್ನು ಧಾರೆ ಎರೆದುಕೊಟ್ಟಿದ್ದೀರಿ ನೀವು. ಇನ್ನು ಅವಳನ್ನೇ ಕರೆದುಕೊಂಡು ಹೋಗಿ.... ಹೂಂ, ಅಪ್ಪಾ, ಇನ್ಮೇಲೆ ಲೋಹಿತಾಕ್ಷ ಬಂದರೆ ಆಳುಗಳಿಂದ ಹೊಡೆದು ಕಳುಹಿಸಿಬಿಡು. ಉಂಡ ಮನೆಗೆ ದ್ರೋಹ ಬಗೆದ ನಾಯಿ...!” ಎಂದವನೇ ಕೋಣೆಯಿಂದ ತಾನೂ ಹೊರಟುಹೋದ ಹೊರಗೆ.

ಕೋಣೆಯಲ್ಲಿ ಮತ್ತೆ ಮೌನ ಇಣುಕಿತು. ತಮ್ಮಯ್ಯನವರು ಮೆಲ್ಲನೆ ಎದ್ದು ಹೆಂಡತಿಯ ಕೈ ಹಿಡಿದುಕೊಂಡು ಹೊರಗೆ ಹೊರಟು ಹೋದಾಗ ಪರಮೇಶ್ವರಯ್ಯನವರೂ ಹಿಂಬಾಲಿಸಿದರು. ಅವರನ್ನು, ಸಮಸ್ಯೆ ತಲೆತಿನ್ನುತ್ತಿತ್ತು. ತಮ್ಮ ಮುಖಕ್ಕೆ ಮಸಿ ಬಳಿದ ಅವಳನ್ನು ಮನೆಯಲ್ಲಿರಿಸಿಕೊಳ್ಳಬೇಕೇ?

ತಮ್ಮಯ್ಯನವರದು ಇದೇ ಯೋಚನೆ. ಮಗುವಿನ ತಾಯಿಯಾಗಲಿರುವ ಸೊಸೆಯ ಕತ್ತು ಹಿಡಿದು ಹೊರಗೆ ನೂಕುವುದೆಂತು? ಅಂಗಳದಲ್ಲಿದ್ದ ಮಗನಿಗೆ ಬುದ್ಧಿವಾದ ಹೇಳಿದರು. ಆದರೂ ಶಿವಮೂರ್ತಿ ತನ್ನ ನಿರ್ಧಾರವನ್ನು ಬದಲಿಸಲಿಲ್ಲ.

“ಅವನೆಂದದ್ದು ನಿಜ. ಈ ಮನೇಲಿ ಇಂತಹ ಕಳಂಕಿನಿಯನ್ನು ಇರಿಸಿಕೊಳ್ಳಬೇಕೇ? ಹೋಗಲಿ ಇವತ್ತೇ,” ರಂಗಮ್ಮ ಮಗನಷ್ಟೇ ಕೋಪದಲ್ಲಿ ಹೇಳಿದರು.

“ಯಾಕೆ ಹೋಗಬೇಕು ಅವಳು?” ಸೊಸೆಯ ಪಕ್ಷವನ್ನು ಎತ್ತಿಹಿಡಿದ ತಮ್ಮಯ್ಯ ಗುಡುಗಿದರು, “ಮೂರ್ತಿಯನ್ನು ಯಾವ ಗಳಿಗೆಯಲ್ಲಿ ಅವಳು ಮದುವೆಯಾದಳೋ ಅದೇ ಗಳಿಗೆಯಲ್ಲಿ ಈ ಮನೆಯನ್ನೂ ತುಂಬಿದ್ದಾಳೆ. ಅವಳ ತಪ್ಪು ಬಹಳ ದೊಡ್ಡದಾಗಿದ್ದರೂ ಕ್ಷಮಿಸುವಂತಹ ದೊಡ್ಡ ಗುಣ ನಮ್ಮದಾಗಬೇಕು. ಏನೇ ಆಗಿರಲಿ... ಅವಳು ನಮ್ಮಲ್ಲಿಯೇ ಇರತಕ್ಕದ್ದು.”

ತಂದೆ ಮಗನ ಚರ್ಚೆ ಬೆಳೆದೇ ಬೆಳೆಯಿತು. ಮಧ್ಯೆ ಪರಮೇಶ್ವರಯ್ಯನವರೂ ಮಾತು ಸೇರಿಸಿದರು. ಮೂರ್ತಿ ತನ್ನೆರಡೂ ಕೈಗಳಿಂದ ತಲೆಯನ್ನು ಹಿಡಿದುಕೊಳ್ಳುತ್ತ "ಆಯಿತಪ್ಪ ಆಯಿತು. ನಿಮ್ಮ ಮನಸ್ಸಿಗೆ ಹೇಗೆ ತೋಚುತ್ತೋ ಹಾಗೆ ಮಾಡಿ" ಎಂದುಬಿಟ್ಟ.

ಇಷ್ಟು ಹೇಳಿದರೆ ಸಾಕು ಎಂದುಕೊಳ್ಳುತ್ತಿದ್ದ ಪರಮೇಶ್ವರಯ್ಯ ತೃಪ್ತಿಯ ನಿಟ್ಟುಸಿರೆಳೆದರು. ತನ್ನ ಹೊಣೆ ತಪ್ಪಿತಲ್ಲ ಎಂದುಕೊಂಡಿರಬೇಕು ಮನಸ್ಸಿನಲ್ಲಿ.

ಮರುದಿನ ಬೆಳಿಗ್ಗೆ ಕಾಫಿ ಕುಡಿಯುವ ಮೊದಲೇ ಅವರು ಹೊರಟುಬಿಟ್ಟರು ಮಂಗಳೂರಿಗೆ. ಆಶಾಳೊಡನೆ ಮಾತನಾಡುವ ಮನಸ್ಸಿದ್ದರೂ ತಾನಿನ್ನು ಇಲ್ಲಿ ನಿಲ್ಲುವುದು ಸರಿಯಲ್ಲವೆಂದರಿತು ಅಂಗಳ ದಾಟಿ ಹೋಗುತ್ತಿದ್ದಂತೆ ಓಡಿಬಂದಳು ಆಶಾ.

ಆ ರಾತ್ರಿಯೂ ಅವಳು ಸರಿಯಾಗಿ ನಿದ್ರಿಸಿರಲಿಲ್ಲ. ಮುಖ ಬಾಡಿತ್ತು. ಕೆಂಪಾಗಿದ್ದವು ಕಣ್ಣುಗಳು. ಸೋದರಮಾವನ ಕಾಲು ಮುಟ್ಟಿ ನಮಸ್ಕರಿಸಿದಾಗ ಅವರು ಹನಿದುಂಬಿದ ಕಣ್ಣಳಿಂದ ಆಶೀರ್ವದಿಸಿ "ಇನ್ನಾದರೂ ಚೆನ್ನಾಗಿ ಬಾಳಲು ಕಲಿತುಕೋ" ಎಂದರು.

೧೭

ಇಲ್ಲಿಂದ ಮುಂದೆ ಪ್ರಾರಂಭವಾಯಿತು ಮಾನಸಿಕ ವ್ಯಥೆ. ಮನೆಯವರ ವ್ಯಂಗ್ಯ, ತಿರಸ್ಕಾರದ ನೋಟವನ್ನೆದುರಿಸಬೇಕಾಯಿತು. ಸೊಸೆಯೊಡನೆ ಮಾತನಾಡುವುದನ್ನೇ ಬಿಟ್ಟುಬಿಟ್ಟರು ರಂಗಮ್ಮ. ಪೃಥ್ವಿ "ಅಮ್ಮಾ", ಎಂದು ಕೂಗಿದರೂ "ಅವಳನ್ಯಾಕೆ ಕರೀತಿಯೋ... ಇಲ್ಲಿ ಅಜ್ಜಿ ಇಲ್ಲವೇ?" ಎಂದು ಬಾಯಿ ಮುಚ್ಚಿಸತೊಡಗಿದರು. ತಮ್ಮಯ್ಯ ನೇರವಾಗಿ ಸೊಸೆಯನ್ನು ನೋಡಲಿಲ್ಲ. ಎದುರಾಗಲೀ, ಹಿಂದಿನಿಂದಾಗಲೀ ದೂರಲಿಲ್ಲ ಸೊಸೆಯನ್ನು. ಆದರೆ ಅವರ ಮುಖದಲ್ಲಿ ಏನೋ ತಾತ್ಸಾರ, ಜೊತೆಯಲ್ಲಿ ಅಪಾರ ನೋವು! ಅಡಿಗೆ ಚೆನ್ನಕ್ಕನಿಗೆ ಮಾತನಾಡಲು ಹೊಸದೊಂದು ವಿಷಯ. ಮೊದಲೇ ತುರಿಸುತ್ತಿದ್ದ ನಾಲಿಗೆಯನ್ನು ಇನ್ನಷ್ಟು ತುರಿಸಿಕೊಂಡು ಹರಿತ ಮಾಡಿಕೊಂಡಾಯಿತು. ವಿಧೇಯ ಜಬ್ಬಣ್ಣ ಆಶಾಳನ್ನು ಕಂಡಾಕ್ಷಣ ತಪ್ಪಿಸಿಕೊಳ್ಳತೊಡಗಿದ. ಅಥವಾ ತಲೆ ಬಗ್ಗಿಸಲಾರಂಭಿಸಿದ. ನೀಲಿ ತನ್ನ ಹೊಸ ಮನೆಯಾದ ನಂತರ ಕೆಲಸಕ್ಕೆ ಬರುವುದೇ ಅಪರೂಪ, ಬಂದ ಸಮಯದಲ್ಲಿಯೂ ಆಶಾ ಕಾಣಸಿಗಲಾರಳು ಅವಳಿಗೆ.

ಅಂತೂ ಮನೆ ನರಕವಾಯಿತು ಆಶಾ ಪಾಲಿಗೆ. ಯಾರಿಂದಲೂ ಅನುಕಂಪದ ಮಾತಿಲ್ಲ, ಸ್ನೇಹದ ಸೊಲ್ಲಿಲ್ಲ. ಸಹೃದಯದ ಮಮತೆಯಿಲ್ಲ. ಮೂರ್ತಿ ಅವಳ ತಪ್ಪನ್ನು ಕ್ಷಮಿಸಿ ಮೊದಲಿನಂತೆ ಅವಳೊಡನೆ ಇರಬಹುದಿತ್ತು. ಊಹೂಂ, ಅವನೆಂದಿಗೂ

living ಎಂಬ ಇಂಗ್ಲೀಷ್ ಪುಸ್ತಕವನ್ನು ಓದಿ ಮನಸ್ಸಿಗೂ ದೇಹಕ್ಕೂ ನೆಮ್ಮದಿಯನ್ನು ತಂದುಕೋ. ಎಲ್ಲಿದ್ದರೂ ಸುಖಿಯಾಗಿರು" ಎಂದು ಬರೆದಿದ್ದ.

ತತ್ಕಾಲ ಮನದ ಬೇಸರ ನೀಗುವ ಕಾಗದಗಳು ಅವನವು. ಓದಿ ಮುಗಿಸಿದ ಮೇಲೆ ದಟ್ಟವಾದ ಮೋಡ ಆವರಿಸಿದಂತೆ ಅದೇನೋ ಬೇಗುದಿ. ಬರಲಿರುವ ಮಗುವಿಗೋಸ್ಕರ ಮನೆಯಲ್ಲಿ ಯಾರೊಬ್ಬರಿಗೂ ಉತ್ಸಾಹವಿಲ್ಲ. ಸಂತೋಷವಿಲ್ಲ. ಈಗಲೀಗ ಎದ್ದು ಕುಳಿತುಕೊಳ್ಳುವುದೇ ಪ್ರಯಾಸ. ಆದರೂ ಮನೆಯಲ್ಲಿ ಯಾರಿಗೂ ಅವಳತ್ತ ಗಮನವಿಲ್ಲ. ಚೊಚ್ಚಿಲು ಬಸುರಿಗೆ ಸಂಭ್ರಮ, ಸಂತೋಷ, ಮಗುವಿನ ಬಗ್ಗೆ ನೂರೆಂಟು ಕನಸುಗಳು! ಆದರೆ ಇಲ್ಲಿಯೋ ಅದಾವುದೂ ಇಲ್ಲ. ಬಯಕೆಯ ಊಟ, ಹೂ ಮುಡಿಸುವ ಶಾಸ್ತ್ರ, ಆರತಿ, ಹಾಡು ಒಂದೂ ಇಲ್ಲ. ಮಾಡಬೇಕು ಎಲ್ಲಾ ಎಂದಿದ್ದರು ಅತ್ತೆ. ಆದರೀಗ ಅದರ ಬಗ್ಗೆ ಚಕಾರವೆನ್ನುತ್ತುವುದಿಲ್ಲ. ಪರಮೇಶ್ವರಯ್ಯ ಒಂದೇ ಒಂದು ಕಾಗದ ಬರೆದಿದ್ದರು. "ನಿನ್ನ ಹೆರಿಗೆ ಅಲ್ಲಿಯೇ ಆಗಲಿ. ಹೆರಿಗೆಯಾದ ಮೇಲೆ ನಾವಿಬ್ಬರೂ ಅಲ್ಲಿಗೆ ನೋಡಲು ಬರುತ್ತೇವೆ" ಎಂದು ಬರೆದಿದ್ದರು. ನಗು ಬಂದಿತ್ತು ಅವಳಿಗೆ. ಈ ಮನೆಯಿಂದ ಹೊರಟುಹೋದರೆ ಮತ್ತೆಂದಿಗೂ ತನ್ನನ್ನು ಕರೆಯಿಸಿಕೊಳ್ಳಲಾರರು ಎನ್ನುವ ಭಯವಿದ್ದೀತು ಮಾವನಿಗೆ ಎಂದುಕೊಂಡಳು.

ಆದರೂ ಅವಳಿಗೆ ಅದೇನೋ ಆಸೆ. ಲೋಹಿತಾಕ್ಷನದೇ ಚಿಂತೆ. ಆ ಆತುರದ ಕಣ್ಣಗಳಲ್ಲಿ ಈಗಲೂ ಅವನ ಆಗಮನದ ನಿರೀಕ್ಷೆ, ಆ ನೊಂದಮನದಲ್ಲಿ ಈಗಲೂ ಅವನ ಪ್ರತೀಕ್ಷೆ....!

* * * *

ಅದೊಂದು ದಿನ ಮಧ್ಯಾಹ್ನ ಸೊಸೆ ಊಟ ಮಾಡುಲ ಬರಲಿಲ್ಲವೆಂದು ತಿಳಿಯಿತು ತಮ್ಮಯ್ಯನವರಿಗೆ. ಚೆನ್ನಕ್ಕನನ್ನು ವಿಚಾರಿಸಿದಾಗ "ಅವರು ನಿನ್ನೆ ರಾತ್ರಿಯೂ ಇವತ್ತು ಬೆಳಿಗ್ಗೆಯೂ ಏನೂ ತಿಂದಿಲ್ಲ" ಎಂದಳು ಚೆನ್ನಕ್ಕ.

ಕಸಿವಿಸಿಯಾಯಿತು ತಮ್ಮಯ್ಯನವರಿಗೆ. ಇತ್ತೀಚಿನ ದಿನಗಳಲ್ಲಿ ಅವಳು ಊಟ ತಿಂಡಿಯನ್ನು ಸರಿಯಾಗಿ ಮಾಡುವುದಿಲ್ಲವೆಂದು ಚೆನ್ನಾಗಿ ಗೊತ್ತು ಅವರಿಗೆ. ತಮ್ಮೆದುರು ಕಾಣುವ ಅವಳ ಮ್ಲಾನವದನ, ಕೃಶ ದೇಹವನ್ನು ಕಂಡು ಅಯ್ಯೋ ಎಂದುಕೊಂಡಿದ್ದಾರೆ ಎಷ್ಟೋ ಬಾರಿ. ಈ ದಿನ ಅವಳ ನಿರಾಹಾರದ ಸುದ್ದಿ ಕೇಳಿ ಹೆಂಡತಿಯನ್ನು ಕರೆದು ಗದರಿಸಿದರು.

"ನಾನಾದರೂ ಅವಳನ್ನು ವಿಚಾರಿಸಬಾರದಿತ್ತೇ ರಂಗೂ.... ಅವಳ ತಪ್ಪನ್ನು ಕ್ಷಮಿಸುವಂತಹ ದೊಡ್ಡ ಗುಣ ನಮ್ಮದಾಗಬೇಕು. ಒಂದು ಮಗೂನ್ನ ಹೊಟ್ಟೆಯಲ್ಲಿ ಹೊತ್ತುಕೊಂಡ ಜೀವ ಅವಳದು" ಎಂದಂದು ತಾವೇ ಹೆಂಡತಿಯೊಂದಿಗೆ ಮಹಡಿಗೆ ಬಂದರು.

ಧೂಳು ತುಂಬಿದ ಕೋಣೆಯಲ್ಲಿ ಕೆದರಿದ ಹಾಸಿಗೆಯ ಮೇಲೆ ತಲೆ ಹರಡಿಕೊಂಡು ಮಲಗಿಬಿಟ್ಟಿದ್ದಾಳೆ ಸೊಸೆ. ಸದಾಕಾಲ ಕನ್ನಡಿಯಂತೆ ಹೊಳೆಯುತ್ತಿದ್ದ, ಪ್ರತಿಯೊಂದು ವಸ್ತುಗಳೂ ಫಳ ಫಳ ಮಿಂಚುತ್ತಿದ್ದ ಕೋಣೆಯೇ ಇದು? ಮೂರು

ಹೊತ್ತೂ ಹರಟೆಮಲ್ಲಿಯಾದ, ವಿನೋದಪ್ರಿಯಳೂ ರಸಿಕಳೂ ಆದ ಅವಳು ಈಗ ಶೋಕದ ಕೋಶಾವಸ್ಥೆಯಲ್ಲಿ! ಓ.... ವಿಧಿಯ ಆಟವೇ.... ಏನಿದೀ ವಿಚಿತ್ರ....

ಅವಳನ್ನು ಎಬ್ಬಿಸಿ ಉಣ್ಣಲು ಕೆಳಗಿಳಿದು ಬರುವಂತೆ ತಿಳಿಸಿ ತಾವೇ ಅವಳ ಕೈ ಹಿಡಿದುಕೊಂಡು ಅಡಿಗೆ ಮನೆಗೆ ಕರೆದುಕೊಂಡು ಬಂದರು ತಮ್ಮಯ್ಯ.... "ಚನ್ನಕ್ಕ ಊಟ ಬಡಿಸು" ಎಂದು ಆಜ್ಞೆ ಕೊಟ್ಟರು ಅಡಿಗೆಯವಳಿಗೆ. ಬಡಿಸಿದ ತಟ್ಟೆ ಎದುರಿಗೆ ಬಂದಿತು. ಆದರೆ ಒಂದು ತುತ್ತೂ ಗಂಟಲಿನಿಂದಿಳಿಯಲಿಲ್ಲ. "ಒಂದು ಗ್ಲಾಸು ಬಿಸಿ ಹಾಲು ಕುಡಿ" ಎಂದಂದು ತಾವೇ ಹಾಲಿನ ಪಾತ್ರೆಯಿಂದ ಹಾಲನ್ನು ಬಗ್ಗಿಸಿಕೊಂಡು ಲೋಟವನ್ನು ಸೊಸೆಯೆದುರು ಇಟ್ಟರು. ಅವರಿಗರಿಯದಂತೆ ತುಂಬಿ ಬಂದಿದ್ದವು ಅವರ ಕಣ್ಗಳು.

ಅಂದೇ ಸಂಜೆ ಟ್ಯಾಕ್ಸಿ ತಂದು ಡಾಕ್ಟರರ ಹತ್ತಿರ ಕರೆದೊಯ್ದರು ಪರೀಕ್ಷೆಗಾಗಿ. ಅವಳನ್ನು ಪರೀಕ್ಷಿಸಿದ ಡಾಕ್ಟರರು ತಮ್ಮಯ್ಯನವರನ್ನು ಪ್ರತ್ಯೇಕವಾಗಿ ಕರೆದು ಅಂದರು,

"ಇಷ್ಟು ದಿನ ಯಾಕೆ ಕರ್‍ಕೊಂಡು ಬರ್‍ಲಿಲ್ಲ? ತುಂಬಾ ವೀಕ್ ಆಗಿದ್ದಾರೆ ನಿಮ್ಮ ಸೊಸೆ. ಹೆರಿಗೆ ಕಷ್ಟವಾಗಲಾರದು. ಹೆರಿಗೆಯಾದ್ಮೇಲೆ ತುಂಬ ಜಾಗೃತೆಯಲ್ಲಿ ನೋಡ್ಕೊಳ್ಳಿ. ಹಣ್ಣು ಹಾಲು ಟಾನಿಕ್ ತೆಗೆದುಕೊಳ್ಳಲಿ.... ಆಗಾಗ ಬಂದು ಪರೀಕ್ಷೆ ಮಾಡಿಸಿ."

"ಏನಾಗ್ತಿದೆ ಅವಳಿಗೆ? ಮನೇಲಿ ಹಾಲು ಹಣ್ಣುಗಳಿಗೆ ಯಾವಾಗಲೂ ಕೊರತೆಯಿಲ್ಲವಲ್ಲ."

"ತುಂಬ ಮಂಕರ್‍ಹಾಗೆ ಇದ್ದಾರೆ. ನನ್ನೆದುರು ಕುಳಿತಿದ್ದಾಗಲೂ ಎರಡು ಬಾರಿ ಬೆಚ್ಚಿಬಿದ್ದರು. ಏನೋ ನರಗಳ ಕಾಯಿಲೆಯಿರಬೇಕು. ಈ ಮಾತ್ರೆ ಮತ್ತು ಟಾನಿಕ್ ತೆಗೆದುಕೊಳ್ಳಲಿ. ವಿಶ್ರಾಂತಿಯನ್ನೂ ಕೊಡಿಸಿ."

"ಆಗಲಿ" ಎನ್ನುತ್ತ ಸೊಸೆಯೊಡನೆ ಹಿಂದಿರುಗಿದರು ತಮ್ಮಯ್ಯ. ಪ್ರತಿನಿತ್ಯ ಹಾಲು ಕೊಡಲೇಬೇಕೆಂದು ಹೇಳಿದರು ಚೆನ್ನಕ್ಕನಿಗೆ. ಆ ದಿನ ಮಾತ್ರೆ, ಟಾನಿಕ್ ತಾವೇ ಕೊಟ್ಟರು ಅವಳಿಗೆ. ಆಮೇಲೆ ಶಿವಮೂರ್ತಿಗೆ ದೀರ್ಘವಾದ ಕಾಗದವನ್ನು ಬರೆಯುತ್ತ "ಇನ್ನೂ ನಿನಗೆ ಬುದ್ಧಿ ಬಂದಿಲ್ಲ. ನಿನ್ನ ಅಧ್ಯಾಪಕ ವೃತ್ತಿ ಇಲ್ಲಿಗೇ ನಿಲ್ಲಿಸು. "ಪಾಠ ಕಲಿಸುವ ಗುರು ನೀನಾಗಿದ್ದರೂ ನಿನಗೆ ಒಂದಿನಿತೂ ಬುದ್ಧಿಯಿಲ್ಲ. ಇಲ್ಲಿದ್ದವಳ ಸುಖದುಃಖದ ಪರಿವೆ ನಿನಗಿಲ್ಲ. ಹಳೆಯದನ್ನೆಲ್ಲ ಮರೆತುಬಿಡು. ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ಈಗ ಅವಳನ್ನು ನೋಡಿದರೆ ಕರುಳು ಬಾಯಿಗೆ ಬರುತ್ತೆ. ನಿನ್ನನ್ನೇ ರಾತ್ರಿ ಹಗಲು ಹಂಬಲಿಸುತ್ತಿದ್ದಾಳೆ! ನನ್ನ ಕಾಗದವನ್ನು ಕಂಡಾಕ್ಷಣ ಹೊರಟು ಬಂದುಬಿಡು" ಎಂದು ಮುಕ್ತಾಯಗೊಳಿಸಿ ಕುಮಟೆಗೆ ಪೋಸ್ಟ್ ಮಾಡಿದರು.

ಆದರೆ ಉತ್ತರ ಬರಲಿಲ್ಲ ಮಗನಿಂದ. ಆ ವಾರವೂ ಅವನು ಬರಲಿಲ್ಲ. ಸೋತು ಹೋದ ತಮ್ಮಯ್ಯ ಸೊಸೆಯ ಆರೋಗ್ಯದಲ್ಲಿ ಇನ್ನಷ್ಟು ಎಚ್ಚರವಹಿಸಿ ಮಗುವಿಗೆ ಉಪಚರಿಸುವಂತೆ ತಮ್ಮೊಡನೆ ಅವಳನ್ನೂ ಕುಳ್ಳಿರಿಸಿಕೊಂಡು ಅವಳು ಬೇಡ ಬೇಡವೆಂದರೂ ಹಾಲು ತುಪ್ಪ, ಬೆಣ್ಣೆ ಬಡಿಸತೊಡಗಿದರು. ಚೆನ್ನಕ್ಕ ಬಾಯಿ ಓರೆ ಮಾಡುತ್ತ, ಹುಬ್ಬು ಹಾರಿಸುತ್ತ ಹಿಂದಿನಿಂದ ನಗತೊಡಗಿದಳು ಜೋರಾಗಿ.

ಅಂತೂ ಮಾವನ ನಲ್ಮೆಯ ಉಪಚಾರದಲ್ಲಿ ಆಶಾಳ ದುರ್ಬಲ ದೇಹ ಒಂದಿಷ್ಟು ಚೇತರಿಸಿಕೊಂಡಿತು.

೧೮

ಕಾಂತಿಯ ತಿಥಿಗೆ ಎರಡು ದಿನಗಳ ಮುಂಚಿತವಾಗಿ ಮನೆಗೆ ಬಂದ ಶಿವಮೂರ್ತಿ. ಆದರೆ ಗಂಡ ಹೆಂಡರಲ್ಲಿ ಅದೇ ಮೊದಲಿನ ಮೌನ! ಆಶಾಗೆ ಅವನೊಡನೆ ಮಾತನಾಡುವ ಬಯಕೆಯಾದರೂ ಅವನು ಅವಳ ಹತ್ತಿರ ಸುಳಿಯಲೇ ಇಲ್ಲ.

'ಓ... ಯಾರಿಗೂ ಬೇಡವಾದ ಈ ಬದುಕು ಬೇಗನೇ ಮುಗಿದು ಹೋಗಬಾರದೇ? ಈ ಮನೆಯಲ್ಲಿ ಬದುಕಿ ಹೆಣವಾಗುವುದಕ್ಕಿಂತ ಬೇಗ ಮುಕ್ತಿಯನ್ನರಸುವುದು ಒಳಿತು!'

ಅಂದು ಮೊದಲ ಬಾರಿಗೆ ಮರಣದ ಅಸ್ಪಷ್ಟ ಕಲ್ಪನೆಯಲ್ಲಿ ಮೈ ನಡುಗಿತು. ಕಾಂತಿಯ ತಿಥಿಗೆ ಈಶ್ವರಿಯೂ ಬಂದಿದ್ದಳು. ಅಣ್ಣ ಹಾಗೂ ಅತ್ತಿಗೆಯ ವಿರಸ, ಅತ್ತಿಗೆಯ ಸ್ವಭಾವಗಳೆಲ್ಲ ಶಿವಮೂರ್ತಿ ಮತ್ತು ತಂದೆಯ ಪತ್ರಗಳಿಂದ ತಿಳಿದುಹೋಗಿತ್ತು. ಹೀಗಾಗಿ ಮೊದಲ ಬಾರಿಗೆ ಅತ್ತಿಗೆಯನ್ನು ಕಂಡಾಗ ತಾತ್ಸಾರದಲ್ಲಿ ಮುಖ ತಿರುಗಿಸಿಕೊಂಡರೂ ಅತ್ತಿಗೆಯ ಕಳಾಹೀನ ಮುಖವನ್ನು ಕಂಡು 'ಅಯ್ಯೋ' ಎಂದೆನಿಸದಿರಲಿಲ್ಲ. ತಪ್ಪು ಯಾರದು? ಅಣ್ಣ ಅತ್ತಿಗೆ ಇನ್ನೆಂದಿಗೂ ಒಂದಾಗಲಾರರೇ? ಹೀಗೇ ದೂರ ದೂರವಿರುವುದು ಒಳ್ಳೆಯದೇ?

ತಾನೇ ಸಂಧಾನಕ್ಕೆ ಹೊರಟಳು. ಆದರೆ ಶಿವಮೂರ್ತಿ ನಿರ್ಧಾರದ ಸ್ವರದಲ್ಲಿ ಹೇಳಿದ, "ಎಂದಿಗೂ ಸಾಧ್ಯವಿಲ್ಲ ಈಶ್ವರಿ. ಅವಳಿಗೆ ಇಲ್ಲಿ ಇಷ್ಟವಾಗದಿದ್ದಲ್ಲಿ ಮಂಗಳೂರಿಗೇ ಹೊರಟುಹೋಗಲಿ."

"ಇದೆಂತಹ ಮಾತು ಅಣ್ಣಾ. ಲೋಹಿತಾಕ್ಷನನ್ನು ಪ್ರೀತಿಸಿದಳು ಎಂದಾಕ್ಷಣ ಅವಳನ್ನು ತ್ಯಜಿಸಿ ಬಿಡಬೇಕೆ? ಅಂದ್ಹಾಗೆ ಎಲ್ಲಿ ಹೋದ ಲೋಹಿತಾಕ್ಷ?"

"ಅವನೆಲ್ಲಿದ್ದಾನೆ ಈಗ? ಗುಟ್ಟು ರಟ್ಟಾದ ಮೇಲೆ ಪರಾರಿ. ಸಿಂಡಿಕೇಟ್ ಬ್ಯಾಂಕ್‌ಗೆ ಹೋಗಿ ವಿಚಾರಿಸಿದೆ. ರಾಜೀನಾಮೆ ಕೊಟ್ಟುಬಿಟ್ಟಿದ್ದಾನೆ ಎಂದರು. ಮಹಾಕಳ್ಳ. ಅವನಿಗೆ ಇದೇ ಕೆಲಸವೋ ಏನೋ...!"

"ತಪ್ಪು ನಿನ್ನದು ಅಣ್ಣಾ..... ನಾನೇನು ನಿನಗೆ ಉಪದೇಶ ಮಾಡ್ತಾ ಇಲ್ಲ. ಅತ್ತಿಗೆ ನಿನ್ನಿಂದಾಗಿಯೇ ಅಡ್ಡದಾರಿಗಿಳಿದಳು. ಅವಳನ್ನು ಇಲ್ಲಿರಿಸಿ ನೀನೊಬ್ಬನೇ ಯಾಕೆ ಕುಮಟೆಯಲ್ಲಿದ್ದೆ?..... ನಿನಗೆ ಮದುವೆಯಾದರೂ ಯಾಕೆ ಬೇಕಿತ್ತು?"

"ಓಹೋ.... ನಾನೇನು ಇಡೀ ದಿನವೆಲ್ಲ ಅವಳ ಮಗ್ಗುಲಲ್ಲಿ ಇದ್ದುಕೊಂಡು ಓಲೈಸಬೇಕಿತ್ತೇ?"

"ಹಾಗೆ ಹೇಳಲಿಲ್ಲವಲ್ಲ ನಾನು. ನೀನಿಲ್ಲಿ ಇದ್ದಿದ್ದರೆ ಅತ್ತಿಗೆ ಖಂಡಿತವಾಗಿಯೂ ಲೋಹಿತಾಕ್ಷನ ಸ್ನೇಹವನ್ನು ಬಯಸ್ತಾ ಇರ್ಲಿಲ್ಲ. ಇನ್ನು ನೀನು ಅಪ್ಪ, ಅಮ್ಮ ಎಲ್ಲರೂ ಅವನಿಲ್ಲಿ ಬಂದಾಗ ಮನೆಯವರಿಗಿಂತ ಹೆಚ್ಚು ಉಪಚರಿಸ್ತಾ ಇದ್ದಿರಿ. ಅವನಲ್ಲಿ ಅತ್ತಿಗೆ ಯಾವ ಒಳ್ಳೆಯ ಗುಣವನ್ನು ಕಂಡುಕೊಂಡಳೋ ನಂಗೆ ತಿಳೀದು.... ಅವಳಿಗೆ ನಿನಗಿಂತ ಅವನೇ ಖುಷಿಯಾಗಿರಬಹುದು. ಆದರೆ ಅದಕ್ಕೆ ಅವಕಾಶ ಕೊಟ್ಟವನು ನೀನು..."

"ಚೆಲ್ಲಾಟದ ಹೆಂಗಸು. ಇದೊಂದು ನೆವ ಅವಳಿಗೆ. ಲೋಹಿತಾಕ್ಷ ಇಲ್ಲವಲ್ಲ ಈಗ. ಇನ್ನು ನೋಡ್ತಿರು. ಸದ್ಯದಲ್ಲೇ ಬೇರೊಬ್ಬನ ಜೊತೆ..."

"ಛೇ... ಬಾಯ್ಮುಚ್ಚು ಅಣ್ಣಾ." ಮುಖ ಸಿಂಡರಿಸಿದಳು ಈಶ್ವರಿ, "ಗಂಡಸು ಶತ ಅಪರಾಧ ಮಾಡಿದರೂ ಯಾರೂ ಏನೂ ಹೇಳುವುದಿಲ್ಲ. ಹೆಂಗಸು ಒಂದೇ ಒಂದು ಬಾರಿ ಜಾರಿದರೆ ಸಾಕು... ಕುಲಗೆಟ್ಟವಳು ಅವಳು. ಅತ್ತಿಗೆ ಮಾಡಿದ ಒಂದೇ ಒಂದು ತಪ್ಪಿಗೆ ನೀನವಳನ್ನು ತಿರಸ್ಕಾರದಿಂದ ನೋಡ್ತಾ ಇದ್ದೀಯಲ್ಲ. ಗಂಡಸು ನೂರು ಹುಡುಗಿಯರ ಸಂಗಡ ಮಜಾ ಮಾಡಬಹುದು. ಆದರೆ ಹೆಂಗಸು ಒಬ್ಬನನ್ನು ಪ್ರೀತಿಸಿಬಿಟ್ಟರೆ ಅವಳು ಮಾನ ಕಳೆದುಕೊಂಡವಳಂತೆ.... ಏನನ್ಯಾಯ."

"ನಿನಗಿನ್ನೂ ಅನುಭವ ಸಾಲದು. ಮನೆಯ ಗೌರವವನ್ನು ಕಾಪಾಡುವುದು ಹೆಂಗಸಿನ ಕೈಲಿದೆ. ಮನೆ ಮುರಿಯುತ್ತಿದ್ದರೂ ಅದನ್ನು ಕಟ್ಟಲು ಸಿದ್ಧಳಾಗಬೇಕು ಅವಳು. ನಾನು ಅಭಿಮಾನಿ ಮನುಷ್ಯ. ನನ್ನ ಕೈಹಿಡಿದವಳಿಗೆ ಇನ್ನೊಬ್ಬನ ಮೇಲೆ ಪ್ರೀತಿ.... ನನ್ನದಾಗಿದ್ದ ವಸ್ತುವನ್ನು ಇನ್ನೊಬ್ಬ ಆಶಿಸಿ ಅದನ್ನು ಪೂರ್ತಿಯಾಗಿ ಎಂಜಲು ಮಾಡಿದ ಮೇಲೆಯೂ ನಾನು ಪರಿಶುದ್ಧ ಭಾವನೆಯಲ್ಲಿ ಸ್ವೀಕರಿಸಬೇಕೆ? ಇದೆಂದಿಗೂ ಸಾಧ್ಯವಿಲ್ಲ."

ಮೂರ್ತಿ ಮೆಲ್ಲನೆ ಅವಳತ್ತ ಸರಿದು ಪಿಸುಸ್ವರದಲ್ಲಿ ಹೇಳಿದ. "ಈಗ ಅವಳ ಹೊಟ್ಟೆಯಲ್ಲಿರುವ ಮಗುವನ್ನು ನನ್ನದೆಂದು ಹೇಗೆ ಹೇಳಲಿ?"

"ಈ ಪ್ರಶ್ನೆಯಿಂದ ಬೆಚ್ಚಿದಳು ಈಶ್ವರಿ.

"ನನಗಂತೂ ಇದನ್ನೆಲ್ಲ ಯೋಚಿಸಿದರೆ ತಲೆ ಕಾದ ಹಂಚಿನಂತಾಗುತ್ತೆ. ಕಾಂತಿಯಿದ್ದಿದ್ದರೆ ನನಗೆ ಯಾವ ಚಿಂತೆಯೂ ಇರುತ್ತಿರಲಿಲ್ಲ. ಅವಳು ಸತ್ತು ನಡುನೀರಿನಲ್ಲಿ ಕೈಬಿಟ್ಟಂತಾಗಿದೆ ನನ್ನ ಸ್ಥಿತಿ." ಅವನ ಧ್ವನಿ ಭಾರವಾಯಿತು.

ಮುಂದಕ್ಕೆ ಮಾತು ಬೆಳೆಸಲಿಲ್ಲ ಈಶ್ವರಿ. ಅಲ್ಲಿಂದೆದ್ದು ಆಶಾ ಹತ್ತಿರ ಬಂದಾಗ ಅವಳು ತನ್ನಲ್ಲೇ ಮಾತನಾಡಿಕೊಳ್ಳುತ್ತ "ಹಾಳು ಕಿವಿ, ನಿನ್ನ ರಗಳೆ ನಿಲ್ಲಿಸು!" ಎನ್ನುತ್ತ ಕಿವಿಗಳಿಗೆ ಹತ್ತಿ ತುಂಬಿಸಿಕೊಳ್ಳುತ್ತಿರುವುದನ್ನು ಕಂಡು, ಮಾತನಾಡುವಾಗ ಅವಳ ಕಣ್ಗಳಲ್ಲಿ ಯಾವುದೋ ಪ್ರಶ್ನಾಭಾವ ಅಡಗಿರುವುದನ್ನೂ ಕಂಡು ದಂಗಾಗಿ ನಿಂತುಬಿಟ್ಟಳು ಅಲ್ಲಿಯೇ.

* * * *

ಕಾಂತಿಯ ತಿಥಿ ಮುಗಿದು ಮಧ್ಯಾಹ್ನ ಊಟಕ್ಕೆ ಕುಳಿತಾಗ ಸಾಯಂಕಾಲ ಕಾಫಿ

ಸೇವಿಸುವಾಗ, ರಾತ್ರಿ ಊಟದ ಹೊತ್ತಿನಲ್ಲೆಲ್ಲ ಕಾಂತಿಯದೇ ಗುಣಗಾನ. ಆಶಾ ಯಾರೊಡನೆಯೂ ಮಾತನಾಡಲಿಚ್ಛಿಸದೆ ಕಿವಿಗಳಿಗೆ ಇನ್ನಷ್ಟು ಹತ್ತಿ ತುಂಬಿಸಿಕೊಂಡು 'ಹಾಳು ಕಿವಿಯೇ ನಿನ್ನಿಂದಲೇ ಇಷ್ಟೆಲ್ಲ ಆದದ್ದು. ನನ್ನನ್ನು ಸುಮ್ಮನೆ ಶಾಂತವಾಗಿ ಇರುವುದಕ್ಕೂ ಬಿಡುವುದಿಲ್ಲವಲ್ಲ' ಎಂದು ಗೋಗರೆಯುತ್ತ ತನ್ನ ಕೋಣೆಯಲ್ಲಿಯೇ ಬಿದ್ದುಕೊಂಡಿದ್ದಳು. ಈಶ್ವರಿ ಅವಳನ್ನು ಮಾತನಾಡಿಸಲು ಪ್ರಯತ್ನಿಸಿದರೂ ಮಾತನಾಡಲಿಲ್ಲ. ಅವಳನ್ನೇ ನುಂಗುವಂತೆ ನೋಡಿದಾಗ ಈಶ್ವರಿ ಅವಳ ಬೆನ್ನಮೇಲೆ ಕೈಯಿರಿಸುತ್ತ "ಕೊರಗುವುದರಿಂದ ಪ್ರಯೋಜನವಿಲ್ಲ ಅತ್ತಿಗೇ, ನಿನ್ನ ಮನಸ್ಸಿನಲ್ಲಿ ಇದ್ದುದನ್ನು ನನ್ನ ಹತ್ರ ಹೇಳಿಕೋ" ಎಂದಳು.

"ಹೋಗೆ ನಿನ್ನ ರಗಳೇ" ಸ್ವರ ಏರಿಸಿ ಆಶಾ ಗದರಿಕೊಂಡು ಕಿವಿಗೆ ಹತ್ತಿ ತುಂಬಿಸಿಕೊಳ್ಳುತ್ತ "ಸುಮ್ಮನಿರು... ಸುಮ್ಮನಿರು. ಯಾಕೆ ಬಂದೆ...?" ಎಂದಳು ಎಲ್ಲೋ ನೋಡುತ್ತ.

"ಡಾಕ್ಟರರ ಹತ್ತಿರ ಹೋಗಿ ಬರೋಣವೇ? ತುಂಬ ದಿನಗಳಿಂದ ಕಿವಿ ನೋವಿನಲ್ಲಿ ಬಾಧೆ ಪಡ್ತಾ ಇದ್ದೀಯಲ್ಲ. ಈಗೇನು ಎಂತೆಂಥ ಔಷಧಿ ಬಂದಿದೆ. ನಾಲ್ಕ ದಿನ ಎಣ್ಣೆ ಹಾಕಿದರೆ ವಾಸಿಯಾಗುತ್ತೆ."

ಆಶಾ ತನಗೆ ಆ ಮಾತು ಕೇಳಲೇ ಇಲ್ಲವೆಂಬಂತೆ ನಟಿಸಿದಳು. ಆ ರಾತ್ರಿಯೂ ಮೂರ್ತಿ ಕೆಳಗಿನ ಕೋಣೆಯಲ್ಲಿ ಹಾಸಿಕೊಂಡು ಮಲಗಿದಾಗ ಈಶ್ವರಿ ಅವನ ಮನಸ್ಸನ್ನು ತಿರುಗಿಸಲು ಬಹಳವಾಗಿ ಪ್ರಯತ್ನಿಸಿದರೂ ಆಗಲಿಲ್ಲ. ಕೊನೆಗೆ ಸಿಟ್ಟಿನಲ್ಲಿ "ನಿನಗೊಬ್ಬನಿಗೇ ವ್ಯಥೆ ಸಂತಾಪವೇನಣ್ಣಾ? ನಿನ್ನಷ್ಟೇ ದುಃಖ ಅವಳೂ ಅನುಭವಿಸ್ತಾ ಇದ್ದಾಳೆ ಎನ್ನುವುದೂ ತಿಳಿಯದೇ ನಿನಗೆ? ಹೀಗಿದ್ದರೆ ಅವಳ ಆರೋಗ್ಯ ಇನ್ನಿಷ್ಟು ಕೆಟ್ಟೀತು."

"ನನಗೇನು ಬಿಡು."

"ಇದೇನಣ್ಣ, ಕಾಂತಿ ಸತ್ತಾಗ ಆದ ಆಘಾತದಿಂದ ನೀನು ಎಷ್ಟು ಸಮಯ ನರಳಲಿಲ್ಲ? ಈಗ ನೀನಿದ್ದೂ ಇಲ್ಲದವನಂತೆ ವರ್ತಿಸಿದರೆ ಅವಳ ಮನಸ್ಸು ಹೇಗಾದೀತು? ಯಾರೊಂದಿಗೂ ಹೇಳಿಕೊಳ್ಳದೆ ತನ್ನ ದುಃಖವನ್ನೂ ತೋರಿಸಿಕೊಳ್ಳದೆ ಎಲ್ಲಾ ತನ್ನ ಎದೆಯೊಳಗೆ ನುಂಗಿಕೊಂಡಿದ್ದಾಳೆ ಪುಣ್ಯಾತ್ಮಗಿತ್ತಿ."

"ನಾನೇನು ಮಾಡ್ಲಿ? ಅವರವರ ಕರ್ಮಕ್ಕೆ ಅವರವರೇ ಹೊಣೆ. ಪಶ್ಚಾತ್ತಾಪಪಡಲಿ ಬಿಡು."

"ಪಶ್ಚಾತ್ತಾಪವೇ....? ನಿರ್ದಯಿ ನೀನು. ಓ.... ಈ ತರಹದ ಶಿಕ್ಷೆಯನ್ನು ನೀನವಳಿಗೆ ಕೊಟ್ಟು ಇನ್ನೂ ಪಶ್ಚಾತ್ತಾಪಪಡಲಿ ಎನ್ನುತ್ತಿದ್ದೀಯಲ್ಲ. ಎಲ್ಲಾ ಮರೆತು ಮೊದಲಿನಂತೆ ನೋಡಿಕೋ. ಖಂಡಿತವಾಗಿಯೂ ಅತ್ತಿಗೆ ಹೊಸ ಗೆಲುವಿನಲ್ಲಿ ಓಡಾಡುತ್ತಾಳೆ."

ಆದರೆ ಈಶ್ವರಿ ಹೇಳಿದ್ದೆಲ್ಲವೂ ನೀರ ಮೇಲಿನ ಹೋಮವಾಯಿತು. ಮೂರ್ತಿ ತೆಪ್ಪಗೆ ಮಲಗಿಬಿಟ್ಟ.

ಅಂದು ಮಧ್ಯರಾತ್ರಿಯಲ್ಲಿ ಬಚ್ಚಲು ಮನೆಗೆಂದು ಹೋಗಿದ್ದ ಆಶಾ ಹೊರ

ಅಂಗಳದಲ್ಲಿ ಕತ್ತಲೆಯಲ್ಲಿ ಏನನ್ನು ಕಂಡಳೋ ಯಾಕೆ ಹೆದರಿದಳೋ ಕಿಟಾರನೆ ಕೂಗಿಕೊಂಡು ಬಚ್ಚಲು ಮನೆಯೆದುರು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟಳು.

ಸೊಸೆ ಮನೆಯ ಬಾಗಿಲನ್ನು ತೆರೆದು ಹೊರಗೆ ಹೋದಾಗ ಎಚ್ಚರವಾಗಿಯೇ ಇದ್ದರು ತಮ್ಮಯ್ಯ. ಇದ್ದಕ್ಕಿದ್ದಂತೆ ಅವಳು ವಿಕಾರವಾಗಿ ಕೂಗಿಕೊಂಡದ್ದು ಕೇಳಿ ಹಾರಿಬಿದ್ದು ಎದ್ದು ಕತ್ತಲೆಯಲ್ಲಿ ಅತ್ತ ಇತ್ತ ತಡಕಾಡಿ ಮಲಗಿದ್ದ ಮೂರ್ತಿಯನ್ನು ತುಳಿದು, ಈಶ್ವರಿಯನ್ನು ಕೂಗಿ ಕರೆಯುತ್ತ ವಿದ್ಯುತ್ ಗುಂಡಿಯನ್ನೊತ್ತಿದರು. ಆದರೆ ಇದೇನು.... ಕರಂಟೆ ಇಲ್ಲವೇ ಇಲ್ಲ. ವಂಡ್ಸೆಯ ವಿದ್ಯುತ್ ಹಣೆಬರಹವೇ ಇಷ್ಟು.... ಒಂದು ದಿನ ಇದ್ದರೆ ಇನ್ನೊಂದು ದಿನ ಇಲ್ಲ.

"ಕರೆಂಟ್ ಇಲ್ಲ.... ನನ್ನ ಟಾರ್ಚ್ ಎಲ್ಲಿ?" ಕೂಗುತ್ತಾ ತಮ್ಮಯ್ಯ ಕತ್ತಲೆಯಲ್ಲಿ ಓಡಾಡುವಾಗ ಅವರ ಗಲಾಟೆಯಿಂದ ಶಿವಮೂರ್ತಿಯೂ ಈಶ್ವರಿಯೂ ಎದ್ದರು. ಕತ್ತಲೆಯಲ್ಲಿ ಏನೇನೂ ಕಾಣಿಸದೆ ಮೂವರೂ ಒಬ್ಬರಿಗೊಬ್ಬರು ಡಿಕ್ಕಿ ಹೊಡೆದುಕೊಂಡು ಏನು ಏನಾಯ್ತು ಎಂದು ಕೇಳಿಕೊಂಡರು.

"ನನ್ನ ಟಾರ್ಚ್ ಸಿಗಲಿಲ್ಲ ಈಶ್ವರಿ. ಆಪತ್ಕಾಲದಲ್ಲಿ ಇರಲಿ ಅಂತ ಲಾಟನ್ನು ಇಟ್ಕೊಂಡಿದ್ದೆ. ಎಲ್ಲಿ ತೆಗೆದು ಬಿಸಾಕಿದ್ದಾರೋ... ಹೋಗು, ದೇವರ ಮನೇಲಿ ನಂದಾದೀಪವಿದೆ. ಎತ್ಕೊಂಡು ಬಾ." ಎನ್ನುತ್ತ ಹೊರಬಾಗಿಲನ್ನು ಹುಡುಕತೊಡಗಿದರು. ಎರಡು ಬಾರಿ ಹಣೆಗೆ ಬಡಿಯಿತು ಗೋಡೆ.

ದೀಪ ಬಂದಿತು. ಅದರ ಬೆಳಕಿನಲ್ಲಿ ಮೇಜಿನ ಡ್ರಾವರ್‌ನಲ್ಲಿದ್ದ ಟಾರ್ಚನ್ನು ಎತ್ತಿಕೊಂಡ ಮೂರ್ತಿ. ಮೂವರೂ ಅವಸರದಲ್ಲಿ ನಡೆದರು ಹೊರ ಅಂಗಳಕ್ಕೆ. ಅಲ್ಲಿ ನೋಡುತ್ತಾರೆ ಮಣ್ಣು ನೆಲದ ಮೇಲೆ ಮುದ್ದೆಯಾಗಿ ಬಿದ್ದಿದ್ದಾಳೆ ಆಶಾ, ಮೈಮೇಲೆ ಪ್ರಜ್ಞೆಯಿಲ್ಲ.

"ಕತ್ತಲೆಯಲ್ಲಿ ಇವಳೊಬ್ಬಳೇ ಇಲ್ಲಿಗ್ಯಾಕೆ ಬಂದಳು?" ಎನ್ನುತ್ತ ತಂದೆಯ ಸಹಾಯದಿಂದ ಅವಳನ್ನು ಎತ್ತಿ ಹೊತ್ತು ಮನೆಗೆ ತಂದ ಶಿವಮೂರ್ತಿ.

ಅಷ್ಟು ಹೊತ್ತಿಗೆ ರಂಗಮ್ಮ ಚೆನ್ನಕ್ಕ ಎದ್ದುಬಿಟ್ಟಿದ್ದರು. ಚೆನ್ನಕ್ಕ ಎಲ್ಲೋ ಹುಡುಕಿ ಹಳೆಯ ಎರಡು ದೀಪಗಳನ್ನು ಬೆಳಗಿಸಿ ತಂದಿಟ್ಟಳು. ಪ್ರಜ್ಞೆ ತಪ್ಪಿದ ಆಶಾಗೆ ಎಚ್ಚರ ಬರಲು ಏನೇನೋ ಉಪಚಾರ ಮಾಡಿದರು ತಮ್ಮಯ್ಯ. ನೀಲಗಿರಿಯನ್ನು ಅವಳ ಕಾಲಿಗೆ ಹಚ್ಚಿ ತಿಕ್ಕುತ್ತಿದ್ದ ಶಿವಮೂರ್ತಿ "ಎಚ್ಚರವಾಗುವ ಲಕ್ಷಣ ಕಾಣಿಸದು ಅಪ್ಪಾ, ಹೋಗಿ ಡಾಕ್ಟರರನ್ನು ಕರ್ಕೊಂಡು ಬರ್ತೇನೆ" ಎಂದ.

ಅಷ್ಟರಲ್ಲಿ ಕಣ್ತೆರೆದಳು ಆಶಾ. ದೀಪದ ಬೆಳಕಿನಲ್ಲಿ ತನ್ನ ಸುತ್ತಲೂ ನಿಂತಿದ್ದವರನ್ನು ನೋಡದೆ ತನಗೆ ತಾನೇ ಗೊಣಗುತ್ತ ಕಿವಿಗಳನ್ನು ಮುಚ್ಚಿಕೊಂಡು "ಸುಮ್ಮನಾಗ್ತಿಯೋ ಇಲ್ಲವೋ.... ಹೂಂ. ಕೊಂದುಬಿಡ್ತೇನೆ ನಿನ್ನನ್ನು. ಅತಿಯಾಯ್ತು ನಿಂದು ಬಾ... ಬಾ.. ಹತ್ತಿರ" ಎಂದಳು ಏರಿದ ಸ್ವರದಲ್ಲಿ.

ನಿಂತವರು ನೋಡಿಕೊಂಡರು ಒಬ್ಬರನ್ನೊಬ್ಬರು. ಚೆನ್ನಕ್ಕನ ಬಾಯಿ ಒರೆಯಾಯಿತು. ಹುಬ್ಬುಹಾರಿಸಿದಳು. "ಎಲ್ಲಾ ತಿಳೀತು ನನಗೆ. ಕಾಂತಿಯಮ್ಮ ಬಂದಿದ್ದಾರೆ ಮೈಮೇಲೆ...!"

ಕಾಂತಿ ಎಂಬ ಹೆಸರು ಕೇಳಿದಾಕ್ಷಣ ಎದ್ದು ಕುಳಿತಳು ಆಶಾ. ಮೈಮೇಲಿನ ಪರವೆಯಿಲ್ಲದೆ ಜಾರಿ ಹೋಗಿತ್ತು ಸೀರೆಯ ಸೆರಗು. ವಿಕಾರವಾಗಿತ್ತು ಮುಖ. "ಕಾಂತಿ ಬಂದಿದ್ದಾಳಾ? ಎಲ್ಲಿ.... ಎಲ್ಲಿ? ನೋಡ್ತೇನೆ ನಾನೂ. ಎಲ್ಲಿದ್ದಾಳೆ?" ಉದ್ವೇಗದಿಂದ ಹೇಳುತ್ತಿದ್ದವಳು ತತ್‌ಕ್ಷಣ ಕಿವಿಗಳನ್ನು ಮುಚ್ಚಿಕೊಳ್ಳುತ್ತ "ಅಯ್ಯಮ್ಮ... ನೋವು. ಕಿವಿಯೆಲ್ಲಾ ಶೂಲೆ. ಇಲ್ಲಾ, ನನ್ನನ್ನು ಇನ್ನು ಹಿಂಸಿಸಬೇಡ. ಹೋಗು... ಹೊರಟುಹೋಗು" ಎನ್ನುತ್ತಾ ಒರಗಿಕೊಂಡಳು ಹಾಸಿಗೆಯ ಮೇಲೆ.

ಈಶ್ವರಿ ಅವಳ ಭುಜಗಳನ್ನು ಅಲುಗಿಸುತ್ತ "ಎಚ್ಚರ ಮಾಡಿಕೋ ಅತ್ತಿಗೇ. ನಾವೆಲ್ಲಾ ಇದ್ದೇವೆ ಇಲ್ಲಿ" ಎಂದಳು.

ತಮ್ಮಯ್ಯ ಮೂರ್ತಿಯತ್ತ ತಿರುಗಿ "ಬೆಳಿಗ್ಗೆ ಕರ್‍ಕೊಂಡು ಹೋಗು ಡಾಕ್ಟರರ ಹತ್ತಿರ" ಎಂದರು.

ಬೆಳಗಿನವರೆಗೂ ಈಶ್ವರಿ ಅವಳ ಪಕ್ಕದಲ್ಲಿಯೇ ಇದ್ದಳು. ಬೆಳಗಾಯಿತು. ಆಶಾ ತಾನು ರಂಗಮ್ಮನ ಕೋಣೆಯಲ್ಲಿ ಅವರ ಹಾಸಿಗೆಯ ಮೇಲೆ ಮಲಗಿರುವುದನ್ನು ಕಂಡು ಅಚ್ಚರಿಪಡುತ್ತ, ತನ್ನ ಹತ್ತಿರ ಮಲಗಿಕೊಂಡಿದ್ದ ಅದೇ ಆಗ ನಿದ್ರೆಯ ಮಂಪರಿನಲ್ಲಿದ್ದ ಈಶ್ವರಿಯನ್ನಲುಗಿಸಿ "ನಾನಿಲ್ಲಿಗೆ ಹೇಗೆ ಬಂದೆ ಈಶ್ವರಿ?" ಎಂದು ಪ್ರಶ್ನಿಸಿದಳು ಅಚ್ಚರಿಯಲ್ಲಿ.

ನಡೆದುದನ್ನೆಲ್ಲ ಸೂಕ್ಷ್ಮವಾಗಿ ವಿವರಿಸಿ ಈಶ್ವರಿ ತಾನೇ ಒಳಗೆ ಹೋಗಿ ಬಿಸಿ ಕಾಫಿಯನ್ನು ತಂದು ಅವಳಿಗೆ ಕೊಡುತ್ತ "ಆಯಾಸ ಮಾಡಿಕೊಳ್ಳಬೇಡ, ಮಲಗು" ಎಂದಳು.

ಮುಖ ತೊಳೆಯುವ ಮೊದಲೇ ಹೊಟ್ಟೆಯನ್ನು ಸೇರಿತು ಬಿಸಿ ಕಾಫಿ. ಅದರೊಂದಿಗೆ ಹೊಟ್ಟೆಯೊಳಗೆಲ್ಲ ಸಂಕಟ, ವೇದನೆ. ಎದ್ದು ನೇರವಾಗಿ ಕುಳಿತುಕೊಳ್ಳಲೂ ಕಾಲು ನೀಡಿ ಮಲಗಿಕೊಳ್ಳಲೂ ಆಗದೆ ಸಂಕಟಪಟ್ಟಳು. ಸೊಂಟದ ಹಿಂಬದಿಯಲ್ಲಿಯೂ, ಹೊಟ್ಟೆಯ ಕೆಳಭಾಗದಲ್ಲಿಯೂ ಕಾಣಿಸಿಕೊಂಡಿತು ನೋವು. ಅರ್ಧ ಗಂಟೆಯಲ್ಲಿ ನೋವು ಹೆಚ್ಚಿದಂತೆ "ನಿನ್ನ ಅಮ್ಮನನ್ನು ಒಂದ್ಸಾರೆ ಕರಿ ಈಶ್ವರಿ.... ಯಾಕೋ ದಿನದ್ಹಾಗೆ ಇಲ್ಲ ನಾನು" ಎಂದಳು.

ಸೊಸೆಯ ಪಕ್ಕದಲ್ಲಿ ಬಂದು ಕುಳಿತರು ರಂಗಮ್ಮ. ನೋವು ಒಂದು ಸಲ ಹೆಚ್ಚು ಒಂದು ಸಲ ಕಡಿಮೆ. ಒಂಬತ್ತು ಗಂಟೆಗೆ ಡಾಕ್ಟರರನ್ನು ಕರೆದುಕೊಂಡು ಬಂದ ಶಿವಮೂರ್ತಿ. ಅವಳನ್ನು ಪರೀಕ್ಷಿಸಿ "ಹೆರಿಗೆ ನೋವು ಇದು. ಸಾಧ್ಯವಾದಷ್ಟು ಬೇಗ ಕುಂದಾಪುರದ ಆಸ್ಪತ್ರೆಗೆ ಸೇರಿಸಿ" ಎಂದರು.

ಆದರೆ ಆಸ್ಪತ್ರೆಗೆ ಸೇರಿಸುವಷ್ಟು ಸಮಯ ಉಳಿಯಲೇ ಇಲ್ಲ. ಹತ್ತಿರದ ಸೂಲಗಿತ್ತಿಯನ್ನು ಕರೆಯಿಸಿಯಾಯ್ತು. ಸೊಸೆಯ ಮೇಲೆ ಅಸಮಾಧಾನವಿದ್ದರೂ ಈ ಸಮಯದಲ್ಲಿ ಅವಳಿಗೆ ಸಾಂತ್ವನವನ್ನೀಯುತ್ತ ಕಣ್ಣು ಕಾಣದೇ ಇದ್ದರೂ ಬೇಕಾದ ಸಾಮಾನುಗಳನ್ನು ತರಿಸಿಕೊಂಡು ಅವಳಿಗೆಕೆ ಧೈರ್ಯ ಕೊಡುತ್ತ ಕುಳಿತುಕೊಂಡರು ರಂಗಮ್ಮ. ಹನ್ನೊಂದು ಗಂಟೆಯ ಹೊತ್ತಿಗೆ ಮುದ್ದಾದ ಮೈ ಕೈ ತುಂಬಿಕೊಂಡಿದ್ದ ಗಂಡು ಮಗುವಿಗೆ ಜನ್ಮಕೊಟ್ಟಳು ಆಶಾ.

"ಓಹೋ.... ಗಂಡು ಮಗು...!" ಕುಣಿಯುತ್ತ ತಮ್ಮಯ್ಯ ವೃದ್ಧಿಯನ್ನೂ ಕರೆದುಕೊಂಡು ಬಂದು ತೋರಿಸಿದರು. ಶಿವಮೂರ್ತಿಗೂ ಶುಭ ಸುದ್ದಿ ತಿಳಿಸಿದರು. ಆದರೆ ಅವನು ನಿರ್ಲಿಪ್ತನಂತೆ ಯಾವ ಸಂತೋಷವನ್ನೂ ವ್ಯಕ್ತಪಡಿಸಲಿಲ್ಲ. ಆಶಾ ಕಳಂಕಿನಿಯೆಂದ ಮಾತ್ರಕ್ಕೆ ಮಗು ಮಾಡಿದ ತಪ್ಪೇನು? ಮಗುವನ್ನು ನೋಡಲೂ ಇಲ್ಲ. ತಾಯಿ ಗರ್ಭದಲ್ಲಿ ಅಡಗಿ ಕುಳಿತು, ಒಂದು ತಿಂಗಳ ಮೊದಲೇ ಭೂಮಿಗಿಳಿದು ಬಂದಿದ್ದ ಆ ಪುಟ್ಟ ಪೋರ.

ಸ್ನಾನ ಮಾಡಿಸಿ ಬಟ್ಟೆ ಸುತ್ತಿಸಿ ಮಲಗಿಸಿದ್ದ ಮಗುವನ್ನು ನೋಡುತ್ತ ಚೆನ್ನಕ್ಕ "ಇದೇನಮ್ಮ ಥೇಟ್ ಮೂರ್ತಿರಾಯರ ಹಾಗೇ ಇದೆಯಲ್ಲ. ಅದೇ ಮುಖ, ಅದೇ ಮೂಗು" ಎಂದಳು ಬಾಯಿ ಓರೆ ಮಾಡಿ.

ಆಶಾಗೆ ಏನೂ ಬೇಕಿರಲಿಲ್ಲ. ಹೆರಿಗೆ ನಿಶ್ಶಕ್ತಿಯಲ್ಲಿ ತಲೆ ತಿರುಗುತ್ತಿತ್ತು. ತಡೆಯಲಾರದ ದಾಹ. ಈಶ್ವರಿಗೂ ಮಾತನಾಡಲು ಸಮಯವಿಲ್ಲ. ಪುಟ್ಟ ಕಂದ ಬಂದ ಗಡಿಬಿಡಿ, ಕೆಲಸದ ಒತ್ತಡಗಳು.

ಮನೆಯ ನೀರಸ ವಾತಾವರಣದಲ್ಲಿ ಒಂದಷ್ಟು ಬದಲಾವಣೆ, ಬಾಣಂತಿಗೆ ಉಪಚಾರ, ಮಗುವಿನ ರೋದನ, ವೃದ್ಧಿಯ ಕೇಕೆಯ ಧ್ವನಿಯನ್ನು ತುಂಬಿಕೊಂಡಿತ್ತು ಆ ಮನೆ. ಶಿವಮೂರ್ತಿಗೆ ಇದಾವುದೂ ಬೇಕಿರಲಿಲ್ಲ. ಎಳೆ ಕಂದನ ಅಳು ಕೇಳಿದಾಕ್ಷಣ ಅವನ ಮುಖ ಬಿಗಿದುಕೊಳ್ಳತೊಡಗಿತು. ಇನ್ನೊಂದು ದಿನ ರಜೆಯಿದ್ದರೂ ಅಲ್ಲಿ ನಿಲ್ಲಲಿಚ್ಛಿಸದೆ, ಹೆಂಡತಿಯನ್ನೂ ನೋಡದೆ ಹೊರಟುಹೋದ ಕುಮಟೆಗೆ. ಹೋಗುವ ಮುನ್ನ ಬಾಗಿಲಮರೆಯಿಂದಲಾದರೂ, 'ಹೋಗಿ ಬರುತ್ತೇನೆ ಆಶಾ' ಎಂದು ಹೇಳುವುದಕ್ಕೂ ಒಪ್ಪಲಿಲ್ಲ ಅವನ ಮನಸ್ಸು.

ಆದರೆ...? ಮೂರ್ತಿ ತನ್ನ ಹತ್ತಿರ ಬರುತ್ತಾನೆ, ಮಗುವನ್ನು ಕಂಡು ಮಾತನಾಡಿಸುತ್ತಾನೆ, ಮೆಚ್ಚಿಗೆ ಕೊಡುತ್ತಾನೆ ಎಂದುಕೊಂಡಿದ್ದ ಆಶಾಗೆ ಆದದ್ದು ಕೇವಲ ನಿರಾಸೆ. ಅವನ ಈ ವರ್ತನೆ ಅವಳ ವ್ಯಥಿತ ಹೃದಯದ ಮೇಲೆ ಇನ್ನೊಂದು ಪೆಟ್ಟನ್ನು ಹಾಕಿತು.

೧೯

ಮೈ ಕೈ ತುಂಬಿಕೊಂಡಿದ್ದ ಮಗು ಬಲು ಮುದ್ದು ಮುದ್ದಾಗಿದ್ದರೂ ಆಶಾ ಅದನ್ನು ಪ್ರೀತಿಸಲಿಲ್ಲ. ಎತ್ತಿ ಮುದ್ದಾಡಲಿಲ್ಲ. ತೊಡೆಯ ಮೇಲೆ ಮಲಗಿಸಿಕೊಂಡು ಹಾಲುಣ್ಣಿಸಲಿಲ್ಲ. ಈಶ್ವರಿ ಮಗುವನ್ನು ತಂದು ತಂದು ಅವಳ ತೊಡೆಯ ಮೇಲೆ ಮಲಗಿಸುತ್ತಿದ್ದಳು. ಆದರೆ ಅವಳೋ, ಎಲ್ಲಿಯೋ ನೋಡುತ್ತಿರುತ್ತಾಳೆ. "ಮಗೂನ್ನ ಎತ್ತಿಕೊಂಡು ಹಾಲು ಕುಡಿಸು ಅತ್ತಿಗೆ, ನಿಂಗೇನಾಗಿದೆ?" ಎಂದು ಕೇಳಿದರೆ ಸುಮ್ಮನೆ ನಗು.

ಹೀಗಾಗಿ ಮಗುವಿನ ಆರೈಕೆಯೆಲ್ಲಾ ಈಶ್ವರಿಯ ಮೇಲೆ. ತಮ್ಮಯ್ಯ ವಿಚಾರಿಸಿಕೊಳ್ಳುತ್ತಿದ್ದರು ಆಗಾಗ. ರಂಗಮ್ಮ ಮಗುವಿನ ವಿಷಯದಲ್ಲಿ ಏನೂ ಹೇಳಲಾರರು.

"ನೀನೂ ಕಟುಕಳು ಅಮ್ಮಾ" ತಾಯಿಯ ಸ್ವಭಾವ ಹಿಡಿಸಲಾರದೆ ಈಶ್ವರಿ ಹೇಳಿದಳು, "ಅಣ್ಣ ನಿನಗೂ ಇಲ್ಲಸಲ್ಲದ್ದನ್ನು ಹೇಳಿ ನಿನ್ನ ಮನಸ್ಸನ್ನೂ ಹಾಳು ಮಾಡಿರಬೇಕು."

"ನೀನೇ ನೋಡ್ತಾ ಇದ್ದೀಯಲ್ಲ. ಅವಳಿಂದಾಗಿ ಮೂರ್ತಿ ಈಗ ಮನೆಗೆ ಬರುವುದೇ ಇಲ್ಲ. ನಮಗಿರುವವನು ಅವನೊಬ್ಬನೇ ಮಗ. ಅಂತೂ ನಮ್ಮ ದುರಾದೃಷ್ಟ. ಈ ಕಣ್ಣುಗಳನ್ನು ಕಳೆದುಕೊಂಡು ಸೋತು ಹೋದೆ ಈಶ್ವರಿ" ಎಂದರು ರಂಗಮ್ಮ.

ಅಡಿಗೆ ಚನ್ನಕ್ಕ ಹಿರಿಯರ ಮಾದರಿಯಲ್ಲಿಯೇ ನಡೆಯುವವಳು. ಶಿವಮೂರ್ತಿ ಮನೆಗೆ ಬರದಿರುವುದು, ವೃದ್ಧ ದಂಪತಿಗಳು ಸೊಸೆಯನ್ನು ದೂರಿಕೊಳ್ಳುವುದು, ಮಗುವಿನ ಬಗ್ಗೆ ಅನಾದರಣೆಯನ್ನು ತೋರಿಸುವುದು ಕಂಡು ಕಂಡು ಅವಳೂ ಆ ಬದಿಗೇ ಹೆಜ್ಜೆಯಿಟ್ಟಳು. ಬಾಣಂತಿಯ ಸ್ನಾನ, ಉಪಚಾರ ನೀಲಿಗೆ ಸೇರಿದ್ದು. ಬಿಸಿ ಬಿಸಿ ಅಡಿಗೆ ಮಾಡಿ ಬಡಿಸುವುದು ಚೆನ್ನಕ್ಕನ ಪಾಲಿಗೆ ಸೇರಿದ್ದು. ಅವಳು ತನ್ನ ಕರ್ತವ್ಯ ಎಂಬಂತೆ ತಟ್ಟೆ ತುಂಬಾ ಅನ್ನ ಬಡಿಸಿಟ್ಟು ಹೋಗಿಬಿಡುತ್ತಾಳೆ ಎದುರಿನಿಂದ. ಅಲ್ಲಿಗೆ ಮುಗಿಯಿತು ಅವಳ ಕೆಲಸ. ಆ ಮೌನದ ಹಿಂದೆ ಅಪಾರ ತಾತ್ಸಾರ!

ಈಶ್ವರಿಗೆ ಇನ್ನೂ ಉಳಿಯುವ ಇಚ್ಛೆಯಿದ್ದರೂ ಸುರತ್ಕಲ್‌ನಿಂದ ಮೇಲಿಂದ ಮೇಲೆ ಕಾಗದಗಳು ಬಂದಾಗ ಅವಳಿಗೂ ಹೊರಡುವುದು ಅನಿವಾರ್ಯವಾಯಿತು. ತಾನು ಹೋದ ಮೇಲೆ ಮಗುವನ್ನು ಆಶಾ ನೋಡಿಕೊಳ್ಳಲಾರಳು ಎನ್ನುವುದಂತೂ ಸ್ಪಷ್ಟವಾಗಿತ್ತು ಅವಳಿಗೆ. ಮಗುವನ್ನೂ ಕರೆದುಕೊಂಡು ಹೋಗುವುದಂತೂ ಸಾಧ್ಯವಿಲ್ಲ. ಇಲ್ಲಿಯೇ ಇದ್ದರೆ ಮಗು ಬದುಕುತ್ತದೆಯೋ ಇಲ್ಲವೋ.

"ನಿನಗ್ಯಾಕೆ ಚಿಂತೆ ಬಿಡು. ಮಗುವಿಗೆ ಆಯುಷ್ಯವಿದ್ದರೆ ಕಲ್ಲುಗುಂಡಿನ್ಹಾಗೆ ಬದುಕಿಕೊಂಡಿರುತ್ತೆ" ರಂಗಮ್ಮ ಸಮಾಧಾನ ಹೇಳಿದರು ಮಗಳಿಗೆ.

"ನೀನೂ ನಿರ್ದಯಿ. ತಾಯಿ ಮಾಡಿದ ತಪ್ಪಿಗೆ ಮಗೂನ್ನ ಶಿಕ್ಷೆಗೆ ಗುರಿಪಡಿಸುವ ಬುದ್ಧಿ ನಿನ್ನದು... ದೇವರಿಟ್ಟಂತೆ ಆಗಲಿ ಅಮ್ಮಾ. ಈ ಇಪ್ಪತ್ತು ದಿನಗಳೂ ನನ್ನಿಂದಾದಷ್ಟು ಸೇವೆ ಮಾಡಿದ್ದೇನೆ.... ಇನ್ನು ನಿಮಗೆ ಈ ಜವಾಬ್ದಾರಿ..."

ಈಶ್ವರಿಯ ಈ ಆತಂಕ ಕಂಡು "ಮಗು ಸತ್ತು ಹೋಗುತ್ತೆ ಅಂತ ತಿಳಿದಿದ್ದೀಯಾ?" ಎಂದು ಕಿಲಿಕಿಲಿ ನಕ್ಕಳು ಆಶಾ.

ಅವಳ ನಗೆ ಕೇಳಿ ಎದೆಯಲ್ಲಿ ಚೂರಿ ಇರಿದಂತಾಯಿತು ಈಶ್ವರಿಗೆ. ಅತ್ತಿಗೆ ಮೊದಲಿನಂತಿಲ್ಲ. ಮುಖ, ಕಣ್ಣುಗಳೂ ಯಾವುದೋ ಅನಿಷ್ಟವನ್ನು ಸೂಚಿಸುತ್ತಿವೆ. ಆ ನಗೆ ಮೊದಲಿನಂತಿಲ್ಲ. ಭಯವನ್ನು ಮೂಡಿಸುತ್ತದೆ ಮನಸ್ಸಿನಲ್ಲಿ. ಕೆಲವೊಮ್ಮೆ ಈ ಲೋಕದ ಪರಿವೆಯೇ ಇಲ್ಲದವರಂತೆ ತನ್ನಲ್ಲೇ ಮಾತನಾಡಿಕೊಳ್ಳುವುದನ್ನೂ ನೋಡಿದ್ದಾಳೆ ಅವಳು. 'ಅಯ್ಯೋ, ಇವಳಿಗಾಗಿ ಮನೆಯವರು ಏನೂ ಮಾಡಲಾರರೇ' ಎಂದುಕೊಂಡಿದ್ದಾಳೆ.

ಅವಳ ಕಣ್ಣುಗಳು ತುಂಬಿಬಂದವು. ಸರ್‍ರನೆ ಮುಂದೆ ಬಂದು ಅತ್ತಿಗೆಯ ಎರಡು ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು, "ನಡಿ ಅತ್ತಿಗೆ, ನಮ್ಮೂರಿಗೆ ಹೋಗಿಬಿಡೋಣ. ಅಲ್ಲಿ ಎಷ್ಟೇ ಕೆಲಸಗಳಿದ್ದರೂ ನಿನ್ನ ಮತ್ತು ಮಗುವಿನ ಆರೈಕೆ ಮಾಡಬಲ್ಲೆ."

ಆಶಾ ಬಲವಂತದ ನಗೆ ನಗುತ್ತ ಅಂದಳು, "ಜನ ಅಂದುಕೊಳ್ಳಲಾರರೇ ಈಶ್ವರಿ. ಎಲ್ಲಿಗೆ ಹೋದರೂ ನಾನು ಇದೇ ಮನೆಯಲ್ಲಿ ಇರಲೇಬೇಕಲ್ಲ."

"ಆದರೇನಾಯ್ತು, ನಾಲ್ಕು ದಿನಗಳ ಬದಲಾವಣೆ!"

"ಬದಲಾವಣೆ!" ಆಶಾ ಕಿವಿಗಳಲ್ಲಿ ಅದೇ ಶಬ್ದ ಮೊರೆಯತೊಡಗಿತು ಗುಡುಗಿನಂತೆ. ಅದರೊಂದಿಗೆ ಏನೇನೋ ನೆನಪುಗಳು. ಲೋಹಿತಾಕ್ಷನ ಸಂಗಡ ಮೈಸೂರನ್ನೆಲ್ಲ ತಿರುಗಿದ್ದು, ಹಾರಿದ್ದು, ಹಳ್ಳಿ ಜೀವನದಿಂದ ರೆಕ್ಕೆ ತೆರೆದ ಹಕ್ಕಿಯಂತೆ ಹಾರಾಡಿದ್ದು, ಅವನೊಡನೆ ನಕ್ಕು ನಲಿದ ಅಂದಿನ ಆ ದಿನಗಳು...! 'ಆಹ್, ಇಂತಹ ದಿನಗಳು ಕೊನೆಯವರೆಗೂ ಇರಬಾರದೇ?' ಎಂದು ಕೇಳಿದ್ದಳು ಲೋಹಿತಾಕ್ಷನನ್ನು. 'ಕೊನೆಯವರೆಗೂ ಇರುತ್ತೆ' ಎಂದಿದ್ದ ಅವನು. ಆದರೆ ತನ್ನ ಪಾಲಿಗೆ ಮಾತ್ರ ದುಃಖವೇತಕ್ಕೆ? ಲೋಹಿತಾಕ್ಷನಲ್ಲಿ ಹಲವು ಹತ್ತು ಕನಸು ಕಂಡವಳು ತಾನು. ಅವನು ಕೇವಲ ತನ್ನ ದೇಹ ಮಾತ್ರ ಬಯಸಿದ... ಇನ್ನೇನೂ ಇಲ್ಲ. ಬದಲಾವಣೆ ಬಯಸಿದ ತನ್ನ ಜೀವನದಲ್ಲಿ ಯಾವ ಅದಲು ಬದಲೂ ಆಗಲಿಲ್ಲ.... ಇನ್ನೂ ದುಃಖ....

"ಯಾಕೆ ಅತ್ತಿಗೆ ಸುಮ್ಮನಾದೆ?" ತನ್ನಲ್ಲೇ ಗೊಣಗಿಕೊಂಡ ಅವಳನ್ನು ತಟ್ಟುತ್ತ ಕೇಳಿದಳು ಈಶ್ವರಿ.

"ಯಾವ ಬದಲಾವಣೆಗಳೂ ನನಗೆ ಬೇಕಿಲ್ಲ. ನೀನು ಹೋಗು. ನಿನ್ನ ಮನೆಗೆ ಯಾವತ್ತಾದರೂ ಒಂದು ದಿನ ಖಂಡಿತಾ ಬಂದೇ ಬರ್ತೇನೆ."

"ಮಗೂನ್ನ ನೋಡಿಕೊಳ್ತಿಯಾ ಸರಿಯಾಗಿ?"

"ಅದಕ್ಕಾಗಿ ಚಿಂತೆಯೇ? ನಾನೇನೂ ಮಗೂನ್ನ ಕೊಲ್ಲುವುದಿಲ್ಲ. ತ್ಸಕ್, ಯಾರಿಗೂ ಬೇಡದ ಮಗುವೊಂದು ಹುಟ್ಟಿದೆ ಈ ಮನೇಲಿ...."

"ಹೊತ್ತು ಹೊತ್ತಿಗೆ ಸರಿಯಾಗಿ ನೀನೂ ಆಹಾರ ತಗೋಬೇಕು. ಮಗೂನ್ನ ಚೆನ್ನಾಗಿ ನೋಡಿಕೊಳ್ಳಬೇಕು. ಎಲ್ಲಿ, ನನ್ನ ಕೈಮೇಲೆ ಕೈ ಇಟ್ಟು ಪ್ರಮಾಣ ಮಾಡು ನೋಡೋಣ."

ಆಶಾಗೆ ದುಃಖ ಒತ್ತರಿಸಿ ಬಂದಿತು. ಮಲಗಿದ್ದಲ್ಲಿಂದ ಎದ್ದು ಅವಳ ಎರಡೂ ಕೈಗಳನ್ನು ಕೆನ್ನೆಗೆ ಒತ್ತಿಕೊಂಡು. "ಹೆತ್ತ ತಾಯಿಗೂ ಈ ಅನುಕಂಪ ಇರಲಾರದು ಈಶ್ವರೀ, ನೀನು ನನ್ನ ಪಾಲಿಗೆ ಗಂಡನ ತಂಗಿ ಅಲ್ಲ, ಒಡಹುಟ್ಟಿದ ಅಕ್ಕನಂತೆ. ನನ್ನ ತಾಯಿಯಂತೆ" ಎಂದಳು... ಕಣ್ಣೀರು ಅವಳ ಕೈಗಳನ್ನು ಸ್ಪರ್ಶಿಸಿತು.

ತುಸು ಹೊತ್ತು ಹಾಗೇ ಕುಳಿತಿದ್ದರು ಇಬ್ಬರೂ. ಕೊನೆಗೆ ಈಶ್ವರಿ ಅಲ್ಲಿಂದೇಳುತ್ತ "ಹೋಗಿ ಬರ್ತೇನೆ ಅತ್ತಿಗೇ, ಇನ್ನೊಮ್ಮೆ ನೋಡೋಣ" ಎಂದಂದು ಹೊರಟುಬಿಟ್ಟಳು ಸುರತ್ಕಲ್‌ಗೆ.

* * * *

ಈಶ್ವರಿ ಹೋದ ನಂತರ ಮಗುವಿನ ಆರೈಕೆಯೆಲ್ಲಾ ಕೆಲಸದ ನೀಲಿಯ ಪಾಲಿಗೆ ಬಿದ್ದಿತೆನ್ನಬೇಕು. ಮನೆ ತುಂಬಾ ಮಕ್ಕಳಿದ್ದರೂ ಮಗುವನ್ನು ಅಸಡ್ಡೆಯಿಂದ ಕಾಣಲಿಲ್ಲ ನೀಲಿ. ರಾತ್ರಿ ಈಶ್ವರಿಯಿಲ್ಲದೆ ಮಗು ಅಳುತ್ತಿದ್ದುದರಿಂದ ಸ್ವತಃ ತಮ್ಮಯ್ಯನವರೇ ಎದ್ದು ಬಂದು ಮಗುವಿಗೆ ಬಾಟ್ಲಿ ಹಾಲನ್ನಿತ್ತು ಬೆಳಗಿನವರೆಗೂ ನೋಡಿಕೊಂಡರು. ಮರುದಿನದಿಂದ ನೀಲಿ ದೊಡ್ಡ ಮನೆಯ ಚಾವಡಿಯಲ್ಲಿ ಮಲಗಲಾರಂಭಿಸಿದಳು. ಮಗು ಅವಳ ಹತ್ತಿರ!

"ಇದೊಂದು ವಿಚಿತ್ರ... ಹೆತ್ತ ತಾಯಿಗೇ ಮಗು ಬೇಡ. ಎಂತಹ ಬುದ್ಧಿಯೋ" ಸಹಜವಾಗಿ ಕ್ರೋಧಗೊಂಡರು ತಮ್ಮಯ್ಯ. ಸೊಸೆಗೆ ಬುದ್ಧಿ ಹೇಳಿಯೂ ನೋಡಿದರು.

ಆದರೆ ಆಶಾ ಯಾರ ಮಾತಿಗೂ ಲಕ್ಷ್ಯ ಕೊಡಲಿಲ್ಲ. ಮೈ ಕೈ ತುಂಬಿಕೊಳ್ಳಬೇಕಿದ್ದ ಬಾಣಂತಿ ಎಲುಬಿನ ಹಂದರವಾದಳು.

ಅದೊಂದು ಮಧ್ಯಾಹ್ನ ಯಾವ ಸುದ್ದಿಯನ್ನೂ ತಿಳಿಸದೆ ಅನಿರೀಕ್ಷಿತವೆಂಬಂತೆ ಜಗನ್ನಾಥ ಬಂದಿಳಿದ ಅವರ ಮನೆಗೆ. ಅವನೊಡನೆ ಒಬ್ಬಳು ಹೆಂಗಸು ಇದ್ದಳು. ತಮ್ಮಯ್ಯ ಆ ದಿನ ಕುಂದಾಪುರಕ್ಕೆ ಹೋದುದರಿಂದ ಅಡಿಗೆ ಚನ್ನಕ್ಕ ತಾನೇ ಅವರನ್ನು ಉಪಚರಿಸಿ ರಂಗಮ್ಮನಿಗೂ ತಿಳಿಸಿ ಮಹಡಿಗೆ ಹೋಗಿ ಆಶಾಗೂ ಸುದ್ದಿ ಮುಟ್ಟಿಸಿದಳು. ಜಗನ್ನಾಥನ ಹೆಸರು ಕೇಳಿದಾಕ್ಷಣ ಆಶಾ ಎದ್ದು ಕುಳಿತುಕೊಳ್ಳುತ್ತ,

"ಇಲ್ಲಿಗೇ ಅವನನ್ನು ಕರ್‍ಕೊಂಡು ಬಾ, ಅವನೇನು ನಮಗೆ ಹೊಸಬನಲ್ಲ" ಎಂದಳು.

"ಅವರ ಜತೆ ಹೆಂಗಸು ಇದ್ದಾರೆ. ಅವರನ್ನೂ ಕರೆಯಲಾ?"

"ಅಪರಿಚಿತರಾದರೆ ಬೇಡ, ಅವನೊಬ್ಬನೇ ಬರಲಿ...."

ತುಸು ಹೊತ್ತಿನಲ್ಲಿ ಮಹಡಿಗೆ ಬಂದುಬಿಟ್ಟ ಜಗನ್ನಾಥ.

"ಬಾ... ಬಾ ಜಗ್ಗೂ," ಹಾಸಿಗೆಯಿಂದ ಎದ್ದು ಕುಳಿತುಕೊಂಡಳು ಆಶಾ, "ಇದೇನು ಒಂದು ಕಾಗದ, ಪತ್ರ ಏನೂ ಇಲ್ಲದೆ ದಿಢೀರ್ ಅಂತ ಬಂದುಬಿಟ್ಟೆಯಲ್ಲ, ಏನಪ್ಪ ವಿಶೇಷ, ಹುಷಾರಾಗಿದ್ದೀಯಾ?"

ಜಗನ್ನಾಥ ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ಆಶಾಳನ್ನೇ ದಿಟ್ಟಿಸಿ ಸುತ್ತಲೂ ನೋಡಿದ ಒಂದು ಬಾರಿ. ಬಾಣಂತಿ ಕೋಣೆಯಲ್ಲಿದ್ದರೂ ಮಗು ಇಲ್ಲ ಅಲ್ಲಿ. ಅನುಮಾನ ಬಂದಿತು. "ನೀನೊಬ್ಬಳೇ ಇದ್ದೀಯಾ ಇಲ್ಲಿ?" ಪ್ರಶ್ನಾರ್ಥಕದಿಂದ ಕೇಳಿದ ಅವನು.

"ಹೂಂ, ಕೆಲ್ಸದವಳ್ಹತ್ರ ಮಗು ಇದೆ. ಮತ್ತೆ ನೋಡುವಿಯಂತೆ. ಅಲ್ಲಿ, ನಿನ್ನ ಜೊತೆ ಯಾರೋ ಹೆಂಗಸು ಬಂದಿದ್ದಾರಂತಲ್ಲ. ಯಾರಪ್ಪ ಅದು? ಮೇಲೇ ಕರ್‍ಕೊಂಡು ಬರಬಹುದಿತ್ತು. ನನಗೆ ತಿಳಿಸದೆ ಮದುವೆಯೂ ಆಗಿಬಿಟ್ಟಿದ್ದೀಯಾ?"

"ಅಲ್ಲಲ್ಲ...."

"ಸಂತೋಷ, ಮಾವ ನನ್ನನ್ನು ಕರೆಯಲೇ ಇಲ್ಲ ಮದುವೆಗೆ. ಯಾಕೆ ಕರೀತಾರೆ ಜಗ್ಗೂ. ಎಷ್ಟಿದ್ದರೂ ನಾನು ಕಳಂಕಿನಿ. ಹೋಗ್ಲಿ ಬಿಡು, ನೀನಾದರೂ ದೊಡ್ಡ ಮನಸ್ಸು

ಮಾಡಿ ಅವಳನ್ನು ಕರ್‍ಕೊಂಡು ಬಂದಿದ್ದೀಯಲ್ಲ ಇಲ್ಲಿಗೆ. ಅದೇ ನನ್ನ ಪುಣ್ಯ... ಇಲ್ಲಿಗೇ ಕರ್‍ಕೊಂಡು ಬಾ."

"ಇಲ್ಲಿಗೆ ಬರಬೇಕು, ನಿನ್ನನ್ನು ನೋಡ್ಬೇಕು ಅಂತ ಯಾವಾಗಲೂ ಹೇಳ್ತಿದ್ದಳು ಅವಳು. ನಿನ್ನದೇ ಧ್ಯಾನ ಅವಳಿಗೆ. ಈಗ ನಾಲ್ಕು ದಿನಗಳ ರಜೆ ಬರೆದು ಹಾಕಿ ಕರ್‍ಕೊಂಡು ಬಂದಿದ್ದೇನೆ ಇಲ್ಲಿಗೆ. ,ಎಷ್ಟು ಬೇಕಾದರೂ ಮಾತನಾಡಿಕೋ...." ಎಂದವನೇ ಕೆಳಗೆ ನಡೆದ ಅವಳನ್ನು ಕರೆತರಲು.

ಅಷ್ಟರಲ್ಲಿ ಕುಂದಾಪುರದಿಂದ ಹಿಂದಿರುಗಿದ್ದರು ತಮ್ಮಯ್ಯ. "ಓಹೋ, ನೀವು ಬಂದಿದ್ದೀರಿ ಅಂತ ದಾರೀಲಿ ಜಬ್ಬಣ್ಣ ತಿಳಿಸಿದ. ಹ್ಯಾಗೆ, ಹುಷಾರಿದ್ದೀರಾ?" ಎಂದು ಕೇಳಿದರು ಅವನ ಕೈಕುಲುಕುತ್ತ.

ಆಮೇಲೆ ಅವನೊಡನೆ ಬಂದಿದ್ದ ಹೊಸಬಳತ್ತ ನೋಡುತ್ತ ಅರ್ಥವಾಗದವರಂತೆ ಕಣ್ಣು ಮಿಟುಕಿಸಿ, "ಆಶಾಗೆ ಔಷಧಿ ತರಲು ಹೋಗಿದ್ದೆ ಕುಂದಾಪುರಕ್ಕೆ. ಬನ್ನಿ, ಆಶಾನ್ನ ಮಾತನಾಡಿಸಿದರಾ?" ಎಂದೂ ಕೇಳಿ ಅವರಿಬ್ಬರನ್ನು ಕರೆದೊಯ್ದರು ಮಹಡಿಗೆ.

"ಇಕೋ ಆಶಾ, ನಿನಗೆ ಔಷಧಿ ಇದೆ ಈ ಬಾಟ್ಲಿಯಲ್ಲಿ. ಜಗನ್ನಾಥ, ನೀವು ಬಂದದ್ದು ಬಹಳ ಸಂತೋಷವಾಯ್ತು. ನಿಮಗೆಲ್ಲ ಚೆನ್ನಕ್ಕ ಕಾಫೀ ಕುಡಿಯಲು ಕೊಟ್ಟಿದ್ದಾಳಾ...."

"ಎಲ್ಲಾ ಆಗಿದೆ ನಮಗೆ. ಇನ್ನು ಊಟ ಮಾತ್ರ ಸಾಕು" ಜಗನ್ನಾಥ ಅವರ ಉಪಚಾರದ ಮಾತಿಗೆ ಮರುಳಾಗಿ ಹೋದ. "ಇವರು ಯಾರು ಅಂತ ಗೊತ್ತಾಯ್ತೇ?"

"ಇನ್ನೂ ಗೊತ್ತಾಗ್ಲಿಲ್ಲ. ಬಂದ್ಹಾಗೆ ಕೇಳ್ಬಾರ್ದು ಅಂತ ಸುಮ್ಮನಿದ್ದೆ."

"ಇವಳು ಆಶಾಳ ತಾಯಿ!"

"ಓಹೋಹೋ...." ಎರಡೂ ಕೈಗಳಿಂದ ನಮಸ್ಕರಿಸುತ್ತ ತಮ್ಮಯ್ಯ ಬಾಯ್ತೆರೆದು ನಕ್ಕರು, "ಬಹಳ ಸಂತೋಷವಾಯ್ತಮ್ಮ ನಿಮ್ಮನ್ನು ನೋಡಿ. ಸಮಯಕ್ಕೆ ಸರಿಯಾಗಿ ಬಂದಿರಿ. ಆಶಾಗೆ ಇನ್ನು ಕಷ್ಟವಿಲ್ಲ."

ಆಶಾ ದಿಗ್ಭ್ರಮೆಗೊಂಡು ದಿಟ್ಟಿಸಿದಳು ಆ ಹೆಂಗಸನ್ನು. ಜಗನ್ನಾಥನ ಸಂಗಡ ಬಂದವಳು ಅವನ ಹೆಂಡತಿಯಲ್ಲ, ತನ್ನ ಹಡೆದಮ್ಮ!

ತಮ್ಮಯ್ಯ ಅವರ ಮಾತಿಗೆ ತೊಂದರೆಯಾಗಬಾರದೆಂದುಕೊಳ್ಳುತ್ತ ಕೆಳಗಿಳಿದು ಹೋದರು. ಜಗನ್ನಾಥ ಆಶಾಳತ್ತ ನೋಡುತ್ತ "ನಿನ್ನ ಅಮ್ಮನನ್ನು ಇಲ್ಲಿಗೆ ಕರ್‍ಕೊಂಡು ಬಂದಿದ್ದೇನೆ. ನೋಡು, ತಾಯಿ ಮಗಳು ಎದುರೆದುರಿಗೆ ಇದ್ದೀರಿ. ಮಾತನಾಡಿ" ಎಂದ.

ಆಶಾ ಅವಳತ್ತ ದಿಟ್ಟಿಸುತ್ತಿದ್ದವಳು ಜಗನ್ನಾಥನೊಂದಿಗೆ ಮಾತು ಪ್ರಾರಂಭಿಸಿದಳು. ಮಾತಿನ ಮಧ್ಯೆ ಮಂಗಳೂರಿನಿಂದ ತನ್ನ ತಂದೆ ತಾಯಿ ಈವರೆಗೂ ಇಲ್ಲಿಗೆ ಬಂದಿಲ್ಲವೆಂದು ತಿಳಿದು ಅಚ್ಚರಿಪಟ್ಟ ತನ್ನಲ್ಲೇ. ಯಾಕೆ ಹೀಗಾಯಿತು? "ಕಷ್ಟವೋ ಸುಖವೋ ಅಂತೂ ಹೇಗೋ ಕಳೀತಾ ಇದೆ ನನ್ನ ದಿನಗಳು" ಎಂದು ನಿರ್ಲಿಪ್ತಳಂತೆ ಆಶಾ ನಕ್ಕು ಹೇಳಿದಾಗ ಅವನಿಗೇ ಸಂಕಟವಾಯಿತು. ಮಾತಿನ ಮಧ್ಯೆ ಅವಳು

ಇದ್ದಕ್ಕಿದ್ದಂತೆ ಗಂಭೀರಳಾಗಿ ಎಲ್ಲೋ ದಿಟ್ಟಿಸುತ್ತ "ಹಾಯ್ ಕಿವಿ ನೋವು.... ನೋವು..." ಎಂದರಚಿಕೊಂಡಾಗ ದಿಗಿಲುಗೊಂಡು ಅವಳ ಹತ್ತಿರಕ್ಕೆ ಬಂದು ಕಳಕಳಿಯಲ್ಲಿ ಮಾತನಾಡಲೆತ್ನಿಸಿದ. ಬಂದ ಅರ್ಧ ಗಂಟೆಯೊಳಗಾಗಿ ಆಶಾ ದೈಹಿಕವಾಗಿಯೂ, ಮಾನಸಿಕವಾಗಿಯೂ ತುಂಬ ಬಳಲಿಹೋಗಿದ್ದಳೆನ್ನುವುದು ತಿಳಿದುಹೋಯಿತು. ಹಿನ್ನೆಲೆ ಏನೆನ್ನುವುದು ತಿಳಿಯಲಿಲ್ಲ. ಆಶಾಳನ್ನು ಕೇಳುವುದಂತೂ ಸರಿಯಲ್ಲ. ಹೀಗಾಗಿ ಅವನು ಅಲ್ಲಿಂದೇಳುತ್ತ "ಆಶಾ, ನೀನು ನಿನ್ನ ಅಮ್ಮನ ಜೊತೆ ಮಾತನಾಡ್ತಿರು, ನಾನೀಗ ಬಂದೆ" ಎಂದಂದು ತಮ್ಮಯ್ಯನವರೊಂದಿಗೆ ಮಾತನಾಡಲು ಕೆಳಗಿಳಿದು ಹೋದ.

ತನ್ನೆದುರು ಕುಳಿತವಳತ್ತ ನೋಡಿದಳು ಆಶಾ.... ಈವರೆಗೂ ತನಗೆ ಯಾರು ಅಪರಿಚಿತಳಾಗಿ, ಅಜ್ಞಾತಳಾಗಿ ಇದ್ದಳೋ ಅವಳೇ ಇಂದು ಎದುರಿಗೆ ಕುಳಿತಿದ್ದಾಳೆ! ಯಾರನ್ನು ತಾನು ಕಣ್ತುಂಬ ನೋಡಿ 'ಅಮ್ಮಾ' ಎಂದು ಮಾತನಾಡಲು ಹಾರೈಸಿದ್ದೆನೋ ಅದೇ ಅಮ್ಮ ಕುಳಿತಿದ್ದಾಳೆ ತನ್ನೆದುರು. ಓ.... ಅವಳೀಗ ತನ್ನ ಅಮ್ಮ.... ಆದರೆ ಅದೇಕೋ ತುಂಬಲಿಲ್ಲ ಹೃದಯ, ಆನಂದದಿಂದ ಬೀಗಿ ಹೋಗಲಿಲ್ಲ. 'ಅಮ್ಮಾ...' ಎಂದು ಕೂಗಿ ಕರೆದು ಅವಳನ್ನು ತಬ್ಬಿಕೊಳ್ಳಬೇಕೆನಿಸಲಿಲ್ಲ.... ಅವಳೊಡನೆ ಮಾತನಾಡುವ ಇಚ್ಛೆಯೂ ಅವಳಿಗಾಗಲಿಲ್ಲ.

ವೃದ್ಧಾಪ್ಯ ಬರದೇ ಇದ್ದರೂ ಸುಕ್ಕುಗಟ್ಟಿದ ಕೆನ್ನೆಗಳು, ಮುಖಕ್ಕೆ ದೊಡ್ಡದೆನಿಸುವ ತುಸು ಬಾಗಿ ನಿಂತ ಮೂಗು, ಅಗಲವಾದ ಆಕರ್ಷಕ ಕಣ್ಣುಗಳು. ಆ ಕಣ್ಣಗಳಲ್ಲಿ ಏನೋ ಕರುಣೆಯ ಭಾವ. ಉಟ್ಟದ್ದು ನಸು ಹಳದಿ ಬಣ್ಣದ ರೇಶ್ಮೆ ಸೀರೆ. ಎಡಗೈಯ್ಯಲ್ಲೊಂದು ರಿಸ್ಟ್ ವಾಚ್. ಪ್ರಾಯದಲ್ಲಿ ರೂಪವತಿಯಾಗಿದ್ದಳೆಂದು ನೋಡಿದಾಕ್ಷಣ ತಿಳಿಯಿತು ಆಶಾಗೆ. ಅವಳನ್ನೇ ದಿಟ್ಟಿಸಿ ನೋಡುತ್ತಿದ್ದವಳು ಇದ್ದಕ್ಕಿದ್ದಂತೆ ಗಂಭೀರಳಾಗಿ ಕೇಳಿದಳು,

"ಇಲ್ಲಿಗೇನು ಬಂದದ್ದು? ರುಕ್ಮಿಣಿ ಅಂತ ಅಲ್ಲವೇ ನಿನ್ನ ಹೆಸರು?"

"ಹೂಂ, ಜಗನ್ನಾಥ 'ಹೋಗ್ಬರೋಣ ಇಲ್ಲಿಗೆ' ಅಂತ ಬಹಳ ದಿನಗಳಿಂದ ಹೇಳ್ತಾ ಇದ್ದ. ಈಗ ಸಮಯವಾಯ್ತು. ಅದಕ್ಕೆ ಬಂದಿದ್ದೇನೆ" ಎಂದಳು ರುಕ್ಮಾ.

ಪ್ರಾಯದ ಮಗಳನ್ನು ಹೇಗೆ ಮಾತನಾಡಿಸಬೇಕೆಂಬ ಸಂಕೋಚ ಅವಳಿಗೂ. ಅಣ್ಣನ ಆಶ್ರಯದಲ್ಲಿ ಅವಳು ಈ ಮಗುವನ್ನು ಬಿಟ್ಟು ಹೋದಾಗ ಅದಕ್ಕಿನ್ನೂ ಒಂದುವರೆ ವರ್ಷ. ಅನಂತರದಿಂದ ಈವರೆಗೂ ಮಗಳ ಮುಖವನ್ನು ಕಂಡಿಲ್ಲ.

"ಓ.... ನೀನು ನೀನಾಗಿಯೇ ಬರಲಿಲ್ಲ ಇಲ್ಲಿಗೆ!" ವ್ಯಂಗ್ಯ ನಗೆಯಲ್ಲಿ ಅಂದಳು ಆಶಾ, "ಜಗನ್ನಾಥನ ಒತ್ತಾಯದಿಂದ ಬಂದೆ ಅಲ್ಲವೇ. ಸರಿ, ಹೋಗಿನ್ನು...."

ರುಕ್ಮ ಕಣ್ಣಗಳಲ್ಲಿ ಅಪಾರ ವೇದನೆ ಕಾಣಿಸಿಕೊಂಡಿತು.

"ನನಗೀಗ ಇಪ್ಪತ್ತಾರನೆಯ ವರ್ಷ. ಇಷ್ಟು ವರ್ಷಗಳಿಂದಲೂ ಈ ಮಗು ಬದುಕಿದೆಯೋ ಸತ್ತಿದೆಯೋ ಎಂದು ನೋಡಲೂ ಬಾರದೇ ಇದ್ದ ನೀನು ಈಗ ಯಾವ ವಾತ್ಸಲ್ಯ ಹೊತ್ತು ಬಂದೆ ಇಲ್ಲಿಗೆ?"

ಅವಳ ಮುಖ ತಗ್ಗಿತು. ನೇರವಾಗಿ ಮಗಳನ್ನು ನೋಡದೆ ದೃಷ್ಟಿ ತಪ್ಪಿಸಿ ಕುಳಿತವಳು ಭಾರವಾದ ನಿಟ್ಟುಸಿರು ತೆಗೆದಳು.

"ನಿನ್ನ ಮಗಳನ್ನು ಅನಾಥ ಮಾಡಿ ಹೋಗಿ ಮಜಾ ಮಾಡ್ತಿದ್ದಿಯಲ್ಲ ಇನ್ನೊಬ್ಬನ ಸಂಗಡ. ಈಗ ನಿನ್ನ ಮುದಿ ಪ್ರಾಯದಲ್ಲಿ ನೆನಪಾಯಿತೇ ನನ್ನದು?" ತಿರಸ್ಕಾರದಲ್ಲಿ ಕೇಳಿದಳು ಆಶಾ.

"ಅದೆಲ್ಲ ದೊಡ್ಡ ಕಥೆ. ನಿನ್ನನ್ನು ನೋಡಬೇಕು, ನನ್ನ ಹತ್ರ ಕರೆಯಿಸಿಕೊಳ್ಳಬೇಕೆಂದರೂ ಆಗಲಿಲ್ಲ ನನ್ನಿಂದ...."

"ಪಾಪ, ಬಹಳ ಕೆಲಸ... ಈ ಇಪ್ಪತ್ತೈದು ವರ್ಷಗಳೂ ಕೆಲಸದ ಹೊರೆಯಿಂದಾಗಿ ಆಗಲಿಲ್ಲ ಅಲ್ಲವೇ?"

"ಕೆಣಕಬೇಡ" ನೊಂದು ನುಡಿದಳು ಆ ತಾಯಿ, "ನಿನ್ನ ಮತ್ತು ನನ್ನ ನಡುವೆಯಿರುವ ಅಡ್ಡ ತೆರೆಯನ್ನು ಸರಿಸಲಾಗಲಿಲ್ಲ ನನ್ನಿಂದ. ನಿನ್ನನ್ನು ನೋಡದೆ ಇಷ್ಟು ವರ್ಷಗಳು ನಾನೆಷ್ಟು ಚಡಪಡಿಸ್ತಾ ಇದ್ದೆ ಎನ್ನುವುದು ನನಗೆ ಮಾತ್ರ ಗೊತ್ತು..."

"ಯಾಕೆ ಸುಳ್ಳು ಹೇಳ್ತಿ? ಇಷ್ಟು ವರ್ಷಗಳೂ ಮಗಳನ್ನು ನೋಡ್ಬೇಕು ಅಂತ ತಪಸ್ಸು ಮಾಡ್ತಾ ಇಷ್ಟು ಕ್ಷೀಣವಾಗಿದ್ದೀಯಾ?"

ಕುರ್ಚಿಗೊರಗಿ ಕುಳಿತ ರುಕ್ಮಾ ಕಣ್ಣುಗಳು ಒದ್ದೆಯಾದವು. "ನಿನ್ನನ್ನು ಬೀದಿ ಭಿಕಾರಿಯನ್ನಾಗಿ ಮಾಡಬೇಕೆಂದು ನಾನು ಯೋಚಿಸಿದ್ದೇನೆಯೇ? ನಿನಗೆ ಕೆಟ್ಟದ್ದನ್ನು ಬಗೆಯಬೇಕು ಎಂಬ ಮನಸ್ಸು ನನ್ನದಾಗಿತ್ತೇ? ಇಲ್ಲಿ, ನಿನ್ನ ತಂದೆ ಸತ್ತ ನಂತರ ಅಣ್ಣನ ಆಶ್ರಯ ಆರು ತಿಂಗಳು ಸಿಕ್ಕಿತ್ತು ನನಗೆ. ಅಣ್ಣ ಬಹಳ ಒಳ್ಳೆಯವನು. ತಂಗಿ ಮತ್ತು ಅವಳ ಮಗು ತನ್ನ ಸಂಸಾರಕ್ಕೆ ಭಾರ ಎಂದೆನಿಸದೆ ಪ್ರೀತಿಯಿಂದ ನೋಡಿಕೊಂಡಿದ್ದ. ಆದರೆ ಒಂದು ವಿಚಿತ್ರ ಸನ್ನಿವೇಶದಲ್ಲಿ ದಯಾನಂದ ಶೆಟ್ಟಿಯವರ ಪರಿಚಯವಾಗಿ ಪ್ರೇಮ ಬೆಳೆದು ಮದುವೆ ಮಾಡಿಕೊಳ್ಳಲು ನಿರ್ಧರಿಸಿದಾಗ ಅಣ್ಣ ಒಪ್ಪಿಕೊಳ್ಳಲಿಲ್ಲ ನನ್ನ ಈ ಎರಡನೆಯ ಮದುವೆಗೆ. ಹೀಗಾಗಿ ಊರು ಬಿಟ್ಟು ಹೋಗೋಣ ಎಂದು ನಿರ್ಧರಿಸಿದೆ."

"ಆಗ ಮಗೂನ್ನ ಯಾಕೆ ಬಿಟ್ಟುಹೋದೆ?"

"ತಮ್ಮ ಜೊತೆ ನಿನ್ನನ್ನು ಕರ್ಕೊಂಡು ಹೋಗಲು ದಯಾನಂದ ಒಪ್ಪಿಕೊಳ್ಳಲಿಲ್ಲ. ಒಂದು ಕಡೆ ದೈಹಿಕತೃಪ್ತಿ. ಸುಖ ಭೋಗಗಳನ್ನು ಕೊಡುವ ವ್ಯಕ್ತಿ, ಇನ್ನೊಂದು ಕಡೆ ಮಮತೆಯ ಮಗು. ಒಂದನ್ನು ತೆಗೆದುಕೊಂಡರೆ ಇನ್ನೊಂದಿಲ್ಲ. ಮಗುವನ್ನೇ ನಂಬಿಕೊಂಡು ಬಾಳೋಣವೆಂದರೆ ಜೀವಮಾನವೆಲ್ಲ ಹೆರವರ ಆಶ್ರಯ, ಜೊತೆಗೆ ವಿಧವೆ ಪಟ್ಟ! ಹೀಗಾಗಿ ಯೋಚಿಸಿ ಯೋಚಿಸಿ ನಿನ್ನನ್ನು ಅಣ್ಣನಲ್ಲಿಯೇ ಬಿಟ್ಟು ಅಣ್ಣನಿಗೂ ತಿಳಿಸದೆ ದಯಾನಂದರ ಜೊತೆ ಹೊರಟುಹೋದೆ."

"ಆಮೇಲೆ ನನ್ನನ್ನು ಕರೆಯಿಸಿಕೊಳ್ಳಬೇಕಿತ್ತು."

"ಅವರಿಗೆ ಅವರದೇ ಆದ ಹಠ. ನಿನ್ನ ಗಂಡನ ಮೊದಲು ಮಗುವನ್ನು ಇಲ್ಲಿಗೆ ತರಲೇಬೇಡ ಎಂದರು ನಿರ್ದಾಕ್ಷಿಣ್ಯದಲ್ಲಿ. ನಾನೇ ಒಂದ್ಸಾರೆ ಹೋಗಿ ಮಗೂನ್ನ ನೋಡ್ಕೊಂಡು ಬರ್ತೇನೆ ಎಂದು ಅಂಗಲಾಚಿದಾಗ 'ಕಡಿದು ಹೋದ ಪಾಶವನ್ನು ಮತ್ತೆ ಒಂದಾಗಿಸುವುದು ಬೇಡ' ಎಂದರು ಅವರದೇ ಆದ ಹಠದಲ್ಲಿ. ಆಗಾಗ ಪತ್ರವನ್ನು

ಬರೆಯೋಣವೆಂದರೆ ಅದೂ ಆಗಲಿಲ್ಲ. ಅಣ್ಣನಿಗೆ ನಾನೆಲ್ಲಿ ಇದ್ದೇನೆ ಅಂತ ತಿಳಿದುಹೋದರೆ ನಿನ್ನನ್ನು ಕರೆದು ತರ್‍ತಾ ಇದ್ದರು. ಹೀಗಾಗಿ ನನ್ನದು ಅಜ್ಞಾತವಾಸ..."

ರುಕ್ಮಾ ಕಣ್ಣಲ್ಲಿ ನೀರಿಳಿಯಿತು. ಅಷ್ಟರಲ್ಲಿ ಚೆನ್ನಕ್ಕ ತಟ್ಟೆ ತುಂಬಾ ತಿಂಡಿಯನ್ನು ಕಾಫಿಯನ್ನು ತಂದು ಅವಳೆದುರು ಇರಿಸಿ ಕೋಣೆಯ ಫ್ಯಾನ್‌ನ ಗುಂಡಿಯನ್ನೊತ್ತಿದಳು. ರುಕ್ಮಾ ಕಾಫಿ ಮಾತ್ರ ಕುಡಿದು ತಿಂಡಿಯನ್ನು ಹಾಗೇ ಅವಳ ಕೈಲಿರಿಸಿ "ಇನ್ನು ಮಧ್ಯಾಹ್ನದ ಊಟ ಸಾಕು" ಎಂದಳು ಅಡಿಗೆಯವಳತ್ತ ನೋಡುತ್ತ.

ಚೆನ್ನಕ್ಕ ಹೊರಟುಹೋದ ಮೇಲೆ ಮುಂದುವರಿಯಿತು ಮಾತು. "ದಯಾನಂದ ನನಗೆ ಸುಖ, ಐಶ್ವರ್ಯ, ಏನು ಬೇಕೋ ಅದನ್ನೆಲ್ಲ ಕೊಟ್ಟು ನನ್ನ ಮನಸ್ಸಿಗೆ ವಿರುದ್ಧ ಹೇಳದೆ ಅಷ್ಟು ಚೆನ್ನಾಗಿ ನೋಡಿಕೊಂಡಿದ್ದರು. ಆದರೂ ನನ್ನ ಮನದಲ್ಲಿ ಸುಖವೆಲ್ಲಿತ್ತು? ನಿನ್ನನ್ನು ಆಗಾಗ ನೆನಪು ಮಾಡಿಕೊಳ್ತಿದ್ದೆ. ಈಗ ನನ್ನ ಆಶಾ ಹೇಗಾಗಿರಬಹುದು. ಶಾಲೆಗೆ ಹೋಗ್ತಾ ಇದ್ದಾಳೆಯೇ, ನನ್ನನ್ನು ಕರೀತಾ ಇದ್ದಾಳೆಯೇ? ಎಂದೆಲ್ಲ ಯೋಚನೆ ಮಾಡ್ತಿದ್ದೆ...."

ಆಶಾ ಮನಸ್ಸು ಮೃದುವಾಯಿತು ಒಂದು ಕ್ಷಣ. ತಾನು ತನ್ನ ತಾಯಿಯ ವಿಷಯದಲ್ಲಿ ಕೆಟ್ಟ ಭಾವನೆಗಳನ್ನು ಇರಿಸಿಕೊಂಡಿದ್ದೆನಲ್ಲ ಎಂಬ ಬೇಸರವೂ ಆಯಿತು. ಆದರೂ ವ್ಯಂಗ್ಯದ ಧ್ವನಿಯಲ್ಲಿ ಹೇಳಿದಳು.

"ಅನಾಥಾಶ್ರಮ ನಡೆಸ್ತಾ ಇದ್ದೀರಲ್ಲ ನೀವಿಬ್ಬರೂ. ಊರಲ್ಲೆಲ್ಲ ಇರುವ ಅನಾಥ ಮಕ್ಕಳಿಗೆ ಆಶ್ರಯದಾತರು ಆಗಿದ್ದ ದಯಾನಂದರು ನಿನ್ನ ಮಗುವಿಗೆ ಆಶ್ರಯ ನೀಡಲಿಲ್ಲ ಅಲ್ಲವೇ? ನೂರು ಮಕ್ಕಳಿಗೆ ತುತ್ತುಣ್ಣಿಸಿದ ಕೈ ಅವರದು.... ತ್ಯಾಗ ಬುದ್ಧಿ. ಆದರೆ ನಿನ್ನ ಮಗುವಿನ ನೆರಳಿಗೆ ಹೆದರಿದರು ಅಲ್ಲವೇ? ಅನಾಥಾಶ್ರಮ, ಸಮಾಜಸೇವೆ ಎನ್ನುತ್ತಿದ್ದ ಆ ನಿನ್ನ ಪ್ರೇಮಿಗೆ ನಿನ್ನ ಮಗುವಿನ ಬಗ್ಗೆ ದಯೆ ಮೂಡಲಿಲ್ಲ....! ಓಹೋಹೋ.... ಇರಲಿ. ಈಗೆಲ್ಲಿ ಇದ್ದೀಯಾ?"

"ತುಮಕೂರಿನಲ್ಲೇ ಇದ್ದೀನಿ. ರುಕ್ಮಿಣಿ ಅನಾಥಾಶ್ರಮವನ್ನು ದಯಾನಂದರೇ ಕಟ್ಟಿದ್ದು. ಸರಕಾರ, ಸಹಕಾರ ಸಂಘಗಳು ಇನ್ನಿತರ ಚಂದಾ ಹಣದಿಂದ ನಡೀತಾ ಇದೆ ಆಶ್ರಮ."

"ಮಕ್ಕಳೆಷ್ಟಿದ್ದಾರೆ?"

"ಎರಡು ವರ್ಷದೊಳಗಿನವು ಹತ್ತೋ ಹನ್ನೆರಡೋ ಇವೆ. ಉಳಿದವರು ತುಸು ದೊಡ್ಡವರು. ಕಸದ ತೊಟ್ಟಿಯಲ್ಲಿನ, ತಾಯಿಗೆ ಬೇಡವಾದ ಮಗು, ಮದುವೆಗೆ ಮುನ್ನವೇ ಕೆಟ್ಟ ದಾರಿಗಿಳಿದ ಪರಿಣಾಮವಾಗಿ ಹುಟ್ಟಿದ ಮಗು ನಮ್ಮ ಆಶ್ರಮದ ಸೊತ್ತು. ಪ್ರಾಯ ಬಂದ್ಮೇಲೆ ಒಬ್ಬೊಬ್ಬರೇ ಚದುರಿಹೋಗ್ತಾರೆ."

ಕುಳಿತು ಬೆನ್ನು ಸೋತ ಆಶಾ ಹಾಸಿಗೆಯನ್ನೊರಗಿದಳು. ರುಕ್ಮಾ ಅವಳ ಮಂಚದ ಹತ್ತಿರ ಬಂದು ಕುಳಿತುಕೊಳ್ಳುತ್ತ ಮೃದುವಾಗಿ ಅಂದಳು, "ನನ್ನ ಬಗ್ಗೆ ನೀನು ತಪ್ಪು ಅಭಿಪ್ರಾಯ ಹೊಂದಿದ್ದಿ ಎಂದು ನಿನ್ನನ್ನು ನೋಡಿದಾಕ್ಷಣವೇ ತಿಳಿಯಿತು. ಆಶಾ, ಲೋಕದಲ್ಲಿ ಕೆಟ್ಟ ಮಕ್ಕಳು ಇದ್ದಿರಬಹುದು. ಆದರೆ ಕೆಟ್ಟ ತಾಯಿ ಇರಲಾರಳು ನಿಜವೇ?"

ಇತ್ತ ತಮ್ಮಯ್ಯನವರೊಂದಿಗೆ ಮಾತನಾಡುತ್ತ ಜಗನ್ನಾಥ ಎಲ್ಲ ವಿಷಯಗಳನ್ನು ಸಂಗ್ರಹಿಸಿಕೊಂಡ. ಅಂದೇ ಮಧ್ಯಾಹ್ನ ಊಟದ ನಂತರ ನೇರವಾಗಿ ಕುಮಟೆಗೆ ನಡೆದ, ಶಿವಮೂರ್ತಿಯ ಸಂಗಡ ಮಾತನಾಡಲು.

ಅಲ್ಲಿಂದ ಅವನು ಹಿಂದಿರುಗಿ ಬಂದಾಗ ರಾತ್ರಿ ಹತ್ತುಗಂಟೆ. ಮುಖ ಕಂದಿ ಹೋಗಿತ್ತು. ತಮ್ಮಯ್ಯ ಅವನ ಮುಖವನ್ನು ಕಂಡಾಕ್ಷಣ ವಿಷಾದದಲ್ಲಿ "ಮೂರ್ತಿ, ತುಂಬ ಹಟವಾದಿ... ನಾನೂ ಬೇಕಾದಷ್ಟು ಹೇಳಿನೋಡಿದೆ. ನಮ್ಮ ಅದೃಷ್ಟ ಜಗನ್ನಾಥ, ಈ ಮನೆ ಇನ್ನೆಂದಿಗೂ.... ನಗಲಾರದು!" ಎಂದರು.

"ನನ್ನಿಂದಾದಷ್ಟು ಪ್ರಯತ್ನಿಸಿದೆ..." ಸೋತು ನುಡಿದ ಜಗನ್ನಾಥ, "ಆಶಾ ಪರವಾಗಿ ಭಿಕ್ಷೆ ಕೇಳಿದೆ. ಆದರೆ ಅವನೋ ನಿರ್ಲಿಪ್ತ. ಆಶಾ ಮೇಲೆ ಅವನಿಗೆ ಕೋಪವಿಲ್ಲವೆಂದು ಮಾತಿನಿಂದ ತಿಳಿಯಿತು..." "ಹಾಗಾದರೆ ಲೋಹಿತಾಕ್ಷ ಎಲ್ಲಿದ್ದಾನೋ ಅಂತ ಹುಡುಕಿ ಆಶಾಳನ್ನು ಅವನ ಜೊತೆ ಇರುವಂತೆ ಮಾಡ್ತೇನೆ ಎಂದೆ, ಅವನು ಇಲ್ಲಿಗೆ ಬರಲು ನಿರಾಕರಿಸಿದಾಗ. ಅದಕ್ಕವನು 'ನನ್ನ ಮತ್ತು ಆಶಾ ಸಂಬಂಧ ಎಂದೋ ಕಡಿದುಹೋಗಿದೆ. ಅವಳ ವಿಷಯದಲ್ಲಿ ನೀವು ಏನು ಬೇಕಾದರೂ ತೀರ್ಮಾನ ಮಾಡಿಕೊಳ್ಳಿ' ಎಂದುಬಿಟ್ಟ...."

ತಮ್ಮಯ್ಯ ಅರ್ಥವಾಗದವರಂತೆ ನೋಡಿದರು, "ಅಂದರೆ....? ಲೋಹಿತಾಕ್ಷನನ್ನು ಹುಡುಕ್ತೀರಾ? ನಿಮ್ಮ ತೀರ್ಮಾನವೇನು?"

"ಮನೆ ಮುರಿಯಬೇಕೆಂಬ ಇಚ್ಛೆ ಯಾರಿಗಿದೆ ಹೇಳಿ? ಶಿವಮೂರ್ತಿ ಇಲ್ಲಿಗೆ ಬಂದುಳಿಯಲಿ ಅಂತ ಆ ರೀತಿ ಸುಳ್ಳು ಹೇಳಿದೆ. ಅದರಿಂದಲೂ ಅವನು ಬದಲಾಗಲಿಲ್ಲ..... ಅವಳ ವಿಷಯದಲ್ಲಿ ಅವನ ಮನಸ್ಸು ಮುರಿದುಹೋಗಿದೆ..."

"ಮುರಿಯಲಿ ಬಿಡಿ" ರೋಷದಲ್ಲಿ ಅಂದರು ತಮ್ಮಯ್ಯ. "ಅವನ ಹಟ ಅವನಿಗೇ ಇರಲಿ. ಆದರೆ ಸೊಸೆ ಇದೇ ಮನೆಯಲ್ಲಿರಬೇಕು. ಅವಳಿಗೆ ಯಾವ ಕೊರತೆಯೂ ಆಗದಂತೆ ನಾನು ನೋಡಿಕೊಳ್ಳಬಲ್ಲೆ!"

ರುಕ್ಮಾ ಸೂಕ್ಷ್ಮಮತಿ,... ರಂಗಮ್ಮನ ತಾತ್ಸಾರ, ತಾಯಿಯ ಪ್ರೀತಿಯಿಂದ ವಂಚಿತವಾಗಿರುವ, ನೀಲಿಯ ಆರೈಕೆಯಲ್ಲಿರುವ, ಈ ಮನೆಗೆ ಬೇಡವಾಗಿರುವ ಮಗುವನ್ನು ಕಂಡು 'ಅಯ್ಯೋ' ಎಂದೆನಿಸದಿರಲಿಲ್ಲ. ಮಗುವಿಗೇನಾದರೂ ಹೆಚ್ಚು ಕಡಿಮೆಯಾದರೆ ಯಾರಿಗೂ ಬೇಸರವಾಗದು. ಹೀಗಾಗಿ ಆಶಾಳನ್ನು, ತಮ್ಮಯ್ಯ ರಂಗಮ್ಮನವರನ್ನು, ಒಪ್ಪಿಸಿ ಮಗುವನ್ನು ತನ್ನ ಜೊತೆಗೆ ಕರೆದೊಯ್ಯಲು ನಿಶ್ಚಯಿಸಿದಳು.

"ನೀನು ಯಾವಾಗ ಮಗೂನ್ನ ಕರ್‍ಕೊಂಡು ಬಾ ಎನ್ನುತ್ತೀಯೋ ಆಗ ನಿನ್ನ ಹತ್ರ ಮಗೂನ್ನ ಕರ್‍ಕೊಂಡು ಬರ್ತೇನೆ. ಅಲ್ಲಿಯವರೆಗೂ ನನ್ನ ಅನಾಥಾಶ್ರಮದಲ್ಲಿ ಬೆಳೀತಾ ಇರ್‍ತಾನೆ ನನ್ನ ಮೊಮ್ಮಗ!"

ಜಗನ್ನಾಥ ಮತ್ತು ರುಕ್ಮಾ ವಂಡ್ಸೆಯಿಂದ ಹೊರಡುವಾಗ ಆಶಾಳ ಒಂದು ತಿಂಗಳ ಮಗು ರುಕ್ಮಾ ಕೈಗಳಲ್ಲಿ ಮಲಗಿತ್ತು ಬೆಚ್ಚಗೆ.

೨೦

ಆಮೇಲಿನ ದಿನಗಳಲ್ಲೆಲ್ಲ ಆಶಾ ಮಾನಸಿಕ ಅಶಾಂತಿ, ಆಂದೋಲನದಲ್ಲಿ ತೊಳಲಾಡಿದಳು. ದೇಹ ಇನ್ನಷ್ಟು ಕ್ಷೀಣವಾಯಿತು. ಹಗಲೆಲ್ಲ ಚಿಂತೆ, ರಾತ್ರಿ ನಿದ್ರೆಯಿಲ್ಲದೆ ಹೊರಳಾಟ. ಚೆನ್ನಕ್ಕ ಕೋಣೆ ಹೊರಗೆ ಬಾಗಿಲ ಹತ್ತಿರ ಮಲಗುತ್ತಾ ಇದ್ದರೂ ತನ್ನ ಕೋಣೆಯೊಳಗೆ, ತನ್ನ ಹತ್ತಿರವೇ ಯಾರೋ ಇದ್ದಾರೆ ಎಂಬ ಭ್ರಮೆ ಅವಳಿಗೆ. ಕಿವಿಯ ಹತ್ತಿರ ಯಾರದೋ ಅಸ್ಪಷ್ಟ ಧ್ವನಿ. ಖಾಲಿಯಾಗಿರುವ ಈ ಕೋಣೆಯಲ್ಲಿ ಯಾರಿದ್ದಾರೆ ಈಗ? ಮಂಚದಡಿಯಲ್ಲಿ ಮೂಲೆ ಮೂಲೆಯಲ್ಲಿ ಬಗ್ಗಿ ಬಗ್ಗಿ ನೋಡುತ್ತಾಳೆ... ಸಣ್ಣ ಸದ್ದು ಕೇಳಿಸಿದರೂ ಹಾರಿಬಿದ್ದು ಕಣ್ಣರಳಿಸಿ ನೋಡುತ್ತಾಳೆ ಸುತ್ತಲೂ. ಕಣ್ಣುಗಳನ್ನು ಮುಚ್ಚಿಕೊಂಡರೆ ಯಾರೋ ನಿಂತಿದ್ದಾರೆ ಎದುರಿನಲ್ಲಿ. ಉದ್ದದ ಜಡೆಯೊಂದು ತನ್ನ ಸುತ್ತ ಸುತ್ತ ತಿರುಗುತ್ತಿದೆ. ಕಣ್ಣು ತೆರೆದರೆ ಯಾರೂ ಇಲ್ಲ ಎದುರಿನಲ್ಲಿ. ಹಾಗಾದರೆ ತಾನು ಯಾರನ್ನು ನೋಡಿದೆ...? ಕಾಂತಿಯನ್ನೇ?.... ಎಂದುಕೊಂಡು ಇದ್ದಕ್ಕಿದ್ದಂತೆ ಬೆಚ್ಚಿಬಿದ್ದು ಕಿಟಾರನೆ ಕೂಗಿಕೊಳ್ಳಲು ಬಾಯ್ತೆರೆದವಳು ತನ್ನ ದುರ್ಬಲತನಕ್ಕೆ ನಾಚಿಕೊಂಡು ಸುಮ್ಮನಾಗುತ್ತಾಳೆ. ಆಗಾಗ ಕಾಣಿಸಿಕೊಳ್ಳುತ್ತಿದ್ದ ಕಿವಿಶೂಲೆ ಈಗ ದಿನದಲ್ಲಿ ಅನೇಕ ಬಾರಿ ಕಾಣಿಸಿಕೊಳ್ಳತೊಡಗಿತು.

ತನ್ನದಾದ ಮಗುವನ್ನು ರುಕ್ಮಾ ತೆಗೆದುಕೊಂಡು ಹೋದಮೇಲೆ ಒಂದೆರಡು ದಿನ ಅದರ ನೆನಪು ಬಂದರೂ ‘ಹೋಗಲಿ... ಅಲ್ಯಾದರೂ ಸುಖವಾಗಿರಲಿ’ ಎಂದು ಹಾರೈಸಿತು - ಅವಳ ತಾಯಹೃದಯ. ‘ಮಗು ಈಗ ನನ್ನ ಜೊತೆ ಸರಿಯಾಗಿ ಹೊಂದಿಕೊಂಡಿದೆ. ನೀನೇನೂ ಚಿಂತಿಸಬೇಡ’ ಎಂದು ರುಕ್ಮಾಳಿಂದ ಕಾಗದ ಬಂದಾಗ, ‘ಓ.... ನನ್ನನ್ನೆತ್ತಿ ಆಡಿಸದ ಅಮ್ಮನಿಗೆ ಮೊಮ್ಮಗನನ್ನು ಆಡಿಸುವ ಭಾಗ್ಯ!’ ಎಂದು ನಕ್ಕಳು ತನ್ನಲ್ಲೇ.

ಹೊಸಮನೆ ಮಾಡಿದಂದಿನಿಂದ ನೀಲಿಯ ಮುಖದಲ್ಲಿ ಹೊಸ ಕಳೆ. ಮೈ ಕೈ ತುಂಬಿಕೊಂಡು ಗೆಲುವಾಗಿದ್ದಾಳವಳು. ಈಗ ಮೈದುನನ ತಂಟೆ ಅವಳಿಗಿಲ್ಲ. ‘ಮದ್ವಿ ಆದ್ಮೇಲಿಂದ ಇದೇ ಮೊದಲು ನಂಗೆ ಸುಖಸಿಕ್ಕಿದ್ದಮ್ಮಾ. ಆ ಮನಿ ಬಿಟ್ಟಿದ್ದೇ ನಂಗೆ ಹಿಡ್ಕೊಂಡಿದ್ದ ಶನಿಯೂ ತೊಲಗಿಹೋಯ್ತು’ ಎಂದಿದ್ದಳು.

ನೀಲಿಗಿರುವ ಸುಖ ತನಗಿಲ್ಲ. ತನಗೆ ಸಕಲೈಶ್ವರ್ಯಗಳಿದ್ದರೂ ಹೆಣ್ಣಿಗೆ ಏನು ಬೇಕಿತ್ತೋ ಅದೇ ದೊರೆಯಲಿಲ್ಲ. ಜಬ್ಬಣ್ಣ ಇತ್ತೀಚೆಗೆ ಇನ್ನೂ ವೃದ್ಧನಾಗಿಹೋಗಿದ್ದ. ಮಾತೂ ಕಡಿಮೆ. ಆಶಾ ಮಾತನಾಡಿಸಿದರೆ ‘ನಾ ನಂಬಿಕೆಯಿಲ್ಲದ ಮನುಷಾ ಅಮ್ಮಾ ತಿಂಬಕ್ಕೆ ಅಕ್ಕು. ರಾಮಾ ರಾಮಾ.... ದೇವರು ನಂಗೆಂತಾ ಶಿಕ್ಷೆ ಕೊಡ್ತನೋ ಯಾರಿಗೆ ಗೊತ್ತು?’ ಎಂದು ಅನ್ನುತ್ತಿದ್ದ ಮೈ ಬಗ್ಗಿಸಿಕೊಂಡು.

ಡಿಸೆಂಬರ್ ತಿಂಗಳ ಮಧ್ಯವಾರದಲ್ಲಿ ಅದೊಂದು ದಿನ ಹರೀನ್ ಗುಡ್ಡದ ಆ

ಹಾಳು ಬಿದ್ದ ಮನೆ ಕುಸಿದು ನೆಲವನ್ನಪ್ಪಿತು. ಅದರ ಹಂಚುಗಳನ್ನು ಇದ್ದಬಿದ್ದ ಮರಮಟ್ಟುಗಳನ್ನು ಯಾರೋ ಹೊತ್ತುಕೊಂಡು ಹೋಗಿಬಿಟ್ಟರು ಸದ್ದಿಲ್ಲದಂತೆ. ಲೋಹಿತಾಕ್ಷನ ಮೇಲಿನ ಕಾತರತೆ, ನಿರೀಕ್ಷೆ ಅದರೊಂದಿಗೇ ನೆಲಸಮವಾಗಿ ಹೋಯಿತು.

ಅವಳ ಮನಸ್ಥಿತಿ ಇನ್ನಷ್ಟು ಕೆಟ್ಟು ಹುಚ್ಚು ಹುಚ್ಚು ಮಾತುಗಳೂ ಪ್ರಾರಂಭವಾದವು. ತಮ್ಮಯ್ಯನವರು ಡಾಕ್ಟರರ ಹತ್ತಿರ ಕರೆದೊಯ್ದಾಗ "ಹಿಸ್ಟೀರಿಯಾ ಇರಬೇಕು. ಬೇಗ ಮಾನಸಿಕ ತಜ್ಞರತ್ತ ಕರೆದುಕೊಂಡು ಹೋಗಿ" ಎಂದರು.

ಹೌಹಾರಿ ಹೋದ ತಮ್ಮಯ್ಯ ಓಡಿದರು ಮಗನತ್ತ. ಅವನೋ ಈಗಲೂ ತಳ್ಳಿ ಹಾಕಿದ ನಿರ್ಲಕ್ಷ್ಯದಲ್ಲಿ. ಮಂಗಳೂರಿಗೆ ಕಾಗದ ಬರೆದರೆ ಒಂದಕ್ಕೂ ಉತ್ತರ ಬರಲಿಲ್ಲ ಅಲ್ಲಿಂದ.

ಜನವರಿ ತಿಂಗಳು ಕಾಲಿಟ್ಟಿತು. ಆಶಾ ಮನಸ್ಥಿತಿ ಇನ್ನೂ ಹದ ಮೀರಿತು. ಈ ಸಮಯದಲ್ಲಿ ಬಂದ ಈಶ್ವರಿಗೂ ಅವಳ ಸ್ಥಿತಿ ಕಂಡು ದಿಗಿಲಾಯಿತು. ನೂರು ಸಮಾಧಾನದ ಮಾತುಗಳನ್ನು ಹೇಳುತ್ತ ತಾನಿರುವಷ್ಟು ದಿನವೂ ಅವಳ ಮನದಲ್ಲಿ ಗೆಲುವು ಮೂಡಿಸಲು ಪ್ರಯತ್ನಿಸಿದಳು. ತತ್ಕಾಲದ ಉಪಶಮನ!

ಶಿವಮೂರ್ತಿಯ ಮೇಲೆ ದಿನೇ ದಿನೇ ಬೆಳೆದುಕೊಂಡಿತು ದ್ವೇಷ. ಆದರೂ ಅವರು ತನ್ನ ಕೈಹಿಡಿದವರು. ತಾನು ಯಾವುದೋ ಹಗಲುಗನಸಿನಲ್ಲಿ ಸಿಕ್ಕಿಬಿದ್ದು ಇನ್ನೇನನ್ನೋ ಮಾಡಿಕೊಂಡೆ. ತಪ್ಪು ತನ್ನದು. ಅದಕ್ಕೋಸ್ಕರ ಇನ್ನೊಬ್ಬರನ್ನು ದೂರುವುದರಿಂದ ಪ್ರಯೋಜನವೇನೂ ಸಿಗದು. ತನ್ನಿಂದ ಅವರು ದೂರ ಸರಿದರೂ ತನಗೆ ದೂರಸರಿಯುವ ಹಕ್ಕಿಲ್ಲ. ಮೂರ್ತಿಯ ಜೊತೆಯಲ್ಲಿ ಒಂದಾಗಿ ಇರಬೇಕು ತಾನು. ಅವರು ತನ್ನೆಲ್ಲ ತಪ್ಪುಗಳನ್ನು ಕ್ಷಮಿಸಿ ಮೊದಲಿನಂತೆ ನೋಡಿಕೊಳ್ಳಬೇಕು. ಅವರಿಂದ ಒಂದೇ ಒಂದು ಹಿತದ ನುಡಿ, ಆತ್ಮೀಯ ಕರೆ ಕೇಳಿದರೆ ಸಾಕು, ತಾನು ಚೇತರಿಸಿಕೊಳ್ಳಬಲ್ಲೆ.

ಸುಪ್ತವಾದ ಭಾವನೆ ಮೆಟ್ಟಲು ಮೆಟ್ಟಲಾಗಿ ಮೇಲೇರಿತು. ಅಂದೂ ನನ್ನೊಂದಿಗೆ ಜಗಳವಾಡಿ ಹೋದವರು ಆಮೇಲೆ ಬಂದದ್ದು ಕಾಂತಿಯ ತಿಥಿಗೆ. ಆಗಲೂ ನಮ್ಮಿಬ್ಬರಲ್ಲಿ ಮಾತಿಲ್ಲ. ಈರ್ಷ್ಯೆ, ತಿರಸ್ಕಾರದಿಂದ ನಾನೂ ಅವರೊಡನೆ ಮಾತನಾಡಲು ಬಯಸಲಿಲ್ಲ.... ಇನ್ನಾದರೂ ಅವರನ್ನು ನಾನಿಲ್ಲಿಗೆ ಬರಮಾಡಿಕೊಳ್ಳಲಾರೆನೇ? ಮದುವೆಯಾದಂದಿನಿಂದ ಅವರು ನನಗೇನು ಕೊರತೆ ಮಾಡಿದ್ದಾರೆ?.... ಆದರೂ ನಾನು ನತದೃಷ್ಟೆ. ಅವರಿಂದ ಕ್ಷಮೆ ಸಿಕ್ಕೀತೇ?

ಹೀಗೆ ಯೋಚಿಸುತ್ತಿದ್ದವಳು ಒಂದು ಮಧ್ಯಾಹ್ನ, ಇದ್ದಕ್ಕಿದ್ದಂತೆ ಯಾರಿಗೂ ತಿಳಿಸದೆ ಕುಮಟೆಗೆ ಹೊರಟುಬಿಟ್ಟಳು. ಹೇಗಾದರೂ ಸರಿಯೆ, ತಾನು ಶಿವಮೂರ್ತಿಯನ್ನು ಇಲ್ಲಿಗೆ ಕರೆತರಬೇಕು, ಅಥವಾ ತಾನೇ ಕುಮಟೆಯಲ್ಲಿ ಉಳಿಯಬೇಕು, ಇನ್ನು ಒಂಟಿತನ ಸಾಕು ಎಂಬ ಹಟ ಉದಯಿಸಿತ್ತು ಅವಳಲ್ಲಿ. ವಂಡ್ಸೆಯಿಂದ ಕುಮಟೆಗೆ ನೇರವಾದ ಬಸ್ಸುಗಳಿಲ್ಲ. ಕುಂದಾಪುರ, ಬೈಂದೂರು, ಭಟ್ಕಳ ಹಾಗೂ ಹೊನ್ನಾವರ, ಅಲ್ಲಿಂದ ಕುಮಟೆ. ಹೀಗೆ ನಾಲ್ಕು ಬಸ್ಸುಗಳನ್ನು

ಬದಲಾಯಿಸಬೇಕು. ಕುಮಟೆ ತಲುಪುವಾಗ, ಕತ್ತಲೆಯಾಗಲೂಬಹುದು. ಆದರೆ ಯೋಚಿಸುವಷ್ಟು ತಾಳ್ಮೆ ಅವಳಲ್ಲಿರಲಿಲ್ಲ.

* * * *

ಕುಮಟೆ ತಲುಪುವಾಗ ಚೆನ್ನಾಗಿ ಕತ್ತಲಾಗಿದ್ದು ಬೀದಿಯ ದೀಪಗಳು ಬೆಳಗಿದ್ದವು. ಶಿವಮೂರ್ತಿಯ ಮನೆಯನ್ನು ಹುಡುಕುವುದೂ ಹೆಚ್ಚಿಗೆ ಕಷ್ಟವಾಗಲಿಲ್ಲ ಅವಳಿಗೆ. ಹೂಗಿಡಗಳಿಂದ ಕೂಡಿದ ಅಗಲವಾದ ಕಂಪೌಂಡ್‌ನಲ್ಲಿದ್ದ ದೊಡ್ಡ ಮಹಡಿಮನೆಯ ಎಡಪಾರ್ಶ್ವದಲ್ಲಿರುವುದೇ ಶಿವಮೂರ್ತಿಯ ಕೋಣೆ. ಈ ಸಮಯದಲ್ಲಿ ಬೀಗ ಹಾಕಲಾಗಿತ್ತು ಆ ಕೋಣೆಗೆ. ಕಾಲೇಜಿನಿಂದ ಬಂದಿರಲಾರ. ಬರುವತನಕ ಕಾದು ಕುಳಿತುಕೊಳ್ಳುವದೊಳಿತು ಎಂದು ಅಲ್ಲಿಯೇ ಮೆಟ್ಟಿಲಿನ ಮೇಲೆ ಕುಳಿತಳು. ಪ್ರಯಾಣದ ಆಯಾಸದಲ್ಲಿ ತಿರುಗುತ್ತಿತ್ತು ತಲೆ.

ಹತ್ತು ನಿಮಿಷಗಳಾಗಿದ್ದವಷ್ಟೆ. ದೊಡ್ಡ ಮನೆಯಿಂದ ಇಣುಕಿ ನೋಡಿದವು ಎರಡು ಕುತೂಹಲದ ಮುಖಗಳು. ಕಿಸಕ್ಕನೆ ಹಲ್ಲು ಕಿರಿಯಿತು ಇನ್ನೊಂದು. ಇಣಕಿದಂತೆ ಕಣ್ಮರೆಯಾದವು ಅವರೆಡೂ ಮುಖಗಳು. ಮತ್ತೆರಡು ನಿಮಿಷಗಳಲ್ಲಿ ಇನ್ನೊಂದು ಗಂಡಸು ಮುಖವೂ ಇಣುಕಿ ನೋಡಿ ಅದೂ ಕಿಸಕ್ಕನೆ ನಕ್ಕಿತು.

ಕ್ರೋಧದಿಂದ ಮೈಯ್ಯೆಲ್ಲ ಉರಿಯಿತು. ತನ್ನವರಿಗೋಸ್ಕರ ತಾನಿಲ್ಲಿ ಕಾಯುತ್ತಾ ಇದ್ದೇನೆ, ಅವರೋ ಮಂಗಗಳಂತೆ ನಗುತ್ತಿದ್ದಾರಲ್ಲ.... ತತ್‌ಕ್ಷಣ ಅಲ್ಲಿಂದೆದ್ದು ಸರಸರನೆ ಆ ದೊಡ್ಡ ಮನೆಯ ಮೆಟ್ಟಲನ್ನೇರಿ ಒಳಗೆ ಬಂದುಬಿಟ್ಟಳು. ವಿಶಾಲವಾದ ಆಧುನಿಕ ಸಲಕರಣೆಯಿಂದ ಕೂಡಿದ ಕೋಣೆ. ತಿರುಗುವ ಸೀಲಿಂಗ್ ಫ್ಯಾನ್ ಕೆಳಗೆ ಕುಳಿತಿದ್ದಾರೆ ನಾಲ್ವರು. ಸೀಸದ ಭಾರವಾಗಿದ್ದ ತಲೆ ಇನ್ನು ಸ್ವಲ್ಪ ಹೊತ್ತಿಗೆ ಸಿಡಿದು ಹೋಗುತ್ತಿದೆಯೆಂದೆನಿಸುವಾಗ ಇಲ್ಲಿ ಈ ಅಪರಿಚಿತರ ನಗು...?

"ಯಾರು ಬೇಕು?" ಒಳಗಿನಿಂದ ಬಂದಿತು ಪ್ರಶ್ನೆ.

"ಶಿವಮೂರ್ತಿ ಮನೇಲಿಲ್ಲವೇ? ಅದೇ ತಾನೇ ಅವರ ಕೋಣೆ?"

"ಹಾಂ.... ಅದೇ ಮನೆ" ದಪ್ಪಗೆ ಕಾಣುತ್ತಿದ್ದ ಮನೆಯ ಯಜಮಾನನಂತಿದ್ದವರೊಬ್ಬರು ಉಳಿದವರತ್ತ ತಿರುಗಿ ಏನೋ ಹೇಳಿದರು ಕೊಂಕಣಿಯಲ್ಲಿ. ಇತರರು ಕಿಸಿ ಕಿಸಿ ನಗುತ್ತ ಅಲ್ಲಿಂದೆದ್ದು ಒಳಗೆ ನಡೆದರು. ಮತ್ತೆ ಈ ನಗು ಈ ತಕ್ಕೆ?

"ಮನೇಲಿಲ್ಲವೇ ಅವರು? ಎಷ್ಟು ಹೊತ್ತಾಗುತ್ತೆ ಬರುವಾಗ?"

"ಸಮಯ ಎಲ್ಲಿದೆ ಅವರಿಗೆ? ಎಷ್ಟು ಹೊತ್ತಾಗುತ್ತದೆಯೋ ಯಾರಿಗೆ ಗೊತ್ತು. ಹುಶ್, ನೀವು ಹೊಸಬರಿರಬೇಕು."

"ಈ ಊರಿಗೆ ಹೊಸಬಳು."

"ಹುಶ್ ಹುಶ್... ಅದೇ ನಿಮಗೆ ಗೊತ್ತಿಲ್ಲ. ಇಶ್... ಇಶ್... ಎಲ್ಲಿಂದ ಬರ್‍ತಾ ಇದ್ದೀರಿ? ವೃತ್ತಿಯಲ್ಲಿ ಹೊಸಬರೋ?" ಕಣ್ಣಿನ ತುದಿಯಲ್ಲಿ ಪರೀಕ್ಷಿಸುವವರಂತೆ ನೋಡಿದರು ಅವಳನ್ನು.

"ಏನು.... ಏನ್ಹೇಳಿದಿರಿ?"

"ಈ ವೃತ್ತಿಯಲ್ಲಿ ಹೊಸಬರೋ ಎಂದು ಕೇಳಿದೆ. ಉಸ್.... ಯಾವಾಗ್ಲೂ ನಿಂತರದವರು ಬರ್ತಾನೆ ಇರ್ತಾರೆ ಆ ಕೋಣೆಗೆ.... ಈಗ ನಾಲ್ಕು ದಿನಗಳಿಂದ ಯಾರೂ ಇಲ್ಲ. ಹ್ಹೆ.... ಹ್ಹೇ... ಈಗ ನೀವು...!"

ಕೆನ್ನೆಗೆ ಅಪ್ಪಳಿಸಿದಂತಾಯಿತು.... "ಏನ್ಮಾತಾಡ್ತಾ ಇದ್ದೀರಿ? ಏನ್ರೀ...." ಕಣ್ಣರಳಿಸಿ ಮನೆ ಯಜಮಾನನನ್ನು ದಿಟ್ಟಿಸಿದಳು.

"ನಮಗೇ ಜೋರು ಮಾಡ್ತೀರಲ್ಲ..." ಹಲ್ಲು ಕಡಿದರು ಆ ಯಜಮಾನರು, "ಏನೋ ಮರ್ಯಾದೆಯಿರುವವರು ಅಂತ ಆ ಕೋಣೆಯನ್ನು ಬಿಟ್ಟುಕೊಟ್ಟಿದ್ದೇನೆ ಅವರಿಗೆ. ಹೇಯ್... ಹೆಯ್... ಅವರೋ, ಚೆಲ್ಲಾಟವಾಡ್ತಿದ್ದಾರೆ ಅಲ್ಲಿ..."

"ಸುಳ್ಳು.... ಎಲ್ಲಾ ಸುಳ್ಳು..." ಚೀರಿದಳು ಆಶಾ.

"ಈ ಕೋಣೆಯಿಂದ ಕಳುಹಿಸಬೇಕೆಂದು ಎಷ್ಟು ಸಾರೆ ಯೋಚಿಸಿದ್ದೆ, ಆಗಲಿಲ್ಲ. ಛೀ... ಛೀ.... ನಿಮ್ಮಂತವರಿಗೂ ಬುದ್ಧಿಯಿಲ್ಲ. ಹೀಕ್... ಗಂಡಸರು ಇದ್ದಲ್ಲಿಗೆ ಹೆಣ್ಣು ಹೋಗುವುದು ಮರ್ಯಾದೆ ಅಲ್ಲ... ಹೆಣ್ಣಿನ ಬಳಿಗೇ ಬರಬೇಕು ಗಂಡಸರು..."

"ನಾಲಿಗೆ ಬಿಗಿ ಹಿಡೀರಿ ರಾಯರೇ" ತಲೆತಿರುಗಿ ಬೀಳುವಂತಾಗಲು ಬಾಗಿಲ ಚೌಕಟ್ಟನ್ನು ಹಿಡಿದುಕೊಂಡು ಕೂಗಿದಳು ಆಶಾ, "ನಾನೊಬ್ಬಳು ಮರ್ಯಾದೆಯಿರುವ ಹೆಂಗಸು. ಮದುವೆಯಾದವಳು ಮಗುವಿನ ತಾಯಿ! ಶಿವಮೂರ್ತಿ ನನ್ನ ಕೈಹಿಡಿದವರು... ತಿಳಿಯಿತೇ?"

"ತೋಬಾ.... ತೋಬಾ..." ಅವರು ದಿಗಿಲು ಬಿದ್ದು ಕೆನ್ನೆ ತಟ್ಟಿಕೊಳ್ಳುತ್ತ ಕುರ್ಚಿಯನ್ನು ಸರಿಸಿ, "ಬನ್ನಿ ಬನ್ನಿ... ಕೂತ್ಕೊಳ್ಳಿ.... ತಪ್ಪಾಯ್ತು" ಎಂದಂದು ಏರು ಸ್ವರದಲ್ಲಿ ಕೊಂಕಣಿಯಲ್ಲಿ ಒಳಕೋಣೆಯತ್ತ ನೋಡುತ್ತ ಏನೋ ಹೇಳಿ, "ಕೂತ್ಕೊಳ್ಳಿ ಅಮ್ಮಾ... ದ್ಯಾವಾ... ದ್ಯಾವಾ.... ತಪ್ಪಾಯ್ತು ನನ್ನಿಂದ.... ಏನೋ ಹೇಳಿಬಿಟ್ಟೆ" ಎಂದರು ಅಳುಕುತ್ತ.

ಆಶಾ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಸಣ್ಣ ಹುಡುಗನೊಬ್ಬ ಬಿಸಿ ಬಿಸಿ ಕಾಫಿ ತಂದ.... ಅದನ್ನು ಕುಡಿದಾಗ ಅದೆಷ್ಟೋ ಹಾಯೆನಿಸಿತು. ಕುಡಿದ ಗ್ಲಾಸನ್ನು ಕೆಳಗಿರಿಸುತ್ತ ಯಜಮಾನರತ್ತ ತಿರುಗಿದಳು.

"ಎಲ್ಲಾ ಹೇಳಿಬಿಡಿ ರಾಯರೇ, ನಮ್ಮ ಯಜಮಾನರು ಎಲ್ಲಿದ್ದಾರೆ? ಏನ್ಮಾಡ್ತಾರೆ ಅಂತ. ಅವರನ್ನು ಕರ್ಕೊಂಡು ಹೋಗ್ಬೇಕು ಅಂತ ನಾನಿಲ್ಲಿಗೆ ಬಂದದ್ದು."

"ಹೋಗಿ... ಹೋಗಿ. ಎಷ್ಟೋ ಬಾರಿ ನಾವೂ ಹೇಳಿದ್ದೆವು ಈ ಮಾತನ್ನು. ರಾಮ... ರಾಮಾ... ಹೇರಳ ಆಸ್ತಿಯಂಟಂತಲ್ಲ ನಿಮಗೆ. ಅದನ್ನೆಲ್ಲ ಬಿಟ್ಟು... ಹಾಯ್... ಹಾಯ್... ಇಲ್ಲಿ ಯಾಕೆ ಸುಮ್ಮನೆ..."

"ರಾಯರೇ, ನನ್ನ ಹತ್ರ ಏನೂ ಮುಚ್ಚಿಡಬೇಡಿ. ಇದ್ದ ಸಂಗತಿ ಇದ್ದ ಹಾಗೆ ಹೇಳಿಬಿಡಿ..... ಶಿವಮೂರ್ತಿಯ ಆ ಕೋಣೇಲಿ ಯಾವ ಹುಡುಗಿಯರಿದ್ದರು... ಹೇಳಿ ಪ್ಲೀಸ್..."

"ತೋಬಾ.... ತೋಬಾ. ಏನೂ ಕೇಳ್ಬೇಡಿ ನನ್ನನ್ನು, ನಾನೀಗ ಬಂದೆ" ಎಂದವರೇ ಅವಳಿಂದ ತಪ್ಪಿಸಿಕೊಳ್ಳಲೆಂದೋ ಅಥವಾ ಇನ್ನೇನು ಕೆಲಸವಿತ್ತೋ ಒಳಗೆ ಸರಿದು ಹೋದರು.

ತಿರುಗುವ ಸೀಲಿಂಗ್ ಫ್ಯಾನ್‌ನಂತೆ ತನ್ನ ತಲೆಯೂ ತಿರುಗುತ್ತಿದೆಯೆಂದೆನಿಸಿತು. ಯಾರದೋ ನಗುವಿನ ಸದ್ದು, "ಹ್ಹ... ಹ್ಹ.... ನನ್ನ ಸ್ಥಾನವನ್ನು ತುಂಬಲೆಂದು ನೀನು ಬಂದಿದ್ದೀಯಾ.... ಆದರೆ ನಿನ್ನಿಂದೆಂದಿಗೂ. ಆ ಸ್ಥಾನವನ್ನು ತುಂಬಲಾಗಲಿಲ್ಲ. ಹ್ಹ... ಹ್ಹ...."

ಎಲ್ಲಿಂದ ಕೇಳಿಸಿತು ಈ ನಗು? ಸುತ್ತಲೂ ನೋಡಿದಳು, ಯಾರೂ ಇಲ್ಲ. ಯಾರೋ ತನ್ನ ಹತ್ತಿರವೇ ನಿಂತು ಮಾತನಾಡುತ್ತಿದ್ದಾರೆ. ಅದೇಕೋ ಕಿವಿಯೊಳಗೆಲ್ಲ ತಡೆಯಲಾರದ ವೇದನೆ. ಓ.... ವಂಡ್ಸೆಯ ಆ ಮಹಡಿ ಕೋಣೆಯಲ್ಲಿದ್ದರೆ ಮಾತ್ರ ತನಗೆ ಹೀಗೆಲ್ಲ ಆಗುವುದೆಂದುಕೊಂಡಿದ್ದಳು. ಕಾಂತಿಯ ಛಾಯೆ ಆ ಕೋಣೆಯನ್ನೆಲ್ಲ ತುಂಬಿಕೊಂಡಿದೆಯೆಂದು ತಿಳಿದಿದ್ದಳು. ಆದರೆ ಇಲ್ಲಿ, ಈ ಅಪರಿಚಿತ ಊರಿನಲ್ಲಿಯೂ ಹೀಗಾಗುತ್ತಿದೆ...!

ಆ ಕ್ಷಣದಲ್ಲಿ ತನ್ನಲ್ಲೇ ಮಾತಿಗಾರಂಭಿಸಿದಳು. ಮೊದಲು ತನ್ನಲ್ಲೇ. ಆ ಮೇಲೆ ದೊಡ್ಡ ಸ್ವರದಲ್ಲಿ. ಏನೇನೋ ಅರ್ಥವಿಲ್ಲದ ಮಾತುಗಳು. ಒಳಗಿನವರು ಏನಂದುಕೊಂಡಾರು ಎಂಬ ಕಲ್ಪನೆಯೂ ಇಲ್ಲ ಅವಳಿಗೆ. ಅರ್ಧ ಗಂಟೆಯ ನಂತರ ಮೋಟರ್ ಬೈಕ್‌ನ ಸದ್ದು.

ಆಶಾ ಧಡಕ್ಕನೆ ಎದ್ದು ಓಡಿದಳು ಹೊರಗೆ. ಶಿವಮೂರ್ತಿ ಮೋಟರ್-ಬೈಕ್‌ನಿಂದ ಇಳಿದು ಕೋಣೆಯ ಬಾಗಿಲನ್ನು ತೆರೆಯುತ್ತಾ ಇದ್ದ. ಆಶಾ ಇಲ್ಲಿಗೆ ಬಂದಾಳೆಂಬ ಕಲ್ಪನೆಯೂ ಇಲ್ಲದ ಕಾರಣ ಈಗ ಅವಳು ತನ್ನೆದುರು ಬಂದು ನಿಂತಾಗ, ಅದೂ ವರಾಂಡಾದ ದೀಪದ ಬೆಳಕಿನಲ್ಲಿ ಮುಖ ಅಸ್ಪಷ್ಟವಾಗಿ ಕಾಣಿಸಿದಾಗ "ಯಾರದು?" ಎಂದು ಕೇಳಿದ ಅಚ್ಚರಿಯಲ್ಲಿ.

ಆಗಲೇ ಕೋಣೆಯ ಬಾಗಿಲನ್ನು ತೆರೆದು ವಿದ್ಯುತ್ ಗುಂಡಿಯನ್ನೊತ್ತಿದ್ದ. ಕತ್ತಲೆ ತುಂಬಿದ ಕೋಣೆಯಲ್ಲಿ ಬೆಳಕಾದಾಗ ಎದುರು ನಿಂತವಳ ಮುಖವೂ ಸ್ಪಷ್ಟವಾಗಿ ಕಾಣಿಸಿದಾಗ ಅವನ ಆಶ್ಚರ್ಯಕ್ಕೆ ಮೇರೆಯೇ ಇಲ್ಲ.... "ಅರೆ.....? ನೀನು.... ನೀನಿಲ್ಲಿಗೆ ಹೇಗೆ ಬಂದೆ?" ಎಂದು ಕೇಳಿದ.

ಅವನ ಹಿಂದೆಯೇ ಒಳಗೆ ಬಂದ ಆಶಾ ಒಂದಿಷ್ಟು ಸಂಕೋಚಿಸದೆ ಅವನ ಮಂಚದ ಮೇಲೆ ಕುಳಿತಳು. ಈ ರಾತ್ರಿಯ ಹೊತ್ತು ಹೀಗೆ ಅನಿರೀಕ್ಷಿತವಾಗಿ ಬಂದ ಹೆಂಡತಿಯನ್ನು ಕಂಡು ಶಿವಮೂರ್ತಿಗೆ ಅಚ್ಚರಿಯೊಂದಿಗೆ ದಿಗಿಲೂ ಆಗಿತ್ತು. ಒಬ್ಬಳೇ ಇಲ್ಲಿಗೆ ಬಂದುಬಿಟ್ಟಿದ್ದಾಳೆ. ಮೊದಲಿಗಿಂತಲೂ ಈಗ ಇನ್ನಷ್ಟು ಕ್ಷೀಣಳಾಗಿದ್ದು ಕಣ್ಗಳ ಕಾಂತಿ ಕಡಿಮೆಯಾಗಿದೆ.

"ಏನು.... ಇಲ್ಲಿಯವರೆಗೆ ಬಂದೆ?" ಕೋಣೆಯ ಬಾಗಿಲನ್ನು ಮುಚ್ಚಿ ಕಿಟಕಿಯ ಬಾಗಿಲನ್ನು ತೆರೆಯುತ್ತಾ ಕೇಳಿದ ಶಿವಮೂರ್ತಿ.

"ನಿಮ್ಮನ್ನು ನೋಡೋದಕ್ಕಾಗಿ ಬಂದೆ ಇಲ್ಲಿಯವರೆಗೆ."

"ನಾನೇ ಬರ್‍ತಾ ಇದ್ದೆನಲ್ಲ ಶನಿವಾರ."

"ನೀವು ಬರಲಾರಿರಿ ಅಂತ ಗೊತ್ತು ನನಗೆ. ಪೃಥ್ವಿ ಯಾವಾಗಲೂ ಕೇಳ್ತಿರ್‍ತಾನೆ ನಿಮ್ಮ ವಿಷಯ.... ನೀವು ನಮ್ಮನ್ನೆಲ್ಲ ಮರೆತುಬಿಟ್ಟಿರೋ ಹ್ಯಾಗೆ. ಈ ಸಲ ನಾನಿಲ್ಲಿಗೆ ಬಂದದ್ದು ನಿಮ್ಮನ್ನು ನನ್ನ ಸಂಗಡ ಕರೆದೊಯ್ಯಲು" ನಗುವ ಕಣ್ಣಿಗಳಿಂದ ಶಿವಮೂರ್ತಿಯನ್ನು ನೋಡುತ್ತ "ಇಲ್ಲೇ ನನ್ನ ಹತ್ರ ಕುಳಿತುಕೊಳ್ಳಿ" ಎಂದಳು.

"ಕಾಲೇಜಿದೆ, ಬರಲು ಸಾಧ್ಯವಿಲ್ಲ."

"ಮಣ್ಣು ಬೀಳಲಿ ನಿಮ್ಮ ಕಾಲೇಜಿಗೆ. ಇನ್ನಂತೂ ನಾನೇನೂ ಸುಮ್ಮನಿರುವವಳಲ್ಲ. ವಂಡ್ಸೆಗೆ ನೀವು ಬರಲೇಬೇಕು. ಇಲ್ಲವಾದರೆ ನಾನೇ ಗಂಟುಮೂಟೆ ಕಟ್ಕೊಂಡು ದಿಢೀರ್ ಅಂತ ಇಲ್ಲಿಗೇ ಬಂದುಬಿಡ್ತೇನೆ. ಆಮೇಲೆ ನೀವೇನು ಮಾಡ್ತಿರೋ ನೋಡೋಣ."

"ಅಲ್ಲಿಗೆ ಬರುವುದು ಬಿಡುವುದು ನನ್ನ ಇಷ್ಟ."

"ನಿಮ್ಮ ಜೋತೇಲಿ ಇರುವುದೂ ನನ್ನ ಇಷ್ಟ. ಏನು ಅನ್ಯಾಯ ಮಾಡಿದ್ದೇನಂತ ಹೀಗೆ ದೂರವಿಟ್ಟಿದ್ದೀರಿ ನನ್ನನ್ನು? ನಿಮ್ಮ ಸ್ವಭಾವವೇ ಅರ್ಥವಾಗ್ತಿಲ್ಲ ನನಗೆ."

"ನನಗೆ ನಿನ್ನ ಸ್ವಭಾವ ಅರ್ಥವಾಗುತ್ತಿಲ್ಲ."

"ಇರಬಹುದು..." ಆಶಾ ಮಂಚದಿಂದೆದ್ದು ಬಂದು ಅವನ ಹತ್ತಿರ ನಿಂತು ಅಂದಳು, "ಮೊದಲಿನಿಂದಲೂ ನನ್ನದು ಭಿನ್ನ ಸ್ವಭಾವ. ಪ್ರತಿಕ್ಷಣವೂ ಹೊಸದಾಗಿರಬೇಕು ನನ್ನ ಪಾಲಿಗೆ."

"ಹಾಗೋ....! ಅದಕ್ಕಾಗಿ ಇನ್ನೊಬ್ಬನ ಸಂಗಡ ಸುಖವನ್ನು ಅರಸಿದೆ ಅಲ್ಲವೇ? ಎಲ್ಲಾ ತಿಳಿಯಿತು ಬಿಡು."

"ನನ್ನ ಪಾಲಿಗೆ ಆ ಕಗ್ಗಾಡಿನ ಮನೆಯಲ್ಲಿ ನೀವಿರಲಿಲ್ಲ.... ಆದದ್ದನ್ನು ಮರೆತುಬಿಡಿ. ಬನ್ನಿ, ಇನ್ನಾದರೂ ಒಂದಾಗಿ ಇರೋಣ. ಇಲ್ಲವಾದರೆ ಖಂಡಿತಾ ಆ ಕೋಣೆಯಲ್ಲಿ ಹುಚ್ಚು ಹಿಡಿಯುತ್ತೆ ನನಗೆ..." ಅವನ ಭುಜದ ಮೇಲೆ ಕೈಯ್ಯಿರಿಸುತ್ತ ಅಂದಳು.

"ಕಾಲುಕೆದರಿ ಜಗಳಾಡೋದಕ್ಕೆ ಬಂದಿದ್ದೀಯಾ...." ಅಸಹನೆಯಿಂದ ಸಿಡಿದ ಮೂರ್ತಿ ತನ್ನ ಮೇಲಿರುವ ಅವಳ ಕೈಯ್ಯನ್ನು ಆಚೆ ತಳ್ಳಿದ, "ಹೊರಟುಹೋಗು ಇಲ್ಲಿಂದ."

"ಹೋಗ್ತೇನೆ" ಗದ್ಗದಿತಳಾಗಿ ಆಶಾ ಮಂಚದ ತುದಿಯಲ್ಲಿ ಕುಳಿತು ಅಂದಳು, "ಸದ್ಯದಲ್ಲಿಯೇ ನನಗಾಗಿ ಹೊಸ ಬದುಕು ಕಾದಿದೆ. ಹೇಗಿದ್ದರೂ ನಮ್ಮ ಮಗೂನ್ನ ಅಮ್ಮ ಕರ್‍ಕೊಂಡು ಹೋಗಿದ್ದಾಳೆ ತುಮಕೂರಿಗೆ.... ಇನ್ಮೇಲೆ ನೀವು (ಸಿಟ್ಟಿನಲ್ಲಿ) ಹಾಯಾಗಿರಿ. ಅಥವಾ ನನ್ನಂತವಳನ್ನು ಇನ್ನೊಂದ್ಸಲ ಮದುವೆಯಾಗಿ ವಂಡ್ಸೆ ಮೂಲೆಯಲ್ಲಿ ಬಿಸಾಕಿ ನೀವಿಲ್ಲಿ ಸುಖಿಯಾಗಿರಿ."

"ಬುದ್ಧಿ ಸರಿಯಾಗಿದೆಯೋ ನಿನಗೆ?"

"ಇಷ್ಟು ಹೊತ್ತೂ ಸರಿಯಾಗಿದೆ."

ಅಷ್ಟರಲ್ಲಿ ಹುಡುಗನೊಬ್ಬ ಬಾಗಿಲನ್ನು ತಟ್ಟಿದ, "ಸರ್ ನಿಮಗೊಂದು ಫೋನ್ ಬಂದಿದೆ" ಎಂದ.

ಶಿವಮೂರ್ತಿ ಕೂಡಲೇ ಎದ್ದು ಹೊರಟ ಪಕ್ಕದ ಮನೆಗೆ. ಅವನು ಹೋದೊಡನೆ ಕೋಣೆಯಲ್ಲಿ ನಿಶ್ಶಬ್ದತೆ ಆವರಿಸಿತು. ಕೋಣೆ ಶಾಂತವಾದೊಡನೆ ಕಿವಿಯೆಲ್ಲಾ ನೋವು... ಯಾರೋ ಮಾತನಾಡಿದಂತೆ ಸದ್ದು. ಅದೇನೋ ಹೆದರಿಕೆ. ಆಶಾ ಪುನಃ ತನ್ನಲ್ಲೇ ಮಾತಿಗಾರಂಭಿಸಿದಳು. ಹತ್ತು ನಿಮಿಷಗಳಲ್ಲಿ ಹಿಂದಿರುಗಿದ ಶಿವಮೂರ್ತಿ ಧಢಾರನೆ ಬಾಗಿಲು ಮುಚ್ಚಿದ.

"ಮನೇಲಿ ಯಾರಿಗೂ ಹೇಳದೆ ಬಂದಿದ್ದೀಯಾ?" ಅವಳಿಂದ ತುಸು ದೂರದಲ್ಲಿ ನಿಂತು ಅಬ್ಬರಿಸಿದ ಮೂರ್ತಿ.

ತನ್ನ ಮಾತನ್ನು ನಿಲ್ಲಿಸಿ ಬಿದ್ದು ಬಿದ್ದು ನಗಲಾರಂಭಿಸಿದಳು ಆಶಾ. "ಮನೇಲಿ ಹೇಳಿ ಬರಲಿಲ್ಲ. ಹೇಳುವಂತಹ ವಿಷಯವೂ ಇದಲ್ಲ. ಆಹಾ.... ಎಷ್ಟು ಚೆನ್ನಾಗಿ ಕೋಪಗೊಳ್ತೀರಿ ನೀವೂ...."

"ಅದೇ ಇಷ್ಟೆಲ್ಲ ಗಲಾಟೆ. ವಂಡ್ಸೆಯಲ್ಲಿ ನಿನ್ನನ್ನು ಹುಡುಕಿ ಹುಡುಕಿ ಕುಂದಾಪುರಕ್ಕೆ ಬಂದು ಫೋನ್ ಮಾಡಿದ್ದಾರೆ ಅಪ್ಪ. ನಗ್ತಾ ಇದ್ದೀಯಲ್ಲ ನೀನು. ಬುದ್ಧಿ ಸರಿಯಾಗಿಲ್ಲವೇ ನಿನಗೆ.... ನಿನ್ನಿಂದ ನಾನು ಕೆಟ್ಟುಹೋದೆ."

ಆಶಾ ಹುಬ್ಬುಗಳು ಮೇಲೇರಿದವು. ಆದರೂ ಶಾಂತಳಾಗಿ ಪ್ರಶ್ನಿಸಿದಳು, "ಬರ್ತೀರಾ ವಂಡ್ಸೆಗೆ?"

"ಅದೆಂದಿಗೂ ಸಾಧ್ಯವಿಲ್ಲ. ನಾವಿಬ್ಬರೂ ಇನ್ನೆಂದಿಗೂ ಒಂದಾಗಲಾರೆವು..."

ಇದೇ ವಿಷಯದಲ್ಲಿ ಇಬ್ಬರಿಗೂ ಚರ್ಚೆ. ಮಾತಿಗೆ ಮಾತು ಏರಿತು. ಒಬ್ಬರನ್ನೊಬ್ಬರು ಜರೆದುಕೊಂಡರು. ಗುಡುಗು-ಸಿಡಿಲುಗಳು ಅಪ್ಪಳಿಸಿದಂತೆ ಇಬ್ಬರ ಸ್ವರವೂ ಏರುತ್ತ ಕೊನೆಗೊಮ್ಮೆ ಆಶಾ ಕೆಣಕಿದ ಸರ್ಪವಾದಳು.

"ಕಲಿತವರು ನೀವೆಲ್ಲ. ನಿಮ್ಮಲ್ಲಿ ಕನಿಕರ, ಸಹಾನುಭೂತಿ, ಕರುಣೆ ಒಂದೂ ಇಲ್ಲ. ನಿಮ್ಮಂತೆ ನನಗೂ ಜೀವವಿದೆ, ಹೃದಯ, ಮನಸ್ಸಿದೆಯೆಂದು ಯಾರೂ ಯೋಚಿಸಲಿಲ್ಲ. ನಾನೊಬ್ಬಳು ಮನೇಲಿ ಇದ್ದೇನೆಂದೂ ನಿಮಗ್ಯಾರಿಗೂ ಅನಿಸಲಿಲ್ಲ. ಪ್ರೇಮದ ಮಧುರಭಾವನೆಗಳನ್ನು ಹೊತ್ತುಕೊಂಡು ನಿಮ್ಮ ಹಳ್ಳಿಗೆ ಕಾಲಿರಿಸಿದ ನನಗೆ ಸಿಕ್ಕಿದ್ದು ಕಹಿ ವಾತಾವರಣ..... ನಂಜಿನ ನುಡಿಗಳು!"

"ಜಗಳವಾಡಲು ಬಂದಿದ್ದರೆ ಹೊರಟ್ಹೋಗು..." ಕಾಲನ್ನು ಅಪ್ಪಳಿಸುತ್ತ ಕುರ್ಚಿಯಲ್ಲಿ ಕುಳಿತ ಮೂರ್ತಿ.

"ಇಷ್ಟು ದಿನವೂ ನಿಮ್ಮ ಮನೇಲಿ ಬಾಯ್ಮುಚ್ಚಿಕೊಂಡು ತೆಪ್ಪಗೆ ಇದ್ದಾಯ್ತು. ಮನೆಯವರೆಲ್ಲ ಕಾಂತಿಯನ್ನು ಹೊಗಳಲಿ, ನನಗೇನೂ ಬೇಸರವಿಲ್ಲ. ಆದರೆ ನೀವು... ನೀವೂ ಮರೆಯಲಿಲ್ಲ ಅವಳನ್ನು. ಜೀವಂತ ಕೊಂದುಬಿಟ್ಟಿರಿ ನನ್ನನ್ನು. ಉತ್ಸಾಹದ ಚಿಲುಮೆಯಂತೆ ಪುಟಿಯುತ್ತಿದ್ದ ಆಶಾ, ಮರದ ಕೊರಡು ಈಗ.... ಒಬ್ಬರಿಗೂ ಬಿರುನುಡಿಗಳನ್ನಾಡದೆ ನೋವು ದುಃಖಗಳನ್ನು ನುಂಗಿಕೊಳ್ಳುತ್ತಿದ್ದ ಆಶಾ ಈಗ

ಬದಲಾಗಿದ್ದಾಳೆ.... ಯಾರಿಂದ? ಎಲ್ಲಾ ನಿಮ್ಮಿಂದ! ನಿಮ್ಮನ್ನು ಮದುವೆಯಾದಾಗ ನಿಮ್ಮ ರೂಪ, ಗುಣ, ವ್ಯಕ್ತಿತ್ವಕ್ಕೆ ಎಂತಹ ಬೆಲೆ ಕಟ್ಟಿದ್ದೆ ನಾನು.... ಅಂಗೈ ಮೇಲಿಟ್ಟುಕೊಂಡು ನಿಮ್ಮನ್ನು ಸದಾ ಪೂಜಿಸಬೇಕು ಎಂದುಕೊಂಡಿದ್ದೆ. ಆದರೆ ನನಗೇನು ಸಿಕ್ಕಿತು? ನನಗೀಗ ಯಾರ ಮೇಲೆಯೂ ನಂಬಿಕೆಯಿಲ್ಲ."

"ಯೂ ಗೆಟ್ ಔಟ್..." ತಲೆಯನ್ನು ಭದ್ರವಾಗಿ ಹಿಡಿದು ಜೋರಾಗಿ ಚೀರಿದ ಶಿವಮೂರ್ತಿ.

"ನಂನದನವಾಗಬೇಕಿದ್ದ ಮನೆ ನನ್ನ ಪಾಲಿಗೆ ನರಕವಾಯಿತು. ಅದಕ್ಕೆ ನೀವೇ ಕಾರಣರು. ಆದರೂ ತಪ್ಪಿತಸ್ಥಳು ನಾನು.... ನಿಮ್ಮನ್ನು ವಂಚಿಸಿದೆ..." ಅವನ ಹತ್ತಿರಕ್ಕೆ ಬಂದ ಆಶಾ ಕಣ್ಣಿಳಿಂದ ನೀರಿಳಿಯಿತು, "ಅತ್ತೆ ಮಾವಂದಿರ ಕಣ್ಣುಗಳಲ್ಲಿ ನಿಕೃಷ್ಟಳು. ನನ್ನ ತಪ್ಪುಗಳು ಏನೇ ಇದ್ದರೂ ಕ್ಷಮಿಸಿ. ನಿಮ್ಮ ಕಾಲು ಹಿಡಿದು ಕೇಳಿಕೊಳ್ತೇನೆ.... ಬನ್ನಿ ನನ್ನ ಸಂಗಡ. ಇನ್ನಾದರೂ ನಿಮ್ಮ ಈ ಆಶಾಗೆ ಸುಖಬದುಕು ನೀಡಿ..." ಹಾಗೆನ್ನುತ್ತ ಅವನ ಎರಡೂ ಕಾಲುಗಳನ್ನು ಹಿಡಿದುಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ತನ್ನನ್ನು ತಬ್ಬಿಹಿಡಿದ ಅವಳಿಗೆ ಎರಡು ಸಾಂತ್ವನದ ಮಾತುಗಳನ್ನು ಹೇಳುವಷ್ಟೂ ಮೃದುವಾಗಲಿಲ್ಲ ಅವನ ಮನಸ್ಸು. ಅವಳ ವಿಷಯದಲ್ಲಿ ತಿರಸ್ಕಾರವನ್ನೇ ತುಂಬಿಕೊಂಡಿದ್ದ ಅವನಿಗೆ ಅವಳ ಪ್ರತಿ ನಡತೆ, ಮಾತುಗಳೂ ನಾಟಕೀಯವೆಂಬಂತೆ ಕಂಡುಬಂದುದರಿಂದಲೂ ಅವಳ ಬಿಳುಪೇರಿದ ಮುಖವನ್ನು ಕಂಡಾಕ್ಷಣ ಇದ್ದಕ್ಕಿದ್ದಂತೆ ಲೋಹಿತಾಕ್ಷನ ನೆನಪು ಬಂದುದರಿಂದಲೂ ಮನಸ್ಸು ಅಸಹ್ಯದಿಂದ ಇನ್ನಷ್ಟು ಕಹಿಯಾಗಿ ತನ್ನನ್ನು ತಬ್ಬಿ ಹಿಡಿದಿದ್ದ ಅವಳನ್ನು ತನಗರಿಯದಂತೆ ನೂಕಿಬಿಟ್ಟ.

ಆಧಾರ ತಪ್ಪಿದ ಆಶಾ ನೆಲಕ್ಕುರುಳಿದವಳು ಬುಸುಗುಡುತ್ತ ಎದ್ದು ನಿಂತು ಅವನ ಇಡೀ ವ್ಯಕ್ತಿತ್ವವನ್ನೇ ತನ್ನ ಕಣ್ಣುಗಳಿಂದ ಹೀರಿಕೊಳ್ಳುವಂತೆ ತೀಕ್ಷ್ಣವಾಗಿ ನೋಡಿದಳು ಅವನತ್ತ. ಆ ತೀಕ್ಷ್ಣತೆ, ಅವಳ ಮುಖದಲ್ಲಿ ಅಡಗಿದ ಕ್ರೂರಭಾವವನ್ನು ಕಂಡು ತತ್ತರಿಸಿದ ಶಿವಮೂರ್ತಿ ತಲೆ ಕೆಳಗೆ ಹಾಕಿದ. ಎರಡು ನಿಮಿಷ ಅದೇ ದೃಷ್ಟಿಯಲ್ಲಿ ನೋಡುತ್ತಿದ್ದ ಆಶಾ ಮಿಂಚಿನ ವೇಗದಲ್ಲಿ ಮಂಚದ ಮೇಲಿನ ತನ್ನ ಪರ್ಸನ್ನು ಎತ್ತಿಕೊಂಡು ಧಡಾರನೆ ಬಾಗಿಲನ್ನು ತೆರೆದು ಬಿರುಗಾಳಿಯಂತೆ ಹೊರಟುಹೋದಳು ಹೊರಗೆ.

೨೧

ಕತ್ತಲೆ ತುಂಬಿದ ನಿರ್ಜನ ರಸ್ತೆ. ದೂರ ದೂರದಲ್ಲಿ ಒಂದೊಂದು ಬೀದಿ ದೀಪಗಳು. ಮನೆಗಳ, ಅಂಗಡಿಗಳ ಬಾಗಿಲುಗಳೂ ಮುಚ್ಚಿದ್ದು ಒಳಗಿನ ದೀಪಗಳೂ ಆರಿವೆ. ರಾತ್ರಿಯ ಹತ್ತುಗಂಟೆ ಕಳೆದಿರಬಹುದು. ಈಗ ಹೋಗುವುದಾದರೂ ಎಲ್ಲಿಗೆ? ವಂಡ್ಸೆಗೆ ಹೋಗಿ ತಲುಪುವುದು ಹೇಗೆ? ಈ ಅಪರಿಚಿತ ಊರಿನಲ್ಲಿ ಯಾರ ಮನೆಯಲ್ಲಿ

ಉಳಿದುಕೊಳ್ಳಬೇಕು? ಬಸ್‌ಸ್ಟೇಂಡ್‌ನಲ್ಲಿ ಕುಳಿತು ಬೆಳಗಾದ ಮೇಲೆ ಹೋಗೋಣ ಎಂದುಕೊಂಡು ಆಶಾ ದೊಡ್ಡದಾಗಿ ತನ್ನಲ್ಲೇ ಮಾತನಾಡಿಕೊಳ್ಳುತ್ತ ನಡೆದಳು ಮುಂದಕ್ಕೆ.

ಬಲಪಾರ್ಶ್ವದಲ್ಲಿ ದೊಡ್ಡ ಹೋಟೆಲ್. ಆಶಾ ಅತ್ತ ಗಮನಿಸದೆ ಮುಂದುವರಿಯುತ್ತಿದ್ದಾಗ ಎದುರಿನಿಂದ ದೀಪದ ಬೆಳಕಿನಲ್ಲಿ ಒಂದು ವ್ಯಕ್ತಿ ಬರುತ್ತಿರುವುದನ್ನೂ, ಆತ ಅವಸರದಲ್ಲಿ ಆ ಹೋಟೆಲ್‌ನತ್ತ ಹೋಗುವುದನ್ನೂ ನೋಡಿದವು ಅವಳ ಕಣ್ಣುಗಳು.

'ಏನು....? ನನ್ನ ಕಣ್ಣುಗಳು ಮೋಸಮಾಡುತ್ತಿಲ್ಲವಲ್ಲ.... ಇವನ್ಹೇಗೆ ಇಲ್ಲಿಗೆ ಬಂದ...?' ಅವಳ ಹೃದಯ ಆನಂದದಲ್ಲಿ ತುಂಬಿಹೋಯಿತು.....' ಧೈರ್ಯದಿಂದ ಹಿಂಬಾಲಿಸಿದಳು ಅವನನ್ನು. ನಡೆಯುತ್ತಿದ್ದವನು ಅತ್ತ ಇತ್ತ ನೋಡದೆ ಆ ಹೋಟೆಲ್‌ನೊಳಗೆ ಹೋಗುತ್ತಾ ಅಲ್ಲಿಯೇ ಇದ್ದ ರೂಮ್ ಒಂದರ ಬಾಗಿಲನ್ನು ತೆರೆದು ತನ್ನಲ್ಲೇ ಸಿಳ್ಳು ಹಾಕುತ್ತಾ ಒಳಗಿನ ದೀಪವನ್ನು ಬೆಳಗಿಸುತ್ತಾ ಇದ್ದಂತೆ ಆಶಾಗೆ ದೃಢವಾಗಿ ಹೋಯಿತು. ಯಾರನ್ನು ನಂಬಿ ಅವಳು ಪೂರ್ಣ ಮೋಸಹೋಗಿದ್ದಳೋ, ಯಾರಿಗೋಸ್ಕರ ಅವಳು ಪ್ರತಿದಿನವೂ ಕಣ್ಣೀರು ಹರಿಸಿದ್ದಳೋ, ಯಾರು ಅವಳ ಮನದಲ್ಲಿ ದುಃಖದ ಕಿಚ್ಚನ್ನು ಹೊತ್ತಿಸಿದನೋ ಅವನೇ ನಿಂತಿದ್ದಾನೆ ಇಲ್ಲಿ.

"ಲೋಹಿತ್..." ಆನಂದ, ಉದ್ವೇಗಗಳಿಂದ ಮುಂದೆ ಬಂದು ಅವನ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಳು.

"ಅರೆರೆ...." ವಿಸ್ಮಯದಿಂದ ಆತ ಅವಳತ್ತ ಹೊರಳಿ ಅವಳ ಎರಡೂ ಭುಜಗಳ ಮೇಲೆ ಕೈಯಿರಿಸುತ್ತ ಕೇಳಿದ "ಆಶಾ!"

"ಹಾಂ.... ನಿನ್ನೆದುರಿಗೆ ನಿಂತಿರುವವಳು ನಿನ್ನ ಆಶಾ..." ಅವಳ ಕಣ್ಗಳಲ್ಲಿ ಆನಂದದ ಹನಿಯೊಡೆಯಿತು.... "ಇಷ್ಟು ದಿನಗಳೂ ಎಲ್ಲಿಗೆ ಹೋಗಿದ್ದೆ ನೀನು? ಯಾಕೆ ನನ್ನಿಂದ ತಪ್ಪಿಸಿಕೊಂಡೆ.... ನಿನಗಾಗಿ ಇಷ್ಟು ದಿನಗಳೂ ಕಾಯ್ತಾ ಇದ್ದೆ.... ಏನಾಯ್ತು ಲೋಹಿತ ನಿನಗೇ?"

"ಓ.... ಎಲ್ಲೇಲ್ಲೋ ಇದ್ದೆ. ಯಾಕೆ ಬಿಡು ಆ ಮಾತು. ಆದರೆ ನೀನೇಕೆ ಹೀಗಾಗಿದ್ದಿ...?"

"ಕೃತಘ್ನ... ವಂಚಕ, ಸಿಕ್ಕಿದಷ್ಟು ದಿನ ನನ್ನ ದೇಹದ ರುಚಿಯನ್ನು ನೋಡಿ ಮಜಾ ಮಾಡಿದಿ. ಈಗ ಓಡಿ ಹೋಗಿದ್ದಿ ಇನ್ನೊಬ್ಬಳ ಬೆನ್ನ ಹಿಂದೆ. ನಿನ್ನನ್ನು ನಂಬಿ ನಾನು ಮೋಸ ಹೋದೆ. ಇನ್ನೆಷ್ಟು ಜನರಿಗೆ ಹೀಗೆ ಮೋಸ ಮಾಡಿದ್ದಿಯೋ..."

"ಇಲ್ಲಿ ಕೇಳು ಆಶಾ... ಹಾಗೇನಿಲ್ಲ. ಅದೇನೋ ಆಗಿಹೋಯಿತು. ನಿಜ ಹೇಳಬೇಕೆಂದರೆ ನಿನ್ನ ಸುಂದರ ಸಂಸಾರ ಕೆಡಿಸುವ ಇಚ್ಛೆ ನನ್ನದಲ್ಲ.... ಹೀಗಾಗಿ ನಾನೇ ನಿನಗೆ ಹೇಳದೆ ಉಪಾಯದಲ್ಲಿ ಓಡಿಹೋದೆ. ನಾನಿಲ್ಲದೆ ಹೋದಲ್ಲಿ ನೀನು ಸರಿಯಾಗಿ ಗೃಹಿಣಿಯಾಗಿ ಮನೇಲಿದ್ದಿಯಾ ಎಂದುಕೊಂಡೆ.... ಆದರೆ ನೀನೋ... ಹುಚ್ಚಿಯಂತೆ ಅಲೀತಾ ಇದ್ದೀಯಲ್ಲ..." ಅವಳನ್ನು ಹತ್ತಿರದ ಕುರ್ಚಿಯಲ್ಲಿ ಕುಳ್ಳಿರಿಸುತ್ತ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ, "ಮನೆಯಿಂದ ಹೊರಗೆ ಹಾಕಿದರೇನು ನಿನ್ನನ್ನು?"

"ಹೂಂ, ಹೊರಗೆ ತಳ್ಳಿದ್ದಾರೆ ಈ ಕಳಂಕಿನಿಯನ್ನು. ಈಗ ಯಮ ಈ ಲೋಕದಿಂದಲೂ ತಳ್ಳುವ ಯೋಚನೆಯಲ್ಲಿದ್ದಾನೆ. ನನಗೆಲ್ಲರೂ ಶತ್ರುಗಳು.... ನನಗೀಗ ಯಾರ ಮೇಲೆಯೂ ನಂಬಿಕೆ, ಪ್ರೀತಿ, ಆತ್ಮೀಯತೆ ಇಲ್ಲ."

ಲೋಹಿತಾಕ್ಷನ ಮುಖ ಚಿಂತೆಯಲ್ಲಿ ಕಂದಿತು. ಆಶಾ ಅವನನ್ನೇ ನೋಡಿದಳು. ಓ.... ಅವನು ಹಾಗೇ ಇದ್ದಾನೆ. ಒಂದಿಷ್ಟೂ ಬದಲಾಗಿಲ್ಲ. ಆದರೆ ನಾನು ದಿನೇ ದಿನೇ ಮುದುಕಿಯಾಗಿ ಹೋಗಿದ್ದೇನೆ. ಅವನಿಂದ ಅಗಲಿದ ಮೇಲೆ ಒಂದು ದಿನವೂ ಸುಖಿಯಾಗಿಲ್ಲ. ಅವನದೇ ಜಪ, ಲೋಹಿತಾಕ್ಷನಿಗೆ ಇದಾವುದರ ಪರಿವೆಯೂ ಇಲ್ಲದೆ ಯಾವ ಬಂಧನವೂ ಇಲ್ಲದೆ ಊರೂರು ತಿರುಗುತ್ತ ಹರ್ಷವಾಗಿದ್ದಾನೆ... ಓ ದೇವರೇ....

ಯೋಚಿಸುತ್ತ ಮತ್ಸರ, ಕೋಪದಿಂದ ಅವನ ಎರಡೂ ಕೈಗಳನ್ನು ಹಿಡಿದುಕೊಂಡಳು. "ಇನ್ನೂ ನಾನು ನಿನ್ನನ್ನು ಮರೆತಿಲ್ಲ. ಒಂದಲ್ಲ ಒಂದು ದಿನ ನೀನು ವಂಡ್ಸೆಗೆ ಬಂದು ನನ್ನನ್ನು ಕರ್‍ಕೊಂಡು ಹೋಗುತ್ತಿಯಾ ಎಂದು ನಂಬಿದ್ದೇನೆ. ಈ ನಂಬಿಕೆ, ಧೈರ್ಯ ಇವತ್ತು ಫಲಿಸಿತು. ಇನ್ಮೇಲೆ ನನ್ನ ಕಷ್ಟ ಪರಿಹಾರ!"

"ಏನು.....?" ಹುಬ್ಬೇರಿಸಿದ ಅವನು. "ಯಾವ ಸಂತೋಷಕ್ಕೋಸ್ಕರ ಕಟ್ಟಿಕೊಳ್ಳಲಿ ನಿನ್ನನ್ನು. ನಾಚಿಕೆಯಾಗುವುದಿಲ್ಲವೇ ನಿನಗೆ ಈ ಮಾತನ್ನಾಡಲು...?"

"ಎಂದೆಂದಿಗೂ ನಿನ್ನ ಕೈ ಬಿಡಲಾರೆ ಲೋಹಿತ್... ಇವತ್ತಿನಿಂದ ನಾನು ನಿನ್ನ ಜೊತೆ ನಿನ್ನ ನೆರಳಾಗಿ ಇರ್‍ತೇನೆ..."

"ಸಾಧ್ಯವಿಲ್ಲ. ಹೊರಟುಹೋಗು ಇಲ್ಲಿಂದ....!"

ಅವನು ಸಣ್ಣ ಸ್ವರದಲ್ಲಿ ಈ ಮಾತನ್ನು ಹೇಳಿದ್ದರೂ ಆಶಾಗೆ ಸಿಡಿಲಿನಂತೆ ಅಪ್ಪಳಿಸಿತು ಆ ಸ್ವರ. ಕುರ್ಚಿಯಿಂದ ಸರಕ್ಕನೆ ಸರಿದು ಅವನ ಕಾಲಕೆಳಗೆ ಕುಸಿದು ಅವನ ಎರಡೂ ಕೈಗಳನ್ನು ಬಿಗಿಯಾಗಿ ಒತ್ತಿಹಿಡಿದು "ನಿರಾಸೆಯ ಮಡುವಿನಲ್ಲಿ ಮುಳುಗಿದ್ದೇನೆ ಲೋಹಿತ್... ಇನ್ನಾದರೂ ನನಗೆ ಸುಖಬದುಕನ್ನು ನೀಡು....! ನನ್ನ ಕೈ ಬಿಡಬೇಡ" ಎಂದಳು ಅಳುತ್ತ.

ತನ್ನನ್ನು ತಬ್ಬಿ ಹಿಡಿದ ಅವಳತ್ತ ಬಾಗಿ ಅವಳ ಕೂದಲಿನಲ್ಲಿ ಕೈಯ್ಯಾಡಿಸುತ್ತ, 'ಛೇ, ಅಳ್ತಾರೆಯೇ ಬಿಡು" ಎಂದ.

ಲೋಹಿತಾಕ್ಷ ಮೇಲಿನಿಂದಲೇ ನಕ್ಕ. ಅವಳನ್ನು ಎಬ್ಬಿಸುತ್ತ "ಇಷ್ಟಕ್ಕೆಲ್ಲ ನೊಂದುಕೊಳ್ತಾರೆಯೇ? ವಂಡ್ಸೆಯ ಶ್ರೀಮಂತ ಸೊಸೆ ನೀನು. ಆ ದಿನ ಕಗ್ಗಾಡಿನಲ್ಲಿ ಹೆಜ್ಜೇನುಗಳಿಂದ ರಕ್ಷಿಸಿದವಳು. ಇಂದು ನಿನ್ನನ್ನು ಆ ಶ್ರೀಮಂತ ಮನೆತನಕ್ಕೆ ಸೇರಿಸಿ ನನ್ನ ಪಾಲಿಗೆ ನಾನು ಹೊರಟುಹೋಗ್ತೇನೆ" ಎಂದ.

"ಛೀ ಪಾಪಿ..." ಹಠಾತ್ತನೆ ಅವನಿಂದ ದೂರ ಸರಿದು ಸಣ್ಣಗೆ ನಡುಗುತ್ತ ಅಂದಳು. "ಇನ್ನೂ ನಾಟಕವನ್ನಾಡುವ ವಂಚಕ! ಕೊಟ್ಟ ಮಾತಿಗೆ ತಪ್ಪಿದ ನಾಯೀ... ಇದೋ ನಾನು ಹೊರಟೆ. ಎಲ್ಲಿದ್ದರೂ ದೇವರು ನಿನಗೆ ಒಳ್ಳೆಯದು ಮಾಡಲಿ....

“ಈ ರಾತ್ರಿ ನೀನೆಲ್ಲಿಗೆ ಹೋಗ್ತಿಯೇ? ಏನು ಎಂತು...? ನಿನ್ನ ಕಥೆಯೇ ಅರ್ಥವಾಗ್ಲಿಲ್ಲ.... ನಿಲ್ಲು.”

“ನಾಯಿ ಕುನ್ನಿ.... ನನ್ನ ಚಿಂತೆ ನಿನಗೆ ಬೇಕಿಲ್ಲ. ನನ್ನ ಕಷ್ಟ ನಿನಗೇಕೆ ಬೇಕು? ನಿನ್ನ ಪಾಡಿಗೆ ನೀನು ಬಿದ್ದಿರು... ತ್ಥೂಚ್...” ಎನ್ನುತ್ತ ಹೊರಗೆ ನಡೆದು ರಸ್ತೆಗಿಳಿದು ಕತ್ತಲೆಯಲ್ಲಿ ಲೀನವಾಗಿಹೋದಳು.

“ನನಗೆ ಇದೆಲ್ಲ ಸಾಮಾನ್ಯ ಬಿಡು” ಲೋಹಿತಾಕ್ಷ ಸಿಳ್ಳು ಹಾಕುತ್ತ ನಕ್ಕದ್ದು ಕೇಳಿಸಲೇ ಇಲ್ಲ ಅವಳಿಗೆ.

* * * *

ಆಶಾ ಹೊರಟುಹೋದ ಅರ್ಧಗಂಟೆಯ ನಂತರ ಶಿವಮೂರ್ತಿಗೆ ಇದು ಹಗಲು ಅಲ್ಲ, ರಾತ್ರಿ ಎಂಬ ನೆನಪು ಬಂದಿತು. ಮಧ್ಯರಾತ್ರಿಯಾಗಿದೆ, ಈ ಹೊತ್ತಿನಲ್ಲಿ ಆಶಾ ಎಲ್ಲಿಗೆ ಹೋದಳು ಎಂಬ ಪ್ರಜ್ಞೆ ಬಂದದ್ದು ಆಗ! ಆ ಕ್ಷಣವೇ ಎದ್ದು ಕೈಯ್ಯಲ್ಲೊಂದು ಬ್ಯಾಟರಿ ಹಿಡಿದುಕೊಂಡು ಓಡಿದ ರಸ್ತೆಯತ್ತ.

ನಿರ್ಜನವಾದ ರಸ್ತೆಯಲ್ಲಿ ಅಲ್ಲಲ್ಲಿ ಬೀದೀ ದೀಪಗಳು ಮಾತ್ರ ಬೆಳಗಿಕೊಂಡಿವೆ. ಈಗವನಿಗೆ ತನ್ನ ತಪ್ಪು ಕೆಲಸದ ಅರಿವಾಯಿತು. ಕತ್ತಲೆಯಾಗುವ ಆಶಾ ಬಂದದ್ದು, ತನಗೂ ಅವಳಿಗೂ ನಡೆದ ಬಿರುಸಾದ ಚರ್ಚೆ.... ಆಮೇಲೆ ಅವಳು ಅಲ್ಲಿಂದ ಹೊರಟುಹೋದುದೂ ನೆನಪಿಗೆ ಬಂದಿತು. ಈ ಕತ್ತಲೆಯಲ್ಲಿ ಒಂಟಿಹೆಂಗಸನ್ನು ಎಲ್ಲಿಗೆ ಕಳುಹಿಸಿದೆ? ಎಂದು ಪರಿತಪಿಸುತ್ತ ಅತ್ತ ಇತ್ತ ನೋಡುತ್ತ ಹೊರಟ ಮುಂದಕ್ಕೆ.

ಹೌದು, ತನ್ನಲ್ಲಿಗೆ ಅವಳೇಕೆ ಬಂದಳು? ಎಂಬ ಯೋಚನೆ ಬಂದದ್ದು ಆಗ! ನನ್ನನ್ನು ತಬ್ಬಿ ಹಿಡಿದ ಅವಳನ್ನು ನಾನು ಹೇಗೆ ನೂಕಿಬಿಟ್ಟೆ? ಅಯ್ಯೋ, ನಿಜವಾಗಿಯೂ ನಾನು ಯಾವ ಸುಖವನ್ನೂ ಕೊಡಲಿಲ್ಲವೇ ಅವಳಿಗೆ? ನನ್ನಿಂದ ನೊಂದುಕೊಂಡಿದ್ದಾಳೆ ಅವಳು. ನನ್ನ ಜೀವನದಲ್ಲಿ ಮಹತ್ವದ ಪಾಠವನ್ನು ಕಲಿಯಲೇ ಇಲ್ಲ ನಾನು! ಅವಳನ್ನು ಅರಿತುಕೊಳ್ಳುವಂತಹ ಹಲವಾರು ಘಟನೆಗಳು ನಡೆದಿದ್ದರೂ ನಾನು ಅರಿತುಕೊಳ್ಳಲಾರದೆ ಬೆಳಗಬೇಕಿದ್ದ ನನ್ನ ಬಾಳನ್ನು, ನನ್ನ ಮನಸ್ಸನ್ನು ನಾನಾಗಿಯೇ ಕತ್ತಲೆಯಿಂದ ಮುಚ್ಚಿಸಿಕೊಂಡೆ. ಗತಿಸಿದವಳ ನೆನಪಿನ ಬುತ್ತಿ ನನಗೇನು ಕೊಟ್ಟಿತ್ತು? ಬರಿಯ ನೋವು... ಹಿಂಸೆ! ಆದರೆ ಇದ್ದವಳ, ನನಗಾಗಿ ಸಕಲವನ್ನೂ ತ್ಯಾಗ ಮಾಡಿ ನನ್ನ ಮನೆಗೆ ಕಾಲಿರಿಸಿದ ನನ್ನವಳಿಗೆ ನಾನು ಏನು ಕೊಟ್ಟೆ? ಬರಿಯ ನೋವು... ಹಿಂಸೆ...!! ಇತ್ತೀಚೆಗೆ ಹೇಗಾಗಿಹೋಗಿದ್ದಾಳೆ ಅವಳೂ. ನಾನೂ ಅಷ್ಟೇ, ದಿನೇ ದಿನೇ ತೀರಾ ಮುದುಕನಂತೆ ಆಗಿಹೋಗುತ್ತಾ ಇದ್ದೇನೆ. ನಾನೂ ಅಯೋಗ್ಯ. ನನ್ನ ತಪ್ಪನ್ನು ಕಂಡುಕೊಳ್ಳಲಾಗದೆ ಅವಳನ್ನು ಬೊಟ್ಟು ಮಾಡಿ ತೋರಿಸುವ ಹೀನ ಬುದ್ಧಿ ನನ್ನದು.

ಶಿವಮೂರ್ತಿ ಯೋಚಿಸುತ್ತ ಇನ್ನಷ್ಟು ಚಿಂತಿತನಾದ. ‘ಅಯ್ಯೋ ದುಷ್ಟನೇ ನನಗೆಲ್ಲಿ ಸಿಗುತ್ತಾಳೆ ಅವಳು? ಈ ಕತ್ತಲೆಯಲ್ಲಿ ಅವಳೆಲ್ಲಿಗೆ ಹೋಗಿದ್ದಾಳೋ...’ ಎಂದಿತು ಮನಸ್ಸು. ನೇರವಾಗಿ ಕುಮಟೆ ಬಸ್ ಸ್ಟೇಂಡ್‌ಗೆ ಬಂದು ಅಲ್ಲೆಲ್ಲ ಹುಡುಕಿದ. ಸುತ್ತಿ ಸುತ್ತಿ ನಿರಾಶನಾಗಿ ಭಯದ ಶಂಕೆಯನ್ನು ಹೊತ್ತು ಹೊರಟ ಹಿಂದಕ್ಕೆ. ‘ಮೊದಲೇ

ಅವಳಿಂದ ಮನೆತನದ ಹೆಸರು ಅರ್ಧದಷ್ಟು ಹಾಳಾಗಿದೆ. ಇನ್ನು... ಇಂತವರ ಸೊಸೆ ಇದ್ದಕ್ಕಿದ್ದಂತೆ ಕಾಣೆಯಾಗಿ ಹೋದಳು ಎನ್ನುವುದಿಲ್ಲವೇ? ಅಪ್ಪ, ಈಶ್ವರಿ, ಜಗನ್ನಾಥ ಎಲ್ಲರೂ ನನಗೆ ಬುದ್ದಿವಾದ ಹೇಳಿದರೂ ಮೊಂಡು ಹಠದಲ್ಲಿ ಅವಳನ್ನು ವ್ಯಥೆಯಲ್ಲಿ ಬೇಯುವಂತೆ ಮಾಡಿದೆ. ಇದಕ್ಕೆ ಕಾರಣ ನಾನೇ! 'ಇನ್ನಾದರೂ ನನಗೆ ಸುಖ ಬದುಕು ನೀಡಿ'.... ಎಂದು ಅವಳು ಕೇಳಿಕೊಂಡಾಗ ಕರಗಲಿಲ್ಲ ನನ್ನ ಮನಸ್ಸು. ಅಯ್ಯೋ ಆಶಾ... ಇನ್ನೆಂದಿಗೂ ನಿನಗೆ ದುಃಖ ಕೊಡಲಾರೆ.... ನೀನೆಲ್ಲಿಗೆ ಹೋಗಿಬಿಟ್ಟೆ....?'

ವ್ಯಾಕುಲಚಿತ್ತನಾದ ಅವನ ನಡಿಗೆ ನಿಧಾನವಾಗಿ ಕೈಕಾಲುಗಳು ನಡುಗತೊಡಗಿದವು. ಅವನ ಅದೃಷ್ಟವೆಂಬಂತೆ ಅನಿರೀಕ್ಷಿತವಾಗಿ ಅವನ ಕೋಣೆಗೆ ಹೋಗುವ ದಾರಿಯಲ್ಲಿ ಸಿಕ್ಕಿಬಿಟ್ಟಳು ಆಶಾ. ಯಾವಾಗ ಅವಳನ್ನು ನೋಡಿದನೋ ಅವಳ ವಿಷಯದಲ್ಲಿ ಮೃದುವಾಗುತ್ತಿದ್ದ ಮನಸ್ಸು ಬಿರುಸಾಯಿತು ಒಮ್ಮೆಲೆ. ಅವಳ ರಟ್ಟೆಯನ್ನು ಹಿಡಿದುಕೊಂಡು "ಪೂರ್ಣ ಹುಚ್ಚು ಹಿಡಿಯಿತೇನು ನಿನಗೆ? ಎಲ್ಲಿಗೆ ಹೋಗಿದ್ದೆ" ಎಂದು ಆರ್ಭಟಿಸಿದ ಆವೇಶದಲ್ಲಿ.

"ಬಿಡಿ ನನ್ನನ್ನು, ನಾನೆಲ್ಲಿಗಾದರೂ ಹೋಗ್ತೇನೆ."

"ಬಾಯ್ಮುಚ್ಚಿಕೊಂಡು ಕೋಣೆಗೆ ನಡಿ.... ಬೇಜವಾಬ್ದಾರಿಯವಳೇ" ಎನ್ನುತ್ತ ರಟ್ಟೆ ಹಿಡಿದುಕೊಂಡು ಎಳೆದುಕೊಂಡೇ ನಡೆದ ಕೋಣೆಗೆ. ಆ ಮೇಲೆ ತನ್ನ ಬಟ್ಟೆಯನ್ನು ಅವಳಿಗೂ ಹಾಸಿಕೊಟ್ಟು ಏನೊಂದೂ ನುಡಿಯದೆ ತನ್ನ ಪಾಡಿಗೆ ಮಲಗಿಬಿಟ್ಟ.

ಬೆಳಗಿನಿಂದಲೂ ಸೋತು ಹೋಗಿದ್ದ ಆಶಾ ಶರೀರ ನೆಲದ ಮೇಲೆ ಮಲಗುತ್ತಿದ್ದಂತೆ ನಿದ್ರೆಯ ಲೋಕಕ್ಕೆ ಸರಿಯಿತು. ಶಿವಮೂರ್ತಿ ಎದ್ದು ಬಂದು, ಅವಳ ಹತ್ತಿರ ಕುಳಿತುಕೊಂಡ. ಆಯಾಸದ ನಿದ್ರೆಯಲ್ಲಿದ್ದ ಅವಳ ಮೈ ಮುಟ್ಟಲಿಲ್ಲ ಅವನು. ಆದರೆ ಅವನ ಅಂತರಂಗ ಹಾರೈಸಿತು ಅವಳ ಹಿತವನ್ನು....!

ಮರುದಿನ ಬೆಳಿಗ್ಗೆ ತನ್ನ ಮೋಟರ್ ಬೈಕ್‌ನ ಹಿಂದೆ ಆಶಾಳನ್ನು ಕುಳ್ಳಿರಿಸಿಕೊಂಡು ಶಿವಮೂರ್ತಿ ವಂಡ್ಸೆಗೆ ಹಿಂದಿರುಗಿದ. ವಂಡ್ಸೆಗೆ ಬಂದ ಮೇಲೆ ಇನ್ನೂ ಒಂದು ಗಲಾಟೆ ನಡೆಯಿತು. ಆಶಾ ಕಾಣೆಯಾದ ಬಗ್ಗೆ ತಾವೆಲ್ಲ ಅದೆಷ್ಟು ವ್ಯಾಕುಲ ಚಿತ್ತರಾಗಿದ್ದೆವು ಎಂದು ಪದೇ ಪದೇ ಹೇಳಿಕೊಂಡು ನಿಂದಿಸಿದರು ಅವಳನ್ನು.

ಅಂದು ಶಿವಮೂರ್ತಿ ಆಶಾ ಜೊತೆಯಲ್ಲಿಯೇ ಮಹಡಿಯಲ್ಲಿ ಮಲಗಿದ. ಅವನ ನಗುಮುಖ, ಅವನಲ್ಲಾದ ಅನಿರೀಕ್ಷಿತ ಬದಲಾವಣೆಯಿಂದ ಹರ್ಷಗೊಳ್ಳಲಿಲ್ಲ ಆಶಾ. ಮನದ ತುಂಬಾ ನಿರಾಸೆಯ ಅಲೆಗಳ ಪದರುಗಳು ಹರಡಿಕೊಂಡು ಮನ ಬಯಸುತ್ತಿತ್ತು ಶಾಂತಿಯನ್ನು. ನಗುವರಳಿಸಿಕೊಂಡು ಅವನ ಹೊಸ ಬದಲಾವಣೆಯನ್ನು ಸ್ವೀಕರಿಸಲಿಲ್ಲ ಹೃದಯ. ಒಂದಾಗಿ ಅವನೊಡನೆ ಬೆರೆಯಲಿಲ್ಲ. ಅವನ ಬಿಸಿಯಪ್ಪುಗೆ ಹಿಮಸ್ಪರ್ಶವಾಯಿತು!

ಮರುದಿನರೂ ಅವಳ ಕಣ್ಣುಗಳು ಹಾಗೇ ತೀಕ್ಷ್ಣವಾಗಿ, ಕಠೋರವಾಗಿ ಇದ್ದವು. ಬಾರಿ ಬಾರಿಗೂ ಮುಷ್ಟಿ ಬಿಗಿದುಕೊಳ್ಳುತ್ತಿತ್ತು. ಚೆನ್ನಕ್ಕ ಮಾತನಾಡಿಸುವ ಸಾಹಸಕ್ಕೆ ಹೋಗಲಿಲ್ಲ. ಶಿವಮೂರ್ತಿ ಅವಳ ಚಹರೆ ಕಂಡು ಹೆದರಿದರೂ ನಲುಮೆಯಿಂದ ಮಾತನಾಡಿಸಿದ. ಎಲ್ಲರ ಬಗ್ಗೆಯೂ ತಿರಸ್ಕಾರ ತಳೆದ ಆಶಾ ಯಾರ

ಮುಖಭಾವಗಳನ್ನೂ ಓದಲು ಇಚ್ಛಿಸಲಿಲ್ಲ. ಅದರ ಅಗತ್ಯ ಅವಳಿಗಿರಲಿಲ್ಲ. ತಾನೇಕೆ ಎಲ್ಲರಿಂದಲೂ ದೂರ ಸರಿಯುತ್ತಿದ್ದೇನೆ? ಶಿವಮೂರ್ತಿಗೆ ತಕ್ಕ ಹೆಂಡತಿಯಲ್ಲವೆಂದೇ...? ಅಥವಾ ಈ ಮನೆಗೆ ಸರಿಯಾದ ಸೊಸೆಯಲ್ಲವೆಂದೇ? ಏನು ಕಾರಣ?

ಅವಳ ಕಣ್ಣುಗಳು ಗೋಡೆಯತ್ತ ನೋಡಿದವು. ಕುಲು ಕುಲು ನಗುತ್ತಾ ನಿಂತಿದ್ದಾಳೆ ಕಾಂತಿ. ತತ್‌ಕ್ಷಣ ಎದ್ದು ಮಂಚದ ಕೆಳಗೆ ಇರಿಸಿದ ಟ್ರಂಕನ್ನು ಈಚೆಗೆಳೆದು ಮುಚ್ಚಳವನ್ನು ತೆರೆದಳು. ಟ್ರಂಕಿನ ಒಳಗೆ ಅಂದವಾಗಿ ಜೋಡಿಸಿಟ್ಟ ಸೀರೆಯ ರಾಶಿ.... "ಓ... ಇವೆಲ್ಲ ನೀನುಟ್ಟ ಸೀರೆ?... ನಿನ್ನಿಂದಲೇ ನನಗೀ ಅಧೋಗತಿ" ಎನ್ನುತ್ತ ಒಂದೊಂದೇ ಸೀರೆಯನ್ನು ಈಚೆಗೆಳೆದಳು. ಅವಳ ನಡುಗುವ ಹಸ್ತ ಒಂದೊಂದೇ ಸೀರೆಯನ್ನು ಪರ್ ಪರ್ ಎಂದು ಹರಿಯತೊಡಗಿತು... ಹರಿದ ಸೀರೆಯ ರಾಶಿ ಇತ್ತ ಬೀಳುತ್ತಿದ್ದಂತೆ ಒಂದು ಸೀರೆಯೊಳಗಿನಿಂದ ಪುಟ್ಟದಾದ ಭಾವಚಿತ್ರ ಕೆಳಗೆ ಬಿದ್ದಿತು. ಮೂರ್ತಿ ಮತ್ತು ಕಾಂತಿಯ ಭಾವಚಿತ್ರ ಅದು... ತಾನು ನೋಡಿರಲೇ ಇಲ್ಲ ಈವರೆಗೂ... ಶಾಂತವಾದ ನಗುಮುಖ ಇಬ್ಬರದೂ, ಆಶಾ ಅದನ್ನೂ ಹರಿದುಹಾಕಿದಳು. ಆಮೇಲೆ ಆವೇಶ ಬಂದವರಂತೆ ಗೋಡೆಯತ್ತ ನೋಡಿದಳು. "ನನ್ನ ಸುಖ ಸಂತೋಷವನ್ನು ನೀರುಪಾಲು ಮಾಡಿದವಳು ಇವಳೇ. ನಗ್ತಾ ಇದ್ದೀಯಲ್ಲ ಇನ್ನೂ..." ಎನ್ನುತ್ತ ಹತ್ತಿರ ಬಂದಳು. ಎಲ್ಲಿಂದ ಉದ್ಭವಿಸಿತ್ತೋ ಈ ರೀತಿಯ ಕ್ರೋಧ...? ತೂಗು ಹಾಕಿದ್ದ ಫೋಟೋ ತೆಗೆದು ತ್ಣೂಕ್ ಎಂದು ಅದರ ಮೇಲೆ ಉಗುಳಿ ಎತ್ತಿ ಧಡಾರನೆ ಬಿಸಾಡಿದಳು ನೆಲದ ಮೇಲೆ. ಕನ್ನಡಿ ಕಟ್ಟು ಹಾಕಿದ್ದ ಆ ಫೋಟೋ ನೆಲಕ್ಕುರುಳಿ ಕನ್ನಡಿ ಸಹಸ್ರ ಹೋಳಾಯಿತು.

"ಠಳ್" ಎಂಬ ಸದ್ದಿನೊಡನೆ ಆಶಾ ಹೃದಯ ವೇಗವಾಗಿ ಹೊಡೆದುಕೊಳ್ಳತೊಡಗಿತು. ಏನಾಗಿಹೋಯಿತು ಒಂದು ಕ್ಷಣದಲ್ಲಿ? ಕನ್ನಡಿಯ ಸಹಸ್ರ ಹೋಳುಗಳಿಂದಲೂ ಕಾಂತಿಯ ಸಹಸ್ರ ಮುಖಗಳೂ ಕಾಣಿಸಿಕೊಂಡು ಅಟ್ಟಹಾಸದ ನಗೆ ನಗುತ್ತಿವೆ.... ಹ್ಹ... ಹ್ಹ... ಹ್ಹ.... ಆಶಾ ಎರಡೂ ಕಿವಿಗಳನ್ನೂ ಮುಚ್ಚಿಕೊಂಡು ಕಿಟಾರನೆ ಕೂಗಿಕೊಂಡಳು.

"ಇದೇನ್ಮಾಡಿಬಿಟ್ಟೆ ಆಶಾ?" ಶಿವಮೂರ್ತಿ ಅವಳ ಭುಜವನ್ನು ಅಲುಗಿಸಿದಾಗ ಭಯಭೀತಿಯಿಂದ ನೋಡಿದಳು ಅವನತ್ತ. "ನಿಂಗೇನಾಗಿದೆ ಇವತ್ತು?.... ಇದೇನ್ಮಾಡಿದೆ?"

"ಓಹೋ.... ನಿಮ್ಮ ಕಾಂತಿ ಸತ್ತುಹೋದಳು...."

"ಸತ್ತುಹೋದಳೇ? ಮತ್ತೇ ನೀನ್ಯಾಕೆ ಇನ್ನೂ ಸತ್ತಿಲ್ಲ? ಮಾಡುವ ಕೆಲಸಗಳ ಮೇಲೆ ಪ್ರಜ್ಞೆಯಿಲ್ಲವೇ?" ಹರಿದ ಸೀರೆಯ ರಾಶಿಯನ್ನು ನೋಡುತ್ತ ಅವಾಕ್ಕಾಗಿ ಕೇಳಿದ, "ಇವೆಲ್ಲ ಏನು? ನಿನಗೆ ಪೂರ್ತಿ ಹುಚ್ಚು ಹಿಡಿಯಿತೇ?"

"ಹಿಡೀತಾ ಇದೆ. ನಿಮ್ಮ ಕಾಂತಿಯ ಭೂತ ಆವರಿಸಿಕೊಂಡಿದೆ ನನ್ನ ಸುತ್ತಲೆಲ್ಲ. ಹ... ಹ್ಹ.... ಹ್ಹ..." ಅವಳು ಮಂಚದ ಮೇಲುರುಳಿಕೊಂಡು ಜೋರಾಗಿ ನಗತೊಡಗಿದಳು.

ಶಿವಮೂರ್ತಿಗೆ ಆಶ್ಚರ್ಯ ಮತ್ತು ಸಿಟ್ಟು.... ಮೈಮೇಲಿನ ಪ್ರಜ್ಞೆಯಿಲ್ಲದವರಂತೆ ನಗುತ್ತಿದ್ದಾಳೆ ಆಶಾ. "ಬರ್‍ತಾ ಬರ್‍ತಾ ನಿನ್ನ ತಲೆ ಪೂರ್ಣ ಹಾಳಾಗಿ ಹೋಗ್ತಿದೆಯೋ ಹ್ಯಾಗೆ.... ನೋಡಿಲ್ಲಿ.... ನಿನ್ನ ನಗುವನ್ನು ನಿಲ್ಲಿಸು ಇನ್ನು..."

ಆದರೆ ಅವಳಿಗೆ ಅವನ ಮಾತು ಕೇಳಿಸಲೇ ಇಲ್ಲ. ಆ ಅಟ್ಟಹಾಸದ, ವಿಚಿತ್ರ ನಗೆಯನ್ನು ನಿಂತು ನೋಡುತ್ತಿದ್ದ ಶಿವಮೂರ್ತಿಯ ಮನಸ್ಸು ಎತ್ತಲೋ ಯೋಚಿಸತೊಡಗಿತು. ನಿನ್ನೆ ಒಂದೇ ದಿನದಲ್ಲಿ ಎಂತಹ ಮಾರ್ಪಾಟು ಆಗಿಹೋಗಿದೆ ಅವನಲ್ಲಿ! ಇಷ್ಟು ದಿನಗಳೂ ಕುರುಡಾಗಿದ್ದವು ಈ ಕಣ್ಣುಗಳು... ಈ ಹೃದಯ. ಅದರ ಮೇಲ ಹಾಸಿತ್ತು ಕಪ್ಪು ತೆರೆ. ಆ ತೆರೆ ಅವಳ ಯಾವುದೇ ಮಾತುಗಳಿಂದಾಗಲೀ, ದುಃಖದಿಂದಾಗಲೀ ಸರಿದಿರಲಿಲ್ಲ. ಆದರೆ ನಿನ್ನೆಯ ದಿನ ಅವಳ ಯಾವ ಮಾತು ಅವನ ವಿಚಿತ್ರ ಮನಸ್ಸಿನ ಕಪ್ಪು ತೆರೆಯನ್ನು ಸರಿಸಿತೋ ಅವನಿಗೇ ತಿಳಿಯದು. ಅವನಿಗೆ ತನ್ನ ತಪ್ಪುಗಳು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಹೆಚ್ಚು ಸ್ಫುಟವಾಗಿ ಕಂಡು ಬಂದತಾಗಲು ನಿಜವಾಗಿಯೂ ಅವನು ಎಷ್ಟು ನೊಂದುಕೊಂಡನೋ.... ಇನ್ನಾದರೂ ಅವಳಿಗೆ ತಾನು ಸುಖವನ್ನೀಯಬೇಕೆಂಬ ಸಂಕಲ್ಪದೊಂದಿಗೆ ಬಂದಿದ್ದಾನೆ ಈ ಹಳ್ಳಿಗೆ. ಹಿಂದಿನದನ್ನು ಮರೆಯಲು ತನ್ನ ಆಸ್ತಿಯಲ್ಲಿಯೇ ಚೆನ್ನಾಗಿರುವ ಸ್ಥಳವನ್ನು ನೋಡಿ ಮನೆ ಕಟ್ಟುವುದೆಂದೂ ನಿರ್ಧರಿಸಿಕೊಂಡು ತಂದೆಯೊಡನೆ ಆ ರೀತಿ ತಿಳಿಸಿದಾಗ ಅವರೂ ಒಪ್ಪಿಕೊಂಡಿದ್ದರು ಸಂತೋಷದಲ್ಲಿ. ಆ ಕ್ಷಣದಲ್ಲಿಯೇ ಮಗನನ್ನು ಕರೆದುಕೊಂಡು ಪ್ರಶಸ್ತವಾದ ಸ್ಥಳವನ್ನು ತೋರಿಸಲೂ ಹೋಗಿದ್ದರು. ಅವರಿಗೂ ಮಗ ತಮ್ಮ ಜೊತೆಯಲ್ಲಿಯೇ ಇರಲಿ ಎಂಬ ಆಸೆ.

ಆದರೆ ಇಲ್ಲಿ ಈಗ ಬಂದು ನೋಡುತ್ತಾನೆ. ಆಶಾ ಮನಸ್ಥಿತಿಯೇ ಕೆಟ್ಟುಹೋಗಿದೆ. ಈಗವನಿಗೆ ಮನವರಿಕೆಯಾಗುತ್ತಾ ಇದೆ, ಆಕೆ ತನ್ನಿಂದ ತುಂಬಾ ನೊಂದುಕೊಂಡಿದ್ದಾಳೆ ಎಂದು. ಹೌದು, ಯಾವ ಸತ್ಯ ಸಂಗತಿ ಈ ದಿನದವರೆಗೂ ಅರ್ಥವಾಗದೆ ಉಳಿದಿತ್ತೋ ಅವೆಲ್ಲ ಈಗವನಿಗೆ ಅರ್ಥವಾಗುತ್ತಾ ಇದೆ. ಯಾವ ತಪ್ಪನ್ನು ಅವನು ಬಹಳ ದೊಡ್ಡದನ್ನಾಗಿ ಮಾಡಿಕೊಂಡು ಕ್ಷಮಿಸುವುದಕ್ಕೂ ಹಿಂಜರಿದಿದ್ದನೋ ಅದೇ ತಪ್ಪನ್ನು ಈಗವನು ಪೂರ್ಣ ಕ್ಷಮಿಸಿದ್ದಾನೆ! ಅತ್ಯಾಶ್ಚರ್ಯದ ಸಂಗತಿ!! ಕ್ಷಮಿಸುತ್ತಾ ಅಂದುಕೊಂಡಿದ್ದಾನೆ, 'ಇಲ್ಲ ಆಶಾ, ಇನ್ನೆಂದಿಗೂ ನಾನು ನಿನ್ನನ್ನು ದುಃಖಿಯನ್ನಾಗಿ ಮಾಡಲಾರೆ. ಎಂದೆಂದಿಗೂ ನಾನು ನಿನ್ನವನು. ಇದೇ ಹಳ್ಳಿಯಲ್ಲಿ ನಿನ್ನ ಸಮೀಪದಲ್ಲೇ ನಾನಿರುತ್ತೇನೆ. ನಿನ್ನ ಅಳು ನಿಲ್ಲಿಸಿ ನಗಿಸುತ್ತೇನೆ.... ಇದು ಖಂಡಿತ....'

ತನ್ನ ಈ ನಿರ್ಧಾರದಿಂದ ಅವಳನ್ನು ಅಚ್ಚರಿಗೊಳಿಸಬೇಕು, ಅವಳನ್ನು ಅತಿಯಾದ ಸಂತಸದ ಹೊಳೆಯಲ್ಲಿ ತೇಲಿಸಬೇಕು ಎಂದೆಲ್ಲಾ ಊಹಿಸಿದ್ದ. ಆದರೆ ಇದೇನು? ಯಾವಳ ಮನಸ್ಸನ್ನು ಸಂಪೂರ್ಣವಾಗಿ ಗೆಲ್ಲಬೇಕೆಂದು ನಿಶ್ಚಯಿಸಿಕೊಂಡು ಇಲ್ಲಿಗೆ ಬಂದಿದ್ದನೋ ಅವಳ ಎದುರಿನಲ್ಲಿ ಇವನು ಸೋಲುತ್ತಿದ್ದಾನೆಯೇ? ಅವಳೋ ಯಾವುದರ ಪರಿವೆಯೂ ಇಲ್ಲದೆ ಬಿದ್ದು ಬಿದ್ದು ನಗುತ್ತಿದ್ದಾಳೆ.

ಶಿವಮೂರ್ತಿಯ ರೇಗಿದ ಮನಸ್ಸು ಅಷ್ಟೇ ಬೇಗ ಮೃದುವಾಗಿ ಕನಿಕರವುಕ್ಕಿತು

ಅವಳ ಮೇಲೆ. ಅವಳನ್ನು ತಬ್ಬಿಕೊಂಡು ಸಂತೈಸಬೇಕೆಂದೆನಿಸಿದರೂ ಧೈರ್ಯ ಬಾರದೆ ಅವಳ ನಗೆಯಿಂದ ತತ್ತರಿಸಿದವನಂತೆ ಹಿಂದಕ್ಕೆ ಸರಿದು ಕೆಳಗೆ ನಡೆದ.

ತುಸು ಹೊತ್ತಿನಲ್ಲಿ ಗಾಜಿನ ಚೂರುಗಳನ್ನು ತೆಗೆಯಲೆಂದು ಮಹಡಿಗೆ ಬಂದ ಚೆನ್ನಕ್ಕ ಕೋಣೆಯ ಅವಾಂತರವನ್ನು ನೋಡುತ್ತ ಮೂಗಿನ ಮೇಲೆ ಬೆರಳಿಟ್ಟು ಒಂದು ಕ್ಷಣ ಹಾಗೇ ನಿಂತು ದುರುಗುಟ್ಟಿ ನೋಡಿದಳು ನಗುತ್ತಿರುವವಳನ್ನು. ನಗುವಿನೊಂದಿಗೆ ತನ್ನಲ್ಲೇ ಮಾತನಾಡುತ್ತಿದ್ದಾಳೆ ಅವಳು. ಹುಬ್ಬುಹಾರಿಸಿ ಬಾಯಿ ಓರೆಮಾಡುತ್ತ ಗಾಜಿನ ಚೂರುಗಳನ್ನು ತೆಗೆಯತೊಡಗಿದಳು ಚೆನ್ನಕ್ಕ.

"ಚಿನ್ನದಂತಹ ಮನುಷ್ಯ ಚಿಕ್ಕರಾಯರು. ಈ ಮನೆಯ ಪ್ರಾರಬ್ಧವೇ. ಒಂದಿನವೂ ಅವರು ಸುಖವಾಗಿ ಇರ್ಲಿಲ್ಲ. ಇದೆಲ್ಲ ಏನವಸ್ಥೆ" ಎಂದು ಗೊಣಗಿಕೊಂಡಳು ಅಡಿಗೆಯವಳು.

ವಿಚಿತ್ರವಾಗಿ ಅವಳತ್ತ ನೋಡಿದಳು ಆಶಾ.

"ಎಲ್ಲಾ ಹಾಳು... ಹಾಳು. ಮೈಮೇಲೆ ಪ್ರಜ್ಞೆಯಿರಲಿಲ್ಲವೇ? ಮಾತಿಗೆ ಮುಂಚೆ ಕೋಪ. ಎಂತಹ ಕೆಲ್ಸವಾಯಿತು. ಎಂತಹ ಅಪಶಕುನ ಇದು. ನೋಡಲು ಅಸಹ್ಯವೆನಿಸಿದ್ದರೆ ತೆಗೆದಿರಿಸಬೇಕಿತ್ತು... ಇಲ್ಲಪ್ಪ ಇಲ್ಲ. ಇಂತಹವಳನ್ನು ನಾನು ನೋಡಿಯೇ ಇಲ್ಲ. ಅಯ್ಯೋ ಈ ಮನೆಯ ಪ್ರಾರಬ್ಧವೇ...."

ಅವಳ ಮಾತು ಮುಗಿಯುವ ಮುನ್ನವೇ ಆಶಾ ಮೇಜಿನ ಮೇಲಿರಿಸಿದ ಹೂದಾನಿಯನ್ನೆತ್ತಿ ರೊಂಯ್‌ನೆ ಬಿಸಾಡಿದಳು ಅವಳತ್ತ. ಗುರಿತಪ್ಪದೆ ಹೂದಾನಿ ಅವಳ ಬಲಗೆನ್ನೆಯನ್ನಪ್ಪಳಿಸಿ ನೆಲಕ್ಕೆ ಬಿದ್ದು ಹೋಳು ಹೋಳಾಗಿ ಹೋಯಿತು. "ಅಯ್ಯೋ ಅಮ್ಮಾ...." ಎಂದು ಚೀರಿ "ದೆವ್ವ ಬಡಿದಿತ್ತು ಇವರಿಗೆ" ಎಂದು ಕೂಗುತ್ತಾ ಸತ್ತೆನೋ ಎನ್ನುತ್ತ ಓಡಿದಳು ಚೆನ್ನಕ್ಕ ಹೊರಗೆ.

ಕೋಣೆಯ ತುಂಬ ನಗುವಿನ ಅಲೆಗಳು ಮಾರ್ದನಿಗೊಂಡವು. ಕೆಳಗಿನ ಕೋಣೆಗೂ ಕೇಳಿಸಿರಬೇಕು ನಗು. ಕೆಳಗಿನ ಕೋಣೆಯಲ್ಲಿದ್ದ ತಂದೆ ಮಗ್ಗ ಒಬ್ಬರನ್ನೊಬ್ಬರು ನೋಡಿಕೊಂಡರು ಏನೂ ಅರ್ಥವಾಗದವರಂತೆ.

ಅರ್ಧ ಗಂಟೆಯಲ್ಲಿ ಕಡಿಮೆಯಾಯಿತು ನಗು. ಮೈಯ್ಯಲ್ಲಿ ತರಗೆಲೆಯಂತೆ ಕಂಪನ. ಮನಸ್ಸು ಬಾರಿ ಬಾರಿಗೂ ನೆನೆದುಕೊಳ್ಳತೊಡಗಿತು ಲೋಹಿತಾಕ್ಷನನ್ನು. ತನ್ನ ದುಃಖದಲ್ಲಿ ಆಸರೆ ನೀಡುವವನು ಅವನೊಬ್ಬನೇ. ಆದರೆ ಅವನೂ ಮೋಸ ಮಾಡಿದ ತನಗೆ. ತಾನೀಗ ಯಾರಿಗೂ ಬೇಡವಾದವಳು. ಯಾರಿಗೂ ಬೇಡದ ಬದುಕು ಇದ್ದರೇನು, ಇಲ್ಲವಾದರೇನು?.... ದಿಗ್ಗನೆ ಎದ್ದಳವಳು. ಸೋತ ದೇಹದ ಕಂಪನವನ್ನು ಗಮನಿಸದೆ ತೂರಾಡುತ್ತ ಪಕ್ಕದ ಕೋಣೆಗೆ ಬಂದಳು.

ಮುಚ್ಚಿದ ಬಾಗಿಲು ತೆರೆಯಿತು. ಅದೊಂದು ಹಳೆಯ ಕೋಣೆ. ತರಕಾರಿ, ಹಳೆಯ ಸಾಮಾನುಗಳು, ಹರಕು ಬಟ್ಟೆ, ಓದಿದ ಪೇಪರಿನ ರಾಶಿ ಸಿಕ್ಕಾಪಟ್ಟೆ ಬಿದ್ದಿವೆ. ಆಶಾ ಕಣ್ಣುಗಳು ಹೊಸ ಬಾವಿ ಹಗ್ಗವನ್ನು ನೋಡಿದವು. ಮರುಕ್ಷಣದಲ್ಲಿ ಆತುರದ ಕಣ್ಣುಗಳು ಹಳೆಯ ಮುರುಕು ಡಬ್ಬಿಗಳನ್ನಿರಿಸಿದ ರಾಶಿಯಲ್ಲಿದ್ದ ಒಂದು ಸಣ್ಣ ಟಿನ್ನಿನ ಡಬ್ಬಿಯನ್ನು ನೋಡಿದವು ಸೂಕ್ಷ್ಮವಾಗಿ.... ಓ... ಯಾವುದನ್ನು ಬಯಸಿದ್ದಳೋ ಅದು

ಇಷ್ಟು ಬೇಗ, ಇಷ್ಟು ಸುಲಭದಲ್ಲಿ ಸಿಕ್ಕಿಬಿಟ್ಟಿತಲ್ಲ... ಸರ್ರನೆ ಮುಂದೆ ಬಂದು ಡಬ್ಬಿಯನ್ನೆತ್ತಿಕೊಂಡಳು. ಎಲ್ಲೋ ತಳದಲ್ಲಿದೆ ಒಂದೆರಡು ಚಮಚೆ ಔಷಧ. ಆದರೇನು.... ಆ ಎರಡು ಚಮಚೆಗೆ ತನ್ನ ಬಾಳನ್ನು ಪೂರ್ಣಗೊಳಿಸಲು ಎಷ್ಟು ಹೊತ್ತು ಬೇಕು?

ತಡಮಾಡದೆ ಡಬ್ಬಿಯನ್ನೆತ್ತಿಕೊಂಡು ಅಡಿಗೆ ಕೋಣೆಗೆ ಬಂದಳು. ಅಲ್ಲಿ ಚೆನ್ನಕ್ಕನಿದ್ದಿರಲಿಲ್ಲ. ಆಶಾ ಅವಸರದಲ್ಲಿ ಲೋಟಕ್ಕೆ ಹಾಲನ್ನು ಬಗ್ಗಿಸಿಕೊಂಡು ಟಿನ್ನಿನಲ್ಲಿರುವುದನ್ನೆಲ್ಲ. ಆ ಹಾಲಿಗೆ ಸುರಿದಳು... ಛೇ, ಗದ್ದೆಗೆ ಔಷಧಿ ಬಿಡಲೆಂದು ತರಿಸಿದ ಈ ವಿಷ ರೀತಿ ಅವಳ ಕೈಗೆ ಸಿಕ್ಕೀತೆಂದು ಯಾರು ಅರಿತಿದ್ದರು? ತೃಪ್ತಿಯಿಂದ ಅದನ್ನು ಕುಡಿಯಬೇಕೆಂದುಕೊಂಡು ತುಟಿಯವರೆಗೂ ತಂದಳು. ಆದರೆ ಏನೋ ವಾಸನೆ. ಕುಡಿದರೆ ಪೂರ್ಣ ವಾಂತಿಯಾದಿತು...

ತಕ್ಷಣ ಅದನ್ನು ಅಲ್ಲಿಯೇ ಇಟ್ಟು ಹೊರ ಅಂಗಳದಲ್ಲಿದ್ದ ವೀಳ್ಯದೆಲೆಯನ್ನು ಕುಯ್ದು ತರಲು ಹೊರಟಳು. ಅದು ಇದ್ದರೆ ಕುಡಿದದ್ದು ವಾಂತಿಯಾಗದು ಎಂದೆನಿಸಿತು. ಹೊರ ಅಂಗಳದಲ್ಲಿ ತಂದೆ, ಮಗ, ರಂಗಮ್ಮ ಕುಳಿತಿದ್ದರು. ಕೆನ್ನೆ ಬಾತು ನೋವಿನಿಂದ ಸಂಕಟಪಡುತ್ತಿದ್ದ ಚೆನ್ನಕ್ಕನೂ ಅಲ್ಲಿದ್ದಳು. ಆಶಾಳನ್ನು ಕಂಡು ಎಲ್ಲರೂ ಅತ್ತ ಹೊರಳಿದರು... ಯಾಕೋ ಹೆದರಿದವರಂತೆ! ಅವಳು ಯಾರನ್ನೂ ಗಮನಿಸದೆ ವೀಳ್ಯದೆಲೆಯನ್ನು ಕುಯ್ದುಕೊಂಡು ಒಳಗೆ ಹೊರಟಾಗ ತಮ್ಮಯ್ಯನವವ ಸ್ವರ ಕೇಳಿಸಿತು,

"ಓಹೋಹೋ.... ಬರಬೇಕು... ಬರಬೇಕು..."

ಅಲ್ಲೇ ನಿಂತುಬಿಟ್ಟಳು ಆಶಾ. ಬಂದವನು ಬೇರೆ ಯಾರೂ ಅಲ್ಲ, ಅವಳ ಸೋದರಮಾವನ ಮಗ!

"ಅನಿರೀಕ್ಷಿತನಾಗಿ ಬಂದುಬಿಟ್ಟೆ.... ಇದೇನು, ನೀವೆಲ್ಲರೂ ಇಲ್ಲೇ ಜಮಾಯಿಸಿಬಿಟ್ಟಿದ್ದೀರಿ.... ವಿಶೇಷವೇನು? ಏನಮ್ಮಾ ಆಶಾ?" ಸಲುಗೆಯಿಂದ ಕೇಳುತ್ತ ಅವರೆಲ್ಲರ ಹತ್ತಿರಕ್ಕೆ ಬಂದು ತನ್ನ ಕೈಬ್ಯಾಗನ್ನು ಕೆಳಗಿರಿಸಿದ ಜಗನ್ನಾಥ.

ತಮ್ಮಯ್ಯ ತಾವು ಕುಳಿತಲ್ಲಿಂದ ಸರಿದು ಅವನಿಗೂ ಸ್ಥಳವನ್ನು ಕೊಟ್ಟರು. ಆಶಾ ನಿರ್ಜೀವ ನಗೆ ನಕ್ಕು ತನ್ನ ಪಾಡಿಗೆ ತಾನು ಒಳಗೆ ಹೊರಟಾಗ ಜಗನ್ನಾಥ ಕರೆದ. "ಬಾ ಇಲ್ಲೇ.... ನಿನಗೇನಿದೆ ಒಳಗೆ ಕೆಲಸ? ಎಲ್ಲರೂ ಒಟ್ಟಾಗಿ ಹಸಿರು ಹುಲ್ಲಿನ ಮೇಲೆ ಕುಳಿತುಕೊಳ್ಳೋಣ.... ನಿಮ್ಮನ್ನೆಲ್ಲ ಈ ರೀತಿ ಈ ಹಸಿರು ಹುಲ್ಲಿನ ಮೇಲೆ ಒಟ್ಟಾಗಿ ಕುಳಿತಿದ್ದುದನ್ನು ನಾನು ನೋಡಿದ್ದು ಇದೇ ಮೊದಲು... ಬಾ ಆಶಾ..."

"ನನ್ನ ಹತ್ತಿರ ಸ್ಥಳವಿದೆ..." ಶಿವಮೂರ್ತಿ ಮುಗುಳ್ನಗೆಯಲ್ಲಿ ಅಂದ, "ಬಾ ಇಲ್ಲಿಗೇ.... ಜಗನ್ನಾಥ, ವಿಶೇಷವೇನಿದೆ. ಮೊನ್ನೆ ತಾನೇ ನಿಮ್ಮ ರೇಡಿಯೋ ಪ್ರೋಗ್ರಾಂ ಕೇಳಿದೆ... ಚೆನ್ನಾಗಿ.. ಭಾವಗೀತೆ ಹಾಡಿದ್ದೀರಿ. ನೀನು ಕೇಳಲಿಲ್ಲವೇ ಆಶಾ...?"

ಜಗನ್ನಾಥ ಶಿವಮೂರ್ತಿಯತ್ತ ನೋಡಿದ. ಅಂದು ಕುಮಟೆಯಲ್ಲಿ ತನ್ನೊಂದಿಗೆ ಮಾತನಾಡಿದವನು ಇವನೆಯೇ ಎಂದು ಸಂಶಯ ಬಂದಿತು ಅವನಿಗೆ.ಈಗ ಆಶಾ ಸಂಗಡ ಮಾತನಾಡಿದ ಅವನ ರೀತಿ ಕಂಡು, ಸ್ವರದಲ್ಲಿರುವ ನಯ, ಆತ್ಮೀಯತೆ ಕಂಡು

ಅವಾಕ್ಕಾದ... ಓ... ಅವನು ನಿಜವಾಗಿಯೂ ಆಶಾಳನ್ನು ಕ್ಷಮಿಸಿ ಈಗ ಇಲ್ಲಿಯೇ ಇದ್ದಾನೆಯೇ ಎಂದುಕೊಂಡ.... ಆ ಸಂತಸದಲ್ಲಿಯೇ ಅವನೆಂದ.

"ಆಶಾಗೆ ಯಾವಾಗಲೂ ಅವಸರ. ಇಕೊಳ್ಳಿ, ನಿಮಗೆಲ್ಲ ಸ್ವೀಟ್ ತಂದಿದ್ದೇನೆ..."

"ಏನು ಚೆನ್ನಕ್ಕ..." ಮೂರ್ತಿ ಅಂದ. "ಬಂದವನನ್ನು ನೋಡಿಯೂ ಸುಮ್ಮನಿದ್ದೀರಲ್ಲ. ಅವರು ಸ್ವೀಟ್ ಹಂಚಲಿ ನೀನು ಕಾಫಿಯನ್ನೂ ಹಾಗೇ ಖಾರದ ತಿಂಡಿಯನ್ನೂ ಇಲ್ಲಿಗೇ ತಂದುಬಿಡು."

ನೋವಿನಿಂದ ಬಾಧೆಪಡುತ್ತ ಚೆನ್ನಕ್ಕ ಅಲ್ಲಿಂದೇಳುತ್ತಿದ್ದಂತೆ ಆಶಾ ಬುದ್ಧಿ ಚುರುಕಾಗಿ ಓಡಿತು. ಒಲೆಯ ಕಟ್ಟೆಯ ಬಳಿಯಲ್ಲಿ ವಿಷದ ಡಬ್ಬಿ.... ಅದರ ಹತ್ತಿರ ಹಾಲಿನ ಲೋಟ, ತಾನೀಗ ಜಾಗೃತೆಯಲ್ಲಿ ತಂದುಬಿಡಬೇಕು.... ಎಂದು ಯೋಚಿಸುತ್ತಿದ್ದಾಗಲೇ ಅಳುತ್ತಾ... ಬಂದ ಪೃಥ್ವಿ.

"ಈ ಹಾಲು ರುಚಿಯಾಗಿಲ್ಲಮ್ಮಾ. ನಂಗೆ ಬೇರೆ ಬೇಕು... ಇದೆಂತಹದೋ ವಾಸನೆ...."

"ಅದನ್ನೇ ಕುಡಿಯೋ... ಹಾಲಂತೆ ಹಾಲು ನಿನಗೆ..." ಅವನ ಅಳುವಿಗೆ ಬೇಸತ್ತಿದ್ದ ಮೂರ್ತಿ ಹೇಳಿದ. ಅರ್ಧ ಗಂಟೆಯಿಂದಲೂ ಹಾಲಿಗಾಗಿ ಅವನು ಅಳುತ್ತಲೇ ಇದ್ದ. ಮಾತಿನ ಭರದಲ್ಲಿ ಯಾರಿಗೂ ಒಳಗೆ ಹೋಗಿ ಹಾಲನ್ನು ತಂದುಕೊಡುವಷ್ಟು ತಾಳ್ಮೆಯಿರದಿದ್ದುದರಿಂದ ನಿರುಪಾಯನಾದ ಪೃಥ್ವಿ ತಾನೇ ಒಳಗೆ ಹೋಗಿದ್ದ ಹಾಲು ಕುಡಿಯಲೆಂದು.

ಪೃಥ್ವಿಯ ಕೈಯಲ್ಲಿರುವ ಹಾಲಿನ ಗ್ಲಾಸನ್ನು ಕಂಡು ಹಾವು ಮೆಟ್ಟಿದವಳಂತೆ ಬೆಚ್ಚಿಬಿದ್ದ ಆಶಾ ಸರ್ರನೆ ಓಡಿದಳು ಅಡಿಗೆ ಕೋಣೆಗೆ. ಅಲ್ಲಿ ನೋಡುತ್ತಾಳೆ.... ಹಾಲಿನ ಗ್ಲಾಸು ಇಲ್ಲ. ಟಿನ್ನಿನ ಡಬ್ಬಿ ಮಾತ್ರ ಇದೆ....

"ಪೃಥ್ವೀ...." ಒಂದೇ ಉಸುರಿಗೆ ಕೂಗುತ್ತಾ ಓಡಿ ಹೊರಗೆ ಬಂದು ಅವನ ಕೈಯಲ್ಲಿದ್ದ ಗ್ಲಾಸನ್ನು ಎತ್ತಿ ರಪ್ಪನೆ ಅಂಗಳದಲ್ಲಿ ಬಿಸಾಡಿ ಕಂಪಿಸುವ ಸ್ವರದಲ್ಲಿ "ಹಾಲು ಕುಡಿದುಬಿಟ್ಟೆಯಾ ಪೃಥ್ವೀ" ಎಂದು ಕೇಳಿದಳು ಅವನ ಭುಜಗಳನ್ನು ಹಿಡಿದು.

ತಾಯಿಯ ವಿಕಾರವಾದ ಮುಖವನ್ನು ಕಂಡು ಹೆದರಿಹೋದ ಪೃಥ್ವಿ ಜೋರಾಗಿ ಅಳುತ್ತ "ಹೌದು ಹೌದು..." ಎಂದ.

"ಅಯ್ಯೋ..." ಆಶಾ ಮೂರ್ತಿಯತ್ತ ಆರ್ತಳಾಗಿ ನೋಡಿದಳು, "ಪೃಥ್ವಿ ವಿಷ ಕುಡಿದುಬಿಟ್ಟಿದ್ದಾನೆ.... ವಿಷ. ಹೇಗಾದರೂ ಮಾಡಿ ಅವನನ್ನು ರಕ್ಷಿಸಿ" ಎಂದು ಕೂಗಿಕೊಂಡಳು.

ಯಾರಿಗೂ ಅರ್ಥವಾಗಲಿಲ್ಲ ಈ ಮಾತು. ಮೂರ್ತಿ ಕುಳಿತಲ್ಲಿಂದ ಝುಗ್ಗನೆ ಮೇಲೆದ್ದು ಬೀಳುವ ಸ್ಥಿತಿಯಲ್ಲಿದ್ದ ಆಶಾಳನ್ನು ಹಿಡಿದುಕೊಳ್ಳುತ್ತ "ಏನ್ಹೇಳಿದೆ ಆಶಾ... ಯಾರು ವಿಷ ಕುಡಿದರು. ಎಲ್ಲಿತ್ತು ವಿಷ....? ಅರೆ, ನಿನ್ನ ಕೈಲಿ ಏನಿದು? ಇದೆಲ್ಲಿ ಸಿಕ್ತು ನಿನಗೆ..." ಎಂದು ಅವಳ ಕೈಯ್ಯಲ್ಲಿದ್ದ ಟಿನ್ನಿನ ಡಬ್ಬಿಯನ್ನೆತ್ತಿಕೊಂಡ.

ಜಗನ್ನಾಥ, ತಮ್ಮಯ್ಯ, ಹಾ ಹಾ.... ಎನ್ನುತ್ತ ಎದ್ದು ಹತ್ತಿರ ಬಂದರು... ಆಶಾ ಪೃಥ್ವಿಯನ್ನೇ ನೋಡುತ್ತ ಗಡ ಗಡ ನಡುಗತೊಡಗಿದಳು.

"ಹೊಟ್ಟೆಯಲ್ಲಿ ಸಂಕಟವಾಗ್ತಿದೆಯೇ ಪೃಥ್ವಿ. ಎಂತಹ ಅನರ್ಥ ಮಾಡಿಬಿಟ್ಟೆಯಲ್ಲಾ ನೀನು. ನಾನು ಕುಡಿಯಬೇಕು ಅಂತ ಇರಿಸಿದ ವಿಷವನ್ನು ನೀನು ಕುಡಿದುಬಿಟ್ಟೆ! ಅಯ್ಯೋ ಜಗ್ಗೂ, ಪೃಥ್ವಿ ವಿಷ ಕುಡಿದುಬಿಟ್ಟಿದ್ದಾನೆ.... ಮಾವಯ್ಯ, ಹೇಗಾದರೂ ಅವನನ್ನು ಬದುಕಿಸಿ.... ನೋಡಿ, ಪೃಥ್ವಿ ಕಣ್ಣುಗಳು ಹೇಗಾಗ್ತಿವೆ ಅಂತ... ಅತ್ತೇ ಮೊಮ್ಮಗನನ್ನು ಬದುಕಿಸಿಕೊಳ್ಳಿ ಅತ್ತೇ... ವಿಷ.... ನಾ... ನಾ..." ಮಾತು ಪೂರ್ಣವಾಗುವ ಮೊದಲೇ ಅವಳ ಕಣ್ಣೆವೆಗಳು ಮೇಲಾದವು. ತೀರಾ ಸೋತವಳಂತೆ ಬುಡಕಡಿದ ಬಾಳೆಮರದಂತೆ ಅಲ್ಲೇ ನೆಲಕ್ಕೆ ಕುಸಿದಳು.

ಜಗನ್ನಾಥನ ಸೂಕ್ಷ್ಮಬುದ್ಧಿಗೆ ಪರಿಸ್ಥಿತಿಯ ಅರಿವಾಯಿತು. ಪೃಥ್ವಿಯಂತೂ ಕಣ್ಣೀರಿಡುತ್ತಿದ್ದ. ಈ ಗಲಾಟೆ ಕಂಡು ಮೂರ್ತಿ ಅತ್ತಿತ್ತ ತಿರುಗುತ್ತ ಏನು ಮಾಡಲೂ ತೋಚದವನಂತೆ ನಿಂತಿದ್ದಾಗ ಜಗನ್ನಾಥ ಪೃಥ್ವಿಯನ್ನೆತ್ತಿಕೊಂಡ, "ಮೂರ್ತಿ, ನಿಮ್ಮ ಬೈಕನ್ನು ರೆಡಿ ಮಾಡಿ. ಈಗಿಂದೀಗಲೇ ಡಾಕ್ಟರರ ಹತ್ತಿರ ಕರ್ರ್ಕೊಂಡು ಹೋಗೋಣ. ಬನ್ನಿ.... ಬನ್ನಿ, ಒಂದ್ನಿಮಿಷ ತಡಮಾಡಬೇಡಿ. ಯಾರಾದರೂ ಆಶಾಗೆ ಉಪಚಾರ ಮಾಡಿ."

ಆಕಾಶವೇ ತಲೆಯ ಮೇಲೆ ಬಿದ್ದಂತೆನಿಸಿತು ಮೂರ್ತಿಗೆ. ಅವಸರದಲ್ಲಿ ಮೋಟರ್ ಬೈಕನ್ನು ಈಚೆಗೆಳೆದ. "ಹಾಲು ವಾಸನೆಯಿದೆ" ಎಂದು ಗೋಗರೆಯುತ್ತಿದ್ದ ಪೃಥ್ವಿಯ ಅಳು ಇನ್ನಷ್ಟು ಹೆಚ್ಚಿತು. ಜಗನ್ನಾಥ ಅವನನ್ನು ಎತ್ತಿಕೊಂಡೇ ಮೂರ್ತಿಯ ಹಿಂದೆ ಬೈಕ್‌ನಲ್ಲಿ ಕುಳಿತ. ಬೈಕ್ ಸದ್ದು ಮಾಡುತ್ತಾ ಚಲಿಸಿತು ಮುಂದಕ್ಕೆ. ತಮ್ಮಯ್ಯನವರು ಹಣೆ ಹಣೆ ಬಡಿದುಕೊಳ್ಳುತ್ತ ಸೊಸೆಯನ್ನು ಬಾಯಿಗೆ ಬಂದಂತೆ ಜರಿಯುತ್ತ ಉಟ್ಟಬಟ್ಟೆಯನ್ನೂ ಗಮನಿಸದೆ ಓಡತೊಡಗಿದರು ಬೈಕ್‌ನ ಹಿಂದೆ. ಕಣ್ಣು ಕಾಣದ ರಂಗಮ್ಮನ ಸ್ವರ ತಾರಕಕ್ಕೇರಿತು. ಕಣ್ಣು ಕತ್ತಲೆಯಿಟ್ಟಂತೆಸಿ ಮಣ್ಣಿನಲ್ಲಿಯೇ ಕೈಯ್ಯನ್ನು ಆಚೆ ಈಚೆ ಹೊರಳಿಸುತ್ತ ಸೊಸೆಯನ್ನು ನಿಂದಿಸುತ್ತ ರೋದಿಸುತ್ತಿದ್ದಂತೆ ಕೆಲಸದಾಳುಗಳೆಲ್ಲ ಹಾಜರಾದರು ಮನೆಯಂಗಳದಲ್ಲಿ. "ಪೃಥ್ವಿ ವಿಷದ ಹಾಲು ಕುಡಿದು ಸತ್ತುಹೋದ" ಎಂದು ಹಣೆ ಜಜ್ಜಿಕೊಳ್ಳುತ್ತಿದ್ದಂತೆ "ಚಿಕ್ಕರಾಯರ ಮಗ ಸತ್ತಿತಂತೆ" ಎನ್ನುತ್ತ ಆಳುಗಳೂ ರೋದಿಸತೊಡಗಿದರು.

ಆದರೆ ಅಂಗಳದ ಬದಿಯಲ್ಲಿ ಮೂರ್ಛೆತಪ್ಪಿ ಬಿದ್ದಿದ್ದ ಆಶಾ ಬಿದ್ದುಕೊಂಡೇ ಇದ್ದಳು ಇನ್ನೂ.

೨೨

ನಿಜವಾಗಿಯೂ ಪೃಥ್ವಿಗೆ ಯಾವ ಆಪಾಯವೂ ಸಂಭವಿಸರಲೇ ಇಲ್ಲ. ಆದದ್ದು ಇಷ್ಟೇ. ಹಾಲಿನ ಗ್ಲಾಸನ್ನು ಎತ್ತಿಕೊಂಡು ಕುಡಿಯಲು ಹವಣಿಸಿದಾಗ ಏನೋ ವಾಸನೆ ಬಂದುದರಿಂದ ಕುಡಿಯಲಾಗದೆ ಹೊರಗೆ ಬಂದಿದ್ದ. ಅವನು ಅಳು, ಕೈಯಲ್ಲಿರುವ

ಗ್ಲಾಸನ್ನು ಕಂಡು ಅವನು ಹಾಲು ಕುಡಿದಿರಬಹುದೆಂದುಕೊಂಡು ಹೆದರಿ ಕೂಗಿಕೊಂಡಿದ್ದಳು ಆಶಾ. ಮನೆಯವರೂ ಹೆದರಿ, ಜಗನ್ನಾಥನೂ ಅವಸರಪಡಿಸಿದ್ದರಿಂದ ಡಾಕ್ಟರರ ಹತ್ತಿರ ಬಂದುಬಿಟ್ಟಿದ್ದರು. ವಿಷ ಹೊಟ್ಟೆಗೆ ಸೇರಿರಬಹುದೇನೋ ಎಂಬ ಅನುಮಾನದಿಂದ ಡಾಕ್ಟರರು ಔಷಧಿಯನ್ನಿತ್ತು ವಾಂತಿ ಮಾಡಿಸಿದರು. ಆ ಮೇಲೆ ಯಾವ ಅಪಾಯವೂ ಇಲ್ಲವೆಂದು ಡಾಕ್ಟರರು ಹೇಳಿದ ಮೇಲೆ ನೆಮ್ಮದಿಯಿಂದ ಹಿಂದಿರುಗಿದರು ಮನೆಗೆ. ಸದ್ಯ ಬಂದ ದೊಡ್ಡ ಕುತ್ತು ನಿವಾರಣೆಯಾಯಿತು.

ಆದರೆ ಮನೆಗೆ ಬಂದು ನೋಡುತ್ತಾರೆ... ಮೂರ್ಚೆ ತಪ್ಪಿದ ಆಶಾಗೆ ಇನ್ನೂ ಎಚ್ಚರ ಬಂದಿಲ್ಲ. ಎಷ್ಟು ಉಪಚರಿಸಿದರೂ ಎಚ್ಚರವಾಗದಿರಲು ಶಿವಮೂರ್ತಿ ಪುನಃ ಓಡಿದ ಡಾಕ್ಟರರತ್ತ. ಡಾಕ್ಟರರು ಬಂದ ಮೇಲೆಯೇ ಅವಳಿಗೆ ಎಚ್ಚರ. ಆದರೆ ಅಯ್ಯೋ.... ಎಚ್ಚುತ್ತಿದ್ದ ಅವಳು ತನ್ನ ಬಾಹ್ಯ ಪ್ರಜ್ಞೆಯನ್ನು ಕಳೆದುಕೊಂಡುಬಿಟ್ಟಿದ್ದಳು. ಮಾತನಾಡಿಸಿದರೆ ಉತ್ತರವಿಲ್ಲ.

"ಈಗಿಂದೀಗಲೇ ಇವಳನ್ನು ಬೆಂಗಳೂರಿಗೆ ಕರ್ಕೊಂಡು ಹೋಗಿ" ಎಂದರು ಡಾಕ್ಟರರು ತಾವೇನೂ ಮಾಡಲಾರೆವು ಎಂಬಂತೆ.

"ಕೆಲಸಕ್ಕೆ ರಾಜೀನಾಮೆಯನ್ನಿತ್ತು ಇಲ್ಲೇ ಬಂದುಳಿಯೋಣವೆಂದುಕೊಂಡಿದ್ದೆ. ಆದರೆ ನಾನು ಯೋಚಿಸಿದ್ದೇ ಒಂದು... ಆದದ್ದೇ ಇನ್ನೊಂದು."

"ಅದಕ್ಕಾಗಿ ಚಿಂತಿಸಬೇಡಿ" ಡಾಕ್ಟರರೆಂದರು, "ಹುಷಾರಾಗಿ ಕರ್ಕೊಂಡು ಬನ್ನಿ ಬೆಂಗಳೂರಿನಿಂದ, ಇದಕ್ಕಿಂತ ಮೊದಲೇ ಅವಳನ್ನು ಡಾಕ್ಟರರ ಹತ್ತಿರ ತೋರಿಸಬೇಕಿತ್ತು."

"ಏನೋ ದೇವರ ದಯದಲ್ಲಿ ಬದುಕಿದ್ದಾಳೆ."

"ಸಾಯಲು ಅವಳಿಗೇನಾಗಿತ್ತು ಧಾಡಿ?" ಪೃಥ್ವಿಯನ್ನು ತಬ್ಬಿಕೊಂಡಿದ್ದ ರಂಗಮ್ಮ ಅಸಹನೆಯಲ್ಲಿ ಕೂಗಿದರು, "ಮಗೂನ್ನ ಕೊಂದುಹಾಕಿ ಬಿಡ್ತಾ ಇದ್ದಳಲ್ಲ ಈ ರಾಕ್ಷಸಿ. ಏನೋ ದೇವರದಯ ಚೆನ್ನಾಗಿತ್ತು. ಬದುಕಿಕೊಂಡ."

ಮರುದಿನವೇ ಆಶಾಳನ್ನು ಬೆಂಗಳೂರಿಗೆ ಕರೆದೊಯ್ಯಬೇಕೆಂದು ನಿಶ್ಚಯಿಸಲಾಯಿತು. ಇದಕ್ಕೋಸ್ಕರವೇ ಜಗನ್ನಾಥ ಬರುವಂತಾದುದು ಆಶ್ಚರ್ಯವೇ ಸರಿ!

* * * *

ಬೆಂಗಳೂರಿನ ಪ್ರಸಿದ್ಧ ಮಾನಸಿಕ ತಜ್ಞರಲ್ಲಿ ಕರೆದೊಯ್ಯಲಾಯಿತು ಆಶಾಳನ್ನು. ನಾಲ್ಕು ದಿನಗಳವರೆಗೂ ಅವರ ನರ್ಸಿಂಗ್ ಹೋಮ್‌ನಲ್ಲಿ ಪೂರ್ಣ ಹುಚ್ಚಿಯಂತೆ ಇದ್ದಳು ಅವಳು. ನಾನಾ ಬಗೆಯಲ್ಲಿ ಡಾಕ್ಟರರು ಅವಳನ್ನು ಪರೀಕ್ಷಿಸಿ ಅವಳ ಮನದ ಕಾಯಿಲೆಯನ್ನು ತಿಳಿಯಲೆತ್ನಿಸಿದರು. ಇಂಜಕ್ಷನ್ ಕೊಟ್ಟು ಮೂರ್ಚೆ ತಪ್ಪಿಸಿ ಜಾಗೃತಾವಸ್ಥೆಯಲ್ಲಿದ್ದ ಒಳಮನಸ್ಸಿನೊಡನೆ ಅನೇಕ ಪ್ರಶ್ನೆಗಳನ್ನು ಕೇಳಿ

ಬರೆದುಕೊಂಡರು. ಮಾತ್ರೆಗಳನ್ನಿತ್ತು, ಅವಳೊಂದಿಗೆ ವೈಯಕ್ತಿಕವಾಗಿ ಮಾತನಾಡಿ ಅವಳ ಒಳಮನಸ್ಸಿಗಾದ ಆಘಾತವನ್ನು ಹುಡುಕಲೆತ್ನಿಸಿದರು.

ಪೂರ್ಣವಾಗಿ ತಿಳಿಯದೇ ಹೋದರೂ ರೋಗಿ ತನ್ನಲ್ಲಿ ಖಂಡಿತವಾಗಿಯೂ ಗುಣವಾಗುತ್ತಾಳೆ ಎಂಬ ಭರವಸೆಯೊಂದಿಗೆ ಅವರು ಒಂದು ದಿನ ಶಿವಮೂರ್ತಿಯನ್ನು ತಮ್ಮ ಕೋಣೆಗೆ ಕರೆದರು.

ಶಿವಮೂರ್ತಿ ಮತ್ತು ಜಗನ್ನಾಥ ಒಟ್ಟಾಗಿಯೇ ಡಾಕ್ಟರರ ಕೋಣೆಗೆ ಬಂದು ಕುಳಿತುಕೊಂಡರು. ಕುತೂಹಲ, ಆತಂಕ, ಆಶಾ ಗುಣವಾಗುತ್ತಾಳೆಯೇ ಇಲ್ಲವೇ ಎಂಬ ಕಳವಳ ಇಬ್ಬರಿಗೂ.

ಡಾಕ್ಟರರು ಅವರೊಂದಿಗೆ ಮಾತನಾಡುತ್ತ ಅವಳ ಕಾಯಿಲೆ ಹೇಳುವಂತಹ ಕಾರಣವನ್ನು ಹುಡುಕಲು ಅಸಾಧ್ಯವಾದುದೆಂದು ತಿಳಿಸುತ್ತ ಜಗನ್ನಾಥನನ್ನು ಹೊರಗೆ ಕಳುಹಿಸಿ ಶಿವಮೂರ್ತಿಯೊಂದಿಗೆ ಏಕಾಂತದಲ್ಲಿ ಮಾತನಾಡತೊಡಗಿದರು.

"ನಿಮ್ಮ ಹೆಂಡತಿಯನ್ನು ತುಂಬಾ ಪ್ರೀತಿಸ್ತಾ ಇದ್ದರಾ?" ಎಂದು ಕೇಳಿದರು ಡಾಕ್ಟರು.

"ಓಹೋ.... ತುಂಬಾ ಪ್ರೀತಿಸ್ತಿದ್ದೆ..." ಎಂದ ಹೆಮ್ಮೆಯಲ್ಲಿ.

"ಕಾಂತಿ ನಿಮಗೇನಾಗಬೇಕು?"

"ಅವಳು ನನ್ನ ಮೊದಲು ಹೆಂಡತಿ."

"ಹಾಗೋ..." ಡಾಕ್ಟರ ಮುಖದಲ್ಲಿ ನಗೆ ಮಿಂಚಿತು. ತಮ್ಮ ಫೈಲ್‌ನತ್ತ ದೃಷ್ಟಿ ಹಾಯಿಸಿದರು.... ಎರಡು ನಿಮಿಷಗಳ ನಂತರ ಅಂದರು, "ಅವಳನ್ನು ತುಂಬ ಪ್ರೀತಿಸ್ತಾ ಇದ್ದರಾ?"

"ಅವಳನ್ನೇ!" ಶಿವಮೂರ್ತಿ ಕಣ್ಣುಗಳು ಅರೆಮುಚ್ಚಿದವು. "ಅವಳನ್ನು ಮರೆಯುವುದುಂಟೇ ನಾನು.... ನನ್ನ ಜೀವ, ಉಸಿರು, ದೇಹ ಎಲ್ಲಾ ಅವಳಾಗಿದ್ದಳು. ನಾನು ಬೇರೆ ಅವಳು ಬೇರೆ ಅಲ್ಲ.... ಈಗ ನನ್ನಲ್ಲಿರುವುದು ಬರಿಯ ನಿರ್ಜೀವ ದೇಹ..."

"ಹಹ್ಹ.... ಹ್ಹ... ಆದರೂ ಈ ನಿರ್ಜೀವ ದೇಹ ಮಾತನಾಡ್ತಾ ಇದೆಯಲ್ಲ!...." ಜೋರಾಗಿ ನಕ್ಕರು ಡಾಕ್ಟರರು, "ಅವಳ ಜಪದಲ್ಲಿ ಊಟ ನಿದ್ದೆ ಎಲ್ಲಾ ಬಿಟ್ಟಿದ್ದೀರಾ ಇಷ್ಟು ವರ್ಷಗಳೂ. ನೀವು ಮಾಡಿದ ತಪ್ಪು ನನಗೀಗ ಚೆನ್ನಾಗಿ ಅರ್ಥವಾಯ್ತು.... ನಿಮ್ಮ ಈ ಎರಡನೇ ಹೆಂಡತಿ ನಿಮ್ಮನ್ನು ತೀರಾ ದ್ವೇಷಿಸ್ತಾಳೆ.... ನಿಮ್ಮ ಹೆಸರನ್ನು ಕೇಳಿದಾಕ್ಷಣ ಕೋಪದಲ್ಲಿ ಭುಸುಗುಡುತ್ತಾಳೆ.... ಗೊತ್ತೋ ನಿಮಗೆ?"

ತಲೆ ತಗ್ಗಿಸಿದ ಶಿವಮೂರ್ತಿ.

"ಅವಳ ಒಳಮನಸ್ಸು ನೀವು ಹೇಳುವುದಕ್ಕಿಂತಲೂ ಹೆಚ್ಚಿನ ಉತ್ತರ ಕೊಟ್ಟಿದೆ ನನಗೆ. ನಿಮ್ಮ ಹೆಂಡತಿಯನ್ನು ನಿಜವಾಗಿಯೂ ಪೂರ್ಣ ಗುಣಪಡಿಸಿಕೊಡಬಲ್ಲೆ. ಆದರೆ ಅದಕ್ಕೆ ನಿಮ್ಮ ನೆರವು ಅಷ್ಟೇ ಅತ್ಯಗತ್ಯ. ಅವಳ ಮನದಲ್ಲಿ ದ್ವೇಷ, ತಿರಸ್ಕಾರವನ್ನು ಅಳಿಸಿ

ಆತ್ಮೀಯತೆಯ, ಪ್ರೇಮದ ಸಸಿಯನ್ನು ನೆಡಬೇಕಾದದ್ದು ನಿಮ್ಮ ಕರ್ತವ್ಯ. ನಿಮ್ಮ ಮೊದಲ ಹೆಂಡತಿಯನ್ನು ಪೂರ್ಣ ಮರೆಯಬೇಕು."

"ಅದೊಂದು ಸಾಧ್ಯವಿಲ್ಲ. ಡಾಕ್ಟರೇ, ಅವಳ ಹೆಸರನ್ನು ಒಂದು ಬಾರಿಯಾದರೂ ಹೇಳಿಕೊಳ್ಳದೇ ಇದ್ದಲ್ಲಿ ನನ್ನ ಮನಸ್ಸಿನೊಳಗೆ ಏನೆಲ್ಲಾ ಆಗುತ್ತೆ... ಅವಳನ್ನು ಕೊಂಡಾಡದೇ ಇದ್ದಲ್ಲಿ ನಾನೇ ಹುಚ್ಚನಾಗಿ ಹೋಗ್ತೇನೋ ಏನೋ...!"

"ಯೂ ರ‍್ಯಾಸ್ಕಲ್..." ಮೇಜು ಗುದ್ದಿದರು ಡಾಕ್ಟರರು, "ನಿಮಗೆ ಹುಚ್ಚು ಹಿಡಿಯುತ್ತೆ ಎಂದುಕೊಂಡು ಆ ಕೋಮಲ ಮನಸ್ಸಿನ ಮೇಲೆ ಭೀತಿ, ಮತ್ಸರದ ಮುದ್ರೆಯನ್ನೊತ್ತಬೇಕಿತ್ತೇ? ಹೇಳಿಕೊಳ್ಳಬೇಕು ಎಂದು ನಿಮಗನ್ನಿಸಿದರೆ ಗೋಡೆಗೋ ಕಲ್ಲಿಗೋ ಹೇಳಿಕೊಳ್ಳಬೇಕಿತ್ತು. ಇಷ್ಟೂ ತಿಳಿಯಲಿಲ್ಲವೇ ನಿಮಗೆ?"

ಡಾಕ್ಟರರು ಇನ್ನೇನೋ ಬರೆದುಕೊಳ್ಳುತ್ತ ಹೇಳಿದರು, "ಮದುವೆಯಾಗುವುದು ಕೇವಲ ದೈಹಿಕ ಸುಖಕ್ಕೋಸ್ಕರ ಅಲ್ಲ ಶಿವಮೂರ್ತಿ, ಪ್ರತಿವ್ಯಕ್ತಿಗೂ ಆತ್ಮೀಯರು ಬೇಕು. ಪತಿ ಪತ್ನಿಯರಲ್ಲಿ ಅನುರಾಗ ಬೇಕು. ನನಗೀಗ ಅನ್ನಿಸ್ತಾ ಇದೆ, ಅವಳಿಗಿಂತ ಮಾನಸಿಕ ಆಘಾತವಾದದ್ದು ನಿಮಗೆ! ಅರಿಯದೆ ಅವಳ ಸೂಕ್ಷ್ಮ ಮನಸ್ಸಿನ ಮೇಲೆ ಕರಾಳ ಛಾಯೆಯನ್ನು ಒತ್ತಿದವರು ನೀವು! ಅದೇ ಕಿವಿನೋವಿನ ಪ್ರಾರಂಭ. ಅವಳ ಕಿವಿಶೂಲೆ ಅಥವಾ ನೋವು ದೈಹಿಕವಾದುದಲ್ಲ. ಅದು ಮಾನಸಿಕ ಕಾಹಿಲೆ."

"ಏನು.... ನಿಜವೇ?"

"ಮಾನಸಿಕ ಕಾಯಿಲೆ ದೇಹದ ಯಾವುದೇ ಭಾಗದಲ್ಲಿ ಕಾಣಿಸಿಕೊಳ್ಳಬಹುದು. ಹೆರಿಗೆಯಲ್ಲಿ ದೇಹ ನಿತ್ರಾಣವಾದಾಗ ಅವಳು ತನ್ನ ಕಿವಿಶೂಲೆಯನ್ನು ಹತ್ತಿಕ್ಕಲು ಮಾತು ಪ್ರಾರಂಭಿಸಿರಬೇಕು. ಅತಿಯಾದ ನಿಶ್ಶಬ್ದತೆ ಮನುಷ್ಯನ ಮನದ ಮೇಲೆ ಪೆಟ್ಟನ್ನೀಯಬಹುದು. ಅದು ಮಿದುಳನ್ನು ಪೂರ್ಣ ಜಡವನ್ನಾಗಿ ಮಾಡಬಹುದು. ಅವಳಿಗಾದುದೂ ಹೀಗೆಯೇ. ಅತಿಯಾದ ನಿಶ್ಶಬ್ದತೆ, ಮತ್ತು ಇನ್ನೂ ಅನೇಕ ಕಾರಣಗಳಿಂದ ಅವಳ ಸೂಕ್ಷ್ಮಮನಸ್ಸು ಆಘಾತಕ್ಕೊಳಗಾಗಿದೆ.... ಇನ್ನೊಂದು ಮಾತನ್ನು ಹೇಳಲೇ?"

"ಹೇಳಿ ಡಾಕ್ಟರ್..."

"ಪ್ರತಿಯೋರ್ವ ಹೆಂಗಸೂ ಗಂಡನಿಂದ ಪ್ರೀತಿಯ ಮಾತು, ನಗೆ ನೋಟ, ನಿರ್ಮಲ ಪ್ರೇಮವನ್ನು ಬಯಸುತ್ತಾಳೆ. ನಿಮ್ಮ ಹೆಂಡತಿಗೆ ಅನುರಾಗದ ಜೊತೆಯಲ್ಲಿ ನಂಬಿಕೆ, ವಿಶ್ವಾಸ, ಆತ್ಮೀಯತೆ ಬೇಕಾಗಿದೆ. ಸತ್ತವಳನ್ನು ಪೂರ್ಣ ಮರೆತು ಈಗಿರುವವಳನ್ನು ಚೆನ್ನಾಗಿ ನೋಡಿಕೊಳ್ಳಿ. ಒಂದೆರಡು ತಿಂಗಳು ಇಲ್ಲಿಯೇ ಇರಲಿ. ಕೆಲವು ಶಾಕ್ ಕೊಡಬೇಕಾಗಬಹುದು. ಆಮೇಲೆ ಗುಣಸಿಗುತ್ತೆ ನೋಡಿ."

ಅವರ ಮಾತಿಗೆಲ್ಲ 'ಹೂಂ' ಎಂದು ಒಪ್ಪಿಕೊಂಡ ಶಿವಮೂರ್ತಿ. ಅವರದೇ ಆದ ನರ್ಸಿಂಗ್ ಹೋಮ್‌ನಲ್ಲಿಯೇ ಅಡ್ಮಿಟ್ ಮಾಡಿ ವಂಡ್ಸೆಗೆ ಹೊರಟುಹೋದ. ಜಗನ್ನಾಥ ಪ್ರತಿದಿನ ಬಂದು ವಿಚಾರಿಸಿಕೊಳ್ಳುತ್ತಿದ್ದ ಅವಳನ್ನು. ತುಮಕೂರಿನಿಂದ ರುಕ್ಮಿಣಿಯೂ ಬರತೊಡಗಿದಳು ಆಗಾಗ.

ದಿನಸರಿದಂತೆ ಆಶಾಳಲ್ಲಿ ಬಹಳಷ್ಟು ಬದಲಾವಣೆಯಾಯ್ತು. ಡಾಕ್ಟರರ ಹೇಳಿಕೆ

ಸುಳ್ಳಾಗಲಿಲ್ಲ. ದಿನೇ ದಿನೇ ಗುಣಮುಖಳಾದಳು. ಶಿವಮೂರ್ತಿ ಮೂರು ಬಾರಿ ಬಂದಿದ್ದ ಅವಳನ್ನು ನೋಡಲೆಂದು. ಆದರೆ ಅವಳು ಅವನನ್ನು ಮಾತನಾಡಿಸಲೇ ಇಲ್ಲ. ಹತ್ತಿರ ಬಂದು "ಹೇಗಿದ್ದಿ ಆಶಾ, ಚಿಂತೆ ಬಿಡು" ಎಂದು ನಗು ನಗುತ್ತ ಹೇಳುತ್ತಿದ್ದರೆ ಒರಟಾಗಿ ಏನೇನೋ ಹೇಳಿಬಿಡುತ್ತಿದ್ದಳು ಅವಳು.

ಅವನ ಈ ಬದಲಾವಣೆ ತೀರಾ ತಡವಾಗಿ ನಿರೀಕ್ಷಿಸದ ರೀತಿಯಲ್ಲಿ ಆಶಾಗೆ ದೊರೆತೀತು ಎಂದು ಯಾರು ತಿಳಿದಿದ್ದರು?

೨೩

ಹೊಸ ಗೆಲುವು ಪಡೆದ ಆಶಾ ಆಸ್ಪತ್ರೆಯಿಂದ ಬಿಡುಗಡೆಯಾಗುವ ದಿನವೂ ಹತ್ತಿರ ಬಂದಿತು. ಅವಳನ್ನು ಕರೆದೊಯ್ಯಲು ಬಂದಿದ್ದ ಶಿವಮೂರ್ತಿ. ಡಾಕ್ಟರರು ಅವರಿಬ್ಬರನ್ನು ಒಟ್ಟಾಗಿ ಕರೆದು ಮೃದುಸ್ವರದಲ್ಲಿ ಹಿತನುಡಿಗಳನ್ನು ತಿಳಿಸುತ್ತ "ಇವತ್ತಿಗೆ ನನ್ನ ಜವಾಬ್ದಾರಿ ಮುಗಿಯಿತು. ಇನ್ನು ನೀವು ಅವಳನ್ನು ಮಗುವಿನಂತೆ ನೋಡಿಕೊಳ್ಳಬೇಕು. ಈಗ ನಿಮ್ಮ ಮೇಲಿನ ಜವಾಬ್ದಾರಿ ಹೆಚ್ಚಿನದು" ಎಂದಂದು ಅವರು ಕೇಳಿದರು, "ಈಗಲೂ ಅವಳನ್ನು ಹಳ್ಳಿಯಲ್ಲಿರಿಸಿ ನೀವು ಪೇಟೆಯಲ್ಲಿರ್ತೀರಾ?"

"ಇಲ್ಲ ಡಾಕ್ಟರ್... ಹಳ್ಳಿಯಲ್ಲಿದ್ದೇನೆ.... ಹೊಸ ಮನೆಯೂ ತಯಾರಾಗಿದೆ ನಮಗಾಗಿ."

"ಗುಡ್...! ಹೊಸ ಬದುಕೂ ನಿಮ್ಮದಾಗಲಿ. ದೇವರು ನಿಮಗೆ ಒಳಿತನ್ನೇ ಮಾಡಲಿ."

ಇಬ್ಬರೂ ಡಾಕ್ಟರರಿಗೆ ಕೈಜೋಡಿಸಿ ನಮಸ್ಕರಿಸಿ ಹೊರಗೆ ಬಂದರು. ರುಕ್ಮಾ ಜಗನ್ನಾಥ ಕಾಯುತ್ತಾ ಇದ್ದರು ಇವರಿಗೋಸ್ಕರ. ಶಿವಮೂರ್ತಿ ಅತ್ಯಂತ ಉತ್ಸಾಹದಲ್ಲಿದ್ದನೆಂದು ಅವನ ಮುಖವೇ ಹೇಳುತ್ತಿತ್ತು. ಆಶಾ ಕಣ್ಣಗಳಲ್ಲಿ ಹೊಳಪು ಇದ್ದರೂ ಮುಖದಲ್ಲಿ ಗೆಲುವು ಇದ್ದಿರಲಿಲ್ಲ. ಆ ರಾತ್ರಿ ಸಿನಿಮಾ ಪ್ರೋಗ್ರಾಂ ಹಾಕಿದಾಗ ಆಶಾ ನಿರಾಕರಿಸಿದಳು. ಉಳಿದವರಿಗೂ ಹೋಗುವ ಮನಸ್ಸಾಗದೆ ಆ ರಾತ್ರಿ ಜಗನ್ನಾಥನ ಕೋಣೆಗೆ ಹಿಂದಿರುಗಿದರು.

ಆಶಾ ತಾಯಿಯೊಂದಿಗೆ ಮಾತನಾಡುತ್ತ "ಅಮ್ಮಾ ನಾನೂ ನಿನ್ನ ಸಂಗಡ ತುಮಕೂರಿಗೆ ಬರ್ತೇನೆ" ಎಂದಳು.

"ಮಗೂನ್ನ ನೋಡುವುದಕ್ಕೋಸ್ಕರವೇ?"

"ನೋಡ್ಕೊಂಡು ಬರುವುದೇನು? ಕರ್ಕೊಂಡೇ ಬಂದುಬಿಡೋಣ" ಶಿವಮೂರ್ತಿ ಹೇಳಿದ. "ಜೊತೆಗೆ ನಿನ್ನ ಅಮ್ಮನೂ ಬರಲಿ."

"ಒಳ್ಳೆಯದೇ ಆಯಿತು," ಸಂತಸದಲ್ಲಿ ಅಂದಳು ರುಕ್ಮಾ "ನೀವು ಯಾವಾಗ

ಮಗೂನ್ನ ಕರ್ಕೊಂಡು ಹೋಗ್ತೇನೆ ಅಂತ ಹೇಳ್ತಿರೋ ಆಗ ಮಗೂನ್ನ ನಿಮ್ಮ ವಶಕ್ಕೆ ಒಪ್ಪಿಸ್ತೀನಿ ಎಂದಿದ್ದೆ. ಬಹಳ ಹುಷಾರಾಗಿದ್ದಾನೆ. ಯಾವ ತಂಟೆಯೂ ಇಲ್ಲ."

ಮರುದಿನ ಬೆಳಿಗ್ಗೆ ಶಿವಮೂರ್ತಿ ತನ್ನ ಸಾಮಾನುಗಳನ್ನು ಜೋಡಿಸಿಡುತ್ತಿದ್ದಂತೆ ಆಶಾ ತನ್ನ ಕೆಲವು ಬಟ್ಟೆಗಳನ್ನು ಕೈಚೀಲಕ್ಕೆ ತುಂಬಿಸಿಡುತ್ತ ಅಂದಳು, "ಅಮ್ಮಾ ನಾನೂ ನಿನ್ನ ಜೊತೆಯಲ್ಲಿ ತುಮಕೂರಿನಲ್ಲಿಯೇ ಇದ್ದುಬಿಡ್ತೇನೆ."

ಅಲ್ಲಿಯೇ ಇದ್ದ ರುಕ್ಮಾ ಹುಬ್ಬೇರಿಸಿದಳು, "ಏನು?"

"ನಿನ್ನ ಅನಾಥಾಶ್ರಮ ಹೇಗೂ ಇದೆ. ಅದೇ ಆಶ್ರಮದಲ್ಲಿ ನನ್ನನ್ನೂ ಸೇರಿಸಿಕೋ. ನಾನೂ ನೀನೂ ಒಟ್ಟಾಗಿ ಇರೋಣ."

"ವಂಡ್ಸೆಗೆ ಹೋಗೋದಿಲ್ವೇ?" ಕೇಳಿದ ಜಗನ್ನಾಥ.

"ಊಹೂಂ."

"ನಿನ್ನನ್ನು ಕರ್ಕೊಂಡು ಹೋಗಲು ಬಂದಿದ್ದಾರಲ್ಲ ನಿನ್ನ ಗಂಡ... ಹೊಸ ಮನೆಯೂ ಸಿದ್ಧವಾಗಿದೆಯಂತೆ. ಗಂಡ ಮಕ್ಕಳ ಸಂಗಡ ಹಾಯಾಗಿರುವ ಸುಂದರ ಬದುಕು ನಿಮ್ಮದು. ಇಂತಹ ಸಂಸಾರವಿದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ!"

ಆಶಾ ಈ ಮಾತನ್ನು ಕೇಳಿ ಹೋ ಹೋ ಎಂದು ಗಟ್ಟಿಯಾಗಿ ನಕ್ಕುಬಿಟ್ಟಳು. "ಹೊಸ ಮನೆ ಕಟ್ಟಿದರೂ ಹಳೆ ಹೆಂಡ್ತಿಯ ಸಂಗಡ ಇರಬೇಕಲ್ಲ. ಛೇ, ಎಂತಹ ಅನ್ಯಾಯ...."

"ಹಳೆ ಹೆಂಡತಿಯಿರುವಾಗ ಹೊಸ ಹೆಂಡತಿಯನ್ನು ಯಾರು ತರ್‍ತಾರೆ? ಇದ್ದುದರಲ್ಲಿಯೇ ತೃಪ್ತಿ" ಬಾಯ್ತೆರೆದ ಶಿವಮೂರ್ತಿ.

ತಿರಸ್ಕಾರದಿಂದ ನೋಡಿದಳು ಅವನತ್ತ. "ಈಗಿರೋ ಎರಡನೆಯ ಹೆಂಡತಿ ಸತ್ತಿದ್ದಾಳೆ ಎಂದ್ಕೊಂಡು ತಂದ್ರಾಯ್ತು ಇನ್ನೊಂದು."

ಅವಳ ಸ್ವರದಲ್ಲಿರುವ ವ್ಯಂಗ್ಯವನ್ನು ಗುರುತಿಸಿದ ಶಿವಮೂರ್ತಿ. ಜಗನ್ನಾಥ ಅವಳು ಏನೋ ತಮಾಷೆ ಮಾಡುತ್ತಿದ್ದಾಳೆ ಎಂದುಕೊಂಡ. "ಸಾಕಿನ್ನು ನಿನ್ನ ಚೇಷ್ಟೆ. ಹೊಸ ಹೆಂಡತಿಯೋ, ಹಳೆಯದೋ ಅಂತೂ ಇರಲೇಬೇಕಲ್ಲ ನನ್ನ ಜೊತೆ" ಎಂದ ಶಿವಮೂರ್ತಿ.

"ಯಾರು ಹೇಳಿದರು ನನ್ನ ಜೊತೇಲಿ ಇರಬೇಕೂಂತ" ವ್ಯಗ್ರಳಾಗಿ ಅಂದಳು ಆಶಾ, "ಅಮ್ಮಾ ನೀನೇ ಅವರಿಗೆ ಹೇಳಿಬಿಡು, ವಂಡ್ಸೆಯ ನೀರಿನ ಋಣ ಅಂದಿಗೇ ಮುಗಿದುಹೋಗಿದೆ. ನನಗಾಗಿ ಹೊಸಮನೆಯಿರಲಿ, ನೂತನ ಬದುಕು ಕಾದಿರಲಿ.... ನಾನಂತೂ ಅಲ್ಲಿಗೆ ಹೋಗುವವಳಲ್ಲ."

ದಿಗಿಲುಗೊಂಡ ರುಕ್ಮಾ ಅವಳತ್ತ ನೋಡಿದಳು....

"ಅಲ್ಲಿ ಹೋಗಿ ಜೀವಂತ ಹೆಣವಾಗಿ ಬದುಕುವುದಕ್ಕಿಂತ ನಿನ್ನ ಅನಾಥಾಶ್ರಮದಲ್ಲಿ ಮುದ್ದು ಮಕ್ಕಳ ಸಂಗಡ ನಲಿದಾಡುವುದೇ ಮೇಲು."

"ಆಶಾ..." ಕ್ರೋಧಗೊಂಡ ಜಗನ್ನಾಥ ಹೇಳಿದ, "ಹಳೆಯದನ್ನೆಲ್ಲ ಮರೆತು

ಹೊಸ ಬದುಕನ್ನು ಪ್ರಾರಂಭಿಸಬೇಕು, ಎಂದರಲ್ಲವೇ ಡಾಕ್ಟರರು. ಛೀ. ಛೀ ನೀನಂತೂ ಅದನ್ನೇ ಮೆಲಕು ಹಾಕ್ತಿದ್ದೀ."

"ಡಾಕ್ಟರರೇನೋ ಹೇಳ್ತಾರೆ. ನನ್ನಿಂದ ಸಾಧ್ಯವಿಲ್ಲ."

ಮೂರ್ತಿಯ ಮುಖ ಕಪ್ಪಿಟ್ಟಿತು. ತಲೆ ತಗ್ಗಿಸಿಕೊಂಡು ಕುಳಿತ ಅಲ್ಲಿದ್ದ ಕುರ್ಚಿಯಲ್ಲಿ. ರುಕ್ಮಾ ಮತ್ತು ಜಗನ್ನಾಥ ಬಹಳ ವಿಧದಲ್ಲಿ ಹೇಳಿ ನೋಡಿದರೂ ಅವಳು ಶಿವಮೂರ್ತಿಯ ಜೊತೆಯಲ್ಲಿ ಹಳ್ಳಿಗೆ ಹೋಗಲು ಇಚ್ಛಿಸಲಿಲ್ಲ. ಮೂರ್ತಿ ಏನನ್ನೋ ಹೇಳಬೇಕೆಂದು ಬಯಸಿದವನು ಹೇಳಲಾಗದೆ ಒದ್ದಾಡಿಕೊಂಡ ತನ್ನಲ್ಲೇ. ಅವರಿಬ್ಬರು ಏಕಾಂತದಲ್ಲಿ ಮಾತನಾಡಿಕೊಳ್ಳಲೆಂದು ರುಕ್ಮಾ, ಜಗನ್ನಾಥ ಹೊರಗೆ ನಡೆದರು. ಹೊರಗೆ ಹೋಗುವ ಮುನ್ನ ಜಗನ್ನಾಥನೆಂದ,

"ಶಿವಮೂರ್ತಿ ಬಹಳ ಬದಲಾಗಿ ಹೋಗಿದ್ದಾನೆ ಆಶಾ. ಇನ್ನೂ ಮೊಂಡು ಹಠ ಮಾಡಿಕೊಂಡು ಏನೇನೋ ಹೇಳ್ಬೇಡ...!"

ತುಸು ಹೊತ್ತಿನಲ್ಲಿ ಶಿವಮೂರ್ತಿ ಕೇಳಿದ, "ನಿನ್ನ ಕೊನೆಯ ನಿರ್ಧಾರವೇನು?"

ಕಿಟಕಿಯಿಂದಾಚೆ ನೋಡುತ್ತಿದ್ದವಳು ಇತ್ತ ಹೊರಳಲಿಲ್ಲ.

"ನಾನು ಬಹಳಷ್ಟು ತಪ್ಪು ಮಾಡಿದ್ದೇನೆ. ನೀನೂ ಮಾಡಿದ್ದೀಯಾ....! ಈಗ ಒಬ್ಬರನ್ನೊಬ್ಬರು ಅರಿತುಕೊಂಡು ನಮ್ಮ ತಪ್ಪುಗಳನ್ನು ಮರೆತು ಒಂದಾಗಿ ಇರೋಣ, ತಿಳಿಯಿತೇ?"

ಆಶಾ ಉತ್ತರಿಸಲಿಲ್ಲ ಅವನ ಮಾತಿಗೆ. ಅವನು ಕುಳಿತಲ್ಲಿಂದ ಎದ್ದು ಅವಳ ಹತ್ತಿರಕ್ಕೆ ಬಂದ. "ಇನ್ಮೇಲೆ ನೀನೆಂದಿಗೂ ದುಃಖಿಯಾಗಲಾರೆ. ಈಗಲಾದರೂ ನನ್ನನ್ನು ಅರಿತುಕೊಂಡು ನನ್ನ ಮಾತಿನ ಮೇಲೆ ವಿಶ್ವಾಸವನ್ನಿರಿಸಿ ನನ್ನೊಡನೆ ಬಾ... ಹೋಗೋಣ."

"ನನ್ನ ಮತ್ತು ನಿಮ್ಮ ಸಂಬಂಧ ಎಂದೋ ಕಡಿದುಹೋಗಿದೆ. ಇನ್ನೆಂದಿಗೂ ನಾವು ಒಂದಾಗಲಾರೆವು. ಇದು ಖಂಡಿತ. ನಿಮ್ಮ ವಿಷಯದಲ್ಲಿ ನೀವೇ ತೀರ್ಮಾನ ಮಾಡಿಕೊಳ್ಳಿ!"

ನಿಂತಲ್ಲಿಯೇ ನಿಂತುಬಿಟ್ಟ ಶಿವಮೂರ್ತಿ. ಆಮೇಲೆ ತನ್ನ ಕೈ ಬ್ಯಾಗನ್ನೆತ್ತಿಕೊಳ್ಳುತ್ತ "ಆಗಲಿ ಆಶಾ, ನಾನೊಬ್ಬನೇ ಹೋಗ್ತೇನೆ ಊರಿಗೆ. ತುಮಕೂರಿನಿಂದ ಯಾವಾಗ ನಿನಗೆ ನಮ್ಮಲ್ಲಿಗೆ ಬರಬೇಕೆಂದು ಅನ್ನಿಸುತ್ತೋ ಆಗ ಬಾ, ಮಗುವನ್ನೂ ಕರ್ಕೊಂಡು ಬಾ.... ನಾನಿನ್ನು ಹೊರಟೆ" ಎಂದ.

ಆ ಧ್ವನಿಯೊಂದಿಗೆ ಹೆಜ್ಜೆಯ ಸಪ್ಪಳವೂ ದೂರವಾಯಿತು. ಈಗ ನಿಂತಲ್ಲಿಂದ ಹೊರಳಿ ನೋಡಿದಳು ಆಶಾ. ಓ... ಖಾಲಿಯಾಗಿದೆ ಕೋಣೆ. ನಿಜವಾಗಿಯೂ ಹೊರಟುಹೋಗಿದ್ದಾನೆ ಶಿವಮೂರ್ತಿ. ಇನ್ನು ಮೇಲಿನಿಂದ ತನ್ನದು ಒಂಟಿ ಬದುಕು... ಯಾರೂ ಇಲ್ಲ ತನ್ನ ಪಾಲಿಗೆ.

ಹಾಗೆಂದುಕೊಳ್ಳುತ್ತ ಎರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಮನಸ್ಸಿನಲ್ಲಿ ಏನೇನೋ ಯೋಚನೆಯ ಅಲೆಗಳು.

ಹೀಗೇಕಾಯಿತು? ಹಳೆಯದನ್ನು ಮರೆಯಬೇಕು ಎಂದಿದ್ದಾರೆ ಡಾಕ್ಟರರು. ತನ್ನಿಂದ ಮರೆಯಲಾಗುತ್ತಿಲ್ಲ. ಮೂರ್ತಿಯೂ ಯಾಚನೆಯ ಸ್ವರದಲ್ಲಿ ಬಹಳ ವಿಧದಲ್ಲಿ ತನ್ನನ್ನು ಕರೆದಿದ್ದಾರೆ ಮನೆಗೆ ಬಾ, ಒಂದಾಗಿ ಬಾಳೋಣ ಎಂದು. ಆದರೆ ತನಗೆ ಹೊರಡುವ ಮನಸ್ಸಿಲ್ಲ. ಲೋಹಿತಾಕ್ಷನೇ ಆ ಸ್ಥಾನದಲ್ಲಿದ್ದು ತನ್ನನ್ನು ಕರೆದಿದ್ದರೆ ಹೊರಟುಬಿಡುತ್ತಾ ಇದ್ದೆ...

ಹಾಯ್... ದ್ವೇಷ, ತಿರಸ್ಕಾರವನ್ನು ಮನದಲ್ಲಿ ತುಂಬಿಸಿಕೊಂಡು ಮನದೊಳಗಾಗಲೀ, ಹೊರಗಿನಿಂದಾಗಲೀ ಪ್ರೀತಿಸದ, ಪ್ರೀತಿಸಲ್ಪಡದ.... ಅಗ್ನಿಸಾಕ್ಷಿಯಾಗಿ ಕೈಹಿಡಿದ ಶಿವಮೂರ್ತಿಯ ಬಗ್ಗೆ ಒಂದಿಷ್ಟು ಕನಿಕರವಾಗಲೀ, ಸಹಾನುಭೂತಿಯಾಗಲೀ ಮೂಡಲಿಲ್ಲ. ಅವನ ಧ್ವನಿಯಲ್ಲಿ ಈಗ ಏನೋ ಆತ್ಮೀಯತೆಯಿತ್ತು, ನಂಬುಗೆಯಿತ್ತು, ಆಶಾಳ ಹೃದಯವನ್ನು ಕಲುಕಿತ್ತು ಆ ಧ್ವನಿ. ಹಾಗಿದ್ದರೂ ಅವನ ಮಾತನ್ನು ಒಪ್ಪಿಕೊಂಡು ಆ ಕ್ಷಣವೇ ಅವನೊಡನೆ ಹೊರಡುವುದಕ್ಕೆ ಒಪ್ಪಿಕೊಳ್ಳಲಿಲ್ಲ ಅವಳ ಮನಸ್ಸು.

ಆದರೆ ಯಾವಾಗ ಅವನು ಭಾರವಾದ ಸ್ವರದಲ್ಲಿ "ನಾನಿನ್ನು ಹೊರಟೆ" ಎಂದಂದು ನಿಧಾನವಾಗಿ ಹೊರಟುಹೋದನೊ... ಆಗ... ಆಗಲೇ ಅವಳು ಹೊರಳಿ ನೋಡುತ್ತಿದ್ದಾಳೆ... ಯಾವುದೋ ಅಗಲಿಕೆಯ ತೀವ್ರ ನೋವನ್ನು ಅನುಭವಿಸಿದಂತೆ... ಕಣ್ಗಳಲ್ಲಿ ಮನದಲ್ಲಿ ಆಸೆಯ ಬಿಂಬವನ್ನು ತುಂಬಿಸಿಕೊಂಡು...!

ಆ ಕ್ಷಣವೇ ಓಡಿದಳು ಬಾಗಿಲತ್ತ.... "ನಿಲ್ಲಿ...!"

ರುಕ್ಮಾ ಜಗನ್ನಾಥರೊಂದಿಗೆ ಏನನ್ನೋ ಹೇಳಿ ಮುಂದಕ್ಕೆ ಹೋಗುತ್ತಾ ಇದ್ದ ಶಿವಮೂರ್ತಿ ನಿಂತು ನಿಧಾನವಾಗಿ ಹುಬ್ಬೇರಿಸಿ ಹೊರಳಿ ನೋಡಿದ ಅವಳತ್ತ. ಆಶಾ ಓಡುತ್ತಾ ಬಂದು ಅವನ ಕೈ ಹಿಡಿದು ಅವನ ಕಾಲಕೆಳಗೆ ಕುಸಿದಳು.

"ಕ್ಷಮಿಸಿ ನನ್ನನ್ನು.... ನಾನೂ ನಿಮ್ಮ ಸಂಗಡ ವಂಡ್ಸೆಗೆ ಬರ್ತೇನೆ...!"

— ೦ —

ದ್ವೇಷ, ತಿರಸ್ಕಾರವನ್ನು ಮನದಲ್ಲಿ ತುಂಬಿಸಿಕೊಂಡು ಮನದೊಳಗಾಗಲೀ, ಹೊರಗಿನಿಂದಾಗಲೀ ಪ್ರೀತಿಸದ, ಪ್ರೀತಿಸಲ್ಪಡದ... ಅಗ್ನಿಸಾಕ್ಷಿಯಾಗಿ ಕೈಹಿಡಿದ ಶಿವಮೂರ್ತಿಯ ಬಗ್ಗೆ ಒಂದಿಷ್ಟು ಕನಿಕರವಾಗಲೀ, ಸಹಾನುಭೂತಿಯಾಗಲೀ ಮೂಡಲಿಲ್ಲ. ಅವನ ಧ್ವನಿಯಲ್ಲಿ ಈಗ ಏನೋ ಆತ್ಮೀಯತೆಯಿತ್ತು, ನಂಬುಗೆಯಿತ್ತು, ಆಶಾಳ ಹೃದಯವನ್ನು ಕಲುಕಿತ್ತು ಆ ಧ್ವನಿ. ಹಾಗಿದ್ದರೂ ಅವನ ಮಾತನ್ನು ಒಪ್ಪಿಕೊಂಡು ಆ ಕ್ಷಣವೇ ಅವನೊಡನೆ ಹೊರಡುವುದಕ್ಕೆ ಒಪ್ಪಿಕೊಳ್ಳಲಿಲ್ಲ ಅವಳ ಮನಸ್ಸು.

ಆದರೆ ಯಾವಾಗ ಅವನು ಭಾರವಾದ ಸ್ವರದಲ್ಲಿ "ನಾನಿನ್ನು ಹೊರಟೆ" ಎಂದಂದು ನಿಧಾನವಾಗಿ ಹೊರಟು ಹೋದನೊ..... ಆಗ... ಆಗಲೇ ಅವಳು ಹೊರಳಿ ನೋಡುತ್ತಿದ್ದಾಳೆ... ಯಾವುದೋ ಅಗಲಿಕೆಯ ತೀವ್ರ ನೋವನ್ನು ಅನುಭವಿಸಿದಂತೆ... ಕಣ್ಣಗಳಲ್ಲಿ ಮನದಲ್ಲಿ ಆಸೆಯ ಬಿಂಬವನ್ನು ತುಂಬಿಸಿಕೊಂಡು...!

ಓಂ ಶಕ್ತಿ ಪ್ರಕಾಶನ
ಬೆಂಗಳೂರು